ಶುಕ್ರವಾರ, ಜುಲೈ 7, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವರ್ಷಧಾರೆ

ಮುಂಬೈನ ಸಮುದ್ರ ದಂಡೆಯಲ್ಲಿ ಗುರುವಾರ ಭಾರಿ ಗಾತ್ರದ ತೆರೆಗಳಿಗೆ ಮೈಯೊಡ್ಡಿ ಕುಳಿತಿದ್ದ ಯುವತಿಯರು

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ವಿಧಾನಸಭೆಯಲ್ಲಿ ಎಚ್‌ಡಿಕೆ–ಸಿದ್ದರಾಮಯ್ಯ, ಎಚ್‌ಡಿಕೆ–ಚಲುವರಾಯಸ್ವಾಮಿ ಜಟಾಪಟಿ

‘ನಿಮ್ಗೂ– ಯಾರಪ್ಪಂಗೂ ಕೇರ್ ಮಾಡಲ್ಲ’

ಪ್ರಜಾವಾಣಿ ವಾರ್ತೆ

ಎಚ್.ಡಿ. ಕುಮಾರಸ್ವಾಮಿ

ಚಲುವರಾಯ ಸ್ವಾಮಿ

ಬೆಂಗಳೂರು: ‘ನಿಮಗೂ ಕೇರ್ ಮಾಡಲ್ಲ, ಯಾರಪ್ಪಂಗೂ ಕೇರ್ ಮಾಡಲ್ಲ, ಏಯ್ ಹೋಗ್ರಿ. ನಿಮ್ಮನ್ನ ನೋಡಿ ಹೆದ್ರಲ್ಲ’... ಹೀಗೆಂದು ಕೋಪದಿಂದ ಮುಖ ಕೆಂಪು ಮಾಡಿಕೊಂಡು ಗುಡುಗಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ.

‘ದೇವೇಗೌಡರ ಕುಟುಂಬದ ಬಗ್ಗೆ ಚೆನ್ನಾಗಿ ಉತ್ತರ ಕೊಟ್ಟಿದ್ದೀರಿ ಎಂದು ಸಿಎಂ ಶೇಕ್ ಹ್ಯಾಂಡ್ ಮಾಡಿದರು. ವ್ಯಂಗ್ಯವಾದ ನಗು ಬೇರೆ. ಇದೆನ್ನೆಲ್ಲಾ ಗಮನಿಸುತ್ತಿದ್ದೇನೆ. ನೀವು ದೇವೇಗೌಡರ ಕುತ್ತಿಗೆ ಕೊಯ್ದವರು, ಬಿಜೆಪಿ ‘ಬಿ’ ಟೀಮ್ ಎಂದಿರಿ’ ಎಂದು ಸಿಟ್ಟಿನಿಂದ ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದಿದ್ದು ಜೆಡಿಎಸ್ ಶಾಸಕಾಂಗ ಪಕ್ಷ ನಾಯಕ ಎಚ್.ಡಿ.ಕುಮಾರಸ್ವಾಮಿ.

ಮಂಡ್ಯ ಜಿಲ್ಲೆಯ ಕೆಎಸ್‌ಆರ್‌ಟಿಸಿ ಚಾಲಕನ ಆತ್ಮಹತ್ಯೆ ಯತ್ನ ಪ್ರಕರಣದ ಕುರಿತ ಚರ್ಚೆಯ ವೇಳೆ ಕುಮಾರಸ್ವಾಮಿ ಮತ್ತು ಸಚಿವ ಎನ್.ಚಲುವರಾಯಸ್ವಾಮಿ ಮಧ್ಯೆ ಹೊತ್ತಿಕೊಂಡ ಜಗಳ ಪರಸ್ಪರ ಏಕವಚನಕ್ಕೆ ತಿರುಗಿತು. ಆ ಬಳಿಕ ಕುಮಾರಸ್ವಾಮಿ ಮತ್ತು ಸಿದ್ದರಾಮಯ್ಯ ಏರಿದ ಧ್ವನಿಯಲ್ಲಿ ಅಬ್ಬರಿಸಿದರು.

ಚಲುವರಾಯಸ್ವಾಮಿ ವಾಗ್ದಾಳಿಯ ಬಳಿಕ ಮುಖ್ಯಮಂತ್ರಿಯವರ ಮುಖವನ್ನು ಗಮನಿಸಿದ ಕುಮಾರಸ್ವಾಮಿ, ‘ಶೇಕ್ ಹ್ಯಾಂಡ್...ಹುಸಿ ನಗೆ ಬೇರೆ, ಇದಕ್ಕೆಲ್ಲ ಕೇರ್ ಮಾಡೊಲ್ಲ. ನಮ್ಮಲ್ಲಿದ್ದವರನ್ನು ಎಳೆದುಕೊಂಡು ಆಟ ಆಡುತ್ತಿದ್ದೀರಾ, ನಮಗೂ ಆಟ ಆಡಲು ಬರುತ್ತದೆ’ ಎಂದು ಸಿಟ್ಟಿನಿಂದ ಮಾತಿನ ಚಾಟಿ ಬೀಸಿದರು. ಇದರಿಂದ ಕೆರಳಿದ ಸಿದ್ದರಾಮಯ್ಯ ಕುಮಾರಸ್ವಾಮಿಯತ್ತ ಕೈ ತೋರಿಸುತ್ತಾ ‘ಏಯ್ ನಿಮಗೆ ಹೆದರಲ್ಲ, ನಾನೂ ಕೇರ್ ಮಾಡಲ್ಲ. ನಿಮ್ಮನ್ನು ನೋಡಿ ಹೆದರುವುದೂ ಇಲ್ಲ’ ಎಂದು ಹೇಳಿದರು. ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಂತ ಕಾಂಗ್ರೆಸ್ ಶಾಸಕರು ಅದರಲ್ಲೂ ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಬಂದವರು ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದರು.

ಎಚ್‌ಡಿಕೆ– ಚಲುವರಾಯಸ್ವಾಮಿ ಕದನ: ಚಾಲಕನ ಆತ್ಮಹತ್ಯೆ ಬಗ್ಗೆ ಉತ್ತರ ನೀಡುವಾಗ ಚಲುವರಾಯಸ್ವಾಮಿ ಅವರು ಕುಮಾರಸ್ವಾಮಿ ವಿರುದ್ಧ ವೈಯಕ್ತಿಕವಾಗಿ ವಾಗ್ದಾಳಿ ನಡೆಸಿದ್ದು ಮತ್ತು ಜೆಡಿಎಸ್ ಬಿಟ್ಟ ಸಂದರ್ಭದ ವಿಚಾರಗಳನ್ನು ಪ್ರಸ್ತಾಪಿಸಿದ್ದು ಇಬ್ಬರ ಮಧ್ಯೆ ಕದನಕ್ಕೆ ಕಾರಣವಾಯಿತು.

‘ಅಧಿಕಾರ ಇಲ್ಲ ಅಂದ್ರೆ ಕುಮಾರಸ್ವಾಮಿ ಬೆಳಿಗ್ಗೆಯಿಂದ ಸಂಜೆವರೆಗೆ ನನ್ನ ಬಳಿ ಫೈಲ್ ಇದೆ, ಸಿ.ಡಿ ಇದೆ, ಪೆನ್‌ಡ್ರೈವ್ ಇದೆ ಎನ್ನುತ್ತಾರೆ. ಇದನ್ನೆಲ್ಲ ಇಟ್ಟುಕೊಂಡು ತೇಜೋವಧೆ ಮಾಡುವುದನ್ನು ಬಿಟ್ಟು ಬಿಡಿ. ಕ್ಷೇತ್ರಕ್ಕೆ ಬಂದು ಆಜನ್ಮ ವೈರಿ ಎಂದು ಹೇಳಿದರು. ನಮ್ಮದೆಲ್ಲ ಮುಗಿದೇ ಹೋಯಿತು ಎನ್ನುವ ರೀತಿಯಲ್ಲಿ ಮಾತನಾಡಿ ಹೋಗಿದ್ದರು. ರಾಜಕಾರಣದಲ್ಲಿ ಸೋಲು–ಗೆಲುವು ಸಾಮಾನ್ಯ. ಅಧಿಕಾರ ಶಾಶ್ವತ ಅಲ್ಲ. ಸಿದ್ದರಾಮಯ್ಯ ಅವರು ಜೆಡಿಎಸ್ ಅನ್ನು ಅವರಾಗಿಯೇ ಬಿಡಲಿಲ್ಲ. ಅವರನ್ನು ಪಕ್ಷದಿಂದ ಹೊರ ನೂಕಿದರು. ಹಿಂದಿನ ಚರಿತ್ರೆ ಬಗ್ಗೆ ಮಾತನಾಡಲು ಒಂದು ದಿನ ಅವಕಾಶ ನೀಡಿದರೆ ಎಲ್ಲವನ್ನೂ ಬಿಚ್ಚಿಡುತ್ತೇವೆ. ನಮ್ಮ ವಿರುದ್ಧ ಇವರ ಕಿರುಕುಳಕ್ಕೆ ಬೇಸತ್ತಿದ್ದೇವೆ’ ಎಂದು ಚೆಲುವರಾಯ ಸ್ವಾಮಿ ಹೇಳಿದರು.

ಚಲುವರಾಯಸ್ವಾಮಿ ಮಾತಿಯಿಂದ ಸಿಟ್ಟಿಗೆದ್ದ ಕುಮಾರಸ್ವಾಮಿ, ನನ್ನ ಜೀವನದಲ್ಲಿ ಲಕ್ಷಾಂತರ ಜೀವಗಳನ್ನು ಉಳಿಸಿ ಬಂದವನು ನಾನು. ಇವರ ರೀತಿ ಕೊಲೆಗಡುಕ ರಾಜಕೀಯ ಮಾಡಿ ಬಂದಿಲ್ಲ ಎಂದು ಕಾಂಗ್ರೆಸ್‌ನ ಎಚ್.ಸಿ. ಬಾಲಕೃಷ್ಣ ಮತ್ತು ಚಲುವರಾಯಸ್ವಾಮಿ ಅವರನ್ನು ಉದ್ದೇಶಿಸಿ ಹೇಳಿದರು.

ಕೊಲೆಗಡುಕ ಪದ ಬಳಕೆ ಬಗ್ಗೆ ಕಾಂಗ್ರೆಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

‘ನಮ್ಮ ಹಂಗಿನಲ್ಲಿ ನೀವು ಮುಖ್ಯಮಂತ್ರಿ ಆಗಿದ್ದು’ ಎಂದು ಚಲುವರಾಯಸ್ವಾಮಿ ಮತ್ತು ಬಾಲಕೃಷ್ಣ ಕುಟುಕಿದರು.

‘ಈ ಸದನ ನಿಮ್ಮಪ್ಪಂದು ಅಲ್ಲ. ಇವರು ಮಂತ್ರಿ ಆಗಬೇಕೆಂದು ಆರು ತಿಂಗಳು ಏನೆಲ್ಲ ಮಾಡಿದರು ಎಂಬುದು ಗೊತ್ತಿದೆ’ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಚಲುವರಾಯಸ್ವಾಮಿ, ‘ಸದನ ನಿಮ್ಮಪ್ಪಂದೂ ಅಲ್ಲ ನಮ್ಮ ಅಪ್ಪಂದೂ ಅಲ್ಲ. ಆರೂವರೆ ಕೋಟಿ ಜನರದ್ದು’ ಎಂದರು. ಈ ಹಂತದಲ್ಲಿ ಇಬ್ಬರೂ ಏಕವಚನ ಪ್ರಯೋಗಿಸಿದರು.

ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಇಬ್ಬರನ್ನೂ ಸಮಾಧಾನಪಡಿಸಲು ಯತ್ನಿಸಿದರು. ಕುಮಾರಸ್ವಾಮಿ ವಿರುದ್ಧ ಕಿಡಿಕಾರುತ್ತಿದ್ದ ಕೆ.ಎಂ.ಶಿವಲಿಂಗೇಗೌಡ, ಸಚಿವ ಕೆ.ಎನ್.ರಾಜಣ್ಣ, ಬಾಲಕೃಷ್ಣ, ನರೇಂದ್ರಸ್ವಾಮಿ ಮತ್ತಿತರರನ್ನು ಸಮಾಧಾನಪಡಿಸಲು ಖಾದರ್ ಯತ್ನಿಸಿದರು.

ಜಂಟಿ ವಾಗ್ದಾಳಿ: ಬೆಳಗಿನ ಶೂನ್ಯ ವೇಳೆಯಲ್ಲಿ ಬಿಜೆಪಿಯ ಬಸವರಾಜ ಬೊಮ್ಮಾಯಿ ಈ ಪ್ರಕರಣದ ಕುರಿತು ಪ್ರಸ್ತಾಪಿಸಿದರು. ‘ಚಲುವರಾಯಸ್ವಾಮಿ ಅವರೇ ಚಾಲಕನ ಆತ್ಮಹತ್ಯೆ ಯತ್ನಕ್ಕೆ ಕಾರಣ. ಸರ್ಕಾರ ಅವರನ್ನು ರಕ್ಷಿಸುತ್ತಿದೆ’ ಎಂದರು.

ಬಳಿಕ ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ಮಾತು ಆರಂಭಿಸಿದರು. ನೇರಾನೇರ ಚಲುವರಾಯಸ್ವಾಮಿ ಅವರತ್ತ ವಾಗ್ದಾಳಿಗೆ ಇಳಿದರು. ವಾಕ್ಸಮರದ ಮಧ್ಯೆಯೇ ಬಿಜೆಪಿ ಸದಸ್ಯರು ಚಲುವರಾಯಸ್ವಾಮಿ ರಾಜೀನಾಮೆಗೆ ಆಗ್ರಹಿಸಿ ಧರಣಿ ಆರಂಭಿಸಿದರು. ಆಗ ಸ್ಪೀಕರ್ ಖಾದರ್ ಸದನವನ್ನು ಮಧ್ಯಾಹ್ನ 2.45ಕ್ಕೆ ಮುಂದೂಡಿದರು. ಮಧ್ಯಾಹ್ನದ ಬಳಿಕ ಬಹುತೇಕ ಕಲಾಪವನ್ನು ಇದೇ ಪ್ರಕರಣ ನುಂಗಿಹಾಕಿತು.

ಯತ್ನಾಳ– ಪಾಟೀಲ ವಾಕ್ಸಮರ

ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಮತ್ತು ಸಚಿವ ಎಂ.ಬಿ. ಪಾಟೀಲ ಮಧ್ಯೆ ಜಟಾಪಟಿ ನಡೆಯಿತು.

ಯತ್ನಾಳರು ಕುಮಾರಸ್ವಾಮಿ ಬೆಂಬಲಕ್ಕೆ ನಿಂತಾಗ, ‘ಹಿಂದೆ ನೀವೇನು ಹೇಳಿದ್ದೀರಿ ಗೊತ್ತಿದೆ. ಮುಖ್ಯಮಂತ್ರಿ ಆಗಲು ಹೈಕಮಾಂಡ್‌ಗೆ ₹2,500 ಕೋಟಿ ಕೊಡಬೇಕು ಎಂದು ಹೇಳಿಲ್ಲವಾ? ವಿಡಿಯೊ ಇದೆ’ ಎಂದು ಪಾಟೀಲ ತಿರುಗೇಟು ನೀಡಿದರು.

‘ನನ್ನ ಹೇಳಿಕೆ ಬಗ್ಗೆಯೂ ಸಿಬಿಐ ತನಿಖೆ ನಡೆಸಿ, ಶೇಕಡ 40ರಷ್ಟು ಲಂಚದ ಆರೋಪ ಮಾಡಿದ್ರಲ್ಲಾ, ಅದರ ಬಗ್ಗೆಯೂ ಸಿಬಿಐಗೆ ಕೊಡಿ’ ಎಂದು ಯತ್ನಾಳ ಸವಾಲು ಹಾಕಿದರು.

‘ಇವತ್ತಿನದು ಅತಿಯಾಯ್ತು’

ಜೆಡಿಎಸ್ ಮತ್ತು ತಮ್ಮ ಪಕ್ಷದ ನಾಯಕರ ಮಧ್ಯೆ ನಡೆದ ವಾಕ್ಸಮರಕ್ಕೆ ಗೃಹ ಸಚಿವ ಜಿ.ಪರಮೇಶ್ವರ ಅವರು ತಮ್ಮದೇ ಶೈಲಿಯಲ್ಲಿ ಕಿವಿ ಮಾತು ಹೇಳಿದರು.‘ಎರಡು ಬಾರಿ ಸಿಎಂ ಆಗಿದ್ದೀರಿ. ಈ ಕಡೆ ಸಚಿವರೂ ಇದ್ದಾರೆ. ಇಬ್ಬರೂ ಜತೆಗೆ ಕೆಲಸ ಮಾಡಿದ್ದೀರಿ. ಚರ್ಚೆ ಮಾಡುವಾಗ ಇತಿ ಮಿತಿ ಇದ್ದರೆ ಸದನಕ್ಕೂ ಗೌರವ ಬರುತ್ತದೆ. 65 ಹೊಸ ಶಾಸಕರು ನಮ್ಮನ್ನೆಲ್ಲ ನೋಡುತ್ತಿದ್ದಾರೆ. ಇವತ್ತು ನಡೆದದ್ದು ನೋಡಿ ಅತಿ ಆಯ್ತು ಎನಿಸಿತು. ಎರಡೂ ಕಡೆಯವರಿಗೆ ತಾಳ್ಮೆ ಅಗತ್ಯ. ಮುಂದಿನ ದಿನಗಳಲ್ಲಿ ಇಂತಹದ್ದು ಕಾಣಬಾರದು’ ಎಂದರು.

ಸುದ್ದಿ 2 ನಿಮಿಷ

ಭದ್ರತಾ ಚೀಟಿ: ಕೆಎಸ್‌ಎಂಸಿಎಗೆ ವಹಿಸಲು ಸೂಚನೆ

ಬೆಂಗಳೂರು: ಮದ್ಯದ ಬಾಟಲಿಗಳ ಮುಚ್ಚಳದ ಮೇಲೆ ಅಂಟಿಸುವ ಅಬಕಾರಿ ಭದ್ರತಾ ಚೀಟಿ (ಇಎಎಲ್) ಸರಬರಾಜು ಮಾಡುವ ಹೊಣೆಯನ್ನು ಕೆಎಸ್‌ಎಂಸಿಎಗೆ ವಹಿಸುವಂತೆ ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಸೂಚಿಸಿದ್ದಾರೆ.

ಈ ಬಗ್ಗೆ ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿರುವ ಅವರು, ಆಡಳಿತಾತ್ಮಕ ಹಾಗೂ ಸಂಸ್ಥೆಯ ಹಿತದೃಷ್ಟಿಯಿಂದ ಈ ಹಿಂದಿನಂತೆ ಭದ್ರತಾ ಚೀಟಿಗಳ ಸರಬರಾಜು ಮತ್ತು ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಕೆಎಸ್‌ಎಂಸಿಎ) ಸಂಸ್ಥೆಗೆ ವಹಿಸಬೇಕು ಎಂದು ತಿಳಿಸಿದ್ದಾರೆ.

ಕೆಎಸ್‌ಎಂಸಿಎ ಕಳೆದ 33 ವರ್ಷಗಳಿಂದ ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಆದರೆ, ಇತ್ತೀಚೆಗೆ ಈ ಜವಾಬ್ದಾರಿಯನ್ನು ಅಬಕಾರಿ ಇಲಾಖೆಯು ಖಾಸಗಿ ಸಂಸ್ಥೆಗೆ ಟೆಂಡರ್ ಮೂಲಕ ವಹಿಸುತ್ತಿರುವುದು ತಿಳಿದು ಬಂದಿದೆ. ಈ ನಿರ್ಧಾರ ಬದಲಾಯಿಸಿ ಕೆಎಸ್‌ಎಂಸಿಎಗೆ ಭದ್ರತಾ ಚೀಟಿಗಳ ಸರಬರಾಜು ಮೇಲ್ವಿಚಾರಣಾ ಕಾರ್ಯ ನೀಡಬೇಕು ಎಂದು ತಿಳಿಸಿದ್ದಾರೆ.

ಗೃಹಜ್ಯೋತಿ:1 ಕೋಟಿ ದಾಟಿದ ಅರ್ಜಿ

ಬೆಂಗಳೂರು: ಗೃಹಬಳಕೆಯ ವಿದ್ಯುತ್‌ಗೆ 200 ಯುನಿಟ್‌ವರೆಗೆ ಉಚಿತವಾಗಿ ನೀಡುವ ಗೃಹಜ್ಯೋತಿ ಯೋಜನೆಗೆ ನೋಂದಣಿ ಮಾಡಿಕೊಂಡವರ ಸಂಖ್ಯೆ ಒಂದು ಕೋಟಿ ದಾಟಿದೆ.

ಜೂನ್ 18ರಂದು ನೋಂದಣಿ ಪ್ರಕ್ರಿಯೆ ಆರಂಭಗೊಂಡಿತು. ಗುರುವಾರ ಸಂಜೆಯವರೆಗೆ 1,01,62,415 ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ.

ಬೆಸ್ಕಾಂ ವ್ಯಾಪ್ತಿಯಲ್ಲಿ 41,74,540, ಸೆಸ್ಕ್ ವ್ಯಾಪ್ತಿಯಲ್ಲಿ 15,54,497, ಗೆಸ್ಕಾಂ ವ್ಯಾಪ್ತಿಯಲ್ಲಿ 10,72,214, ಹೆಸ್ಕಾಂ ವ್ಯಾಪ್ತಿಯಲ್ಲಿ 21,40,220, ಎಚ್‌ಆರ್‌ಇಸಿಎಸ್ ವ್ಯಾಪ್ತಿಯಲ್ಲಿ 51,277 ಹಾಗೂ ಮೆಸ್ಕಾಂ ವ್ಯಾಪ್ತಿಯಲ್ಲಿ 11,69, 667 ಗ್ರಾಹಕರು ನೋಂದಣಿ ಮಾಡಿಕೊಂಡಿದ್ದಾರೆ.

ಗೃಹ ಜ್ಯೋತಿ ಯೋಜನೆಗೆ ವಿದ್ಯುತ್ ಕಚೇರಿ, ನಾಡಕಚೇರಿ, ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್ ಫೋನ್‌ಗಳಲ್ಲಿ ಅಧಿಕೃತ ಪೋರ್ಟಲ್ https://sevasindhugs.karnataka.gov.in ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಬೆಂಗಳೂರು ಒನ್, ಗ್ರಾಮ ಒನ್, ಕರ್ನಾಟಕ ಒನ್ ಹಾಗೂ ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿಯೂ ನೋಂದಾಯಿಸಿಕೊಳ್ಳಬಹುದು. ಹೆಚ್ಚುವರಿ ಹಣಕ್ಕೆ ಯಾರಾದರೂ ಬೇಡಿಕೆಯಿಟ್ಟಲ್ಲಿ ಗ್ರಾಹಕರು 24x7 ಸಹಾಯವಾಣಿ 1912ಕ್ಕೆ ಕರೆಮಾಡಿ ತಿಳಿಸಬಹುದು.

ಈ ಯೋಜನೆಯ ಕುರಿತ ಮಾಹಿತಿಗಾಗಿ ಗ್ರಾಹಕರು ಇಂಧನ ಇಲಾಖೆಯ ಅಧಿಕೃತ ವೆಬ್‌ಸೈಟ್ https://energy.karnataka.gov.in ಗೆ ಭೇಟಿ ನೀಡಬಹುದು ಎಂದು ಇಂಧನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕಲಾಪ ವೀಕ್ಷಣೆ

ವಿಧಾನಸಭೆಯಲ್ಲಿ ಗುರುವಾರ ನಡೆದ ಕಲಾಪವನ್ನು ಶಾಲಾ ವಿದ್ಯಾರ್ಥಿಗಳು ವೀಕ್ಷಿಸಿದರು

‘ಸೌರಶಕ್ತಿ ಚಾಲಿತ ಪಂಪ್ ವಿತರಣೆಗೆ ನೀತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತವಾಗಿ ಪೂರೈಸುವ ವಿದ್ಯುತ್ ಬಾಬ್ತು ಸಹಾಯಧನದ ಹೊರೆ ತಗ್ಗಿಸಲು ರೈತರಿಗೆ ಸೌರವಿದ್ಯುತ್ ಚಾಲಿತ ಪಂಪ್ ವಿತರಿಸಲು ಹೊಸ ನೀತಿ ರೂಪಿಸಿ, ಜಾರಿಗೊಳಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಕಾಂಗ್ರೆಸ್‌ನ ಟಿ.ಬಿ. ಜಯಚಂದ್ರ ಪ್ರಶ್ನೆಗೆ ಉತ್ತರಿಸಿದ ಅವರು, ‘ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ–ಸಕ್ರಮ ಯೋಜನೆ 2005ರಲ್ಲಿ ಆರಂಭವಾಗಿದ್ದು, ಈಗಲೂ ಜಾರಿಯಲ್ಲಿದೆ. ಇದರಿಂದ ಸಹಾಯಧನದ ಹೊರೆ ಹೆಚ್ಚಿದೆ. ಸೌರ ಶಕ್ತಿ ಪಂಪ್ ವಿತರಿಸಿ ಹೊರೆ ತಗ್ಗಿಸಲು ಚಿಂತನೆ ನಡೆದಿದೆ’ ಎಂದರು.

ಸೌರ ವಿದ್ಯುತ್ ಚಾಲಿತ ಪಂಪ್ ಅಳವಡಿಕೆಗೆ ₹ 4.5 ಲಕ್ಷ ವೆಚ್ಚವಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ₹ 3.5 ಲಕ್ಷ ಸಹಾಯಧನ ನೀಡಬಹುದು. ಉಳಿದ ₹ 1 ಲಕ್ಷ ಭರಿಸಲು ರೈತರಿಗೆ ಹಣಕಾಸು ಸಂಸ್ಥೆಗಳಿಂದ ಸಾಲ ಒದಗಿಸುವ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

‘ಶಿರಾ ವಿಧಾನಸಭಾ ಕ್ಷೇತ್ರದಲ್ಲಿ 1,560 ರೈತರು ಮೂರು ವರ್ಷಗಳಿಂದ ಕಾಯುತ್ತಿದ್ದಾರೆ. ಈವರೆಗೂ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ. ಸೌರ ವಿದ್ಯುತ್ ಚಾಲಿತ ಪಂಪ್ ವಿತರಣೆ ಸೂಕ್ತ’ ಎಂದು ಜಯಚಂದ್ರ ಸಲಹೆ ನೀಡಿದರು.

ಬಿಜೆಪಿಯ ಎನ್. ಚಂದ್ರಪ್ಪ ಮಾತನಾಡಿ, ‘ಸೌರ ವಿದ್ಯುತ್ ಚಾಲಿತ ಪಂಪ್ ನೀಡಿದರೆ 300 ರಿಂದ 400 ಅಡಿ ಆಳದವರೆಗಿನ ಕೊಳವೆ ಬಾವಿಗಳಿಂದ ಮಾತ್ರ ನೀರು ಎತ್ತಬಹುದು. ಇನ್ನೂ ಆಳದ ಕೊಳವೆ ಬಾವಿಗಳಿಗೆ ಹೆಚ್ಚಿನ ಸಾಮರ್ಥ್ಯದ ವಿದ್ಯುತ್ ಸಂಪರ್ಕ ಬೇಕಾಗುತ್ತದೆ’ ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಸಚಿವರು, ‘150 ಎಕರೆಯಷ್ಟು ಜಮೀನು ಲಭ್ಯವಾದರೆ 50 ಮೆಗಾ ವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕ ಸ್ಥಾಪಿಸಿ ನೀರಾವರಿ ಪಂಪ್‌ಸೆಟ್‌ಗಳಿಗೆ ಗುಣಮಟ್ಟದ ವಿದ್ಯುತ್ ಒದಗಿಸಬಹುದು’ ಎಂದು ಹೇಳಿದರು.

24 ಸಾವಿರ ನಕಲಿ ಕಾರ್ಮಿಕರ ನೋಂದಣಿ ರದ್ದು: ಸಂತೋಷ್ ಲಾಡ್

ಬೆಂಗಳೂರು: ಕಾರ್ಮಿಕರ ಹೆಸರಿನಲ್ಲಿ ನೋಂದಣಿ ಮಾಡಿಸಿ, ಸರ್ಕಾರದ ಸೌಲಭ್ಯ ಪಡೆಯುತ್ತಿದ್ದ 24 ಸಾವಿರ ನಕಲಿ ಕಾರ್ಮಿಕರ ನೋಂದಣಿ ರದ್ದು ಮಾಡಲಾಗಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಬಿಜೆಪಿ ಸದಸ್ಯ ಡಿ.ಎಸ್.ಅರುಣ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕರ್ನಾಟಕ ಕಟ್ಟಡ ಮತ್ತು ಇತರೆ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ 44.28 ಲಕ್ಷ ಕಾರ್ಮಿಕರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಸಂಶಯ ಬಂದಾಗ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕರು ಪರಿಶೀಲನೆ ನಡೆಸಿದ್ದಾರೆ. ಅನರ್ಹ ಫಲಾನುಭವಿಗಳ ನೋಂದಣಿ ರದ್ದು ಮಾಡಿದ್ದಾರೆ. ಅದಕ್ಕಾಗಿ ಅಭಿಯಾನವನ್ನೇ ಆರಂಭಿಸಲಾಗಿದೆ. ಮಧ್ಯವರ್ತಿಗಳ ಹಾವಳಿಗೂ ಕಡಿವಾಣ ಹಾಕಲಾಗುತ್ತಿದೆ. ನೋಂದಣಿ ಮತ್ತು ನವೀಕರಣಕ್ಕಾಗಿ ಕಾರ್ಮಿಕರು ಪಾವತಿಸಬೇಕಿದ್ದ ಶುಲ್ಕವನ್ನೂ ತೆಗೆದು ಹಾಕಲಾಗಿದೆ ಎಂದರು.

ಜೆಜೆಎಂ ಕಾಮಗಾರಿ: ಪರಿಶೀಲನೆವರೆಗೂ ಸ್ಥಗಿತ– ಪ್ರಿಯಾಂಕ್ ಖರ್ಗೆ ಮಾಹಿತಿ

ಬೆಂಗಳೂರು: ಜಲಜೀವನ್ ಮಿಷನ್ ಯೋಜನೆಯಲ್ಲಿ (ಜೆಜೆಎಂ) ಅವೈಜ್ಞಾನಿಕ ಹಾಗೂ ಕಳಪೆ ಕಾಮಗಾರಿ ನಡೆದಿರುವ ಕುರಿತು ಸಾಕಷ್ಟು ದೂರುಗಳು ಬಂದಿವೆ. ‘ಮೂರನೇ ಸಂಸ್ಥೆ’ಯಿಂದ ತನಿಖೆ ನಡೆಸಲು ಸೂಚಿಸಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಸದಸ್ಯ ಮಂಜುನಾಥ ಭಂಡಾರಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಹಲವು ಭಾಗಗಳಲ್ಲಿ ನೀರಿನ ಮೂಲಗಳನ್ನೇ ಗುರುತಿಸದೆ ಪೈಪ್‌ಲೈನ್ ಮಾಡಲಾಗಿದೆ. ಎಲ್ಲೆಂದರಲ್ಲಿ ಗುಂಡಿ ಅಗೆಯಲಾಗಿದೆ. ಇದರಿಂದ ಅಪಘಾತಗಳಾಗುತ್ತಿವೆ. ಗುಣಮಟ್ಟವಿಲ್ಲ ಎಂದು ದೂರುಗಳು ಬಂದಿವೆ. ಪರಿಶೀಲನೆವರೆಗೂ ಆರೋಪಗಳು ಕೇಳಿ ಬಂದಿರುವ ಭಾಗಗಳ ಕಾಮಗಾರಿ ಸ್ಥಗಿತಗೊಳಿಸಲಾಗುವುದು ಎಂದರು.

667 ಪ್ರೌಢಶಾಲೆ ಮೇಲ್ದರ್ಜೆಗೇರಿಸಲು ಪ್ರಸ್ತಾವ: ಸಚಿವ ಮಧು ಬಂಗಾರಪ್ಪ

ಬೆಂಗಳೂರು: ರಾಜ್ಯದ 667 ಸರ್ಕಾರಿ ಪ್ರೌಢ ಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವವಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ವಿಧಾನಸಭೆಯಲ್ಲಿ ಗುರುವಾರ ಕಾಂಗ್ರೆಸ್‌ನ ಎಸ್.ಎನ್. ಸುಬ್ಬಾ ರೆಡ್ಡಿ ಪ್ರಶ್ನೆಗೆ ಉತ್ತರಿಸಿದ ಅವರು, ‘667 ಶಾಲೆಗಳನ್ನು ಮೇಲ್ದರ್ಜೆಗೇರಿಸಲು ಹಿಂದೆಯೇ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು. ಕೋವಿಡ್ ಸಂಕಷ್ಟದ ಕಾರಣದಿಂದ ಆರ್ಥಿಕ ಇಲಾಖೆ ಪ್ರಸ್ತಾವವನ್ನು ತಿರಸ್ಕರಿಸಿತ್ತು. ಈಗ ಪ್ರಸ್ತಾವ ಸಲ್ಲಿಸಿ ಒಪ್ಪಿಗೆ ಪಡೆಯಲಾಗುವುದು’ ಎಂದರು.

‘ಕೋವಿಡ್ ನಂತರದಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಗಣನೀಯ ಹೆಚ್ಚಳವಾಗಿದೆ. ಪಿಯು ಪ್ರವೇಶಕ್ಕೆ ಬೇಡಿಕೆ ಹೆಚ್ಚಾಗಿದೆ. ಕಾಲೇಜುಗಳ ಸಂಖ್ಯೆ ಕಡಿಮೆ ಇರುವುದರಿಂದ ತೀವ್ರ ಸಮಸ್ಯೆ ಆಗುತ್ತಿದೆ. ಶಾಲೆಗಳನ್ನು ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ’ ಎಂದು ಸುಬ್ಬಾ ರೆಡ್ಡಿ ಮನವಿ ಮಾಡಿದರು.

ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡದಿರುವ ಕುರಿತು ಬಿಜೆಪಿಯ ಬಿ.ವೈ. ವಿಜಯೇಂದ್ರ ಮತ್ತು ಮಹೇಶ್ ಟೆಂಗಿನಕಾಯಿ ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಮಧು, ‘ನ್ಯಾಯಾಲಯದ ನಿರ್ಬಂಧ ಇರುವುದರಿಂದ ನೇಮಕಾತಿ ಆದೇಶ ನೀಡಿಲ್ಲ. ನ್ಯಾಯಾಲಯ ಒಪ್ಪಿಗೆ ನೀಡಿದ ತಕ್ಷಣವೇ ನೇಮಕಾತಿ ಆದೇಶ ನೀಡುತ್ತೇವೆ’ ಎಂದರು.

‘ರಾಜಕೀಯದಲ್ಲಿ ಯಾವುದೂ ಶಾಶ್ವತವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯದಲ್ಲಿ ಯಾವುದೂ ಶಾಶ್ವತವಲ್ಲ. ಮೇಲೆ ಇದ್ದವರು ಕೆಳಕ್ಕೆ ಬರಬಹುದು, ಕೆಳಗೆ ಇದ್ದವರು ಮೇಲಕ್ಕೆ ಏರಬಹುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸಭೆಯಲ್ಲಿ ಗುರುವಾರ ನೂತನ ಉಪ ಸಭಾಧ್ಯಕ್ಷರಾಗಿ ಆಯ್ಕೆಯಾದ ರುದ್ರಪ್ಪ ಲಮಾಣಿ ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ‘ರಾಜಕೀಯ ಸಾಧ್ಯತೆಗಳ ಕಲೆ. ಯಾರೂ ಶಾಶ್ವತ ಶತ್ರುಗಳೂ ಅಲ್ಲ, ಮಿತ್ರರೂ ಅಲ್ಲ. ಇಲ್ಲಿದ್ದವರು ಅಲ್ಲಿಗೆ ಹೋಗಬಹುದು. ಅಲ್ಲಿದ್ದವರು ಇಲ್ಲಿಗೆ ಬರಬಹುದು’ ಎಂದರು.

‘ಮಂತ್ರಿಗಳಾಗಿದ್ದವರು ಸ್ಪೀಕರ್ ಆಗಿ ಕೆಲಸ ಮಾಡಿದ್ದಾರೆ. ಮುಖ್ಯಮಂತ್ರಿಗಳಾಗಿದ್ದವರೇ ಉಪ ಮುಖ್ಯಮಂತ್ರಿ ಆಗಿರುವುದನ್ನು ಮಹಾರಾಷ್ಟ್ರದಲ್ಲಿ ನೋಡುತ್ತಿದ್ದೇವೆ. ಇನ್ನೂ ಏನೇನಾಗುವುದೋ ಗೊತ್ತಿಲ್ಲ’ ಎಂದು ಹೇಳಿದರು.

‘ಡಿಕೆಶಿಗೆ ಮುಂದೆ ಯಾವ ಕುದುರೆ’

‘ಶಿವಕುಮಾರ್ ಅವರು ಎಲ್ಲ ಸಂದರ್ಭಗಳಲ್ಲೂ ಕೊಟ್ಟ ಕುದುರೆಯನ್ನು ಸಮರ್ಥವಾಗಿ ಏರಿದ್ದಾರೆ. ಇಂಧನ ಸಚಿವರಾಗಿದ್ದ ಅವಧಿಯಲ್ಲಿ ‘ಪವರ್ ಪಾಲಿಟಿಕ್ಸ್’ ಅನ್ನು ಸಮರ್ಥವಾಗಿ ಮಾಡಿದ್ದಾರೆ. ಮುಂದೆ ಯಾವ ಕುದುರೆ ಸಿಗುತ್ತದೋ ಗೊತ್ತಿಲ್ಲ’ ಎಂದು ಬಿಜೆಪಿಯ ಬಸವರಾಜ ಬೊಮ್ಮಾಯಿ ಹೇಳಿದರು.

ಶಿವಕುಮಾರ್ ಅವರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಉಪ ಮುಖ್ಯಮಂತ್ರಿಯವರು ಸಾರ್ವಕಾಲಿಕ ಸತ್ಯ ಹೇಳಿದ್ದಾರೆ. ರಾಜಕೀಯ ಶಕ್ತಿ ಸಾಮರ್ಥ್ಯದ ಆಟ ಎಂದು ಹೇಳುತ್ತಿದ್ದರು. ಈಗ ಅದು ಅವಕಾಶವನ್ನು ಬಳಸಿಕೊಳ್ಳುವ ಆಟವಾಗಿ ಬದಲಾಗಿದೆ’ ಎಂದರು.

ವಿಶೇಷ ಅನುದಾನಕ್ಕೂ ಕೇಂದ್ರದ ಕತ್ತರಿ

ವಿಧಾನ ಪರಿಷತ್: ಕೇಂದ್ರದ ನಡೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ₹ 5,495 ಕೋಟಿ ವಿಶೇಷ ಅನುದಾನ ನೀಡಲು 15ನೇ ಹಣಕಾಸು ಆಯೋಗ ಮಾಡಿದ್ದ ಶಿಫಾರಸನ್ನು ಕೇಂದ್ರ ಸರ್ಕಾರ ಪರಿಗಣಿಸಿಲ್ಲ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಒಪ್ಪಿಗೆ ನೀಡಲು ನಿರಾಕರಿಸಿದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಗುರುವಾರ ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ, ಟಿ.ಎ.‌ಶರವಣ ಪ್ರಶ್ನೆಗಳಿಗೆ ಉತ್ತರ ನೀಡಿದ ಅವರು, ಹಣಕಾಸು ಆಯೋಗದ ಶಿಫಾರಸಿನಂತೆ ಅನುದಾನ ಹಾಗೂ ತೆರಿಗೆ ಹಂಚಿಕೆ ಮಾಡಲಾಗುತ್ತದೆ. 2018–19ರಲ್ಲಿ ₹ 35,894 ಕೋಟಿ ದೊರೆತಿತ್ತು. ನಂತರ ಪ್ರತಿ ವರ್ಷವೂ ಕಡಿಮೆ ದೊರೆತಿದೆ. ನಾಲ್ಕು ವರ್ಷಗಳ ಹಣಕಾಸಿನ ಸ್ಥಿತಿಗತಿಗೆ ಹೋಲಿಸಿದರೆ ಅದು ತೀರ ಕಡಿಮೆ ಮೊತ್ತ. 14ನೇ ಹಣಕಾಸು ಆಯೋಗದಲ್ಲಿ ರಾಜ್ಯದ ಪಾಲು ಶೇ 4.71 ಇತ್ತು. 15ನೇ ಹಣಕಾಸು ಆಯೋಗದಲ್ಲಿ ಅದು 3.65ಕ್ಕೆ ಕುಸಿದಿದೆ. ಶೇ 1.06ರಷ್ಟು ಕಡಿಮೆ ನಿಗದಿ ಮಾಡಲಾಗಿದೆ ಎಂದರು.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ವಿಶೇಷ ಅನುದಾನ ನೀಡುವಂತೆ ರಾಜ್ಯ ಸರ್ಕಾರ ಮಾಡಿದ್ದ ಮನವಿಯನ್ನು ಕೇಂದ್ರ ಪುರಸ್ಕರಿಸಿಲ್ಲ. ಕೇಂದ್ರದ ಮೇಲೆ ಒತ್ತಡ ಹಾಕಲು ರಾಜ್ಯ ನಿರಂತರ ಪ್ರಯತ್ನ ಮಾಡುತ್ತಿದೆ. ಜಿಎಸ್‌ಟಿಯಲ್ಲೂ ರಾಜ್ಯದ ಪಾಲು ಸಮರ್ಪಕವಾಗಿ ಸಿಗುತ್ತಿಲ್ಲ. ಈ ಕುರಿತು ಹಿಂದಿನ ಬಿಜೆಪಿ ಸರ್ಕಾರ ಧ್ವನಿಯನ್ನೇ ಎತ್ತಲಿಲ್ಲ. ಇದನ್ನು ಹೇಳಿದರೆ ವಿರೋಧ ಪಕ್ಷದ ನಾಯಕರಿಗೆ ಬೇಸರವಾಗುತ್ತದೆ ಎಂದು ಹೇಳಿದರು.

‘ರಾಜ್ಯದಿಂದ ಕೇಂದ್ರಕ್ಕೆ ಸಂದಾಯವಾಗುವ ಎಲ್ಲ ರೀತಿಯ ತೆರಿಗೆ ಮಾಹಿತಿ ರಾಜ್ಯ ಸರ್ಕಾರದ ಬಳಿ ಇಲ್ಲ. ನೀಡಬೇಕಿರುವ ಪಾಲನ್ನೂ ಸರಿಯಾಗಿ ನೀಡದಿದ್ದರೆ ಹೇಗೆ? ಉತ್ತರದ ರಾಜ್ಯಗಳಿಗೆ ಹೆಚ್ಚಿನ ನೆರವು ನೀಡಲಾಗಿದೆ. ಕರ್ನಾಟಕಕ್ಕೆ ತಾರತಮ್ಯ ಎಸಗಲಾಗಿದೆ. 16ನೇ ಹಣಕಾಸು ಆಯೋಗದ ಮುಂದೆ ರಾಜ್ಯದ ವಾದ ಸಮರ್ಥವಾಗಿ ಮಂಡಿಸುತ್ತೇವೆ. ವಾದ ಮಂಡನೆಗೆ ಅಗತ್ಯವಾದ ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ. ಆಗಿರುವ ತಾರತಮ್ಯ ಸರಿಪಡಿಸಲು ಆಯೋಗಕ್ಕೆ ಕೋರಿಕೆ ಸಲ್ಲಿಸುತ್ತೇವೆ’ ಎಂದರು.

ಅಬಕಾರಿ ಆದಾಯದಲ್ಲಿ ಗಣನೀಯ ಏರಿಕೆಯಾಗಿದೆ. 2022–23ನೇ ಸಾಲಿನಲ್ಲಿ ₹ 29,920 ಕೋಟಿ ಬಂದಿದೆ. ವಾಣಿಜ್ಯ ತೆರಿಗೆ ಸೋರಿಕೆ ತಡೆಗೂ ಕ್ರಮ ಕೈಗೊಳ್ಳಲಾಗಿದ್ದು, ₹ 1,320 ಕೋಟಿ ವಸೂಲಿ ಮಾಡಲಾಗಿದೆ ಎಂದು ಕಾಂಗ್ರೆಸ್‌ನ ಎಂ.ನಾಗರಾಜು ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ವೇತನ ಪರಿಷ್ಕರಣೆಗೆ ಸರ್ಕಾರ ಬದ್ಧ’

ಬೆಂಗಳೂರು: 7ನೇ ವೇತನ ಆಯೋಗದ ಶಿಫಾರಸು ಹಾಗೂ ರಾಜ್ಯದ ಆರ್ಥಿಕ ಸ್ಥಿತಿಗತಿ ನೋಡಿಕೊಂಡು ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಮಾಡಲಾಗುವುದು. ನೌಕರರ ಹಿತಾಸಕ್ತಿಗೆ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಿಜೆಪಿಯ ವೈ.ಎ.ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ವರದಿ ನೀಡಲು ವೇತನ ಆಯೋಗ ಮತ್ತೆ 6 ತಿಂಗಳು ಹೆಚ್ಚುವರಿ ಸಮಯ ಕೇಳಿತ್ತು. ವರದಿ ಪಡೆದು ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಈಗಾಗಲೇ ಮೂಲ ವೇತನದ ಶೇ 17ರಷ್ಟು ಮಧ್ಯಂತರ ಪರಿಹಾರ ನೀಡಲಾಗಿದೆ ಎಂದರು.

ರಾಜ್ಯದಲ್ಲಿ ಖಾಲಿ ಇರುವ 2.55 ಲಕ್ಷ ಹುದ್ದೆಗಳನ್ನು ಹಂತ ಹಂತವಾಗಿ ಕಾಲಮಿತಿ ಒಳಗೆ ಭರ್ತಿ ಮಾಡಲಾಗುವುದು. ತುರ್ತು ಅಗತ್ಯವಿರುವ ಇಲಾಖೆಗಳಿಗೆ ಈಗಾಗಲೇ ಹೊರಗುತ್ತಿಗೆ ಆಧಾರದಲ್ಲಿ 75 ಸಾವಿರ ಸಿಬ್ಬಂದಿ ಬಳಸಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

‘ಮಳೆ ಹಾನಿ: ಸ್ಥಳಕ್ಕೆ ತೆರಳಿ ಪರಿಶೀಲಿಸಿ’

ಬೆಂಗಳೂರು: ‘ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಳೆಯಿಂದ ಹಾನಿ ಸಂಭವಿಸಿದ್ದು, ತಕ್ಷಣ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಉಡುಪಿ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹಾಗೂ ಉತ್ತರ ಕನ್ನಡ ಉಸ್ತುವಾರಿ ಸಚಿವರಾದ ಮಂಕಾಳ ವೈದ್ಯ ಅವರಿಗೂ ಮುಖ್ಯಮಂತ್ರಿ ತಿಳಿಸಿದ್ದಾರೆ.

ಮಳೆ ಹಾನಿಗೆ ಕುರಿತಂತೆ ಮುಖ್ಯ ಕಾರ್ಯದರ್ಶಿಯಿಂದ ಮಾಹಿತಿ ಪಡೆದ ಮುಖ್ಯಮಂತ್ರಿ, ಪರಿಹಾರ ಕಾಮಗಾರಿಗಳಿಗೆ ಅಧಿಕಾರಿಗಳನ್ನು ತುರ್ತಾಗಿ ಸಜ್ಜುಗೊಳಿಸಬೇಕು ಎಂದೂ ಆದೇಶ ನೀಡಿದರು.

ಮಳೆ ಕೊರತೆ: ಶಾಶ್ವತ ಕಾರ್ಯಪಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: ರಾಜ್ಯದಲ್ಲಿ ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗೆ ಆಗುತ್ತಿರುವ ಸಮಸ್ಯೆಗೆ ಪರಿಹಾರ ಒದಗಿಸಲು ಶಾಶ್ವತವಾದ ಕಾರ್ಯಪಡೆ ರಚಿಸಬೇಕು ಎಂದು ಬಿಜೆಪಿಯ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ಗುರುವಾರ ಆಗ್ರಹಿಸಿದರು.

ಕಾಂಗ್ರೆಸ್‌ನ ಅಲ್ಲಮಪ್ರಭು ಪಾಟೀಲ ಶೂನ್ಯವೇಳೆಯಲ್ಲಿ ಬರ ಪರಿಸ್ಥಿತಿ ಕುರಿತು ಪ್ರಸ್ತಾಪಿಸಿ, ‘ಕುಡಿಯುವ ನೀರಿನ ಕೊರತೆ ತೀವ್ರವಾಗಿದೆ. ನೀರು ಪೂರೈಕೆಗೆ ಹೆಚ್ಚಿನ ಅನುದಾನ ಒದಗಿಸಬೇಕು’ ಎಂದು ಮನವಿ ಮಾಡಿದರು. ಕಾಂಗ್ರೆಸ್‌ನ ಬಿ.ಆರ್. ಪಾಟೀಲ, ಜೆಡಿಎಸ್‌ನ ಶಾರದಾ ಪೂರ್ಯಾನಾಯ್ಕ ದನಿಗೂಡಿಸಿದರು.

ಆಗ ಮಧ್ಯಪ್ರವೇಶಿಸಿದ ಬೊಮ್ಮಾಯಿ, ‘ಮಳೆ ಕೊರತೆಯಿಂದ ಕುಡಿಯುವ ನೀರಿನ ಕೊರತೆ ಜತೆಯಲ್ಲೇ ಕೃಷಿ ಚಟುವಟಿಕೆಗಳಿಗೆ ತೀವ್ರ ಸಮಸ್ಯೆ ಆಗುತ್ತಿದೆ. ಪ್ರತಿ ವರ್ಷವೂ ಮಳೆ ಕೊರತೆ ಆದಾಗ ಈ ಸನ್ನಿವೇಶ ಸೃಷ್ಟಿಯಾಗುತ್ತಿದೆ. ಬಿತ್ತನೆ ಮಾಡಿದ ಬೀಜ ಮೊಳಕೆ ಒಡೆಯದಿದ್ದರೆ ಪರಿಹಾರ ಕೊಡುವ ವ್ಯವಸ್ಥೆ ಆಗಬೇಕು. ಶಾಶ್ವತ ಕಾರ್ಯಪಡೆ ರಚಿಸಿ, ಪ್ರತಿ ಜಿಲ್ಲೆಗೆ ತಲಾ ₹ 50 ಲಕ್ಷ ಅನುದಾನ ಒದಗಿಸಬೇಕು’ ಎಂದು ಒತ್ತಾಯಿಸಿದರು.

‘ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ಎಲ್ಲ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಕೆಗೆ ತಲಾ ₹ 1 ಕೋಟಿ ಅನುದಾನ ಒದಗಿಸಲಾಗಿದೆ. 193 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದೆ. 339 ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳಿಂದ ನೀರು ಒದಗಿಸಲಾಗುತ್ತಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಮಳೆ ಕೊರತೆ ಆಗಿರುವುದರಿಂದ ಬಿತ್ತನೆ ಆಗಿಲ್ಲ. ಈಗ ಮಳೆ ಆಗುತ್ತಿರುವುದರಿಂದ ಕೃಷಿ ವಿಮೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಲು ಕೇಂದ್ರ ಸರ್ಕಾರ ಒಪ್ಪಿದೆ. ಬರ ಘೋಷಣೆ ಕುರಿತು ಜುಲೈ 15ರ ಬಳಿಕ ತೀರ್ಮಾನಿಸಲಾಗುವುದು ಎಂದರು.

ಬಸ್ ತಡೆದು ಸಚಿವರ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ‘ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರ ರಾಜಕೀಯ ಒತ್ತಡದಿಂದ ಬೇಸತ್ತು ಸಾರಿಗೆ ಸಂಸ್ಥೆ ಬಸ್ ಚಾಲಕ ಜಗದೀಶ್ ಆತ್ಮಹತ್ಯೆಗೆ ಯತ್ನಿಸಿದ್ದಾರೆ’ ಎಂದು ಆರೋಪಿಸಿ ಬಸ್ ಚಾಲಕರು, ಜೆಡಿಎಸ್ ಕಾರ್ಯಕರ್ತರು ಗುರುವಾರ ಪಟ್ಟಣದ ಬಸ್ ಡಿಪೋದಿಂದ ಬಸ್‌ಗಳನ್ನು ಹೊರಕ್ಕೆ ಬಿಡದೆ ಪ್ರತಿಭಟಿಸಿದರು. ಕರ್ತವ್ಯಕ್ಕೆ ತೆರಳಲು ಕೆಲವು ಚಾಲಕರು ನಿರಾಕರಿಸಿದರು. ಡಿಪೋ ಹೊರಗೆ ಜಮಾಯಿಸಿದ ಜೆಡಿಎಸ್ ಕಾರ್ಯಕರ್ತರು ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟಿಸಿದರು.

‘ಚಾಲಕ ಜಗದೀಶ್ ಅವರ ಪತ್ನಿ ಗ್ರಾಮ ಪಂಚಾಯ್ತಿ ಸದಸ್ಯೆಯಾಗಿದ್ದು, ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಸುರೇಶ್‌ಗೌಡ ಪರ ಕೆಲಸ ಮಾಡಿದ್ದರು. ಹೀಗಾಗಿ ಅವರಿಗೆ ತೊಂದರೆ ಕೊಡಲೆಂದೇ ಸಚಿವರು ವರ್ಗಾವಣೆ ಮಾಡಿಸಿದ್ದಾರೆ’ ಎಂದು ಪ್ರತಿಭಟನಕಾರರು ಆರೋಪಿಸಿದರು. ಬಸ್‌ಗಳಿಲ್ಲದೆ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ, ಕಚೇರಿಗಳಿಗೆ ತೆರಳುವ ನೌಕರರಿಗೆ ತೊಂದರೆಯಾಯಿತು.

ಬಾಲಕರಿಂದ ಬಾಲಕಿ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದ ಬಡಾವಣೆಯೊಂದರ ಮನೆಯಲ್ಲಿ ಐವರು ಬಾಲಕರು 10 ವರ್ಷದ ಬಾಲಕಿ ಮೇಲೆ ಬುಧವಾರ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂದು ದೂರು ದಾಖಲಾಗಿದೆ. ಬಾಲಕಿಯ ತಾಯಿ ನೀಡಿದ ದೂರಿನ ಮೇರೆಗೆ ಕಲಬುರಗಿ ಮಹಿಳಾ ಠಾಣೆ ಪೊಲೀಸರು ಗುರುವಾರ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬುಧವಾರ ಮಧ್ಯಾಹ್ನ ಬಾಲಕಿ ಮನೆಯ ಎದುರು ಕುಳಿತಿದ್ದ ಸಂದರ್ಭದಲ್ಲಿ ಅಲ್ಲಿಗೆ ಬಂದ ಮೂವರು ಬಾಲಕರು ಚಾಕೊಲೇಟ್ ಕೊಡಿಸುವುದಾಗಿ ₹10 ತೋರಿಸಿ ಬಾಲಕಿಯನ್ನು ಮನೆಯೊಂದಕ್ಕೆ ಕರೆದೊಯ್ದು ಅಲ್ಲಿ ಅತ್ಯಾಚಾರ ಎಸಗಿದರು. ನಂತರ ಬಂದ ಮತ್ತಿಬ್ಬರು ಬಾಲಕರೂ ಅತ್ಯಾಚಾರ ಎಸಗಿದರು.

ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ ಬಾಲಕರು 10, 12 ಹಾಗೂ 15 ವರ್ಷದವರಾಗಿದ್ದಾರೆ.

ಬಾಲಕಿ ಮನೆಗೆ ಬಂದು ತಾಯಿಗೆ ಹೇಳಿದಾಗ ಘಟನೆ ಬೆಳಕಿಗೆ ಬಂದಿದೆ. ಬಾಲಕಿಯ ತಾಯಿ ತಮ್ಮ ಪತಿಗೆ ಕರೆ ಮಾಡಿ ಮನೆಗೆ ಕರೆಸಿಕೊಂಡು ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ನಾಲ್ವರು ಬಾಲಕರನ್ನು ವಶಕ್ಕೆ ಪಡೆದು ಬಾಲ ನ್ಯಾಯಮಂಡಳಿ ಎದುರು ಹಾಜರುಪಡಿಸಲಾಗಿದೆ.

ಸಿಇಟಿ: ಆರ್‌ಡಿ ಸಂಖ್ಯೆ ಜೋಡಿಸಲು 16ರವರೆಗೆ ಅವಕಾಶ

ಬೆಂಗಳೂರು: ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಸಿಇಟಿ ಬರೆದು ರ‍್ಯಾಂಕ್ ಪಡೆದ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಕಂದಾಯ ದಾಖಲೆಗಳ (ಆರ್‌ಡಿ) ಸಂಖ್ಯೆ ನಮೂದಿಸಲು ಜುಲೈ 16ರವರೆಗೆ ಅವಕಾಶ ನೀಡಲಾಗಿದೆ.

ಅಭ್ಯರ್ಥಿಗಳು ತಮ್ಮ ಅರ್ಜಿಯಲ್ಲಿ ನಮೂದಿಸಿರುವ ಆದಾಯ, ಜಾತಿ ಇತ್ಯಾದಿ ಪ್ರಮಾಣಪತ್ರಗಳ ಆರ್‌ಡಿ ಸಂಖ್ಯೆಯನ್ನು ಪರಿಶೀಲಿಸುವ ಕಾರ್ಯ ಈಗಾಗಲೇ ಮುಗಿದಿದೆ. ಹಲವು ಅಭ್ಯರ್ಥಿಗಳು ಸಲ್ಲಿಸಿದ ದಾಖಲೆಗಳು ನಿಗದಿತ ನಮೂನೆಗಳಲ್ಲಿ ಇಲ್ಲ. ಇದರಿಂದ ಆರ್‌ಡಿ ಸಂಖ್ಯೆ ತಾಳೆಯಾಗದೆ ಸಾವಿರಾರು ಅರ್ಜಿಗಳು ತಿರಸ್ಕೃತಗೊಂಡಿವೆ. ಹಾಗಾಗಿ, ಮತ್ತೊಂದು ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

ನಾ. ಡಿಸೋಜ ಸೇರಿ ಮೂವರಿಗೆ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನಾ. ಡಿಸೋಜ

ದು. ಸರಸ್ವತಿ



ಜಿ.ಕೆ. ಸತ್ಯ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 2023ನೇ ಸಾಲಿನ ‘ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ’ಗೆ ಸಾಹಿತಿ ನಾ. ಡಿಸೋಜ ಹಾಗೂ ಕನ್ನಡ ಪರ ಹೋರಾಟಗಾರ್ತಿ ದು. ಸರಸ್ವತಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿದೆ. ಈ ಪ್ರಶಸ್ತಿಯನ್ನು ಪ್ರತಿ ವರ್ಷ ಕನ್ನಡ ಕ್ರೈಸ್ತ ಸಾಧಕರೊಬ್ಬರು ಹಾಗೂ ಕನ್ನಡ ಪರ ಹೋರಾಟಗಳಲ್ಲಿ ಸಕ್ರಿಯವಾಗಿ ಇರುವ ಒಬ್ಬರಿಗೆ ನೀಡಲಾಗುತ್ತಿದೆ.

‘ಕನ್ನಡ ಚಳವಳಿ ವೀರಸೇನಾನಿ ಮ. ರಾಮಮೂರ್ತಿ ದತ್ತಿ ಪ್ರಶಸ್ತಿ’ಗೆ ಕಲಾವಿದ, ಕನ್ನಡ ಪರ ಹೋರಾಟಗಾರ ಜಿ.ಕೆ. ಸತ್ಯ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ₹ 10 ಸಾವಿರ ನಗದು ಒಳಗೊಂಡಿದೆ. ಕನ್ನಡ ಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿರುವ, 50 ವರ್ಷ ಮೀರಿದ ಕನ್ನಡ ಕಾರ್ಯಕರ್ತರೊಬ್ಬರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಶುಕ್ರವಾರ, ಜುಲೈ 7, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 187 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಗಣ' ಸಿನಿಮಾದಲ್ಲಿ ಡೈನಾಮಿಕ್ ಪ್ರಿನ್ಸ್‌ಗೆ ಜೋಡಿಯಾಗಿದ್ದಾರೆ ವೇದಿಕಾ

ಆಳ-ಅಗಲ
ಸುಳ್ಳುಸುದ್ದಿಗಳಿಗೆ ನಾಲ್ಕಾರು ಆಯಾಮ

ಥ್ರೆಡ್ಸ್ ಬಿಡುಗಡೆ, ಟ್ವಿಟರ್‌ಗೆ ನೇರ ಪೈಪೋಟಿ 8
ನಾನೇ ಎನ್‌ಸಿಪಿ ಅಧ್ಯಕ್ಷ: ಶರದ್ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,786 ▲	19,497 ▲	₹60,310 (ಬೆಂಗಳೂರು)	₹72,700 (ಬೆಂಗಳೂರು) ▲	82.47 ▼

14ಕ್ಕೆ ಚಂದ್ರನೂರಿಗೆ ಮೂರನೇ ಯಾತ್ರೆ

ಬೆಂಗಳೂರು (ಪಿಟಿಐ): ಚಂದಿರನ ಅಂಗಳಕ್ಕೆ ನೌಕೆ ಕಳುಹಿಸಿ ಅಧ್ಯಯನ ನಡೆಸುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮೂರನೇ ಪ್ರಯತ್ನಕ್ಕೆ ಜುಲೈ 14ರಂದು ಮುಹೂರ್ತ ನಿಗದಿಯಾಗಿದೆ.

ಭಾರತ ತನ್ನ ಚಂದ್ರ ಅನ್ವೇಷಣಾ ಯೋಜನೆ 'ಚಂದ್ರಯಾನ-3'ದ ಭಾಗವಾಗಿ ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಲ್ಯಾಂಡರ್ ಮತ್ತು ರೋವರ್ ಹೊತ್ತ ನೌಕೆಯನ್ನು 14ರಂದು ಮಧ್ಯಾಹ್ನ 2.35ಕ್ಕೆ ಉಡ್ಡಯನಗೊಳಿಸಲು ನಿರ್ಧರಿಸಿದೆ ಎಂದು ಇಸ್ರೊ ಗುರುವಾರ ಟ್ವೀಟ್ ಮಾಡಿದೆ.

ಚಂದ್ರನ ಮೇಲ್ಮೈನಲ್ಲಿ ಸುರಕ್ಷಿತವಾಗಿ ಲ್ಯಾಂಡರ್ ಇಳಿಸುವುದು, ಬಳಿಕ ರೋವರ್ ಅನ್ನು ಕಾರ್ಯಾಚರಣೆಗೆ ಇಳಿಸುವುದು ಮತ್ತು ವೈಜ್ಞಾನಿಕ ಪ್ರಯೋಗಗಳನ್ನು ನಡೆಸುವುದು ಈ ಯೋಜನೆಯ ಮೂಲ ಗುರಿಗಳಾಗಿವೆ.

10ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ವರ್ಗಾವಣೆಯಲ್ಲಿ ಭ್ರಷ್ಟಾಚಾರ ಆರೋಪ • ಸಾಕ್ಷ್ಯ ಬಹಿರಂಗಕ್ಕೆ ಕಾಂಗ್ರೆಸ್ ಪಟ್ಟು

ಸದನ: 'ಪೆನ್ ಡ್ರೈವ್' ಕದನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕಾರಿಗಳ ವರ್ಗಾವಣೆಯಲ್ಲಿನ ಭ್ರಷ್ಟಾಚಾರ ಕುರಿತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ 'ಪೆನ್ ಡ್ರೈವ್' ಪ್ರದರ್ಶಿಸಿ ನೀಡಿದ್ದ ಹೇಳಿಕೆ ಗುರುವಾರ ವಿಧಾನಸಭೆಯಲ್ಲಿ ಕೋಲಾಹಲಕ್ಕೆ ಕಾರಣವಾಯಿತು.

ಆಡಳಿತ- ವಿರೋಧ ಪಕ್ಷದ ಸದಸ್ಯರ ಮಧ್ಯೆ ತೀವ್ರ ವಾಕ್ಸಮರ ನಡೆದಿದ್ದು, ಸ್ಪೀಕರ್ ಸಮ್ಮತಿಸಿದರೆ ಸದನದಲ್ಲೇ ಆಡಿಯೊ ಸಾಕ್ಷ್ಯ ಬಹಿರಂಗಪಡಿಸುವುದಾಗಿ ಕುಮಾರಸ್ವಾಮಿ ಸವಾಲು ಹಾಕಿದರು.

ನಾಗಮಂಗಲ ಕೆಎಸ್‌ಆರ್‌ಟಿಸಿ ಡಿಪೊದ ಚಾಲಕ ಕಂ ನಿರ್ವಾಹಕ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣದ ಕುರಿತು ಕುಮಾರಸ್ವಾಮಿ ಪ್ರಸ್ತಾಪಿಸುತ್ತಿದ್ದಾಗ ಮಧ್ಯ ಪ್ರವೇಶಿಸಿದ ಇಂಧನ ಸಚಿವ ಕೆ.ಜೆ. ಜಾರ್ಜ್, 'ನೀವು ಏನು ಬೇಕಾದರೂ ಮಾತನಾಡಬಹುದಾ. ಗಾಳಿಯಲ್ಲಿ ಗುಂಡು ಹೊಡೆಯುವ ಪ್ರಯತ್ನ ಮಾಡಬೇಡಿ. ಇಂಧನ ಇಲಾಖೆಯಲ್ಲಿ ವರ್ಗಾವಣೆಗೆ ₹ 10 ಕೋಟಿ ಲಂಚದ ಆರೋಪ ಮಾಡಿದ್ದೀರಿ. ಪೆನ್ ಡ್ರೈವ್‌ನಲ್ಲಿ ಸಾಕ್ಷಿ ಇದೆ ಎಂದಿದ್ದೀರಿ. ಪೆನ್ ಡ್ರೈವ್ ಕೊಡಿ, ಅದರಲ್ಲಿ ಸಾಕ್ಷ್ಯವಿದ್ದರೆ ಕ್ರಮ ಕೈಗೊಳ್ಳುತ್ತೇವೆ' ಎಂದು ಏರಿದ ಧ್ವನಿಯಲ್ಲಿ ಹೇಳಿದರು.

'ಹಿಂದೆ ಡಿವೈಎಸ್‌ಪಿ ಎಂ.ಕೆ. ಗಣಪತಿ ಪ್ರಕರಣದಲ್ಲಿ ಏನೆಲ್ಲಾ ಹೇಳಿದ್ರಿ? ಐಎಎಸ್ ಅಧಿಕಾರಿ ಡಿ.ಕೆ. ರವಿ ಪ್ರಕರಣದಲ್ಲಿ ಏನು ಆರೋಪ ಮಾಡಿದ್ರಿ? ಸಿಐಡಿ, ಸಿಬಿಐ ವರದಿ ಬಂದ ಬಳಿಕ ಒಬ್ಬರಾದರೂ ತಪ್ಪಾಯಿತು ಎಂದು ಹೇಳಿದ್ದೀರಾ' ಎಂದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರನ್ನು ಪ್ರಶ್ನಿಸಿದರು.

'ನಿಮ್ಮ ಹಣೆ ಬರಹ ಗೊತ್ತಿದೆ' ಎಂದು ಕುಮಾರಸ್ವಾಮಿ ಹೇಳಿದರೆ, 'ನಿಮ್ಮದೂ ಗೊತ್ತಿದೆ. ನೀವೇನು ಸತ್ಯ ಹರೀಶ್ಚಂದ್ರನಾ' ಎಂದು ಜಾರ್ಜ್ ಮರುಪ್ರಶ್ನೆ ಹಾಕಿದರು.

8ನೇ ಪುಟ ನೋಡಿ

'ಕುಮಾರಸ್ವಾಮಿ ದುಡ್ಡು ಪಡೆದಿದ್ರಾ?'

'ವರ್ಗಾವಣೆಗಳಲ್ಲಿ ದಂಧೆ ನಡೆದಿದೆ, ಲಂಚ ಪಡೆದಿದ್ದಾರೆ ಎನ್ನುವ ಎಚ್.ಡಿ. ಕುಮಾರಸ್ವಾಮಿ ಆರೋಪ ಸುಳ್ಳು. ಅವರು ಹಿಟ್ ಆ್ಯಂಡ್ ರನ್ ಇದ್ದಂತೆ. ಅವರು ಮಾಡಿರುವ ಯಾವ ಆರೋಪಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಗುರುವಾರ ಬೆಳಿಗ್ಗೆ ಮಾತನಾಡಿದ ಮುಖ್ಯಮಂತ್ರಿ, 'ಅವರು ಮಾಜಿ ಶಾಸಕ ಯತೀಂದ್ರ ಮೇಲೆ ಸುಮ್ಮನೆ ಆರೋಪ ಮಾಡುತ್ತಿದ್ದಾರೆ. ಅವರು ಮನೆಯಲ್ಲಿ ಇದ್ದಾರೆ. ಕುಮಾರಸ್ವಾಮಿ ಕಾಲದಲ್ಲಿಯೂ ವರ್ಗಾವಣೆಗಳು ಆಗಿದ್ದವು. ಅವರು ದುಡ್ಡು ಪಡೆದಿದ್ರಾ? ಕುಮಾರಸ್ವಾಮಿ ಅವರ ಅಣ್ಣ ಸಚಿವರಾಗಿದ್ದರು, ಈಗ ಶಾಸಕ. ಅವರ ಪತ್ನಿ ಶಾಸಕಿಯಾಗಿದ್ದರು. ತಂದೆ ಪ್ರಧಾನಿಗಳಾಗಿದ್ದರು. ಅಣ್ಣನ ಮಗ ಸಂಸದ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಅವರ ಕುಟುಂಬದ ಸದಸ್ಯರೆಲ್ಲರೂ ಭ್ರಷ್ಟಾಚಾರದಲ್ಲಿ ತೊಡಗಿಸಿಕೊಂಡಿದ್ರಾ' ಎಂದೂ ಪ್ರಶ್ನಿಸಿದರು.

'ಕುಮಾರಸ್ವಾಮಿ ಹತಾಶರಾಗಿದ್ದಾರೆ. ಸರ್ಕಾರ ವರ್ಗಾವಣೆ ಮಾಡಲೇಬೇಕು, ಮಾಡುತ್ತಿದೆ. ವರ್ಗಾವಣೆಯನ್ನು ಆಡಳಿತದ ಹಿತದೃಷ್ಟಿಯಿಂದ ಮಾಡಬೇಕು. ಮಾರ್ಚ್, ಏಪ್ರಿಲ್‌ನಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದು, ವರ್ಗಾವಣೆ ಆಗಿರಲಿಲ್ಲ. ಈಗ ಸಾಮಾನ್ಯ ವರ್ಗಾವಣೆಗಳಾಗುತ್ತಿದೆ' ಎಂದರು.

'ಯತೀಂದ್ರ ಹೊರಗೆ ಬಂದರೆ ಏನಾಗಬಹುದು?'

'ಮೈಸೂರಿನಲ್ಲಿ ವರ್ಗಾವಣೆ ಬಗ್ಗೆ ಚರ್ಚೆ ಆಗುತ್ತಿದೆ. ಮುಖ್ಯಮಂತ್ರಿ ಅವರ ಪುತ್ರ ಮನೆಯಲ್ಲಿ ಮಲಗಿರುವ ಸಂದರ್ಭದಲ್ಲೇ ಇಷ್ಟಾಗಿದೆ. ಇನ್ನು ಹೊರಗೆ ಬಂದರೆ ಏನಾಗಬಹುದು ಎಂದು ಜನರು ಕೇಳುತ್ತಿದ್ದಾರೆ' ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ನಾನು ದ್ವೇಷದ ರಾಜಕೀಯ ಮಾಡುತ್ತಿಲ್ಲ. ವಿರೋಧ ಪಕ್ಷದ ಸದಸ್ಯನಾಗಿ ನನ್ನ ಕೆಲಸ ಮಾಡುತ್ತಿದ್ದೇನೆ. ಸತ್ಯ ಹೇಳುವುದೇ ತಪ್ಪಾ' ಎಂದು ಪ್ರಶ್ನಿಸಿದರು.

'ನಾನು ಯಾವುದಾದರೂ ವರ್ಗಾವಣೆ ವಿಷಯದಲ್ಲಿ ಭಾಗಿಯಾಗಿರುವ ಕುರಿತು ದಾಖಲೆ ನೀಡಿದರೆ ರಾಜಕೀಯ ನಿವೃತ್ತಿ ಪಡೆಯುವೆ' ಎಂದು ಸವಾಲು ಹಾಕಿದರು.

ಇಂದು ಸಿದ್ದರಾಮಯ್ಯ ಬಜೆಟ್ ಮಂಡನೆ

ಪ್ರಜಾವಾಣಿ ವಾರ್ತೆ

ಬಜೆಟ್ ಮಂಡನೆ: ಮಧ್ಯಾಹ್ನ 12ಕ್ಕೆ

ಬೆಂಗಳೂರು: ಬಜೆಟ್ ಮಂಡಿಸುವಲ್ಲಿ ತಮ್ಮದೇ ದಾಖಲೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಮುರಿಯಲಿದ್ದು, 14 ನೇ ಬಜೆಟ್ ಅನ್ನು ಮಂಡಿಸಲಿದ್ದಾರೆ.

ಫೆಬ್ರುವರಿಯಲ್ಲಿ ಬಜೆಟ್ ಮಂಡಿಸಿದ್ದ ಬಸವರಾಜ ಬೊಮ್ಮಾಯಿ, ಜುಲೈ ಅಂತ್ಯದವರೆಗೆ ಬೇಕಾದ ವೆಚ್ಚಕ್ಕೆ ಸೀಮಿತವಾಗಿ ಲೇಖಾನುದಾನಕ್ಕೆ ಒಪ್ಪಿಗೆ ಪಡೆದಿದ್ದರು. ಮುಂದಿನ ಎಂಟು ತಿಂಗಳ ಆದಾಯ ಮತ್ತು ಖರ್ಚನ್ನು ಆಧರಿಸಿ ಸಿದ್ದರಾಮಯ್ಯ, ಹೊಸ ಬಜೆಟ್ ಮಂಡಿಸಲಿದ್ದಾರೆ. ಬಜೆಟ್ ಗಾತ್ರ ₹3.30 ಲಕ್ಷ ಕೋಟಿ ದಾಟಲಿದೆ ಎಂದು ಅಂದಾಜಿಸಲಾಗಿದೆ.

ಜಗತ್ತಿನ ಅನೇಕ ದೇಶಗಳು ಜನಕೇಂದ್ರಿತ ಆರ್ಥಿಕತೆ ಪ್ರತಿಪಾದಿಸುತ್ತಿದ್ದು, ಈ ದೇಶಗಳಲ್ಲಿ ಸಾರ್ವತ್ರಿಕ ಮೂಲ ಆದಾಯ ಎಂಬ ಪರಿಕಲ್ಪನೆ ಪ್ರಬಲಗೊಳ್ಳುತ್ತಿದೆ. ಉಳ್ಳವರು ಮತ್ತು ಇಲ್ಲದವರ ಮಧ್ಯದ ಅಂತರವನ್ನು ತುಸು ಕಡಿಮೆ ಮಾಡುವ ಆಶಯವನ್ನು ಇದು ಹೊಂದಿದೆ. ಸಂಪತ್ತು ಕೆಲವರ ಕೈಯಲ್ಲೇ ಕೇಂದ್ರೀಕೃತಗೊಳ್ಳುವುದನ್ನು ತೊಡೆದು ಹಾಕುವ ಆರ್ಥಿಕ ನೀತಿ ಇದಾಗಿದೆ. ಹೊಸ ಅಭಿವೃದ್ಧಿ ಮಾದರಿ ಪರಿಚಯಿಸುವ ಈ ನೀತಿಯನ್ನು ರಾಜ್ಯದಲ್ಲೂ ಅನುಷ್ಠಾನ ಮಾಡಲು ಅಗತ್ಯವಾದ ನೀತಿಗಳನ್ನು ಬಜೆಟ್‌ನಲ್ಲಿ ಮಂಡಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

8ನೇ ಪುಟ ನೋಡಿ

ಬಜೆಟ್ ಕುರಿತ ಕ್ಷಣ ಕ್ಷಣದ ಮಾಹಿತಿಗಾಗಿ prajavani.net ನೋಡಿ

ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಕುನ್ನೂರು ಹೊರವಲಯದಲ್ಲಿ ಗುರುವಾರ ಶಾಲಾಮಕ್ಕಳು ಮಳೆಯಲ್ಲಿ ಆಟವಾಡುತ್ತಾ, ಸಂಭ್ರಮದಿಂದ ಮನೆಯತ್ತ ಸಾಗಿದರು –ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ತುಂಗಾ ಜಲಾಶಯದಿಂದ ನೀರು ಹೊರಕ್ಕೆ

ಮೈದುಂಬಿದ ಕಾವೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ, ಮಲೆನಾಡಿನ ಬಹುತೇಕ ಕಡೆಗಳಲ್ಲಿ, ದಕ್ಷಿಣ ಮತ್ತು ಉತ್ತರ ಒಳನಾಡಿನ ಹಲವೆಡೆ ಗುರುವಾರ ಭಾರಿ ಮಳೆ ಸುರಿದಿದೆ. ಕೆಲವು ಕಡೆ ಹಳ್ಳ, ಕೊಳ್ಳಗಳು ತುಂಬಿ ಹರಿಯುತ್ತಿದ್ದರೆ, ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ.

ಕೊಡಗಿನಲ್ಲಿ ಕಾವೇರಿ ಮೈದುಂಬಿ ಹರಿಯುತ್ತಿದ್ದರೆ, ದಕ್ಷಿಣ ಕನ್ನಡದಲ್ಲಿ ಕುಮಾರಧಾರ ಉಕ್ಕಿ ಹರಿಯುತ್ತಿದೆ. ರಾಜ್ಯದ ವಿವಿಧ ಜಲಾಶಯಗಳಲ್ಲಿ ಒಳ ಹರಿವು ಹೆಚ್ಚಾಗುತ್ತಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಒಬ್ಬರು ಮೃತಪಟ್ಟಿದ್ದರೆ, ಮತ್ತೊಬ್ಬರು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮಲ್ಲಾರಿಯಲ್ಲಿ ಸೇತುವೆ ಮುರಿದಿದೆ.

ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಕಾವೇರಿ, ಕನ್ನಿಕೆ ಹಾಗೂ ಸುಜ್ಯೋತಿ ನದಿಗಳ ಸಂಗಮ ಸ್ಥಳವಾದ ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ನೀರಿನ ಹರಿವು ಹೆಚ್ಚಾಗಿದ್ದು, ಭಾಗಮಂಡಲ ಮತ್ತು ನಾಪೋಕ್ಲು ರಸ್ತೆ ಜಲಾವೃತಗೊಂಡಿದೆ. ವಾಹನ ಸಂಚಾರಕ್ಕೆ ತೊಂದರೆಯಾಗಿದೆ.

ಕೇರಳದ ವಯನಾಡು ಭಾಗದಲ್ಲಿ ಮಳೆ ಬೀಳುತ್ತಿರುವುದರಿಂದ ಕಬಿನಿ ಜಲಾಶಯದ ಒಳ ಹರಿವಿನ ಪ್ರಮಾಣ ಹೆಚ್ಚಳವಾಗಿದೆ. ಗುರುವಾರ ಸಂಜೆ ವೇಳೆಗೆ 15,979 ಕ್ಯುಸೆಕ್ ಪ್ರಮಾಣದ ನೀರು ಹರಿದು ಬಂದಿದೆ. ವಿದ್ಯುತ್ ಘಟಕದ ಮೂಲಕ ನದಿಗೆ 500 ಕ್ಯುಸೆಕ್ ನೀರು ಹರಿಬಿಡಲಾಗಿದ್ದು, ವಿದ್ಯುತ್ ಉತ್ಪಾದನೆಯೂ ಆರಂಭವಾಗಿದೆ.

ಶಿವಮೊಗ್ಗ ಜಿಲ್ಲೆಯ ಗಾಜನೂರಿನ ತುಂಗಾ ಜಲಾಶಯದ 22 ಕ್ರಸ್ಟ್ ಗೇಟ್‌ಗಳ ಪೈಕಿ 10 ಗೇಟ್‌ಗಳನ್ನು ತೆರೆಯಲಾಗಿದೆ. ಜಲಾಶಯಕ್ಕೆ 23,200 ಕ್ಯುಸೆಕ್ ಒಳಹರಿವು ಇದ್ದು, ಅಷ್ಟೇ ಪ್ರಮಾಣದ ನೀರು ನದಿಗೆ ಹರಿಸಲಾಗುತ್ತಿದೆ. ಮುಂಗಾರು ಬಿರುಸು ಪಡೆದಿರುವುದರಿಂದ ಕೃಷಿ ಚುಟುವಟಿಕೆ ಚುರುಕು ಪಡೆದಿದೆ.

5ನೇ ಪುಟ ನೋಡಿ

ಮಳೆ ವಿವರ (ಗುರುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ)

ಸ್ಥಳ	ಮಳೆಯ ಪ್ರಮಾಣ ಸೆಂ.ಮೀ.
ಉಡುಪಿ ಜಿಲ್ಲೆ	
ಮಣಿಪುರ	31.1
ಕಾಂತಾವರ	30.7
ದಕ್ಷಿಣ ಕನ್ನಡ ಜಿಲ್ಲೆ	
ಪಲ್ಲಡ್ಕ	27.4
ಕೆಮ್ರಾಲ್	25.7
ಉತ್ತರ ಕನ್ನಡ ಜಿಲ್ಲೆ	
ದೇವಳಮಕ್ಕಿ	23
ಮುಂಡಳ್ಳಿ	22
ಶಿವಮೊಗ್ಗ	
ಆಗುಂಬೆ	20.84

ಸಹಾಯಕ ಕಿರಿಯ ಎಂಜಿನಿಯರ್ ಆತ್ಮಹತ್ಯೆ

ಪಾವಗಡ: ಪಟ್ಟಣದ ಖಾಸಗಿ ವಸತಿ ನಿಲಯದ ಕೊಠಡಿಯಲ್ಲಿ ಬುಧವಾರ ರಾತ್ರಿ ಬೆಳ್ಳಂದೂರಿನ ಬೆಸ್ಕಾಂ ಪೂರ್ವ ವಿಭಾಗದ ಸಹಾಯಕ ಕಿರಿಯ ಎಂಜಿನಿಯರ್ ಎಸ್.ಮಂಜುನಾಥ (22) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಂಗಳೂರಿನಿಂದ ಪಟ್ಟಣಕ್ಕೆ ಬಂದಿದ್ದ ಮಂಜುನಾಥ್ ವೈ.ಎನ್ ಹೊಸಕೋಟೆಗೆ ಹೋಗಲು ಬಸ್ ಇಲ್ಲ ಎಂದು ತಿಳಿಸಿ ಬುಧವಾರ ರಾತ್ರಿ ಪಟ್ಟಣದ ಖಾಸಗಿ ವಸತಿ ಗೃಹದಲ್ಲಿ ಕೊಠಡಿ ಪಡೆದಿದ್ದರು. ಗುರುವಾರ ಬೆಳಿಗ್ಗೆ 8ಗಂಟೆಯಾದರೂ ಕೊಠಡಿಯಿಂದ ಹೊರಬಾರದಿರುವುದರಿಂದ ಅನುಮಾನಗೊಂಡ ವಸತಿ ಗೃಹದ ಸಿಬ್ಬಂದಿ ಕಿಟಕಿಯಿಂದ ನೋಡಿದಾಗ ವಿಷಯ ಗೊತ್ತಾಗಿದೆ. ಮದುವೆ ವಿಚಾರದಲ್ಲಿ ಬೇಸರಗೊಂಡು ಮಂಜುನಾಥ್ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಕಾರ್ಮೆಲರಾಮ್: ಟ್ರಾಫಿಕ್ ಜಾಮ್ ತಪ್ಪಿಸಲು ರೈಲ್ವೆ ಇಲಾಖೆ ಕ್ರಮ ● 20 ತಿಂಗಳು ಸಂಚಾರ ಸ್ಥಗಿತ

ಮೇಲ್ಸೇತುವೆ ಕಾಮಗಾರಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ಬೆಂಗಳೂರಿನ ಟೆಕ್ ಕಾರಿಡಾರ್‌ನಲ್ಲಿ ವರ್ತೂರು–ಸರ್ಜಾಪುರ ಮುಖ್ಯರಸ್ತೆಗಳನ್ನು ಸಂಪರ್ಕಿಸುವ ಕಾರ್ಮೆಲರಾಮ್-ಗುಂಜೂರು ಲೆವೆಲ್ ಕ್ರಾಸಿಂಗ್‌ನಲ್ಲಿ ಮೇಲ್ಸೇತುವೆ ಕಾಮಗಾರಿಯನ್ನು ನೈರುತ್ಯ ರೈಲ್ವೆ ಆರಂಭಿಸಿದೆ.

ವಾಹನದಟ್ಟಣೆಯಿಂದ ನಿತ್ಯ ಗಿಜಿಗುಟ್ಟುವ ಈ ರಸ್ತೆಯು ರೈಲ್ವೆ ಹಳಿ ದಾಟಿ ಹೋಗಬೇಕು. ಹಲವು ರೈಲುಗಳು ಇಲ್ಲಿ ಸಂಚರಿಸುವುದರಿಂದ ವಾಹನಗಳು ಕಾಯುವುದು ಅನಿವಾರ್ಯವಾಗಿತ್ತು. ಇದನ್ನು ತಪ್ಪಿಸಲು ಮೇಲ್ಸೇತುವೆ ನಿರ್ಮಿಸಬೇಕು ಎಂದು ಸ್ಥಳೀಯರು ಹಲವು ವರ್ಷಗಳಿಂದ ಆಗ್ರಹಿಸುತ್ತಾ ಬಂದಿದ್ದರು. ಇದೀಗ ಅದಕ್ಕೆ ಸ್ಪಂದನೆ ಸಿಕ್ಕಿದೆ. 280 ಮೀಟರ್ ಉದ್ದ ಮತ್ತು 7.5 ಮೀಟರ್ ಅಗಲ ಇರುವ ದ್ವಿಪಥ ಮೇಲ್ಸೇತುವೆ ನಿರ್ಮಾಣಗೊಳ್ಳಲಿದೆ.

ಕಾರ್ಮೆಲರಾಮ್‌ಗುಂಜೂರು ಲೆವೆಲ್ ಕ್ರಾಸಿಂಗ್‌ನಲ್ಲಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿಗಾಗಿ ವಾಹನ ಸಂಚಾರ ಸ್ಥಗಿತಗೊಳಿಸಲಾಗಿದೆ

2025ರ ಏಪ್ರಿಲ್‌ವರೆಗೆ ಕಾಮಗಾರಿ ಅವಧಿ: ಕಾರ್ಮೆಲರಾಮ್-ಗುಂಜೂರು ಜಂಕ್ಷನ್‌ನಲ್ಲಿ ₹ 30 ಕೋಟಿ ವೆಚ್ಚದಲ್ಲಿ ರಸ್ತೆ ಮೇಲ್ಸೇತುವೆ ಕಾಮಗಾರಿ ನಡೆಸಲಾಗುತ್ತಿದೆ. 2025ರ ಏಪ್ರಿಲ್ ಒಳಗೆ ಕಾಮಗಾರಿ ಮುಗಿಯಲಿದೆ ಎಂದು ವಿಭಾಗೀಯ ರೈಲ್ವೆ ಹೆಚ್ಚುವರಿ ವ್ಯವಸ್ಥಾಪಕಿ (ಆಡಳಿತ) ಕುಸುಮಾ ಹರಿಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

> **ಮೇಲ್ಸೇತುವೆ ಕಾಮಗಾರಿಗಾಗಿ ಕಾರ್ಮೆಲರಾಮ್ ರೈಲ್ವೆ ಕ್ರಾಸಿಂಗ್ ಸಂಚಾರವನ್ನು ಮುಚ್ಚಲಾಗಿದೆ. ಸಾರ್ವಜನಿಕರು ಪರ್ಯಾಯ ಮಾರ್ಗ ಬಳಸಬೇಕು**
> **ಮಂಜುಳಾ ಅರವಿಂದ ಲಿಂಬಾವಳಿ**
> ಶಾಸಕಿ

ನೈರುತ್ಯ ರೈಲ್ವೆ ಕಾಮಗಾರಿ ನಿರ್ವಹಣೆ ಮಾಡಿದರೆ, ಸಂಚಾರ ಪೊಲೀಸರು ವಾಹನಗಳ ಸಂಚಾರಕ್ಕೆ ಬದಲಿ ವ್ಯವಸ್ಥೆಯನ್ನು ಮಾಡಿದೆ. ಗುಂಜೂರು ಭಾಗದಲ್ಲಿ ಸೌತ್ ಇಂಡಿಯನ್ ಬ್ಯಾಂಕ್ ಬಳಿಯಿಂದ ಕಾಮಗಾರಿ ಆರಂಭಗೊಂಡಿದೆ.

ರಸ್ತೆ ಬದಲಾವಣೆ: ವರ್ತೂರು ರಸ್ತೆಯಿಂದ ಸರ್ಜಾಪುರ ರಸ್ತೆ ಕಡೆಗೆ ಹೋಗುವ ವಾಹನಗಳು ಕಾರ್ಮೆಲರಾಮ್ 100 ಅಡಿ ರಸ್ತೆ ಕಡೆಗೆ ಸಾಗಬೇಕು. ಸರ್ಜಾಪುರ ರಸ್ತೆಯಿಂದ ವರ್ತೂರು ಕಡೆಗೆ ಹೋಗುವ ವಾಹನಗಳು ಕಾರ್ಮೆಲರಾಮ್ 100 ಅಡಿ ರಸ್ತೆ, ಗುಂಜೂರು ರಸ್ತೆ ಮೂಲಕ ಹೋಗಬೇಕು. ಕಾಮಗಾರಿಗಾಗಿ ರಸ್ತೆಯನ್ನು ಮುಚ್ಚಲಾಗಿದ್ದು, ಪರ್ಯಾಯ ರಸ್ತೆಗಳ ಬಗ್ಗೆ ಸೂಚನಾ ಫಲಕ ಅಳವಡಿಸಲಾಗಿದೆ. ಇದನ್ನು ನೋಡಿಕೊಂಡು ವಾಹನಗಳನ್ನು ಚಾಲಕರು ಚಲಾಯಿಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರೈಲು ಬಂದಾಗಲೆಲ್ಲ ನಾವು ಹಳಿ ದಾಟಲು ಕಾಯಬೇಕಿತ್ತು. ಎರಡೂ ಕಡೆಯೂ ದೀರ್ಘವಾದ ವಾಹನಗಳ ಸಾಲು ಇರುತ್ತಿತ್ತು. ಮೇಲ್ಸೇತುವೆ ನಿರ್ಮಾಣಗೊಂಡರೆ ತಡೆಯಿಲ್ಲದೇ ಸಾಗಬಹುದು. ಕಾಮಗಾರಿಯಿಂದಾಗಿ ಎರಡು ವರ್ಷ ತೊಂದರೆಯಾದರೂ ಪರವಾಗಿಲ್ಲ, ಕಾಯುವುದಕ್ಕೆ ಮುಕ್ತಿ ಸಿಗಬೇಕು' ಎಂದು ಸ್ಥಳೀಯ ನಿವಾಸಿ ಶಿವರಾಜ್ ಅಭಿಪ್ರಾಯ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಪ್ರತಿ ಇಲಾಖೆಗೂ ಜಾಗೃತ ಅಧಿಕಾರಿ ನೇಮಿಸಲು ಎಎಪಿ ಆಗ್ರಹ

ಬೆಂಗಳೂರು: ಪ್ರತಿ ಇಲಾಖೆಯಲ್ಲೂ ಜಾಗೃತ ಅಧಿಕಾರಿಯನ್ನು ನೇಮಿಸುವಂತೆ ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಸಂವಹನ ವಿಭಾಗದ ಅಧ್ಯಕ್ಷ ಬ್ರಿಜೇಶ್ ಕಾಳಪ್ಪ ಆಗ್ರಹಿಸಿದರು.

'ಈ ಹಿಂದೆಯೂ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು 2016ರಲ್ಲೇ ಪ್ರತಿ ಇಲಾಖೆಯಲ್ಲೂ ಜಾಗೃತ ಅಧಿಕಾರಿ ನೇಮಕಕ್ಕೆ ಸಂಬಂಧಿಸಿದಂತೆ ಆದೇಶ ಹೊರಡಿಸಿದ್ದರು. ಆಗ ನಾನೇ ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರನಾಗಿದ್ದೆ. ಈಗ ಅವರೇ ಮತ್ತೆ ಮುಖ್ಯಮಂತ್ರಿ ಹುದ್ದೆಗೇರಿದ್ದಾರೆ. ಆದರೆ, ಯಾವ ಕಾರಣಕ್ಕೆ ಇನ್ನೂ ಜಾಗೃತ ಅಧಿಕಾರಿಗಳನ್ನು ನೇಮಿಸಲು ಸಾಧ್ಯವಾಗಿಲ್ಲ' ಎಂದು ಪ್ರಶ್ನಿಸಿದರು.

'ಇತ್ತೀಚಿನ ಲೋಕಾಯುಕ್ತ ದಾಳಿಯ ವೇಳೆ ತಹಶೀಲ್ದಾರ್ ಒಬ್ಬರು ನೂರಾರು ಕೋಟಿ ಅಕ್ರಮ ಆಸ್ತಿ ಸಂಪಾದಿಸಿದ್ದಾರೆ ಎಂಬುದು ಗೊತ್ತಾಗಿದೆ. ರಾಜ್ಯ ಸರ್ಕಾರದಲ್ಲಿ ಭ್ರಷ್ಟಾಚಾರ ವ್ಯಾಪಕ ಆಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಹಿಂದಿನ ಎಲ್ಲ ಸರ್ಕಾರಗಳು ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸದೇ ಏಕೆ ಸುಮ್ಮನಿದ್ದವು ಎಂದು ರಾಜ್ಯದ ಜನರೇ ಪ್ರಶ್ನಿಸುತ್ತಿದ್ದಾರೆ' ಎಂದರು.

ರಾಜ್ಯ ಮಾಧ್ಯಮ ವಕ್ತಾರೆ ಉಷಾ ಮೋಹನ್ ಇದ್ದರು.

'ಆರ್ಥಿಕ ಪ್ರೋತ್ಸಾಹವಿದ್ದರೆ ಕಲೆಯ ಉಳಿವು'

ಬೆಂಗಳೂರು: ಯಾವುದೇ ಕಲೆ ಉಳಿಯಲು ಪೋಷಕರು ಇರಬೇಕು. ಕಲಾವಿದರಿಗೆ ಆರ್ಥಿಕವಾಗಿ ಪ್ರೋತ್ಸಾಹ ನೀಡಿದಾಗ ಕಲೆ ಉಳಿಯುತ್ತದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ ತಿಳಿಸಿದರು.

ಗಾಂಧಿನಗರದ ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘ ಪ್ರದರ್ಶಿಸುತ್ತಿರುವ ಜೇವರ್ಗಿ ರಾಜಣ್ಣ ಅವರ 'ಕುಂಟ ಕೋಣ ಮೂಕ ಜಾಣ' ನಾಟಕದ 150ನೇ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗುಬ್ಬಿ ವೀರಣ್ಣ ಕಾಲದಲ್ಲಿ ರಂಗಭೂಮಿ ವೈಭವಯುತವಾಗಿತ್ತು. ಈಗ ನಾಟಕ ಕಂಪನಿಗಳು ಆರ್ಥಿಕ ಸಂಕಷ್ಟದಲ್ಲಿವೆ. ನಾಟಕಗಳನ್ನು ನೋಡಿ ಪ್ರೇಕ್ಷಕರು ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ರಂಗಕರ್ಮಿ ಬಿ.ವಿ.ರಾಜಾರಾಂ ಮಾತನಾಡಿ, ಬೆಂಗಳೂರಿನಲ್ಲಿ ನಾಟಕ ಕಂಪನಿಗಳನ್ನು ನಡೆಸುವುದು ಕಷ್ಟ. ಜೇವರ್ಗಿ ರಾಜಣ್ಣ ಅವರ ನಾಟಕ ಕಂಪನಿಯಲ್ಲಿ ಕಲಾವಿದರು ಹಾಗೂ ತಂತ್ರಜ್ಞರನ್ನು ಒಳಗೊಂಡು 25 ಜನರಿದ್ದಾರೆ. ನಿತ್ಯ ಅವರನ್ನು ಪೊರೆಯುವುದು ಸವಾಲು' ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆಂಗಳೂರಿನ ಜಂಟಿ ನಿರ್ದೇಶಕ ಅಶೋಕ ಎನ್.ಚಲವಾದಿ ಮಾತನಾಡಿದರು. ರಂಗಭೂಮಿ ಕಲಾವಿದರಾದ ಓಬಳೇಶ್ ಹಾಗೂ ಮಂಜಮ್ಮ ಅವರನ್ನು ಸನ್ಮಾನಿಸಲಾಯಿತು.

'ನಂದಿನಿ ಕೆಫೆ ಮೂ'ಗೆ ನಂದಿನಿ ಉತ್ಪನ್ನಗಳನ್ನು ರಫ್ತು ಮಾಡುವ ವಾಹನಗಳಿಗೆ ಮಹಾಮಂಡಳಿ ಅಧ್ಯಕ್ಷ ಭೀಮಾ ನಾಯಕ್, ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಎಂ.ಕೆ. ಗುರುವಾರ ಹಸಿರು ನಿಶಾನೆ ತೋರಿಸಿದರು

ದುಬೈ 'ನಂದಿನಿ ಕೆಫೆ ಮೂ'ಗೆ ಉತ್ಪನ್ನ ರಫ್ತು ವಾಹನಗಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯು 'ನಂದಿನಿ' ಬ್ರ್ಯಾಂಡ್ ಅನ್ನು ಜಾಗತಿಕ ಮಟ್ಟಕ್ಕೆ ವಿಸ್ತರಿಸುತ್ತಿದ್ದು, ಆಗಸ್ಟ್‌ನಲ್ಲಿ ದುಬೈಯಲ್ಲಿ 'ನಂದಿನಿ ಕೆಫೆ ಮೂ' ಆರಂಭಿಸಲಿದೆ. ಇದಕ್ಕೆ ನಂದಿನಿ ಉತ್ಪನ್ನಗಳನ್ನು ರಫ್ತು ಮಾಡುವ ವಾಹನಗಳಿಗೆ ಗುರುವಾರ ಚಾಲನೆ ನೀಡಲಾಯಿತು.

ಮಹಾಮಂಡಳಿ ಅಧ್ಯಕ್ಷ ಭೀಮಾ ನಾಯಕ್, ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಎಂ.ಕೆ. ಈ ವಾಹನಗಳಿಗೆ ಹಸಿರು ನಿಶಾನೆ ತೋರಿಸಿದರು.

ನಂದಿನಿ ಕೆಫೆ ಮೂ: ನಂದಿನಿ ಪಿಜ್ಜಾ ಬರ್ಗರ್, ಸ್ಯಾಂಡ್‌ವಿಚ್, ಮಿಲ್ಕ್ ಶೇಕ್ ಸಹಿತ ವಿವಿಧ ಬಗೆಯ ಖಾದ್ಯಗಳು, ನಂದಿನಿಯ ಎಲ್ಲ ಉತ್ಪನ್ನಗಳನ್ನು ಕುಳಿತು ಸವಿಯಲು ಅವಕಾಶ ಮತ್ತು ವಾತಾವರಣ ಕಲ್ಪಿಸುವ ಯೋಜನೆಯೇ 'ನಂದಿನಿ ಕೆಫೆ ಮೂ'. ರಾಜ್ಯದ 13 ಹಾಗೂ ಹೊರರಾಜ್ಯಗಳ 8 ಸ್ಥಳಗಳಲ್ಲಿ ನಂದಿನಿ ಕೆಫೆ ಮೂ ಆರಂಭಿಸಲಾಗಿದೆ. ಈ ಕೆಫೆಗಳು ತಿಂಗಳಿಗೆ ₹ 1.5 ಕೋಟಿ ವ್ಯವಹಾರ ಮಾಡುತ್ತಿವೆ. ಇದೇ ಪ್ರಥಮ ಬಾರಿಗೆ ಹೊರದೇಶದಲ್ಲಿ ನಂದಿನಿ ಕೆಫೆ ಮೂ ಆರಂಭಗೊಳ್ಳುತ್ತಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಬಿಎಸ್‌ಡಬ್ಲ್ಯುಎಂಎಲ್: ನಗರಾಭಿವೃದ್ಧಿ ಇಲಾಖೆಯಿಂದ ತನಿಖೆ ಇಲ್ಲ

ಘನತ್ಯಾಜ್ಯ: ಎಸ್‌ಐಟಿ ರಚನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಂಪೂರ್ಣ ಕಾರ್ಯವೈಖರಿ ಬಗ್ಗೆ ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚಿಸಿದ್ದಾರೆ.

ಮುಖ್ಯಮಂತ್ರಿ ಅವರು ನಗರಾಭಿವೃದ್ಧಿ ಇಲಾಖೆಗೆ ಈ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಜೂನ್ 20ರಂದು ಕಳುಹಿಸಿದ್ದ ಟಿಪ್ಪಣಿಯನ್ನು ಮಾರ್ಪಡಿಸಿ, ಮುಖ್ಯ ಕಾರ್ಯದರ್ಶಿಯವರಿಗೆ ಜೂನ್ 26ರಂದು ಎಸ್‌ಐಟಿ ರಚಿಸಲು ಟಿಪ್ಪಣಿ ಕಳುಹಿಸಿದ್ದಾರೆ. ಬಿಎಸ್‌ಡಬ್ಲ್ಯುಎಂಎಲ್ ಟೆಂಡರ್ ಹಾಗೂ ಕಾರ್ಯಾದೇಶ ಪ್ರಕ್ರಿಯೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಗಳ ಪಾತ್ರವೂ ಇರುವುದರಿಂದ, ಆ ಇಲಾಖೆಯ ಅಧಿಕಾರಿಗಳಿಂದ ತನಿಖೆ ನಡೆಸುವುದು ಬೇಡ ಎಂಬ ಉದ್ದೇಶದಿಂದ ಎಸ್‌ಐಟಿ ರಚಿಸಲು ಆದೇಶಿಸಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ, ಎಸ್‌ಐಟಿ ರಚಿಸುವ ಬಗ್ಗೆ ಅಗತ್ಯ ಪ್ರಸ್ತಾವದೊಂದಿಗೆ ಕಡತ ಮಂಡಿಸಲು ಮುಖ್ಯಮಂತ್ರಿ ಸೂಚಿಸಿದ್ದಾರೆ. ಆದರೆ, ಮುಖ್ಯ ಕಾರ್ಯದರ್ಶಿಯವರು ಮತ್ತೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೇ ಟಿಪ್ಪಣಿಯನ್ನು ಕಳುಹಿಸಿರುವುದು ಗೊಂದಲಕ್ಕೀಡು ಮಾಡಿದೆ.

> **ಮುಖ್ಯಾಂಶಗಳು**
> - ಉಪ ಮುಖ್ಯಮಂತ್ರಿ ಜೊತೆ ಚರ್ಚಿಸಿ ಕಡತ ಮಂಡಿಸಿ: ಮುಖ್ಯಮಂತ್ರಿ
> - ತನಿಖಾ ತಂಡಕ್ಕೆ ಶೀಘ್ರ ಸದಸ್ಯರ ನೇಮಕ

ಬಿಎಸ್‌ಡಬ್ಲ್ಯುಎಂಎಲ್‌ನಿಂದ ಸರ್ಕಾರದ ಹಣ ದುರುಪಯೋಗವಾಗುತ್ತಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ಆರ್. ರಮೇಶ್ ಅವರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದರು. 'ಪ್ರಜಾವಾಣಿ'ಯಲ್ಲಿ 'ಗುತ್ತಿಗೆ ದೋಷಯುಕ್ತ: ₹13 ಕೋಟಿ ಬಿಡುಗಡೆ' ಶೀರ್ಷಿಕೆಯಡಿ ಜೂನ್ 20ರಂದು ಹಾಗೂ 'ಕಸ ಸಾಗಣೆಗೆ ದುಪ್ಪಟ್ಟಿಗೂ ಹೆಚ್ಚು ವೆಚ್ಚ' ವರದಿ 2022ರ ಡಿ.20ರಂದು ಪ್ರಕಟವಾಗಿತ್ತು.

ಬಿಎಸ್‌ಡಬ್ಲ್ಯುಎಂಎಲ್ ಸ್ಥಾಪನೆಯಾದಂದಿನಿಂದ ನೀಡಿರುವ ಕಾರ್ಯಾದೇಶಗಳು, ಚಾಲ್ತಿಯಲ್ಲಿರುವ ಟೆಂಡರ್ ಪ್ರಕ್ರಿಯೆಗಳನ್ನು ಕೂಡಲೇ ರದ್ದುಗೊಳಿಸಬೇಕು. ಅನುಷ್ಠಾನಗೊಳಿಸಿದ ಕಾಮಗಾರಿಗಳು, ಹಣ ದುರುಪಯೋಗ, ಸಂಸ್ಥೆಯ ಸಂಪೂರ್ಣ ಕಾರ್ಯವೈಖರಿ ಬಗ್ಗೆ ಸಮಗ್ರ ತನಿಖೆ ನಡೆಸಿ ವಿವರವಾದ ವರದಿ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದ್ದರು. ಇದೀಗ, ಆ ಎಲ್ಲ ಪ್ರಕ್ರಿಯೆ ರದ್ದುಗೊಳಿಸುವ ಜೊತೆಗೆ ತನಿಖೆಗೆ ಎಸ್‌ಐಟಿ ರಚಿಸಲು ತೀರ್ಮಾನಿಸಲಾಗಿದೆ.

ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿದ್ದ ಹಿಂದಿನ ಟಿಪ್ಪಣಿಯನ್ನೇ ಇದರಲ್ಲೂ ಪ್ರಸ್ತಾಪಿಸಲಾಗಿದ್ದು, ₹1,100 ಕೋಟಿ ವೆಚ್ಚ ಮಾಡಿರುವ ಅವೈಜ್ಞಾನಿಕ ಕ್ರಮಗಳಿಂದ ವಾಹನ ಸವಾರರು ಹಾಗೂ ನಾಗರಿಕರ ಆರೋಗ್ಯ, ಪರಿಸರಕ್ಕೆ ಹಾನಿ ಉಂಟು ಮಾಡುವ ಯೋಜನೆಗಳಾಗಿವೆ ಎಂದಿದ್ದಾರೆ. ಪರಿಶುದ್ಧ ವೆಂಚರ್ಸ್‌ಗೆ ನಿಯಮಗಳನ್ನು ಮೀರಿ ₹13.5 ಕೋಟಿ ಮುಂಗಡ ನೀಡಿರುವುದರಿಂದ ಹಣದ ದುರುಪಯೋಗವಾಗಿದೆ. ಇದೆಲ್ಲವನ್ನೂ ಕೂಲಂಕಷವಾಗಿ ತನಿಖೆ ನಡೆಸಲು ಸೂಚಿಸಲಾಗಿದೆ.

ಬಜೆಟ್ ತಯಾರಿಯಿಂದ ಎಸ್‌ಐಟಿ ರಚನೆ ವಿಳಂಬವಾಗಿದ್ದು, ಶೀಘ್ರವೇ ತನಿಖಾ ತಂಡಕ್ಕೆ ಸದಸ್ಯರನ್ನು ನೇಮಿಸಿ ಸರ್ಕಾರಿ ಆದೇಶ ಹೊರಬೀಳಲಿದೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ಬ್ಯಾಂಕ್ ನೌಕರರ ಸಮ್ಮೇಳನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್'ನ 10ನೇ ರಾಜ್ಯ ಸಮ್ಮೇಳನವು ಇದೇ 8 ಮತ್ತು 9ರಂದು ಜಯನಗರದ 3ನೇ ಹಂತದಲ್ಲಿರುವ ಚಾಮರಾಜು ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಸಮ್ಮೇಳನದಲ್ಲಿ ಬ್ಯಾಂಕ್‌ಗಳ ವಿಲೀನ, ಖಾಸಗೀಕರಣ, ನೇಮಕಾತಿ, ಸಾಲ ವಸೂಲಾತಿ ಸಮಸ್ಯೆ, ಬ್ಯಾಂಕ್ ಶಾಖೆಗಳ ಮುಚ್ಚುವಿಕೆಯಂತಹ ಪ್ರಮುಖ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಲಿವೆ.

ಈ ಸಮ್ಮೇಳನವನ್ನು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಚ್. ವೆಂಕಟಾಚಲಂ ಅವರು ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

'ಭಾರತದ ಸಂಸತ್ತು ಮತ್ತು ಕರ್ನಾಟಕ ಶಾಸನ ಸಭೆಯಲ್ಲಿ ಎಲ್. ಹನುಮಂತಯ್ಯ' ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಜಯಕರ ಎಸ್.ಎಂ., ಅಧ್ಯಕ್ಷತೆ: ಬಿ. ಗಂಗಾಧರ, ಅತಿಥಿಗಳು: ಎಲ್. ಹನುಮಂತಯ್ಯ, ಶ್ರೀನಿವಾಸ್ ಸಿ., ಶೇಖ್ ಮಸ್ತಾನ್, ಎಸ್.ಆರ್. ಕೇಶವ, ಆಯೋಜನೆ: ಡಾ. ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸ್ಥಳ: ಪ್ರೊ. ವೆಂಕಟಗಿರಿಗೌಡ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಸಸ್ಯ ಸಂತೆಯ ಉದ್ಘಾಟನೆ: ಅಕ್ಷತಾ ಪಾಂಡವಪುರ, ಅತಿಥಿ: ಎಸ್.ವಿ. ಹಿತ್ತಲಮನಿ, ಆಯೋಜನೆ ಮತ್ತು ಸ್ಥಳ: ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ, ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ತೋಟಗಾರಿಕೆ ಮಹಾವಿದ್ಯಾಲಯ, ವಿದ್ಯಾರಣ್ಯಪುರ, ಯಲಹಂಕ, ಬೆಳಿಗ್ಗೆ 11

ಅಕ್ಷತಾ ಪಾಂಡವಪುರ

'ನಾಡೋಜ ಬರಗೂರು ಪ್ರಶಸ್ತಿ' ಪ್ರದಾನ: ರವಿವರ್ಮ ಕುಮಾರ್, ಪ್ರಶಸ್ತಿ ಪುರಸ್ಕೃತರು: ಕೋಟಿಗಾನಹಳ್ಳಿ ರಾಮಯ್ಯ, ಸುಂದರರಾಜ್, ಅತಿಥಿ: ಚಿನ್ನೇಗೌಡ, ಉಪಸ್ಥಿತಿ: ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ: ನಾಡೋಜ ಡಾ. ಬರಗೂರು ಪ್ರತಿಷ್ಠಾನ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಸೆಂಟ್ರಲ್ ಕಾಲೇಜಿನ ಎದುರು, ಸಂಜೆ 5

ನೃತ್ಯ ರಂಗೋಲಿ ಉದ್ಘಾಟನೆ: ಟಿ.ಎಸ್. ನಾಗಾಭರಣ, ಅತಿಥಿಗಳು: ವಿದ್ಯಾ ರಾವ್, ಭಾವನಾ ರಾಮಣ್ಣ, ಭರತನಾಟ್ಯ ಪ್ರದರ್ಶನ: ರಾವಲಿ ಮೈಲಾವರಪು, ಶಮಾ ಕೃಷ್ಣ, ಆಯೋಜನೆ: ಅಕಾಡೆಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಸಂಜೆ 6

ಭಾವನಾ ರಾಮಣ್ಣ

'ರಣದುಂದುಭಿ' ಐತಿಹಾಸಿ ನಾಟಕ ಪ್ರದರ್ಶನ: ರಚನೆ: ಎನ್.ಎಸ್. ರಾವ್, ನಿರ್ದೇಶನ: ವೆಂಕಟರಮಣಯ್ಯ ಡಿ., 'ಹಳ್ಳಿಯಲ್ಲೊಂದು ಹರಿಕಥಾ ಪ್ರಸಂಗ' ಹಾಸ್ಯನಾಟಕ ಪ್ರದರ್ಶನ: ರಚನೆ: ಯು. ಗೋವಿಂದೇಗೌಡ, ನಿರ್ದೇಶನ: ಧನ್ವಂತ್ರಿ ಬಿ.ಎ., ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಸಿ.ಆರ್. ಸಿಂಹ ಸಾಂಸ್ಕೃತಿಕ ಭವನ, ಜ್ಞಾನಭಾರತಿ ಬಡಾವಣೆ, ವಳಗೇರ ಹಳ್ಳಿ, ಸಂಜೆ 6ರಿಂದ

'ರೊಟ್ಟಿಯ ಸಲುವಾಗಿ ಇಷ್ಟೆಲ್ಲ!?' ನಾಟಕ ಪ್ರದರ್ಶನ: ನಿರ್ದೇಶನ: ಎಂ. ಗಣೇಶ ಹೆಗ್ಗೋಡು, ಪ್ರಸ್ತುತಿ: ಜನಮನದಾಟ, ಆಯೋಜನೆ: ಸಂವಾದ–ಬದುಕು ಸೆಂಟರ್ ಫಾರ್ ಲೈವ್ಲಿಹುಡ್ಸ್ ಲರ್ನಿಂಗ್, ಸ್ಥಳ: ಸಂವಾದ–ಬದುಕು ಕ್ಯಾಂಪಸ್, ಬಂಜಾರಪಾಳ್ಯ, ಅಗರ ಗ್ರಾಮ, ತಾತಗುಣಿ, ಸಂಜೆ 6

ಪ್ರವಚನ ವಾಹಿನಿ: ಭಜನೆ: ಉಪಾಸನಾ ಭಜನಾ ಮಂಡಳಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಹರಿದಾಸ ವಾಣಿ: ರಾಯಚೂರು ಶೇಷಗಿರಿದಾಸ್ ಮತ್ತು ತಂಡ, ಆಯೋಜನೆ: ದಿಗ್ವಿಜಯ ಲಕ್ಷ್ಮಿನರಸಿಂಹಸ್ವಾಮಿ ದೇವಸ್ಥಾನ, ಸ್ಥಳ: ಶ್ರೀಮದ ಉತ್ತರಾದಿಮಠ, ನ್ಯಾಷನಲ್ ಕಾಲೇಜು ಎದುರು, ಬಸವನಗುಡಿ, ಸಂಜೆ 6.45

'ಚಾವುಂಡರಾಯ' ನಾಟಕ ಪ್ರದರ್ಶನ: ರಚನೆ: ಜಯರಾಮ ರಾಯಪುರ, ನಿರ್ದೇಶನ: ಹುಲಗಪ್ಪ ಕಟ್ಟಿಮನಿ, ಸಂಗೀತ: ದಿಗ್ವಿಜಯ ಹೆಗ್ಗೋಡು, ಆಯೋಜನೆ: ಸಮಾಜಮುಖಿ ರಂಗಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

'ಪಾವನ ತುಳಸಿ' ಯಕ್ಷಗಾನ ಪ್ರದರ್ಶನ: ಆಯೋಜನೆ: ಅನಂತಪದ್ಮನಾಭ ಯಕ್ಷಗಾನ ಮಂಡಳಿ ಪೆರ್ಡೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ 10ರಿಂದ

> ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
> nagaradalli_indu@prajavani.co.in

ಕೊಮ್ಮಘಟ್ಟ ಗ್ರಾಮದಲ್ಲಿ ತ್ಯಾಜ್ಯದ ದುರ್ವಾಸನೆ; ಗ್ರಾಪಂ ಅಸಹಾಯಕತೆ

ರಸ್ತೆ ಬದಿಯಲ್ಲಿ ಬೀಳುತ್ತಿದೆ ಕಸದ ರಾಶಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕೊಮ್ಮಘಟ್ಟ ಗ್ರಾಮದಿಂದ ಕೊಮ್ಮಘಟ್ಟದ ಬಂಗ್ಲೆ ಕ್ರಾಸ್‌ವರೆಗೆ ರಸ್ತೆಯ ಎರಡೂ ಬದಿಯಲ್ಲಿ ಕಸದ ರಾಶಿಗಳು ಬಿದ್ದಿವೆ. ದ್ವಿಚಕ್ರ ವಾಹನಗಳಲ್ಲಿ ಹೋಗುವವರು ತಂದು ಹಾಕಿರುವ ಕಸದ ದುರ್ವಾಸನೆಗೆ ಸ್ಥಳೀಯರು ಕಂಗಾಲಾಗಿದ್ದಾರೆ.

ಕೊಮ್ಮಘಟ್ಟ ಸುತ್ತಲಿನ ಬಡಾವಣೆಗಳ ನಿವಾಸಿಗಳು, ಬಿಬಿಎಂಪಿ ವ್ಯಾಪ್ತಿಯ ನಿವಾಸಿಗಳು ಮನೆಯ ಕಸ, ತ್ಯಾಜ್ಯವನ್ನು ಕವರ್‌ನಲ್ಲಿ ಕಟ್ಟಿ ದ್ವಿಚಕ್ರ ವಾಹನಗಳಲ್ಲಿ ಬಂದು ರಸ್ತೆಯ ಬದಿಯಲ್ಲಿ ಬಿಸಾಡುತ್ತಿದ್ದಾರೆ. ಕಸ, ಕೋಳಿ, ಮೇಕೆ, ಕುರಿಗಳ ತ್ಯಾಜ್ಯ, ಲಿವರ್, ಮೂಳೆ ಸೇರಿ ಕೊಳೆತು ದುರ್ವಾಸನೆ ಬೀರುತ್ತಿದೆ. ಇದರ ಜೊತೆಗೆ ಮದ್ಯದ ಖಾಲಿ ಬಾಟಲ್, ಪ್ಲಾಸ್ಟಿಕ್ ಕವರ್, ಆಸ್ಪತ್ರೆಯ ನಿರುಪಯುಕ್ತ ವಸ್ತುಗಳೂ ಬಂದು ಬೀಳುತ್ತಿವೆ.

ಕೊಳೆತ ತರಕಾರಿ, ಹಣ್ಣು, ಹೂವು, ಮಾವಿನ ಹಣ್ಣು, ಹಲಸಿನ ಹಣ್ಣು, ಮಾಂಸದ ತುಂಡುಗಳನ್ನು ತಂದು ಸುರಿಯುವುದರಿಂದ ಸೊಳ್ಳೆ, ನೊಣಗಳ ಹಾವಳಿ ಹೆಚ್ಚಾಗಿದೆ. ಚೀಲಗಳಲ್ಲೂ ಕಸವನ್ನು ತಂದು ಹಾಕಲಾಗುತ್ತಿದೆ. ಸಾಂಕ್ರಾಮಿಕ ರೋಗದ ಭಯದಿಂದ ಜೀವನ ನಡೆಸಬೇಕು. ಗಾಳಿ ಬೀಸಿದಾಗ ದುರ್ವಾಸನೆಯ ವಿಷಕಾರಿ ಗಾಳಿ ಬೀಸುತ್ತಿದೆ ಎಂದು ಸ್ಥಳೀಯರಾದ ಆರ್. ತನುಜ, ಸವಿತಾ ಬೇಸರ ವ್ಯಕ್ತಪಡಿಸಿದರು.

ಕೊಮ್ಮಘಟ್ಟ ಬಳಿ ಕಸ ಸುರಿಯುತ್ತಿರುವ ನಾಗರಿಕರು

'ಕೊಮ್ಮಘಟ್ಟ ಕೆರೆಯ ಪ್ರದೇಶದ ಬಳಿ ಬಿಬಿಎಂಪಿ ಮತ್ತು ಕೆಲವು ಬಡಾವಣೆಯ ತ್ಯಾಜ್ಯ, ಕಸವನ್ನು ಸುರಿದು ಬೆಂಕಿ ಹಚ್ಚಿದಾಗ ಹೊಗೆ ಮತ್ತು ಬೂದಿ ಮನೆಗಳಿಗೆ ಬರುತ್ತಿದೆ. ನಮ್ಮ ಕಷ್ಟವನ್ನು ಯಾರಿಗೆ ಹೇಳುವುದು. ಶ್ರೀಮಂತರು ವಾಸಿಸುವ ಸ್ಥಳಗಳಲ್ಲಿ ಕಸ ಸುರಿದಿದ್ದರೆ, ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ವಾಟ್ಸ್‌ಆ್ಯಪ್, ಟ್ವಿಟರ್‌ಗಳಲ್ಲಿ ಹಾಕಿ ಜರೆಯುತ್ತಿದ್ದರು. ಜನಪ್ರತಿನಿಧಿಗಳು, ಅಧಿಕಾರಿಗಳು ಕಸ ಸುರಿಯದಂತೆ ನೋಡಿಕೊಳ್ಳುತ್ತಿದ್ದರು. ಬಡವರು ವಾಸಿಸುವ ಈ ಪ್ರದೇಶಗಳಲ್ಲಿ ಕೇಳುವವರಿಲ್ಲ' ಎಂದು ಅಳಲು ತೋಡಿಕೊಂಡರು.

ಕೊಮ್ಮಘಟ್ಟದಿಂದ ಬಂಗ್ಲೆ ಕ್ರಾಸ್‌ವರೆಗಿನ ರಸ್ತೆಯ ಎರಡು ಬದಿಯಲ್ಲಿ ಹೊರಗಡೆಯಿಂದ ಚೀಲ ಮತ್ತು ಪ್ಲಾಸ್ಟಿಕ್ ಕವರ್‌ಗಳನ್ನು ತಂದು ಹಾಕುತ್ತಾರೆ. ಬಂಗ್ಲೆ ಬಳಿಯ ಅಶ್ವತ್ಥಕಟ್ಟೆ ಬಳಿ ಹಳೆಯ ದೇವರ ಫೋಟೊಗಳನ್ನು ಬಿಸಾಡಿ ಹೋಗುತ್ತಾರೆ. ಗಾಜುಗಳು ಒಡೆದು ನಾಗರಿಕರು ನಡೆಯಲು ಸಾಧ್ಯವಾಗುತ್ತಿಲ್ಲ. ತ್ಯಾಜ್ಯವನ್ನು ತಿಂದು ಹಲವಾರು ನವಿಲುಗಳು ಸಾವನಪ್ಪಿವೆ ಎಂದು ಗೃಹಿಣಿ ಸೌಮ್ಯ ಬೇಸರ ವ್ಯಕ್ತಪಡಿಸಿದರು.

'ಪಂಚಾಯಿತಿ ವ್ಯಾಪ್ತಿಯಲ್ಲಿ ಅನೇಕ ಬಡಾವಣೆ, ಗ್ರಾಮಗಳು ಬರುವುದರಿಂದ ಕಸದ ಸಮಸ್ಯೆ ಬಿಗಾಡಯಿಸಿದೆ. ಆದ್ಯತೆ ಮೇಲೆ ಕಸದ ಸಮಸ್ಯೆ ಬಗೆ ಹರಿಸುತ್ತೇವೆ. ಬಿಬಿಎಂಪಿ ವ್ಯಾಪ್ತಿಯಿಂದ ಕಸ ತಂದು ಸುರಿಯುವುದನ್ನು ತಪ್ಪಿಸಲು ಹಲವು ಪ್ರಯತ್ನಪಟ್ಟರೂ ಸಾಧ್ಯವಾಗುತ್ತಿಲ್ಲ' ಎಂದು ಸೂಲಿಕೆರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಮತಾ ಪ್ರತಿಕ್ರಿಯಿಸಿದರು.

ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ಗುರುವಾರ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಆಯೋಜಿಸಿದ್ದ ವೀರಶೈವ ಲಿಂಗಾಯತ ಶಾಸಕರು ಮತ್ತು ಸಚಿವರಿಗೆ ಅಭಿನಂದನಾ ಸಮಾರಂಭದಲ್ಲಿ ಬಿ.ವೈ. ವಿಜಯೇಂದ್ರ, ಶರಣಬಸಪ್ಪ ದರ್ಶನಾಪೂರ, ಈಶ್ವರ ಖಂಡ್ರೆ, ಶಾಮನೂರು ಶಿವಶಂಕರಪ್ಪ, ಎಂ.ಬಿ.ಪಾಟೀಲ, ಲಕ್ಷ್ಮಿ ಹೆಬ್ಬಾಳ್ಕರ ಮತ್ತು ಡಾ. ಶರಣ ಪ್ರಕಾಶ ಪಾಟೀಲ ಅವರನ್ನು ಅಭಿನಂದಿಸಲಾಯಿತು. ಮಾಜಿ ಉಪ ಮೇಯರ್ ಬಿ.ಎಸ್. ಪುಟ್ಟರಾಜು, ಶಂಕರ ಬಿದರಿ, ಪ್ರಭಾಕರ ಕೋರೆ ಮತ್ತು ಸದಸ್ಯರು ಇದ್ದಾರೆ ಪ್ರಜಾವಾಣಿ ಚಿತ್ರ

ಅಭಿನಂದನಾ ಕಾರ್ಯಕ್ರಮದಲ್ಲಿ ಶಾಮನೂರು ಶಿವಶಂಕರಪ್ಪ

ಸವಾಲು ಎದುರಿಸಲು ಒಟ್ಟಾಗಿರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೀರಶೈವ–ಲಿಂಗಾಯತ ಬೇರೆ ಬೇರೆಯಲ್ಲ, ಒಂದೇ. ಯಾವುದೇ ಸವಾಲುಗಳನ್ನು ಎದುರಿಸಲು ನಾವು ಒಗ್ಗಟ್ಟಾಗಿರಬೇಕು' ಎಂದು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹೇಳಿದರು.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ವತಿಯಿಂದ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವೀರಶೈವ ಲಿಂಗಾಯತ ನೂತನ ಸಚಿವರು, ಶಾಸಕರ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಹಿಂದೆ ನಮ್ಮ ಸಮಾಜವನ್ನು ಒಡೆಯುವ ಪ್ರಯತ್ನ ಗಳಾದಾಗ ಮಹಾಸಭಾ ಕೈಗೊಂಡ ನಿರ್ಧಾರದಿಂದಾಗಿ ಅವರ ಪ್ರಯತ್ನ ಕೈಗೂಡಿಲ್ಲ. ಮುಂದೆ ಸಮಯ ಬರುತ್ತದೆ. ಆಗ ನಾವು ಒಗ್ಗಟ್ಟು ಪ್ರದರ್ಶಿಸಬೇಕಾಗಿದೆ' ಎಂದು ತಿಳಿಸಿದರು.

ಮಹಾಪ್ರಧಾನ ಕಾರ್ಯದರ್ಶಿ ಈಶ್ವರ ಬಿ. ಖಂಡ್ರೆ ಮಾತನಾಡಿ, 'ಕರ್ನಾಟಕ ಶಿಕ್ಷಣದಲ್ಲಿ ಮುಂದೆ ಇರಲು ವೀರಶೈವ ಲಿಂಗಾಯತ ಮಠಗಳು ಕಾರಣ. ನಮ್ಮ ಮಠಗಳು ಜಾತಿ, ಧರ್ಮ ನೋಡದೇ ಎಲ್ಲರಿಗೂ ಶಿಕ್ಷಣ ನೀಡುತ್ತಾ ಬಂದಿವೆ. ನಮ್ಮ ಸಮಾಜ ಒಡೆದರೆ ಕರ್ನಾಟಕ ಚೂರಾಗುತ್ತದೆ. ನಾವು ಒಂದಾಗಿದ್ದರೆ, ರಾಜ್ಯ ಅಭಿವೃದ್ಧಿಯಾಗುತ್ತದೆ' ಎಂದು ತಿಳಿಸಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ಮಾತನಾಡಿ, 'ವೀರಶೈವ ಲಿಂಗಾಯತ ಒಳಪಂಗಡಗಳು ಒಂದಾಗಬೇಕು. ಆಗ ಕರ್ನಾಟಕದಲ್ಲಿ ಸಮಾಜ ಮತ್ತಷ್ಟು ಸದೃಢವಾಗುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಾತ್ರಾ ಮಹೋತ್ಸವ

ಕುದೂರು (ಮಾಗಡಿ): ಕಾಗಿಮಡು ಮತ್ತು ಗೊಲ್ಲರ ಹಟ್ಟಿ ಬಸವೇಶ್ವರ ಸ್ವಾಮಿ ಜಾತ್ರೆ ಜುಲೈ 10ರಿಂದ 12ರವರೆಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

10ರಂದು ಬೆಳಿಗ್ಗೆ ಬಸವೇಶ್ವರ ಸ್ವಾಮಿಗೆ ಅಭಿಷೇಕ ಹಾಗೂ ಮಧ್ಯಾಹ್ನ 1ಕ್ಕೆ ಅಗ್ನಿಕುಂಡಕ್ಕೆ ಅಗ್ನಿಸ್ಪರ್ಶ, ಸಂಜೆ 7ಕ್ಕೆ ಆರತಿಯೊಂದಿಗೆ ಗ್ರಾಮಸ್ಥರಿಂದ ಮೆರವಣಿಗೆ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

ರೈಲ್ವೆ ಮೇಲ್ಸೇತುವೆಗೆ ₹ 784 ಕೋಟಿ

ನವದೆಹಲಿ: ಕೇಂದ್ರ ರಸ್ತೆ ಮೂಲ ಸೌಕರ್ಯ ನಿಧಿಯ (ಕ್ರಿಪ್) ಸೇತುಬಂಧನ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ 22 ರೈಲ್ವೆ ಮೇಲ್ಸೇತುವೆಗಳನ್ನು ₹784 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ಅನುಮೋದನೆ ನೀಡಿದೆ.

ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ಸಂಭವಿಸುತ್ತಿರುವ ಅಪಘಾತಗಳನ್ನು ತಡೆಯಲು ಹಾಗೂ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಈ ಮೇಲು ಸೇತುವೆಗಳನ್ನು ನಿರ್ಮಿಸಲಾಗುತ್ತದೆ. ರಾಜ್ಯದಲ್ಲಿ ₹997 ಕೋಟಿ ವೆಚ್ಚದಲ್ಲಿ 26 ಮೇಲ್ಸೇತುವೆಗಳನ್ನು ನಿರ್ಮಿಸಲು ಅನುಮೋದನೆ ನೀಡುವಂತೆ ಲೋಕೋಪಯೋಗಿ ಇಲಾಖೆಯು ಸಚಿವಾಲಯಕ್ಕೆ ಈ ವರ್ಷದ ಜನವರಿಯಲ್ಲಿ ಪ್ರಸ್ತಾವನೆ ಸಲ್ಲಿಸಿತ್ತು. ಸಚಿವಾಲಯವು 22 ಕಾಮಗಾರಿ ನಡೆಸಲು ಅನುಮೋದನೆ ನೀಡಿದೆ. ರೈಲ್ವೆ ಮೇಲ್ಸೇತುವೆಗಳ ನಿರ್ಮಾಣಕ್ಕೆ ಸಚಿವಾಲಯವು 2022–23ರಲ್ಲಿ ₹47 ಕೋಟಿ ಹಂಚಿಕೆ ಮಾಡಿತ್ತು. 2023–24ನೇ ಸಾಲಿಗೆ ₹94 ಕೋಟಿ ಹಂಚಿಕೆ ಮಾಡಿದೆ.

ಲುಲು ಮಾಲ್‌ನಲ್ಲಿ ರಿಯಾಯಿತಿ ಮಾರಾಟ

ಬೆಂಗಳೂರು: ಲುಲು ಮಾಲ್‌ನಲ್ಲಿ ಇದೇ 9ರವರೆಗೆ ನಾಲ್ಕು ದಿನಗಳ ಕಾಲ 'ವಿಶೇಷ ಬೇಸಿಗೆ ಮಾರಾಟ' ಪ್ರಾರಂಭವಾಗಿದ್ದು, 225ಕ್ಕೂ ಹೆಚ್ಚು ಬ್ರ್ಯಾಂಡ್‌ಗಳ ಮೇಲೆ ಶೇ 50ರಷ್ಟು ರಿಯಾಯಿತಿ ಇರಲಿದೆ.

ಬ್ರ್ಯಾಂಡೆಡ್ ಉಡುಪುಗಳು, ಪರಿಕರಗಳು, ಗೃಹ ಅಲಂಕಾರಿಕ ವಸ್ತುಗಳು, ಎಲೆಕ್ಟ್ರಾನಿಕ್ ಮತ್ತು ದಿನಸಿ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ₹ 3 ಸಾವಿರಕ್ಕಿಂತ ಹೆಚ್ಚು ಮೊತ್ತದ ಶಾಪಿಂಗ್ ಮಾಡಿದರೆ ವಿವಿಧ ವೋಚರ್ ಹಾಗೂ ಉಡುಗೊರೆಗಳನ್ನು ಪಡೆದುಕೊಳ್ಳಬಹುದು. ಜತೆಗೆ, ಎಂ.ಜಿ. ಆಸ್ಟರ್ ಕಾರು ಸಹ ಗೆಲ್ಲುವ ಅವಕಾಶ ಇದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ ವಾರ್ತೆ

ಯಶವಂತಿ ಸುವರ್ಣ

ಕಾರ್ಕಳ (ಉಡುಪಿ): ಇಲ್ಲಿನ ಸಾಹಿತಿ ಯಶವಂತಿ ಸುವರ್ಣ(83) ವಯೋಸಹಜ ಕಾಯಿಲೆಯಿಂದ ಗುರುವಾರ ನಿಧನರಾದರು.

ತುಳು ಸಾಹಿತ್ಯ ಅಕಾಡಮಿ ಸದಸ್ಯೆಯಾಗಿದ್ದ ಅವರು ಕರಾವಳಿ ಮಹಿಳಾ ಲೇಖಕಿಯರ ಸಂಘದ ಸದಸ್ಯೆಯಾಗಿ ಜನಪದೀಯ ಮತ್ತು ಸಾಹಿತ್ಯಿಕ 14 ಕೃತಿಗಳನ್ನು ರಚಿಸಿದ್ದರು. ನವಭಾರತ, ಮುಂಗಾರು, ಅಕ್ಷಯ, ಮೊಗವೀರ, ಕೃಷಿಕರ ಸಂಘಟನೆ ಮೊದಲಾದ ದಿನಪತ್ರಿಕೆ, ವಾರಪತ್ರಿಕೆಗಳಲ್ಲಿ ಅವರ ಲೇಖನಗಳು ಪ್ರಕಟವಾಗಿದ್ದವು.

ತಾಲ್ಲೂಕು ಪಂಚಾಯಿತಿ ಸದಸ್ಯೆಯಾಗಿ, ಕುಕ್ಕುಂದೂರು ಮಂಡಲ ಪಂಚಾಯಿತಿ ಉಪಾಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ್ದರು. ಅವರಿಗೆ ಮಕ್ಕಳಾದ ವಿಶ್ರಾಂತ ಪ್ರೊ.ಉಷಾರಾಣಿ, ಮಂಗಳೂರು ಗೋಕರ್ಣನಾಥ ಕಾಲೇಜಿನ ಪ್ರಾಂಶುಪಾಲರು, ರಾಣಿ ಅಬ್ಬಕ್ಕ ತುಳು ಬದುಕು ಅಧ್ಯಯನ ಕೇಂದ್ರದ ಕಾರ್ಯದರ್ಶಿ ಡಾ.ಆಶಾಲತಾ ಸುವರ್ಣ ಇದ್ದಾರೆ. ಮೃತರು ತಮ್ಮ ದೇಹವನ್ನು ಮಣಿಪಾಲ ಮೆಡಿಕಲ್ ಕಾಲೇಜಿಗೆ ದಾನ ಮಾಡಿದ್ದಾರೆ.

Mfg.: Homoeo Laboratories, Pune.
Email : homoeolab@gmail.com
SS:B.R.Ent, Mumbai.
Mobile 8652756688 / 7219731618
Kolar Pharma, Kolar : 9449955077
Nagaraj Chik, Chikkaballapur : 8867863277
Adarsh Pharma, Ramdurga : 9448466111
Mahant Pharma, Ramdurga : 9845375065
Krishna Distributors, Tumur : 8162272616
Dels Enterprises, Mangalore : 9341622675
Deepa Enterprises, Udupi : 9448978941
Chetana Pharma, Chikmangalur : 8296987456
Manju Durg, Mandya : 9141470143
Deepak Pharma Agency, Mysore : 988672264
For Product information contact : Bhargavi Bhatt : 6363477044

ಕೆನರಾ ಬ್ಯಾಂಕ್ केनरा बैंक Canara Bank

Premises & Estate Section, G A Wing, Head Office, No. 112, J C Road, Bangalore - 560002

NOTICE INVITING TENDERS

Canara Bank invites sealed tenders in two-bid system for the proposed **"Repair & renovation works (Civil/Furnishing/Electrical) at Bank owned building Block No. 40, Nandini Layout, Bangalore."**

For further details and other terms and conditions, please visit Bank's website **https://canarabank.com/tenders.aspx.** For any clarifications contact 080-22238819/22297695 extn 219/214. Last date for submission of tender form is **28/07/2023**, 3:00 PM.

Further, all addendum/corrigendum including modification if any, will be hosted at the Bank's website only.

Place : Bengaluru, Date : 06.07.2023 Sd/- Asst. General Manager

ಇನ್ನಷ್ಟು ತಿಳಿಯಲು, ಇಲ್ಲಿಗೆ ಮಿಸ್ಡ್ ಕಾಲ್ ಕೊಡಿ 7834944445 BAJAJ FINSERV Available in select cities and stores.
*ನಿಯಮ ಮತ್ತು ಷರತ್ತು ಅನ್ವಯ. 72" × 72" × 5" ಗಾತ್ರ ಮ್ಯಾಟ್ರೆಸ್‌ಗೆ ₹23,922/–. ಮ್ಯಾಟ್ರೆಸ್ ಗಾತ್ರಕ್ಕೆ ಅನುಗುಣವಾಗಿ ಕೊಡುಗೆಯ ಪ್ರಯೋಜನಗಳು ಬದಲಾಗಬಹುದು.

Exclusive Outlets Bangalore: **Malleshwaram:** 9844533370, **Rajajinagar:** 9880715814/15, **Nagarbhavi:** 9986528988, **Kanakapura Road:** 9845007572, **Infantry Road:** 22861888, **Banashankari:** 9341258880, **Indiranagar:** 8867708766, **JC Road/Lalbagh Fort Road:** 9341264330, **ITPL:** 9845164788, **Vijayanagar:** 9886327712, **JP Nagar:** 9880933913, **Banaswadi:** 9880247052, **Maratahalli:** 9900044550, **HSR Layout:** 9731312283, **Sarjapur Road:** 8904740310, **Bellandur:** 9845013345, **Peenya/Dasarahalli:** 9845211899, **Whitefield Road/Siddapura:** 9916534634, **Bannerghatta Road:** 9341959250, **Nagavara:** 9929946846, **Koramangala:** 9929946846, **Hosakote Main Road:** 9611136765, **Basavanagudi:** 26579066/9611208586, **Nagarbhavi:** 9845697369, **Maratahalli:** 41646944, 9886182945, **JC Road:** 41513826, **Rajajinagar:** 23304579, **Malleshwaram:** 9986018789, **HSR Layout:** 22580599, 9980583199, **Banaswadi:** 25425024, 42197962, 9845552498, **Yashwanthpur:** 9448515924, **JP Nagar:** 9844032858, **R.R. Nagar:** 9945516078, **Hanumanthnagar:** 26916938, **Whitefield:** 40907273, 9845367679, **Electronic City:** 9880081722, **Hessarghatta Main Road:** 9845211899, **TC Palya Main Road:** 25652595, **Sarjapur:** 8483053451, **Mathikere:** 9448788296, **Hebbal:** 9463542155, **MSPalya:** 9738225154, **Akshaya Nagar:** 9880705504, **Kudlu:** 7892577675, **Kadugodi:** 8147946539, **Yelhanka:** 8880666573, 9743573558, 9743550777, 7619180863, **New BEL Road:** 9845034445, **Dommasandra:** 9900757890, **Basaveshwaranagar:** 9066810063, **Horamavu/Babusapalya:** 8892071681, **Tippasandra:** 9845682879, 9845050155, **Moodalapalya:** 9844759410, **Chandapura:** 9845143387, **Malleshpalya:** 9448265250, **Kaggadasapura:** 7892911207, **Dispensery Road:** 9844006868, **Sanjay Nagar:** 9886536925, **Kammanahalli:** 41538844, **Varthur:** 8866600184, 9844759547, **Jayanagar:** 9845023561, **Malleshwaram:** 23442981, 41280054, **JC Road:** 26565153, 9448062698, **Jayanagar:** 9844334692, 41505510, 9886038872, **Maratahalli:** 9972514147, 9929946846, **JP Nagar:** 41147835, **BSK:** 26669471, **Chandra Layout:** 9538666917, **Moodalapalya:** 9845156536, 9628771941, 9513815328, **Laggere:** 9535354019, 9448089148, **Balepet:** 41221018, 41476999, **Cottonpet/Chamrajpet:** 9844119893, **Magadi Road:** 9742119897, **Vidyaranyapura:**7022510752 **Tanery Road:** 9342898983, **Seppings Road:** 9844106868, **Gunjur Main Road:** 9880577132, **Thuberahalli:** 8050863010, **Subbanapalya:** 9845790803, **Hoskote:** 9743209899, **Timberyard Layout/Mysore Road:** 9341234793, **Hennur Main Road:** 8553616433, **Koramangala 1st Blk:** 9986587896, **Baglur Cross:** 9886195957, **Rupena Agrahara:** 9215540821, **Balegere:** 7483697236, **Byatarayanapura, Intl. Airport Road:** 9972640698, 9606993871. For Trade Enquiries and Showrooms: 08026570860/250.

ಜಾಹೀರಾತು

ದುರ್ಗದ ರಾಜೇಗೌಡರು; ಫ್ರಾನ್ಸ್, ಇಂಗ್ಲೆಂಡ್, ಇಟಲಿ, ಜರ್ಮನಿಗೆ ಪ್ರವಾಸ

ಜಾಗತಿಕ ಬರಹಗಾರ, ಕವಿ ಮತ್ತು ಮಾನವ ಹಕ್ಕುಗಳ ಪ್ರತಿಪಾದಕ ದುರ್ಗದ ರಾಜೇಗೌಡರ ವಿಶ್ವ ಉಳಿಸಲು ಬನ್ನಿ ಕವನ ಸಂಕಲನ ಅಂತರಾಷ್ಟ್ರೀಯ ಮಟ್ಟದ್ದು. ಹೊಸ ಹೊಸ ಅಣ್ವಸ್ತ್ರಗಳು, ಮಾನವ ಬಾಂಬ್ ಮತ್ತು ಮಿಸ್ಸೈಲ್‌ಗಳು ಭೂಮಂಡಲವನ್ನೇ ಘೋರ ಪ್ರಳಯಕ್ಕೆ ಗುರಿ ಮಾಡುತ್ತಿವೆ. ಅಣ್ವಸ್ತಗಳ ಭಯಾನಕತೆ, ವಿಕಿರಣಗಳ ಘೋರತೆ ಜಾಗತಿಕ ಪ್ರಪಂಚಕ್ಕೆ ಕಂಟಕಕಾರಿಯಾದ ಘೋರ ಸಿಡಿಲು. ಪರಮಾಣು ಅಣ್ವಸ್ತ್ರಗಳ ಪ್ರಯೋಗಗಳ ವಿರುದ್ಧ ಜನಾಂದೋಲನ ಎಬ್ಬಿಸುವ; ಸಾಹಿತ್ಯ ಸೃಷ್ಟಿಯ ಅಲೆ ಇಂದು ಅತ್ಯಾವಶ್ಯಕವಾಗಿದೆ. ಈ ದಿಕ್ಕಿನಲ್ಲಿ ದುರ್ಗದ ರಾಜೇಗೌಡರು 25 ಜಾಗತಿಕ ಗ್ರಂಥಗಳು, 200 ವಿಶ್ವ ಚಿಂತನೆಯ ಕವನಗಳನ್ನು ಬರೆದಿದ್ದಾರೆ. ಅಹಿಂಸಾ ಚಳುವಳಿಯ ನೇತಾರ ಗಾಂಧೀಜಿ, ದಕ್ಷಿಣ ಆಫ್ರಿಕಾದ ಕರಿಯರ ಸ್ವಾತಂತ್ರ್ಯಗೀತೆ, ನಿತ್ಯ ರಕ್ತಘೋಕುಳಿಯ ಕಾಶ್ಮೀರ ಮತ್ತು ಶಬರಿಮಲೆ ಮಣಿಕಂಠನ ಗುಡಿಗೆ ಮಹಿಳೆಯರ ಪ್ರವೇಶ; 500 ವರ್ಷಗಳ ಹಿಂದೆ ಬೆಂಗಳೂರನ್ನು ವೈಜ್ಞಾನಿಕ ಮತ್ತು ವ್ಯಾಪಾರ ವಾಣಿಜ್ಯ ನಗರವನ್ನು ನಿರ್ಮಿಸಿದ ಜಾತ್ಯಾತೀತ ನಾಡ ದೊರೆ ಕೆಂಪೇಗೌಡರು. ಬರಗಾಲದ ಹೊತ್ತಿನಲ್ಲಿ ಚಿನ್ನದ ನಾಣ್ಯವನ್ನು ಮುದ್ರಿಸಿ ಜಾರಿಗೆ ತಂದ ಚರಿತ್ರೆಯನ್ನು ರಾಜೇಗೌಡರು ಮಹತ್ವಪೂರ್ಣವಾಗಿ ಚಿತ್ರಿಸಿದ್ದಾರೆ. 500 ವರ್ಷಗಳ ಕಾಲ ಕತ್ತಲೆಯಲ್ಲಿ ಅಡಗಿದ್ದ ಚಿನ್ನದ ನಾಣ್ಯದ ಸತ್ಯವನ್ನು ಬೆಳಕಿಗೆ ತಂದವರು ರಾಜೇಗೌಡರು. ಚರಿತ್ರೆಯ ವಾಸ್ತವ ದೃಷ್ಟಿಯಿಂದ ಇದನ್ನು ಬರೆಯಲಾಗಿದೆ.

ಬಂಗಾಳಕೊಲ್ಲಿಯ ಒರಿಸ್ಸಾದ ಸಮುದ್ರ ತೀರದಲ್ಲಿ ಗಂಗರ ಒಂದನೆಯ ನರಸಿಂಹ ಸೂರ್ಯ ದೇವಾಲಯವನ್ನ ವೈಜ್ಞಾನಿಕವಾಗಿ ನಿರ್ಮಿಸಿದ್ದು ಭಾರತದ ಜಾಗತಿಕ ಚರಿತ್ರೆ. ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿ ಗುಲ್ಬರ್ಗದ ಮಾನ್ಯಕೇಟ ರಾಷ್ಟ್ರಕೂಟರ ನೃಪತುಂಗ; ಕಲ್ಲುಬೆಟ್ಟವನ್ನು ಸೀಳಿ 200 ವರ್ಷಗಳ ಕಾಲ ಕಡೆದು ಕೈಲಾಸನಾಥನ ಗುಡಿಯನ್ನು ನಿರ್ಮಿಸಿದ್ದಾರೆ. ಇಸ್ರೇಲ್ ದೇಶದ ಜೆರೂಸಲೆಮ್ ನಗರದ ಗೋಲ್ಗತ್ತಾ ಬೆಟ್ಟದ ಚರ್ಚು ಮತ್ತು ಮಸೀದಿ ಕುರಿತ ಧರ್ಮ ಸಂಘರ್ಷದ ಅಂತರಾಷ್ಟ್ರೀಯ ಅಗ್ರ ಲೇಖನ ಬರೆದಿದ್ದಾರೆ. ಭಾರತೀಯ ಭಾಷೆಗಳಲ್ಲೇ ರಾಜೇಗೌಡರ ಕವನ, ಪ್ರಬಂಧಗಳ ವಿಚಾರ ಮಂಥನ ಬೌದ್ಧಿಕ ಮತ್ತು ವೈಚಾರಿಕ ಮಹತ್ವದಿಂದ ಕೂಡಿದೆ. ಸಾಮಾಜಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೂಮಿಕೆಯ ಹೊಸ ಅಲೆಗಳ ಸಾಹಿತ್ಯ. ರಾಜೇಗೌಡರು ದಿನಾಂಕ: 9–7–2023 ರಂದು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಯೂರೋಪ್‌ಗೆ ಪ್ರಯಾಣ ಬೆಳಸುವರು. ಫ್ರಾನ್ಸ್, ಇಂಗ್ಲೆಂಡ್, ಇಟಲಿ, ಜರ್ಮನಿ ಮತ್ತು ಸ್ವಿಡ್ಜರ್ಲ್ಯಾಂಡ್ ದೇಶಗಳಿಗೆ 15 ದಿನಗಳ ಕಾಲ ಪ್ರವಾಸವನ್ನು ಕೈಗೊಂಡಿದ್ದಾರೆ. ಪ್ರವಾಸದ ಹೊತ್ತಿನಲ್ಲಿ ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ ದೇಶಗಳ ಬರಹಗಾರರು, ಕವಿಗಳು ಮತ್ತು ದಾರ್ಶನಿಕರನ್ನು ಭೇಟಿ ಮಾಡಿ; ಮಾನವ ಹಕ್ಕುಗಳ ರಕ್ಷಣೆ, ಮಾರಕ ಅಸ್ತ್ರಗಳ ವಿರೋಧಿ ಜನಾಂದೋಲನದ ಸಾಹಿತ್ಯದ ಬಗ್ಗೆ ಚರ್ಚಿಸುತ್ತಾರೆ. ಬೆಲ್ಜಿಯಂ, ಆಸ್ಟ್ರಿಯಾ, ನೆದರ್ಲ್ಯಾಂಡ್, ವ್ಯಾಟಿಕನ್ ದೇಶಗಳಿಗೂ ಭೇಟಿ ನೀಡಲಿರುವ ರಾಜೇಗೌಡರು; ಫ್ರಾನ್ಸ್ ಮಹಾಕ್ರಾಂತಿಯ ಸೀಮಾಪುರುಷ, ನೆಪೋಲಿಯನ್ ಸ್ಮಾರಕ, ಇಂಗ್ಲೆಂಡ್‌ನ ಕವಿಗಳು, ಬರಹಗಾರರ ಸ್ಮಾರಕಗಳಿಗೂ ಭೇಟಿ ನೀಡುತ್ತಾರೆ. ಫ್ರಾನ್ಸ್ ಕ್ರಾಂತಿಯ ನೆಪೋಲಿಯನ್ ತಮ್ಮ ಕೊನೆಯ ದಿನಗಳನ್ನು; ಲಂಡನ್ ನಗರಕ್ಕೆ ಸಾವಿರ ಮೈಲಿಗಳ ದೂರದ ಸಮುದ್ರದ ಮಧ್ಯೆದ ಸೆಂಟ್ ಎಲಿನಾ ದ್ವೀಪದಲ್ಲಿ ಬಂಧಿಯಾಗಿ ಕಾಲ ಕಳೆದದ್ದು ಕಾಲಘಟ್ಟದ ಕರ್ತಾರನ ಕಮ್ಮಟದ ಅದ್ಭುತತೆಯ ಐರಾವತ. ಈ ಸಂಬಂಧ ಬರಹಗಾರ ರಾಜೇಗೌಡರು ಪುಸ್ತಕ ಒಂದನ್ನು ಹೊರತರುವ ಗುರಿಯನ್ನು ಇಟ್ಟುಕೊಂಡಿದ್ದಾರೆ.

ವಿಶ್ವ ಉಳಿಸಲು ಬನ್ನಿ ಜಾಗತಿಕ ಗ್ರಂಥದಲ್ಲಿ ಜಗದ ಮಾನವ ಸಮುದಾಯವನ್ನು ಮೃತ್ಯುಮಾರಿಯಾಗಿ ಕಾಡುತ್ತಿರುವ ತಲ್ಲಣವನ್ನು ತಮ್ಮ ಜಾಗತಿಕ ಹೊಸ ಸಾಹಿತ್ಯದಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ವಿಶ್ವ ಸಮುದಾಯವನ್ನು ಎಚ್ಚರಿಸುವ ಭೂಮಿಕೆಯ ಅಗ್ರಮಾನ್ಯ, ಕವನ, ಕಾವ್ಯ ಮಂಥನ. ರಾಜೇಗೌಡರ ವೈಚಾರಿಕ ಚಿಂತನೆ, ಮನುಕುಲ ರಕ್ಷಣೆಯ ಮಂಥನದ ಜೊತೆಗೆ ಅಂತರಾಷ್ಟ್ರೀಯ ಮಾನವ ಹಕ್ಕುಗಳನ್ನು ಪ್ರತಿಪಾದಿಸಿಕೊಂಡು ಬರುತ್ತಿರುವ ಈ ಹೊತ್ತಿನ ಬೌದ್ಧಿಕ ವಿವೇಚನೆಯ ಬರಹಗಾರರಾಗಿದ್ದಾರೆ. ಮರ ಗಿಡಗಳು, ಪರಿಸರ ರಕ್ಷಣೆ, ಮೃಗ ಪ್ರಾಣಿ ಪಕ್ಷಿಗಳು; ಪ್ರಕೃತಿಯಲ್ಲಿ ಮನುಷ್ಯರಂತೆ ಬದುಕುವ ಹಕ್ಕನ್ನು ರಾಜೇಗೌಡರು ತಮ್ಮ ಬರವಣಿಗೆಯ ಪ್ರತಿಹಂತದಲ್ಲಿ ಚಿತ್ರಿಸಿದ್ದಾರೆ. ಬಂಡಾಯ, ಭೂಮಂಡಲ, ಕ್ರಾಂತಿ, ಸಿದ್ಧಾಂತ, ಸಂಶೋಧನೆ, ಹಸಿರು ನದಿ, ಧಂಗೆ, ಹೇಮಗಿರಿ, ಸತ್ಯದ ಕೊಲೆ, ವಿಶ್ವ ಉಳಿಸಲು ಬನ್ನಿರೊ, ಪಾಳೇಗಾರನ ಪುತ್ರಿ, ಸೂರ್ಯ; ಶಿಲೆಯ ಮಿಂಚು ದೇವಕನ್ನಿಕೆಯರು, ಸೂರ್ಯನ ಜ್ಯೋತಿರ್ಲಿಂಗ, ಮೂರುದಿನದ ಬಾಳು ಮತ್ತೇರದಿರು, ವಿಶ್ವ ಉಳಿಸಲು ಬನ್ನಿ, ಗಾಂಧೀಜಿಯ ಸ್ವಾತಂತ್ರ್ಯ ಸಮರ, ವಿರಹದ ಬಾನಾಡಿ, ನೆಟ್ಟರೋ ರಣಗಂಬ, ಮಣಿಕಂಠನ ಗುಡಿಗೆ ಮಹಿಳೆಯರ ಪ್ರವೇಶ ದುರ್ಗದ ರಾಜೇಗೌಡರ ಹೆಸರಾಂತ ಜಾಗತಿಕ ಕವನಗಳು.

ಇಂತಿ **ಧೀಮಂತಿಕಾ,** ಹೈಕೋರ್ಟ್ ವಕೀಲರು.

ಬಿಟ್ ಕಾಯಿನ್: ಶ್ರೀಕಿ ಅರ್ಜಿ ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ಮಧ್ಯಂತರ ಆದೇಶ ನೀಡಲಾಗಿದೆ ಎಂಬ ಸಾಲನ್ನು ಆನ್‌ಲೈನ್ ಆದೇಶದಲ್ಲಿ ತಪ್ಪಾಗಿ ನಮೂದಿಸಲಾಗಿದ್ದು, ಇದನ್ನು ತೆಗೆದುಹಾಕಲು ನಿರ್ದೇಶಿಸಬೇಕು' ಎಂಬ ಅಡ್ವೊಕೇಟ್ ಜನರಲ್ ಅವರ ಕೋರಿಕೆಯನ್ನು ಹೈಕೋರ್ಟ್ ಪರಿಗಣಿಸಿದೆ.

'ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಹಾಗೂ ಆ ಕುರಿತ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಸೇರಿದಂತೆ ನಾಲ್ವರು ಆರೋಪಿಗಳು ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, '2022ರ ಸೆಪ್ಟೆಂಬರ್ 7ರಂದು ಸುನೀಶ್ ಹೆಗ್ಡೆ ಮತ್ತು ಪ್ರಸಿದ್ಧ ಶೆಟ್ಟಿ ಸಲ್ಲಿಸಿರುವ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಂದಿತ್ತು. ಅಂದು ಸಿಬಿಐ ಪರ ವಕೀಲರು ಮಾಡಿದ ಮನವಿ ಮೇರೆಗೆ ಅರ್ಜಿ ವಿಚಾರಣೆಯನ್ನು ಸೆಪ್ಟೆಂಬರ್ 19ಕ್ಕೆ ಮುಂದೂಡಲಾಗಿತ್ತು. ಅದರಲ್ಲಿ ಅರ್ಜಿಗೆ ಸಂಬಂಧಿಸಿದಂತೆ ಹಿಂದೆ ನೀಡಿರುವ ಮಧ್ಯಂತರ ಆದೇಶವನ್ನು ಮುಂದಿನ ವಿಚಾರಣೆವರೆಗೆ ವಿಸ್ತರಿಸಲಾಗಿದೆ ಎಂಬ ಸಾಲನ್ನು ಉಲ್ಲೇಖಿಸಲಾ ಗಿದೆ. ಆದರೆ, ಇದಕ್ಕೂ ಹಿಂದೆ ಯಾವುದೇ ಮಧ್ಯಂತರ ಆದೇಶ ನೀಡಿರಲಿಲ್ಲ. ತಪ್ಪಾಗಿ ಮಧ್ಯಂತರ ಆದೇಶ ವಿಸ್ತರಣೆ ಎಂಬ ಸಾಲನ್ನು ನಮೂದಿಸಲಾಗಿದ್ದು ಅದನ್ನು ತೆಗೆದುಹಾಕಬೇಕು' ಎಂದು ಕೋರಿದರು. ಈ ಮನವಿಯನ್ನು ಪುರಸ್ಕರಿಸಿದ ನ್ಯಾಯಪೀಠ, ಎಲ್ಲಾ ಅರ್ಜಿಗಳ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿ ಆದೇಶಿಸಿತು.

ಪ್ರಕರಣವೇನು?: ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ 2020ರ ನವೆಂಬರ್ 27ರಂದು ಸಿಸಿಬಿ ಇನ್‌ಸ್ಪೆಕ್ಟರ್ ನೀಡಿದ್ದ ದೂರಿನ ಮೇರೆಗೆ ಕಾಟನ್ ಪೇಟೆ ಪೊಲೀಸ್ ಠಾಣೆಯಲ್ಲಿ ವಂಚನೆ, ಅಪರಾಧಿಕ ಒಳಸಂಚು, ಫೋರ್ಜರಿ, ವಂಚನೆ, ವಸೂಲಿ ಮತ್ತು ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸಿ ಆಕ್ಷೇಪಾರ್ಹ ಮಾಹಿತಿ ರವಾನಿಸಿರುವುದೂ ಸೇರಿದಂತೆ ಹಲವು ಆರೋಪಗಳಡಿ ದೂರು ದಾಖಲಿಸಲಾಗಿತ್ತು. ನಂತರ ತನಿಖೆಯನ್ನು ಸಿಸಿಬಿಗೆ ವರ್ಗಾಯಿಸಲಾಗಿತ್ತು. ಸಿಸಿಬಿ ಪೊಲೀಸರು 2021ರ ಫೆಬ್ರುವರಿ 22ರಂದು ಆರು ಜನ ಆರೋಪಿಗಳ ವಿರುದ್ಧ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಈ ಸಂಬಂಧ ಹೈಕೋರ್ಟ್‌ನಲ್ಲಿ ಮೂರು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿರುವ ಆರೋಪಿಗಳಾದ ಶ್ರೀಕಿ, ಸುನೀಶ್ ಹೆಗ್ಡೆ, ಪ್ರಸಿದ್ಧ ಶೆಟ್ಟಿ ಹಾಗೂ ಹೇಮಂತ್ ಮುದ್ದಪ್ಪ, 'ನಮ್ಮ ವಿರುದ್ಧ ಆರೋಪಿಸಲಾಗಿರುವ ಹ್ಯಾಕಿಂಗ್ ಕೃತ್ಯವು ಅಪರಾಧ ಎಂಬುದಾಗಿ ಸದ್ಯದ ಯಾವುದೇ ಕಾನೂನಿನಲ್ಲಿ ಉಲ್ಲೇಖಿಸಿಲ್ಲ. ಆದ್ದರಿಂದ, ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿದ್ದಾರೆ.

ಪಾಸ್‌ಪೋರ್ಟ್ ಮರು ವಿತರಣೆ: ಎಫ್‌ಐಆರ್ ಲಗತ್ತು ಕಡ್ಡಾಯ

ಬೆಂಗಳೂರು: 'ಕಳೆದು ಹೋದ ಪಾಸ್‌ಪೋರ್ಟ್ ಮರು ವಿತರಣೆ ಕೋರಿ ಸಲ್ಲಿಸಲಾಗುವ ಅರ್ಜಿಯೊಂದಿಗೆ ಪೊಲೀಸರು ದಾಖಲಿಸಿದ ಪ್ರಥಮ ವರ್ತಮಾನ ವರದಿಯನ್ನೂ (ಎಫ್‌ಐಆರ್) ಲಗತ್ತಿಸುವುದು ಕಡ್ಡಾಯ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ನಗರದ ಇಟ್ಟಮಡು ನಿವಾಸಿ ಎ.ಶ್ರೀಧರ್ ಕುಲಕರ್ಣಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠವು, ಪಾಸ್‌ಪೋರ್ಟ್ ಅಧಿನಿಯಮ-1980ರಲ್ಲಿ ನವೀಕರಿಸಿದ ಪಾಸ್‌ಪೋರ್ಟ್ ವಿತರಣೆಗೆ ಸಲ್ಲಿಸುವ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳ ಬಗ್ಗೆ ಏನನ್ನು ಉಲ್ಲೇಖಿಸಲಾಗಿದೆ ಎಂಬುದನ್ನು ವಿವರಿಸಿದೆ.

'ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ವಿದೇಶ ಪ್ರಯಾಣ ಎನ್ನುವುದು ಮೂಲ ಹಕ್ಕು. ಆದರೆ, ಪಾಸ್‌ಪೋರ್ಟ್ ಕಾಯ್ದೆ-1967 ಹಾಗೂ ಪಾಸ್‌ಪೋರ್ಟ್ ಅಧಿನಿಯಮ-1980ರ ಅಡಿಯಲ್ಲಿ ನಿಯಂತ್ರಣಕ್ಕೆ ಒಳಪಡುತ್ತದೆ. ಈ ನಿಯಮಗಳಡಿ ನಿಗದಿಪಡಿಸಲಾದ ನಿರ್ದಿಷ್ಟ ಪ್ರಕ್ರಿಯೆಯನ್ನು ಎಲ್ಲರೂ ಪಾಲಿಸಬೇಕಾಗುತ್ತದೆ. ಹೀಗಾಗಿ, ಪಾಸ್ ಪೋರ್ಟ್ ಮರು ವಿತರಣೆ ಸಲ್ಲಿಸುವ ಅರ್ಜಿಯೊಂದಿಗೆ ಸೂಕ್ತ ದಾಖಲೆ ಸಲ್ಲಿಸಬೇಕಾಗುತ್ತದೆ' ಎಂಬ ಅಭಿಪ್ರಾಯದೊಂದಿಗೆ ಅರ್ಜಿದಾರರ ಮನವಿಯನ್ನು ತಿರಸ್ಕರಿಸಿದೆ.

ವ್ಯಾಜ್ಯ ಹೊಂದಿರುವ ಅರ್ಜಿದಾರರ ವಿದೇಶ ಪ್ರಯಾಣಕ್ಕೆ ಮ್ಯಾಜಿಸ್ಟ್ರೇಟ್ ಕೋರ್ಟ್ 2023ರ ಜೂನ್ 14ರಂದು ಅನುಮತಿ ನೀಡಿತ್ತು. ಏತನ್ಮಧ್ಯೆ, ಅರ್ಜಿದಾರರು ಪಾಸ್‌ಪೋರ್ಟ್ ಕಳೆದು ಹೋಗಿದೆ ಎಂದು ಕಳೆದು ಹೋಗಿರುವ ಪಾಸ್‌ಪೋರ್ಟ್ ಮರು ವಿತರಿಸುವಂತೆ ಕೋರಿ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿಗೆ ಮನವಿ ಸಲ್ಲಿಸಿದ್ದರು. ಈ ಮನವಿಯನ್ನು ಪರಿಗಣಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ನೀರಿನಲ್ಲಿ ಡ್ರಗ್ಸ್ ಬೆರೆಸಿ ಮಾರಾಟ: ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಿನಲ್ಲಿ ಡ್ರಗ್ಸ್ ಬೆರೆಸಿ ಮಾರುತ್ತಿದ್ದ ಜಾಲ ಭೇದಿಸಿರುವ ವಿ.ವಿ. ಪುರ ಠಾಣೆಯ ಪೊಲೀಸರು, ಆರೋಪಿ ಗುಲಾಂಸಿಂಗ್ ಎಂಬಾತನನ್ನು ಬಂಧಿಸಿದ್ದಾರೆ.

'ರಾಜಸ್ಥಾನ್‌ನ ಗುಲಾಂಸಿಂಗ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದು ನೆಲೆಸಿದ್ದ. ಡ್ರಗ್ಸ್ ಮಾರಾಟವನ್ನೇ ವೃತ್ತಿ ಮಾಡಿಕೊಂಡು ಅಕ್ರಮವಾಗಿ ಹಣ ಸಂಪಾದಿಸುತ್ತಿದ್ದ. ಈತನ ಕೃತ್ಯದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ. ಈತನಿಂದ ₹ 60 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ತನ್ನೂರಿನಲ್ಲಿರುವ ಪೆಡ್ಲರ್‌ಗಳ ಜೊತೆ ಒಡನಾಟ ಹೊಂದಿದ್ದ ಆರೋಪಿ, ಕೋರಿಯರ್ ಮೂಲಕ ಡ್ರಗ್ಸ್ ತರಿಸಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದ. ಕೆಲ ಕಂಪನಿಗಳ ಉದ್ಯೋಗಿಗಳು ಹಾಗೂ ಕೆಲ ಕಾಲೇಜು ವಿದ್ಯಾರ್ಥಿಗಳಿಗೆ ನೀರಿನ ಬಾಟಲಿ ರೂಪದಲ್ಲಿ ಡ್ರಗ್ಸ್ ಮಾರುತ್ತಿದ್ದ' ಎಂದು ತಿಳಿಸಿದರು.

ಅಪರಾಧ ಸುದ್ದಿ

ವ್ಯವಸ್ಥಿತ ಜಾಲ: 'ಅಫೀಮು ಸಸ್ಯದ ಕಾಯಿಗಳನ್ನು ಕೋರಿಯರ್ ಮೂಲಕ ರೈಲು ಹಾಗೂ ಬಸ್‌ಗಳಲ್ಲಿ ನಗರಕ್ಕೆ ತರಿಸುತ್ತಿದ್ದ ಆರೋಪಿ, ಕೆಲ ದಿನ ಒಣಗಿಸುತ್ತಿದ್ದ. ಅವುಗಳನ್ನು ಮಿಕ್ಸರ್ ಗ್ರೈಂಡರ್ ಮೂಲಕ ಪುಡಿ ಮಾಡುತ್ತಿದ್ದ. ನಂತರ, ರಾತ್ರಿಯಿಡೀ ನೀರಿನಲ್ಲಿ ನೆನೆಸಿಡುತ್ತಿದ್ದ. ಮರುದಿನ ಬೆಳಿಗ್ಗೆ, ನೀರು ಸೋಸಿ 100 ಎಂ.ಎಲ್ ಹಾಗೂ 500 ಎಂ.ಎಲ್ ಬಾಟಲಿಯಲ್ಲಿ ಹಾಕುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಡ್ರಗ್ಸ್ ಮಿಶ್ರಣವಿರುತ್ತಿದ್ದ ನೀರಿನ ಬಾಟಲಿಗಳನ್ನು ಆರೋಪಿ ಗ್ರಾಹಕರಿಗೆ ಮಾರುತ್ತಿದ್ದ. ಇದರಿಂದಾಗಿ ಯಾರಿಗೂ ಅನುಮಾನ ಬರುತ್ತಿರಲಿಲ್ಲ. ನೀರಿನ ಬಾಟಲಿ ಮಾರಾಟಕ್ಕೆಂದು ಆರೋಪಿ ವ್ಯವಸ್ಥಿತ ಜಾಲ ರೂಪಿಸಿಕೊಂಡಿದ್ದ. ಈತನ ಜೊತೆಯಲ್ಲಿ ಮತ್ತಷ್ಟು ಮಂದಿ ಶಾಮೀಲಾಗಿರುವ ಅನುಮಾನವಿದೆ' ಎಂದರು.

ಪ್ಯಾಂಟ್‌ಗಳಲ್ಲಿ ಡ್ರಗ್ಸ್ ಸಾಗಣೆ: ಜೈಲಿನಲ್ಲಿ ಸಿಕ್ಕಿಬಿದ್ದ ಕೈದಿ

ಬೆಂಗಳೂರು: ಜೀನ್ಸ್ ಪ್ಯಾಂಟ್‌ಗಳಲ್ಲಿ ಡ್ರಗ್ಸ್ ಬಚ್ಚಿಟ್ಟುಕೊಂಡು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದೊಳಗೆ ಸಾಗಿಸುತ್ತಿದ್ದ ವಿಚಾರಣಾಧೀನ ಕೈದಿ ಶಾಹಿದ್ ಪಾಷಾ ಅಲಿಯಾಸ್ ನ್ಯಾರೊ ವಿರುದ್ಧ ಪ್ರಕರಣ ದಾಖಲಾಗಿದೆ.

'ಜೈಲಿನ ಅಧೀಕ್ಷಕ ಡಾ. ಮಲ್ಲಿಕಾರ್ಜುನ್ ಸ್ವಾಮಿ ಅವರು ಡ್ರಗ್ಸ್ ಸಾಗಣೆ ಬಗ್ಗೆ ದೂರು ನೀಡಿದ್ದಾರೆ. ಎನ್‌ಡಿಪಿಎಸ್ ಹಾಗೂ ಕರ್ನಾಟಕ ಕಾರಾಗೃಹ ಕಾಯ್ದೆಯಡಿ ಶಾಹಿದ್ ಪಾಷಾ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಪರಾಧ ಪ್ರಕರಣದಲ್ಲಿ ಜೈಲು ಸೇರಿರುವ ಶಾಹಿದ್ ಪಾಷಾನನ್ನು ಜಗಜೀವನರಾಮ್ ನಗರ ಠಾಣೆಯ ಕಾನ್‌ಸ್ಟೆಬಲ್‌ಗಳಾದ ಸಂಗಪ್ಪ ಹಾಗೂ ವಿನಯ್, ಜೂನ್ 27ರಂದು ವಿಚಾರಣೆಗೆಂದು ನ್ಯಾಯಾಲಯಕ್ಕೆ ಕರೆದೊಯ್ದಿದ್ದರು. ವಿಚಾರಣೆ ಮುಗಿದ ಬಳಿಕ, ಆತನನ್ನು ವಾಪಸು ಕಾರಾಗೃಹಕ್ಕೆ ಕರೆತಂದಿದ್ದರು.'

'ಕಾರಾಗೃಹದ ಪ್ರವೇಶ ದ್ವಾರದಲ್ಲಿ ಶಾಹಿದ್ ಪಾಷಾನನ್ನು ಸಿಬ್ಬಂದಿ ತಪಾಸಣೆಗೆ ಒಳಪಡಿಸಿದ್ದರು. ಆತನ ಬಳಿಯಿದ್ದ ಎರಡು ಜೀನ್ಸ್ ಪ್ಯಾಂಟ್‌ಗಳ ಒಳಭಾಗದಲ್ಲಿ 1 ಗ್ರಾಂ ಬ್ರೌನ್ ಶುಗರ್ ಹಾಗೂ 11 ಗ್ರಾಂ ಗಾಂಜಾ ಇರುವುದು ಗೊತ್ತಾಗಿತ್ತು. ಅವುಗಳನ್ನು ಜಪ್ತಿ ಮಾಡಿದ್ದ ಸಿಬ್ಬಂದಿ, ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ಅಕ್ರಮವಾಗಿ ಬಿಲ್ ಪಾವತಿ: ಎಂಜಿನಿಯರ್‌ಗಳು ಅಮಾನತು

ಬೆಂಗಳೂರು: ಶಾಲೆ ಕಟ್ಟಡ ಪೂರ್ಣಗೊಳ್ಳದೆ ಬಿಲ್ ಪಾವತಿ ಮಾಡಿರುವ ಇಬ್ಬರು ಎಂಜಿನಿಯರ್‌ಗಳನ್ನು ಅಮಾನತು ಮಾಡಿರುವ ಬಿಬಿಎಂಪಿ, ಮೂವರು ಎಂಜಿನಿಯರ್‌ಗಳನ್ನು ಅಮಾನತು ಮಾಡಲು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ರಾಜರಾಜೇಶ್ವರಿನಗರ ವಲಯದ ಜ್ಞಾನಭಾರತಿ ವಾರ್ಡ್‌ನಲ್ಲಿ ಎರಡು ಅಂತಸ್ತಿನ ಶಾಲಾ ಕಟ್ಟಡ ನಿರ್ಮಿಸಲಾಗುತ್ತಿದೆ. ಈ ಯೋಜನೆ ಪೂರ್ಣಗೊಳ್ಳದಿದ್ದರೂ ಅಂದಾಜು ವೆಚ್ಚದ ಶೇ 90ರಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. ಅದೇ ರೀತಿ ಲಗ್ಗೆರೆಯಲ್ಲಿಯೂ ಶಾಲಾ ಕಟ್ಟಡ ನಿರ್ಮಾಣವಾಗದಿದ್ದರೂ ಹಣ ಪಾವತಿ ಮಾಡಿರುವುದು ಎಂದು ಟಿವಿಸಿಸಿ ತನಿಖೆಯಿಂದ ತಿಳಿದುಬಂದಿತ್ತು.

ಜ್ಞಾನಭಾರತಿ ಶಾಲಾ ಯೋಜನೆಯಲ್ಲಿ ₹4.57 ಕೋಟಿ ಮೊತ್ತದ ಬಿಲ್ ಅನ್ನು ಕಾಮಗಾರಿ ಪರಿಶೀಲನೆ ನಡೆಸದೆ ಪಾವತಿಸಲಾಗಿದೆ. ಈ ಕಟ್ಟಡ ಶ್ರೀಗಂಧದ ಕಾವಲ್ ಕೆರೆಗೆ ಹೊಂದಿಕೊಂಡಂತೆಯೇ ಇದೆ. ಇನ್ನು, ಲಗ್ಗೆರೆ ಶಾಲಾ ಯೋಜನೆಯ ಅಂದಾಜು ಮೊತ್ತ ₹6.5 ಕೋಟಿಯಾಗಿತ್ತು. ಮುಖ್ಯ ಆಯುಕ್ತರ ಗಮನಕ್ಕೆ ತಾರದೆಯೇ ಈ ಮೊತ್ತವನ್ನು ₹10 ಕೋಟಿಗೆ ಹೆಚ್ಚಿಸಿಕೊಳ್ಳಲಾಗಿದೆ. ಅಲ್ಲದೆ, ಈ ಕಟ್ಟಡವನ್ನು ಬಿಡಬ್ಲ್ಯುಎಸ್‌ಎಸ್‌ಬಿಯ ಕೊಳವೆ ಮಾರ್ಗದ ಮೇಲೆಯೇ ನಿರ್ಮಿಸಲಾಗುತ್ತಿತ್ತು ಎಂದು ತನಿಖೆಯಿಂದ ಗೊತ್ತಾಗಿದೆ.

ಟಿವಿಸಿಸಿ ವರದಿ ಆಧಾರದ ಮೇಲೆ, ಆರ್.ಆರ್. ನಗರದ ಯೋಜನೆ ವಿಭಾಗದ ಸಹಾಯಕ ಎಂಜಿನಿಯರ್‌ಗಳಾದ ಕೆ. ಮಂಜೇಗೌಡ ಹಾಗೂ ಎಚ್.ಎಂ. ತಿಮ್ಮಪ್ಪ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಲಾಗಿದೆ. ಈ ಹಗರಣದಲ್ಲಿ ಭಾಗಿಯಾಗಿರುವ ಮುಖ್ಯ ಎಂಜಿನಿಯರ್ ವಿಜಯಕುಮಾರ್ ನಿವೃತ್ತರಾಗಿದ್ದಾರೆ. ಕಾರ್ಯಪಾಲಕ ಎಂಜಿನಿಯರ್‌ಗಳಾದ ಮೋಹನ್ ಕೊಂಡನಕೇರಿ, ಭಾರತಿ, ಸರೀಶ್ ಅವರ ಅಮಾನತಿಗೆ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

ಪಾಳುಬಿದ್ದ ಕಟ್ಟಡದಲ್ಲಿದ್ದ 19 ಕೆ.ಜಿ ಗಾಂಜಾ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎ.ಜಿ.ಎಸ್ ಬಡಾವಣೆಯ ಹನುಮಗಿರಿ ಬೆಟ್ಟದಲ್ಲಿರುವ ಪಾಳುಬಿದ್ದ ಕಟ್ಟಡದಲ್ಲಿ ಗಾಂಜಾ ಸಂಗ್ರಹಿಸಿಟ್ಟುಕೊಂಡು ಮಾರುತ್ತಿದ್ದ ಆರೋಪಿ ಎಸ್. ಹರೀಶ್‌ನನ್ನು (29) ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಚಿಕ್ಕಮಗಳೂರು ಜಿಲ್ಲೆಯ ಶಿರವಾಸೆಯ ಗಾಳಿ ಗುಡ್ಡೆ ಗ್ರಾಮದ ಹರೀಶ್, ರಾಮನಗರ ಜಿಲ್ಲೆಯ ಬಿಡದಿಯಲ್ಲಿ ನೆಲೆಸಿದ್ದ. ಇತ್ತೀಚೆಗೆ ಈತನನ್ನು ಬಂಧಿಸಿ 20 ಕೆ.ಜಿ 868 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ತ್ಯಾಗರಾಜನಗರದ ಎಸ್.ಎಸ್.ಎಂ ಶಾಲೆ ಹತ್ತಿರದ ಬಿಬಿಎಂಪಿ ಆಟದ ಮೈದಾನ ಬಳಿ ಜುಲೈ 3ರಂದು ಸುತ್ತಾಡುತ್ತಿದ್ದ ಆರೋಪಿ, ಪರಿಚಯಸ್ಥ ಗ್ರಾಹಕರಿಗೆ ಗಾಂಜಾ ಮಾರುತ್ತಿದ್ದ. ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ 1 ಕೆ.ಜಿ 868 ಗ್ರಾಂ ಗಾಂಜಾ ಸಮೇತ ಆರೋಪಿಯನ್ನು ಬಂಧಿಸಲಾಗಿತ್ತು' ಎಂದು ತಿಳಿಸಿದರು.

'ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಎ.ಜಿ.ಎಸ್ ಬಡಾವಣೆಯ ಹನುಮಗಿರಿ ಬೆಟ್ಟದಲ್ಲಿರುವ ಪಾಳುಬಿದ್ದ ಕಟ್ಟಡದಲ್ಲಿ ಗಾಂಜಾ ಸಂಗ್ರಹಿಸಿ ಟ್ಟಿದ್ದ ಬಗ್ಗೆ ಆರೋಪಿ ಬಾಯ್ಬಿಟ್ಟಿದ್ದ. ಸ್ಥಳಕ್ಕೆ ಹೋದಾಗ, 19 ಕೆ.ಜಿ ಗಾಂಜಾ ಪತ್ತೆಯಾಯಿತು' ಎಂದು ಹೇಳಿದರು.

'ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಗಾಂಜಾ ತರಿಸುತ್ತಿದ್ದ ಆರೋಪಿ, ಯಾರಿಗೂ ಅನುಮಾನ ಬಾರದಂತೆ ಪಾಳುಬಿದ್ದ ಕಟ್ಟಡದಲ್ಲಿ ಸಂಗ್ರಹಿಸಿಡುತ್ತಿದ್ದ. ನಂತರ, ಅದನ್ನೇ ಪೊಟ್ಟಣಗಳಲ್ಲಿ ತುಂಬಿ ಮಾರುತ್ತಿದ್ದ' ಎಂದರು.

ಮಸೀದಿಗೆ ಬಾಂಬ್ ಬೆದರಿಕೆ: ಹುಸಿ ಕರೆಯೆಂದ ಪೊಲೀಸರು

ಬೆಂಗಳೂರು: ಶಿವಾಜಿನಗರದ ಅಜಂ ಮಸೀದಿಯಲ್ಲಿ ಬಾಂಬ್ ಇರಿಸಿರುವುದಾಗಿ ವ್ಯಕ್ತಿಯೊಬ್ಬ ಬೆದರಿಕೆ ಕರೆ ಮಾಡಿದ್ದು, ಪೊಲೀಸರು ಬುಧವಾರ ರಾತ್ರಿಯಿಂದ ಗುರುವಾರ ಸಂಜೆಯವರೆಗೆ ಶೋಧ ನಡೆಸಿದರು.

ಬುಧವಾರ ರಾತ್ರಿ 10 ಗಂಟೆಗೆ ಪೊಲೀಸ್ ನಿಯಂತ್ರಣ ಕೊಠಡಿ 'ನಮ್ಮ-112'ಕ್ಕೆ ಕರೆ ಮಾಡಿದ್ದ ವ್ಯಕ್ತಿಯೊಬ್ಬ, 'ಶಿವಾಜಿನಗರದಲ್ಲಿರುವ ಅಜಂ ಮಸೀದಿಯಲ್ಲಿ ಬಾಂಬ್ ಇರಿಸಲಾಗಿದೆ. ಸದ್ಯದಲ್ಲೇ ಸ್ಫೋಟ ಆಗಲಿದೆ' ಎಂದು ಬೆದರಿಸಿದ್ದ.

ಕೊಠಡಿಯ ಸಿಬ್ಬಂದಿ, ಶಿವಾಜಿನಗರ ಠಾಣೆಗೆ ಮಾಹಿತಿ ರವಾನಿಸಿದ್ದರು. ಶ್ವಾನದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಮೇತ ರಾತ್ರಿಯೇ ಮಸೀದಿಗೆ ತೆರಳಿದ್ದ ಪೊಲೀಸರು, ಶೋಧ ಆರಂಭಿಸಿದ್ದರು. ಗುರುವಾರ ಸಂಜೆಯವರೆಗೂ ಶೋಧ ನಡೆಸಿದ ಪೊಲೀಸರಿಗೆ ಯಾವುದೇ ಅನುಮಾನಾಸ್ಪದ ವಸ್ತುಗಳು ಸಿಗಲಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಕರೆಯೆಂದು ಘೋಷಿಸಿದರು. ಪೂರ್ವ ವಿಭಾಗದ ಡಿಸಿಪಿ ಡಾ. ಭೀಮಾಶಂಕರ್ ಗುಳೇದ್ ಸಹ ಸ್ಥಳದಲ್ಲಿದ್ದರು.

'ಶಿವಾಜಿನಗರದ ಓಪಿಎಚ್ ರಸ್ತೆಯಲ್ಲಿರುವ ಅಜಂ ಮಸೀದಿಯಲ್ಲಿ ಬಾಂಬ್ ಇಟ್ಟಿರುವುದಾಗಿ ಕರೆ ಮಾಡಿದ್ದ ವ್ಯಕ್ತಿ ಯಾರು? ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಯಾವುದೇ ಅನುಮಾನಾಸ್ಪದ ವಸ್ತುಗಳು ಮಸೀದಿಯಲ್ಲಿ ಸಿಕ್ಕಿಲ್ಲ. ಮುಂಜಾಗ್ರತಾ ಕ್ರಮವಾಗಿ ಮಸೀದಿಗೆ ಭದ್ರತೆ ಒದಗಿಸಲಾಗಿದೆ. ಅಗತ್ಯವಿದ್ದರೆ, ಪುನಃ ಮಸೀದಿಯಲ್ಲಿ ಶೋಧ ನಡೆಸಲಾಗುವುದು' ಎಂದು ತಿಳಿಸಿದರು.

ಮಸೀದಿಯಲ್ಲಿ ಬಾಂಬ್ ಬೆದರಿಕೆ ಕರೆ ಬಂದಿದ್ದರಿಂದ ಸ್ಥಳೀಯರಲ್ಲಿ ಆತಂಕ ಉಂಟಾಗಿತ್ತು. ಪೊಲೀಸರು ಶೋಧ ನಡೆಸುತ್ತಿದ್ದ ವೇಳೆ, ರಸ್ತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದರು.

ಡ್ರಗ್ಸ್: ಕಾರಾಗೃಹ ಬಳಿ ಬಂಧನ

ಕಾರಾಗೃಹದೊಳಗಿದ್ದ ಕೈದಿಗೆ ಡ್ರಗ್ಸ್ ನೀಡಲು ಬಂದಿದ್ದ ತಂಗರಾಜು ಅಲಿಯಾಸ್ ಪಾಲ್ (25) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕೈದಿ ಮೊಹಮ್ಮದ್ ಇಮ್ತಿಯಾಜ್ ಖಾನ್‌ಗೆ ಡ್ರಗ್ಸ್ ನೀಡಲೆಂದು ಆರೋಪಿ ತಂಗರಾಜು ಕಾರಾಗೃಹ ಬಳಿ ಬಂದಿದ್ದ. ಕಾರಾಗೃಹದೊಳಗೆ ಡ್ರಗ್ಸ್ ಸಾಗಿಸಲು ಕಾಯುತ್ತಿದ್ದ. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಯನ್ನು ಬಂಧಿಸಲಾಗಿದೆ. ₹ 4 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಕೈದಿ ಹಾಗೂ ತಂಗರಾಜು ಇಬ್ಬರ ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Doctor

JOB VACANCY (CONTRACTUAL)
AT UNIT MI Room, 515 ARMY BASE WKSP, ULSOOR ,BANGALORE-8.
Doctor-01
a) Eligible category as per preference
(i) Education Qulification : MBBS
(ii) Salary : 30,000/- (Negotiable)
(iii) Working Time : 08 Hrs (0800 hrs to 1600 hrs) from Monday to Friday, 05 hrs 30 min (0800 hrs to 1330 hrs) on Saturday
(iv) Selection Process Interview on 11Jul 2023 (v) Job Location 515 Army Base WKSP. Ulsoor Bangalore
(vi) Nationality Indian
Last date of submission of application 10 Jul 2023
Email - bangmweagle@gmail.com

Teachers/ Professors

REQUIRED EXPERIENCED candidates handle Nursery Section with NTT & High school BPEd, Hindi (Academic Coordinator required for English Higher primary & High school) Contact: Jnanavahini Vidya Samsthe (JVS) #8, Beml layout, 8th main, Basaveswara Nagar, Bengaluru-79 Phone: 9343745526 E-mail: jvsschool@gmail.com

Hotel

COOKS, WAITERS, Helpers, Assistants required for a new restaurant on Sarjapur Road. Ph: 9844021722

REAL ESTATE BUYING

Flat

Basavanagudi

WANTED: PURCHASE RENT/ LEASE BASAVANGUDI & SARROUNDINGS 2, 3, 4BHK FLATS OWNERS ONLY: 9886019240/ 26623994

General

General

DC CONVERSION/ Change of land use, Phodi Durasti, NOC,Approvals, Khata, RERA Work,Para Legal Services.Barton Centre MG Road. 9916310226/ 9353128035. vernadevelopers.com

Sites

Multiple Locations

WANTED 4000-20000SFT Land Jayanagar, Basavangudi, Chamrajpet, J.P.Nagar, CBD Surrounding area. Purchase & JV, Verna Developers, MG Road, Bangalore. 9353128035/ 9620253180

RENTAL PROPERTIES

Accommodation Available

Commercial

RENT OFFICE Space 1800sft 1st,2nd floor and 300sft on 3rd floor,16th Cross,8th Main Malleshwaram. 9845513822/ 9731115176

House

FOR LEASE OR RENT 2 BHK GROUND FLOOR, SEEGEHALLI, WHITE CITY LAYOUT. CONTACT: 9611937546

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
conditions apply*
For more information Contact:
9845114560 : 9731810277
9901641752 : 9886213331
080 - 45557163 / 164

Industrial And Factory

New Warehouse on Lease

70000 Sft, A Grade, KIADB Estate, Hosakote www.logitechpark.com
9620557653
9448694306
swaroop.gd@gomassystems.com

REAL ESTATE SELLING

Sites

Yelahanka

30x40 Converted Plot @ 1,65,000/-
138/- per sq.ft, 90 minutes Journey from Yelahanka
Ready for Registration
9343510635, 9010559539

Commerical

Marathahalli

BROOKFIELD, KUNDALAHALLI 1600 Sqft commercial place suitable for hotel or shops. Next to brigade tech park 8310818291

General

Multiple Locations

SALE COMMERCIAL, industrial, residential, farmland and office space for rent in Bangalore. Contact. 9380586105

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONNECT ಕ್ಲಾಸಿಫೈಡ್ಸ್

NCF
First Time in KR PURAM Under Water Aquarium Tunnel
ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
ITI Ground, Next to Hanging Bridge, KR Puram, Bengaluru

VISIT TODAY | Daily : 4pm - 9pm | Call : 8904727123

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

Industrial & Factory

General

PEENYA 2ND stage 10,000 to 25,000 sqft Industrial land for sale. Clear titles. Call. 9380586105.

PERSONAL

Change of Name

CHANGE OF NAME
I, L RAJ KUMAR aka RAJ KUMAR LINGARAJ, S/O Lingaraj, residing at FF4, RL Anagha Apartment, 5th Main, Suncity Layout, JP Nagar 7th Phase, Bengaluru-560078, have changed my name to RAJ KUMAR vide affidavit dated 05-07-2023, sworn before Notary Arvind Patil G G in Bengaluru.

CHANGE OF NAME
I, PAARTH SINGH S/o Gouse J. Sanadi, R/at. # 58, 3rd Floor, 10th Cross, Oil Mill Road, Near Deepa Bakery, Lingarajapuram, Bangalore-83 have changed my name to SAYEED SANADI vide affidavit dated 06/07/2023 before Notary Uday Kumar K., Bengaluru

I, RACHNA JOSHI D/o S.K. Joshi, R/a Flat #C-1104 Bren EdgeWaters Apartments Sy. No. 30 Owners Court West, Kasavanahalli, Bengaluru 560035, Karnataka, India, for the reason of having two different spellings of my name appearing on my identity documents and educational documents i.e. RACHNA JOSHI and RACHANA JOSHI, which refers to one and same person i.e. myself. I hereby declare vide affidavit dated 28.06.2023 sworn before notary S.I. Balaguru, Bangalore that henceforth I will be known and recognized by the name spelt as RACHNA JOSHI.

I, ROSE Akshay Mannanal, Age 27 years D/o. Cherian Ramapuram W/o. Akshay Mannanal, R/at #124 Ranka View Rathna Avenue, 51 Richmond Road, Trinity Circle, Bengaluru 560025 hereby declare that I have changed my name from Rose Cherian Ramapuram to Rose Akshay Mannanal vide affidavit dated 6.7.2023 sworn before L. Gopalakrishna, Advocate and Notary, Govt.of India, Bengaluru.

I, AJAY, residing at Bengaluru-79 have changed my name as CHANAKYA, vide-affidavit dated 5/7/2023 before Notary K.S.Bammappanavar, Bengaluru

PUBLIC NOTICE

Primary Co-Operative Agriculture and Rural Development Bank, Bangalore South and East Taluk.
No.68/10, Banashankari, Kanakapura Road, Bangalore- 560078.
NOTIFICATION
Sealed quotations are invited for the following Commercial Building accommodation is available on monthly Rent Basis.
Ground Floor + First Floor + Second Floor 3500 sq. ft. each Main Road with parking in the Front.
(Annex Building)
First Floor 3500 sq.ft. + Second Floor 3800 sq.ft. with Parking on Ground Floor 3500 sq. ft
For more details Contact: 8105988224 Office: 080-26712818
Sd/- Secretary (Y.V. Annaiah) President.

VIVEKANANDA COLLEGE OF LAW
AN INSTITUTE OF JANATHA EDUCATION SOCIETY®
Recognized by Bar Council of India & Affiliated to Karnataka State Law University, Hubballi
ESTD.: 1983
5 Year - B.A LL.B | B.Com LL.B
3 Year LL.B
8th Rank
Top Outstanding Law Schools of Excellence by CSR Law Schools Survey 2023
College of Pharmacy
D.Pharm
B.Pharm
M.Pharm
CET B060
Degree College
B.A - H | E | P
B.Sc - P | C | M | Comp. | Ele.
B.Com | B.Com - Data Analytics
NAAC A
Institute of Management
BCA | BBA
MBA | M.Com
PGCET B-323
Degree College for Women
BBA | B.Com | BA | BA - Journalism
2023-24 ADMISSIONS OPEN
95139 53486
95139 53482
Admission Center | Dr.Rajkumar Road, Next to Orion Mall, Rajajinagar II Stage, Bengaluru-560055

BUSINESS

Business Offers

Finance

NRI'S Investment And Finance Available On Low Interest Against Properties,Land & Building,Sites,Flats,Converted & Agriculture Lands Call:7204995189

Business to Business

Finance

WE ARRANGE Loans for Mortgage, Purchase, Construction, Project, Takeover of Loans from Reputed Bank. T&C Apply. Contact: 9353705002.

EDUCATION
To Place your Classified Ads Contact:
9845114560

Kanakapura Road, Nice Road Junction Adjacent to Silk Kendra Metro Station
ರೇಷ್ಮೆ ಸಂಸ್ಥೆ Silk Institute
12°51'43.7"N 77°31'50.2"E Kanakapura Road Bangalore
Scan For Location
Built to Suit Commercial For Rent with All Approvals completion by Dec 2024
Site Measuring 92020 Sq.ft Built-up Area 300 000 Sq.ft
2 Level Car Parks for 400 Cars
Each Floor 32000 Sq.ft + 10 Floors
20 Minutes Drive way for Electronic City & Mysore Rd
Foundation Completed Commencement Certificate (CC) Obtained from BBMP
SUITABLE FOR IT/ ITES, HD DATA CENTER, HOTELS, HOSPITALS, DAY CARE CENTERS & MULTI LEVEL CONVENTION HALLS
For Details Call- 9901453477
E mail:- valueforgeassets@gmail.com

ಬಿಬಿಎಂಪಿ: ರಸ್ತೆ, ಚರಂಡಿ, ಬೀದಿದೀಪದ ಸಮಸ್ಯೆ ನಿವಾರಣೆ; ಸಮಗ್ರ ಮಾಹಿತಿ ಲಭ್ಯ

ಕುಂದುಕೊರತೆ ನಿವಾರಣೆಗೆ 'ಕ್ಯೂಆರ್ ಕೋಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದಕ್ಷಿಣ ವಲಯದ ನಾಗರಿಕರು ತಮ್ಮ ಕುಂದುಕೊರತೆ ದಾಖಲಿಸಲು ನಿಯಂತ್ರಣ ಕೊಠಡಿಯನ್ನೇ ಅವಲಂಬಿಸಬೇಕಿಲ್ಲ. ರಸ್ತೆಯ ನಾಮಫಲಕದಲ್ಲಿರುವ 'ಕೋಡ್'ನಲ್ಲಿ ಎಲ್ಲ ಮಾಹಿತಿ ಪಡೆದು-ಕೊಳ್ಳಬಹುದಾಗಿದೆ.

ಜಯರಾಂ

ಬಿಬಿಎಂಪಿ ದಕ್ಷಿಣ ವಲಯದ ವ್ಯಾಪ್ತಿಯಲ್ಲಿ ನಾಮಫಲಕಗಳಲ್ಲಿ 'ಕ್ಯೂಆರ್ ಕೋಡ್ ರೋಡ್ ರೀಡರ್' ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ. ನಾಗರಿಕರು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಲಭ್ಯವಾಗುವ ಲಿಂಕ್ ಮೂಲಕ ರಸ್ತೆ, ಚರಂಡಿ, ಬೀದಿ ದೀಪದ ಸಮಸ್ಯೆಗಳಿಗೆ ಯಾರನ್ನು ಸಂಪರ್ಕಿಸಬೇಕೆಂಬ ಮಾಹಿತಿಯನ್ನು ಹೆಸರು, ಸಂಪರ್ಕ ಸಂಖ್ಯೆಗಳ ಸಹಿತ ಲಭ್ಯವಾಗಲಿದೆ.

ನಾಗರಿಕರು ತಮ್ಮ ಸುತ್ತಮುತ್ತ-ಲಿನ ಸಮಸ್ಯೆ ನಿವಾರಣೆಗೆ ನಿಯಂತ್ರಣ ಕೊಠಡಿಗೆ ದೂರು ನೀಡಬೇಕಾಗಿತ್ತು. ಅಲ್ಲಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿ ಅವರು ಬಂದು ಕಾರ್ಯಗತಗೊಳ್ಳುತ್ತಿದ್ದರು. ಆದರೆ

ರಸ್ತೆ ನಾಮಫಲಕದಲ್ಲಿ ಕ್ಯೂಆರ್ ಕೋಡ್ ಅಂಟಿಸುತ್ತಿರುವ ಸಿಬ್ಬಂದಿ

ಇದೀಗ ನಾಗರಿಕರು ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಹೆಸರು ಹಾಗೂ ಸಂಪರ್ಕ ಸಂಖ್ಯೆಯನ್ನು ಈ ಕ್ಯೂಆರ್ ಕೋಡ್ ಮೂಲಕವೇ ಪಡೆದುಕೊಂಡು, ನೇರವಾಗಿ ಅವರಿಗೆ ಸಮಸ್ಯೆ ಹೇಳಿ-ಕೊಳ್ಳಬಹುದು. ಈ ಮೂಲಕ ಶೀಘ್ರ ಪರಿಹಾರ ಕಂಡುಕೊಳ್ಳಬಹುದಾಗಿದೆ.

ವಾರ್ಡ್‌ಗಳಲ್ಲಿ ಆಯಾ ಕೆಲಸಗಳಿಗೆ ಸಂಬಂಧಪಟ್ಟ ಅಧಿಕಾರಿಗಳ ಮಾಹಿತಿ ಪಟ್ಟಿಯನ್ನು ನೀಡಲಾಗುತ್ತಿತ್ತು. ಆದರೆ, ಅದು ಅಲ್ಲಿಗೇ ಸೀಮಿತವಾಗುತ್ತಿತ್ತು. ಅಧಿಕಾರಿಗಳು ಬದಲಾದರೆ ಅವರ ಮಾಹಿತಿ ಸಿಗುತ್ತಿರಲಿಲ್ಲ. ಹೀಗಾಗಿ ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಈ ಮೂಲಕ ಕಾರ್ಯನಿರತವಾಗಿರುವ ಅಧಿಕಾರಿ, ಗುತ್ತಿಗೆದಾರರ ಮಾಹಿತಿ ಅದರಲ್ಲಿ ಅಪ್‌ಡೇಟ್ ಮಾಡಲಾಗುತ್ತದೆ. ಇಲ್ಲಿ ಇಷ್ಟೇ ಮಾಹಿತಿ ಎಂದೇನೂ ಸೀಮಿತ-ವಾಗಿರುವುದಿಲ್ಲ' ಎಂದು ಬಿಬಿಎಂಪಿ ದಕ್ಷಿಣ ವಲಯದ ಆಯುಕ್ತ ಜಯರಾಂ ರಾಯಪುರ ತಿಳಿಸಿದರು.

ಕ್ಯೂಆರ್ ಕೋಡ್‌ಗಳನ್ನು ರಸ್ತೆ ನಾಮಫಲಕಗಳಿಗೆ ಅಂಟಿಸಲಾಗುತ್ತಿದೆ. ಪ್ರತಿ ರಸ್ತೆಗೂ ತನ್ನದೇ ಪ್ರತ್ಯೇಕವಾದ ಲಿಂಕ್ ಒಳಗೊಂಡಿರುತ್ತದೆ. ನಾಗರಿಕರು ಇದನ್ನು ಬಳಸಿಕೊಂಡು ತಮ್ಮ ಸಮಸ್ಯೆ ನಿವಾರಿಸಿಕೊಳ್ಳಬಹುದು. ನಾಗರಿಕರ ದೂರಿಗೆ ಅಧಿಕಾರಿಗಳು ಸ್ಪಂದಿಸಬೇಕು ಎಂದು ಸೂಚಿಸಲಾಗಿದೆ ಎಂದರು.

ಬೆಂಗಳೂರು ದಕ್ಷಿಣ ವಲಯದಲ್ಲಿ ಸುಮಾರು 10,500 ರಸ್ತೆಗಳಿವೆ. ಬಸವನಗುಡಿ, ಪದ್ಮನಾಭ-ನಗರ, ಬಿಟಿಎಂ ಲೇಔಟ್, ಜಯನಗರ, ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರಗಳ ರಸ್ತೆಗಳಲ್ಲಿ ಈಗಾಗಲೇ ಕ್ಯೂಆರ್ ಕೋಡ್‌ಗಳನ್ನು ಅಳವಡಿಸಲಾಗಿದೆ. ವಿಜಯನಗರ ವಿಧಾನಸಭೆ ಕ್ಷೇತ್ರದ ರಸ್ತೆಗಳಲ್ಲಿ ಈ ಕೆಲಸ ಇನ್ನೊಂದು ವಾರದಲ್ಲಿ ಪೂರ್ಣಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

'ಎಲ್ಲೆಡೆ ಶೀಘ್ರ ವಿಸ್ತರಣೆ'

'ಕ್ಯೂಆರ್ ಕೋಡಿನ ರಸ್ತೆ ಮಾಹಿತಿ ಕೋಷ್ಟಕ'ವನ್ನು ದಕ್ಷಿಣ ವಲಯದಲ್ಲಿ ಸುಮಾರು ₹12 ಲಕ್ಷ ವೆಚ್ಚದಲ್ಲಿ ಕ್ಯೂಆರ್ ಕೋಡ್ ಅಳವಡಿಸುವ ಕಾರ್ಯ ಅನು-ಷ್ಠಾನಗೊಳಿಸಲಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಯೋಜನೆಯನ್ನು ಎಲ್ಲೆಡೆ ವಿಸ್ತರಿಸಲು ಸೂಚಿಸಿದ್ದಾರೆ. ಬಿಬಿಎಂಪಿ ವ್ಯಾಪ್ತಿಯ 13 ಸಾವಿರ ಕಿ.ಮೀ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳು ಮತ್ತು ವಲಯಗಳ ಎಲ್ಲ ರಸ್ತೆಗಳಿಗೂ ವಿಸ್ತರಿಸುವ ಯೋಜನೆ ಇದೆ. ಸುಮಾರು ₹1.5 ಕೋಟಿ ವೆಚ್ಚವಾಗಬಹುದು' ಎಂದು ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ತಿಳಿಸಿದರು.

ಇದೀಗ ಕೆಲವು ಮಾಹಿತಿ ಮಾತ್ರ ಲಭ್ಯವಿದ್ದು, ಮುಂದಿನ ದಿನಗಳಲ್ಲಿ ರಸ್ತೆಯ ಸಂಪೂರ್ಣ ಇತಿಹಾಸ ಅಂದರೆ, ರಸ್ತೆ ಡಾಂಬರು ಹಾಕಿದ್ದು, ಗುಂಡಿ ಮುಚ್ಚಿದ್ದು, ಚರಂಡಿ ನಿರ್ಮಾಣ, ಹೂಳು ತೆಗೆದಿದ್ದು ಸೇರಿಎಲ್ಲ ರೀತಿಯ ಕಾಮಗಾರಿಗಳ ಮಾಹಿತಿಯನ್ನೂ ಅಳವಡಿಸಲಾಗುತ್ತದೆ. ಸದ್ಯ ಇಂಗ್ಲಿಷ್‌ನಲ್ಲಿ ಮಾಹಿತಿ ಲಭ್ಯವಿದ್ದು, ಮುಂದಿನ ದಿನಗಳಲ್ಲಿ ಕನ್ನಡದಲ್ಲೂ ಒದಗಿಸಲಾಗುವುದು' ಎಂದರು.

ಇದೀಗ ಯಾವ ಮಾಹಿತಿ ಲಭ್ಯ?

ಶಾಸಕರ ಹೆಸರು, ಕ್ಷೇತ್ರ, ವಿಭಾಗ, ವಾರ್ಡ್, ರಸ್ತೆ ಹೆಸರು, ರಸ್ತೆ ಐಡಿ; ರಸ್ತೆ ಗುಡಿಸುವವರು, ಸೂಪರ್‌ವೈಸರ್, ಅವರ ಸಂಪರ್ಕ ಸಂಖ್ಯೆ; ಕಸ ಸಂಗ್ರಹಿಸುವ ಸಮಯ, ಕಸ ಗುತ್ತಿಗೆದಾರರು, ಅವರ ಸಂಪರ್ಕ ಸಂಖ್ಯೆ; ಆ ಪ್ರದೇಶದಲ್ಲಿ ತ್ಯಾಜ್ಯ ಉತ್ಪಾದನೆ ವಿವರ; ಗುಂಡಿ ಮುಚ್ಚುವ, ಪಾದಚಾರಿ ರಸ್ತೆ ನಿರ್ವಹಣೆ ಮಾಡುವ, ಚರಂಡಿ ಮೇಲಿನ ಸ್ಲ್ಯಾಪ್ ಬದಲಾವಣೆ, ಚರಂಡಿ ಹೂಳು ತೆಗೆಯುವ, ಬೀದಿದೀಪ ನಿರ್ವಹಣೆ ಜವಾಬ್ದಾರಿ ಹೊಂದಿರುವ ಎಂಜಿನಿಯರ್, ಗುತ್ತಿಗೆದಾರರ ಹೆಸರು ಹಾಗೂ ಸಂಪರ್ಕ ಸಂಖ್ಯೆ, ಮರದ ಕೊಂಬೆ ತೆರವಿಗೆ ಅರಣ್ಯ ವಿಭಾಗ ಆರ್‌ಎಫ್‌ಒ, ಗುತ್ತಿಗೆದಾರರ ವಿವರ; ನೀರು ಸರಬರಾಜು, ಒಳಚರಂಡಿ ನಿರ್ವಹಣೆ ಜವಾಬ್ದಾರಿ ಹೊಂದಿರುವ ಬಿಡಬ್ಲ್ಯು-ಎಸ್‌ಎಸ್‌ಬಿ ಅಧಿಕಾರಿ ಹೆಸರು, ಸಂಪರ್ಕ ಸಂಖ್ಯೆ; ನಿಯಂತ್ರಣ ಕೊಠಡಿ ಸಂಖ್ಯೆ; ಅಗ್ನಿಶಾಮಕ ದಳ ಸಿಬ್ಬಂದಿ ವಿವರ; ನಾಯಿ ಹಿಡಿಯಲು ಹಾಗೂ ಬೀಡಾಡಿ ದನಗಳ ಸಮಸ್ಯೆ ನಿವಾರಿಸುವ ಪಶು ಸಂಗೋಪನೆ ಅಧಿಕಾರಿಯ ಹೆಸರು, ಸಂಪರ್ಕ ಸಂಖ್ಯೆ; ಸೊಳ್ಳೆ ನಿವಾರಣೆಗೆ ಔಷಧ ಸಿಂಪಡಿಸುವ ಆರೋಗ್ಯ ಇಲಾಖೆ ಅಧಿಕಾರಿಯ ಮಾಹಿತಿ.

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಮೈಸೂರು ರೇಸ್

ಬ್ರೈಟೆಸ್ಟ್ ಸ್ಟಾರ್ ಗೆಲ್ಲುವ ನಿರೀಕ್ಷೆ

ಎಸ್.ವಿ.ಸುಬ್ರಮಣಿಯಮ್ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬ್ರೈಟೆಸ್ಟ್ ಸ್ಟಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕ್ಯಾಲಿಫೋರ್ನಿಯಾ ಗೋಲ್ಡ್ 5, ನಾಟ್ ಸೋ ನಾಟಿ 8, ಸಾರೊ ಬರ್ಡ್ 4
2ನೇ ರೇಸ್: ಸ್ಟಾರ್‌ಸ್ವೆಕ್ 10, ನ್ಯಾಚುರಲ್ ಫ್ಲೈ 4, ರೂಮರ್ ಲೇಡಿ 3
3ನೇ ರೇಸ್: ಪವರ್ ಆಫ್ ಥಿಯಾ 1, ಸಾರೋ ಲಕ್ಕಿ 12, ವಾಲ್‌ಕೈರಿ 14
4ನೇ ರೇಸ್: ಝುರೆವಿಚ್ 1, ಟಾರೆಕ್ 4, ಮಿಲೋಸ್ 3
5ನೇ ರೇಸ್: ಬ್ರೈಟೆಸ್ಟ್ ಸ್ಟಾರ್ 10, ಅನುಷ್ಟುಭ 8, ಹಿಡನ್ ಪ್ಲೆಷರ್ 4
6ನೇ ರೇಸ್: ಫನ್ ಅಂಡ್ ಲಾಫರ್ 2, ಮೊಘಲ್ 7, ಸೆಗೆರಾ 4
7ನೇ ರೇಸ್: ಹೀರೊಯಿಸ್ಮ್ 2, ಮೂನ್‌ಲೈಟ್ ಕ್ವೀನ್ 6, ಕ್ರಿಮ್‌ಸನ್ ಫೈರ್ 10

ಉತ್ತಮ ಬೆಟ್: ಸ್ಟಾರ್‌ಸ್ವೆಕ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5.6,7

ಸಾಯಿ ವೈದ್ಯಕೀಯ ಕಾಲೇಜಿಗೆ ಅನುಮತಿ ವಿಳಂಬ: ವಿಧಾನಸಭೆಯಲ್ಲಿ ವಾಕ್ಸಮರ

ಪ್ರಜಾವಾಣಿ ವಾರ್ತೆ

ವಿಧಾನ ಮಂಡಲದಲ್ಲಿ

ಬೆಂಗಳೂರು: ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ಆರಂಭವಾ-ಗುತ್ತಿರುವ ಮಧುಸೂಧನ ಸಾಯಿ ವೈದ್ಯಕೀಯ ಕಾಲೇಜಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ನೀಡುವಲ್ಲಿ ವಿಳಂಬ ಆಗುತ್ತಿರುವ ವಿಷಯ ವಿಧಾ-ನಸಭೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ವಾಕ್ಸಮರಕ್ಕೆ ಕಾರಣವಾಯಿತು.

ಗುರುವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಟಿ.ಬಿ. ಜಯಚಂದ್ರ, 'ಮಧುಸೂಧನ ಸಾಯಿ ವೈದ್ಯಕೀಯ ಕಾಲೇಜು ದೇಶದಲ್ಲೇ ಮೊದಲ ಬಾರಿಗೆ ಉಚಿತವಾಗಿ ವೈದ್ಯಕೀಯ ಶಿಕ್ಷಣ ನೀಡಲು ಮುಂದಾಗಿದೆ. ಪ್ರವೇಶ ಪ್ರಕ್ರಿಯೆ ಮುಕ್ತಾಯಗೊಳ್ಳಲು ಹತ್ತು ದಿನಗಳಷ್ಟೇ ಬಾಕಿ ಇದೆ. ಇನ್ನೂ ಕಾಲೇಜಿಗೆ ಅನುಮತಿ ನೀಡಿಲ್ಲ. ತ್ವರಿತವಾಗಿ ಅನುಮತಿ ನೀಡಬೇಕು' ಎಂದು ಮನವಿ ಮಾಡಿದರು.'

ಬೇಡಿಕೆಗೆ ಬಿಜೆಪಿಯ ಡಾ.ಸಿ. ಎನ್. ಅಶ್ವತ್ಥ ನಾರಾಯಣ ಕೂಡ ದನಿಗೂಡಿಸಿದರು. ಆಗ ಮಧ್ಯ ಪ್ರವೇಶಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಹಿಂದಿನ ನಿಮ್ಮ ಸರ್ಕಾರದಲ್ಲಿದ್ದ ವೈದ್ಯಕೀಯ ಶಿಕ್ಷಣ ಸಚಿವರು ಏಕೆ ಅನುಮತಿ ಕೊಟ್ಟಿರಲಿಲ್ಲ? ಪ್ರಧಾನಿಯೇ ಬಂದು ಉದ್ಘಾಟಿಸಿದ ಸಂಸ್ಥೆ ಇದು. ಮಾನ ಮರ್ಯಾದೆ ಇಲ್ಲವೆ' ಎಂದು ಕೇಳಿದರು.

'ಈ ರೀತಿಯ ಅಹಮ್ಮಿನ ಮಾತುಗಳು ಬೇಡ. ನಿಮ್ಮ ಅಹಂ ನೋಡಿ ಜನ ಮತ ಹಾಕಿಲ್ಲ. ಗ್ಯಾರಂಟಿ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿದ್ದೀರಿ. ಅದನ್ನೂ ಈಡೇರಿಸುತ್ತಿಲ್ಲ' ಎಂದು ಅಶ್ವತ್ಥ ನಾರಾಯಣ ಪ್ರತ್ಯುತ್ತರ ನೀಡಿದರು.

ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, 'ಹಿಂದೆ ಏಕೆ ಅನುಮತಿ ನೀಡಿಲ್ಲ? ವಿಳಂಬಕ್ಕೆ ಕಾರಣ ಏನು ಎಂಬುದರ ಬಗ್ಗೆ ತನಿಖೆ ನಡೆಸಿ. ಆದರೆ, ಉಚಿತವಾಗಿ ವೈದ್ಯಕೀಯ ಶಿಕ್ಷಣ ನೀಡಲು ಮುಂದಾಗಿರುವ ಸಂಸ್ಥೆಗೆ ಅನುಮತಿ ನೀಡಿ, ಪ್ರೇರಣೆ ಒದಗಿಸಬೇಕು' ಎಂದರು.

ಬಳಿಕ ಉತ್ತರಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ, 'ಮಧುಸೂಧನ ಸಾಯಿ ವೈದ್ಯಕೀಯ ಕಾಲೇಜಿಗೆ ಸಂಬಂಧಿಸಿದ ಕಡತ ನನ್ನ ಕಚೇರಿಗೆ ಬಂದಿಲ್ಲ. ಇನ್ನೂ ಕೆಳಹಂತದಲ್ಲೇ ಇದೆ. ಕಡತ ತರಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ. ಸಮಸ್ಯೆಗೆ ಕಾರಣ ತಿಳಿದು ತ್ವರಿತವಾಗಿ ಅನುಮತಿ ನೀಡಲು ಪ್ರಯತ್ನ ಮಾಡಲಾಗುವುದು' ಎಂದು ಭರವಸೆ ನೀಡಿದರು.

'ಸ್ಕೇಟಿಂಗ್ ಟ್ರ್ಯಾಕ್' ಬಳಕೆಗೆ ಕ್ರಮ

ಬೆಂಗಳೂರು: ಬಸವನಗುಡಿ ವಿಧಾನಸಭಾ ಕ್ಷೇತ್ರದ ಚನ್ನಮ್ಮನ ಕೆರೆ ಅಚ್ಚುಕಟ್ಟು ಪ್ರದೇಶದ ಆಟದ ಮೈದಾನದಲ್ಲಿ ₹ 15 ಕೋಟಿ ವೆಚ್ಚದಲ್ಲಿ ಸಿದ್ಧಪಡಿಸಿರುವ 'ಸ್ಕೇಟಿಂಗ್ ಟ್ರ್ಯಾಕ್'ನ ಸಮರ್ಪಕ ಬಳಕೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕಾಂಗ್ರೆಸ್ ಸದಸ್ಯ ಯು.ಬಿ.ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಸ್ಕೇಟಿಂಗ್ ಮೈದಾನದ ಕಾಮಗಾರಿ ಈಚೆಗಷ್ಟೇ ಮುಗಿದಿದೆ. ಬಿಬಿಎಂಪಿಗೆ ನಿರ್ವಹಣೆಯ ಹೊಣೆ ನೀಡಲಾಗಿದೆ. ಮೈದಾನವನ್ನು ವ್ಯರ್ಥವಾಗಲು ಬಿಡುವುದಿಲ್ಲ. ಈ ಕುರಿತು ಬಿಬಿಎಂಪಿ ಅಧಿಕಾರಿಗಳ ಜತೆ ಚರ್ಚಿಸಲಾಗುವುದು ಎಂದರು.

ಕೆಆರ್‌ಎಸ್ ಬಳಿ ಡಿಸ್ನಿಲ್ಯಾಂಡ್ ಮಾದರಿ ಉದ್ಯಾನ

ಬೆಂಗಳೂರು: ಮೈಸೂರಿನ ಕೆಆರ್‌ಎಸ್ ಬಳಿ 198 ಎಕರೆ ಪ್ರದೇಶದಲ್ಲಿ ₹ 1,450 ಕೋಟಿ ವೆಚ್ಚದಲ್ಲಿ ಡಿಸ್ನಿಲ್ಯಾಂಡ್ ಮಾದರಿ ಉದ್ಯಾನ ನಿರ್ಮಿ-ಸಲಾಗುವುದು. ಅಣೆಕಟ್ಟೆಯ ಸುರಕ್ಷತೆಗೆ ಧಕ್ಕೆಯಾಗದಂತೆ ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಗುರುವಾರ ಕಾಂಗ್ರೆಸ್ ಸದಸ್ಯ ಮಧು ಜಿ.ಮಾದೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಸರ್ಕಾರದ ಭೂಮಿಯಲ್ಲೇ ಉದ್ಯಾನ ನಿರ್ಮಿಸಲಾಗುವುದು. ಯೋಜನಾ ವರದಿಯನ್ನು ಅನುಮೋದನೆಗಾಗಿ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಗೆ ಸಲ್ಲಿಸಲಾಗಿತ್ತು. ಪರಿಷ್ಕೃತ ಪ್ರಸ್ತಾವ ಸಲ್ಲಿಸುವಂತೆ ಇಲಾಖೆ ಸಲಹೆ ನೀಡಿದೆ. ಅನುಮೋದನೆಯ ನಂತರ ಯೋಜನೆ ಅನುಷ್ಠಾನಕ್ಕೆ ಕಂಪನಿ ಗುರುತಿಸಲಾಗುವುದು. ಕೆಆರ್‌ಎಸ್ ಹೊರತುಪಡಿಸಿ ರಾಜ್ಯದ ಇತರೆ ಭಾಗಗಳಲ್ಲಿ ಸಿಡ್ನಿಲ್ಯಾಂಡ್ ಮಾದರಿ ಉದ್ಯಾನ ನಿರ್ಮಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಐದು ದಿನಗಳಲ್ಲಿ 172 ಮಂದಿಗೆ ಡೆಂಗಿ ಜ್ವರ ದೃಢ

ಮಳೆ: ಡೆಂಗಿ ಪ್ರಕರಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮಳೆಯಿಂದಾಗಿ ಡೆಂಗಿ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿದ್ದು, ಈ ತಿಂಗಳು ಐದು ದಿನಗಳಲ್ಲಿ 172 ಮಂದಿ ಡೆಂಗಿ ಜ್ವರದಿಂದ ಬಳಲಿದ್ದಾರೆ.

ಪ್ರತಿ ವರ್ಷ ಮುಂಗಾರು ಮಳೆ ಪ್ರಾರಂಭವಾದ ಬಳಿಕ ಪ್ರಕರಣಗಳ ಸಂಖ್ಯೆ ಏರುಗತಿ ಪಡೆಯುತ್ತಿದೆ. ಈ ವರ್ಷ ಈಗಾಗಲೇ 41 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ 28 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿದ್ದು, ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 2,432ಕ್ಕೆ ತಲುಪಿದೆ.



ಕಳೆದ ವರ್ಷ 9,620 ಮಂದಿ ಡೆಂಗಿ ಜ್ವರದಿಂದ ಬಳಲಿದ್ದರು. ಅವರಲ್ಲಿ ಒಂಬತ್ತು ಮಂದಿ ಜ್ವರದ ತೀವ್ರತೆಗೆ ಮೃತಪಟ್ಟಿರುವುದು ದೃಢಪಟ್ಟಿತ್ತು. ಈ ವರ್ಷ ಮರಣ ವರದಿಯಾಗಿಲ್ಲ.

ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 1,759ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡ ಲಾಗಿದ್ದು, 804 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಮೈಸೂರಿನಲ್ಲಿ 211, ವಿಜಯಪುರದಲ್ಲಿ 120, ಚಿತ್ರದು-ರ್ಗದಲ್ಲಿ 94, ಶಿವಮೊಗ್ಗದಲ್ಲಿ 83, ಧಾರವಾಡ ಹಾಗೂ ಗದಗದಲ್ಲಿ ತಲಾ 82, ಬೆಳಗಾವಿಯಲ್ಲಿ 78, ಕೊಡಗಿನಲ್ಲಿ 70, ಬಳ್ಳಾರಿಯಲ್ಲಿ 69, ದಾವಣಗೆರೆ-ಯಲ್ಲಿ 64 ಹಾಗೂ ದಕ್ಷಿಣ ಕನ್ನಡದಲ್ಲಿ 63 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 60ಕ್ಕಿಂತ ಕಡಿಮೆಯಿದೆ.

566 ಮಂದಿಯಲ್ಲಿ ದೃಢ: 27 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 17 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 11 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 566 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ವಿಜಯಪುರ (80) ಹಾಗೂ ಮೈಸೂರಿನಲ್ಲಿ (60) ಅಧಿಕ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 50ಕ್ಕಿಂತ ಕಡಿಮೆಯಿದೆ.

ಅಬಕಾರಿ ನೀತಿ ಹಗರಣ: ದಿನೇಶ್ ಅರೋರಾ ಬಂಧನ

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಉದ್ಯಮಿ ದಿನೇಶ್ ಅರೋರಾ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಗುರುವಾರ ರಾತ್ರಿ ಬಂಧಿಸಿದೆ ಎಂದು ಮೂಲಗಳು ತಿಳಿಸಿವೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ನಡೆಸುತ್ತಿರುವ ತನಿಖೆಯಲ್ಲಿ ಅರೋರಾ ಅವರನ್ನು ಸಾಕ್ಷಿ ಎಂದು ಪರಿಗಣಿಸಲಾಗಿದೆ. ಈ ಪ್ರಕರಣದ-ಲ್ಲಿ ಈಗಾಗಲೇ ಬಂಧಿತರಾಗಿರುವ ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರಿಗೆ ಅರೋರ ಆಪ್ತರು.

ಈ ಪ್ರಕರಣದಲ್ಲಿ ಇಲ್ಲಿಯವರೆಗೆ ಇ.ಡಿ ಐದು ಚಾರ್ಜ್‌ಶೀಟ್‌ಗ-ಳನ್ನು ಸಲ್ಲಿಸಿದ್ದು, ಬಂಧಿಸಿರುವ ವ್ಯಕ್ತಿಗಳ ಪೈಕಿ ಅರೋರಾ ಹದಿಮೂರನೇಯವರಾಗಿದ್ದಾರೆಐ

'ಸಂಶೋಧನಾ ಸೌಲಭ್ಯಗಳ ಸೃಷ್ಟಿಯೇ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚಿನ ತಂತ್ರಜ್ಞಾನಗ-ಳೊಂದಿಗೆ ಅತ್ಯಾಧುನಿಕ ಸಂಶೋಧನಾ ಸೌಲಭ್ಯಗಳನ್ನು ಸೃಷ್ಟಿಸುವ ಗುರಿಯನ್ನು ಬೆಂಗಳೂರಿನ ಐಐಐಟಿ ಹೊಂದಿದೆ ಎಂದು ನಿರ್ದೇಶಕ ಪ್ರೊ. ದೇಬಬರತ ದಾಸ್ ತಿಳಿಸಿದ್ದಾರೆ.

5ಜಿ ಅಡ್ವಾನ್ಸ್, 6ಜಿ ಸಂಶೋಧನೆ, ಬೌದ್ಧಿಕ ಆಸ್ತಿ ಹಕ್ಕುಗಳನ್ನು (ಐಪಿಆರ್) ಮತ್ತು ಸುಧಾರಿತ ಸಂವಹನ ವ್ಯವಸ್ಥೆಗ-ಳನ್ನು ಉತ್ತೇಜಿಸಲು ಇಂಟರ್‌ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್ಫರ್ಮೇಷನ್ ಟೆಕ್ನಾಲಜಿ ಬೆಂಗಳೂರು (ಐಐಐಟಿ–ಬಿ) ಸಂಸ್ಥೆಯು ಕೆಲಸ ಮಾಡುತ್ತಿದೆ. ವಿವಿಧ ಸಂಶೋಧನಾ ಸಂಸ್ಥೆಗಳು ಇದರಲ್ಲಿ ಕೈಜೋಡಿಸಿವೆ ಎಂದು ಮಾಹಿತಿ ನೀಡಿದ್ದಾರೆ.

ದೇಶದ ಪ್ರಮುಖ ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ ಓಪನ್ ರೇಡಿಯೋ ಆಕ್ಸೆಸ್ ನೆಟ್‌ವರ್ಕ್ (ಒಆರ್‌ಎಎನ್) 5ಜಿ-ಸುಧಾರಿತ ಪದ್ಧತಿ, 6ಜಿ ಅಭಿವೃದ್ಧಿ ಪಡಿಸುವುದು, ಬುದ್ಧಿಮತ್ತೆಯ ಮೇಲ್ಮೈಗಳನ್ನು (ಇಂಟಲಿಜೆಂಟ್ ಸರ್ಫೇಸಸ್) ಬಳಸಿಕೊಂಡು ಸ್ಮಾರ್ಟ್ ರೇಡಿಯೊ ಪರಿಸರ ಮತ್ತು ಅದರ ಸವಾಲುಗಳನ್ನು ಅರಿಯುವ ಕೆಲಸ ಮಾಡಲಾಗುತ್ತಿದೆ. ಐಐಐಟಿ-ಬೆಂಗಳೂ-ರು ಪ್ರಾಧ್ಯಾಪಕರು ಇಂತಹ ಬುದ್ಧಿಮತ್ತೆ ಚಾನೆಲ್‌ನ ಅಂದಾಜು ಅಲ್ಗಾರಿದ-ಮ್‌ಗಳನ್ನು ಅಭಿವೃದ್ಧಿಪಡಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ ಎಂದು ವಿವರಿಸಿದ್ದಾರೆ.

5ಜಿ ಮತ್ತು 6ಜಿ ವೈರ್‌ಲೆಸ್ ನೆಟ್‌ವರ್ಕ್‌ಗಳು ಹೆಚ್ಚಿನ ಫ್ರಿಕ್ವೆನ್ಸಿ ಬ್ಯಾಂಡ್‌ಗಳ ಯುಗಕ್ಕೆ ಹೋದಾಗ ಬೇಸ್ ಸ್ಟೇಷನ್ ವ್ಯಾಪ್ತಿ ಸಾಕಾಗುವುದಿಲ್ಲ. ಈ ಸವಾಲನ್ನು ಎದುರಿಸುವುದಕ್ಕಾ-ಗಿಯೇ ಮರುಹಂಚಿಕೆಯ ಬುದ್ಧಿಮತ್ತೆ ಸರ್ಫೇಸಸ್ (ಆರ್‌ಐಎಸ್) ಎಂಬ ಪರಿಹಾರವನ್ನು ಅನ್ವೇಷಿಸಲಾಗು-ತ್ತಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಆರ್‌ಐಎಸ್ ಕೈಗಾರಿಕೆಗಳ ಇಂಟರ್ನೆಟ್‌ನಂಥ ನಿರ್ದಿಷ್ಟ ಬಳಕೆಯನ್ನು ಶಕ್ತಗೊಳಿಸುತ್ತದೆ. ವಿವಿಧ ವ್ಯಾಪ್ತಿಯಲ್ಲಿ ಉತ್ತಮ ನೆಟ್‌ವರ್ಕ್ ನೀಡುತ್ತದೆ ಎಂದು ಮಾಹಿತಿ ನೀಡಿದರು.

ಐಐಐಟಿ ಬೆಂಗಳೂರಿನ ಕುಲಸಚಿವ ಎಸ್.ಆರ್. ಶ್ರೀಧರ್, ಶೈಕ್ಷಣಿಕ ಡೀನ್ ಪ್ರೊ. ಚಂದ್ರಶೇಖರ ರಾಮನಾಥನ್, ಸಂಶೋಧನೆ ಮತ್ತು ಅಭಿವೃದ್ಧಿ ಡೀನ್ ಪ್ರೊ. ಶ್ರೀನಾಥ್ ಶ್ರೀನಿವಾಸ, ಫ್ಯಾಕಲ್ಟಿ ಡೀನ್ ಪ್ರೊ. ಜ್ಯೋತ್ಸ್ನಾ ಬಾಪಟ್, ಐಐಐಟಿ-ಬಿ ಕಾಮೆಟ್ ಫೌಂಡೇಶನ್ ಸಿಇಒ ಡಾ ಮಿಲಿಂದ್ ಗಾಂಧಿ, ಇಎಚ್‌ಆರ್‌ಸಿ ಸಂಚಾಲಕ ಪ್ರೊ.ಟಿ.ಕೆ. ಶ್ರೀಕಾಂತ್ ಇದ್ದರು.

ಚಿತ್ರಾವಳಿ

ಜೈನ್ ವಿಶ್ವವಿದ್ಯಾಲಯದಲ್ಲಿ ಗುರುವಾರ ಆಯೋಜಿಸಿದ್ದ ಮಾದರಿ 'ಜಿ–20 ಶೃಂಗಸಭೆಯಲ್ಲಿ (ಎಡದಿಂದ) ವಿದೇಶಾಂಗ ಇಲಾಖೆಯ ನಿವೃತ್ತ ಅಧಿಕಾರಿ ಎನ್. ಪಾರ್ಥಸಾರಥಿ, 'ವೈ–20 ಇಂಡಿಯಾ'ದ ಕಾರ್ಯದರ್ಶಿ ವೆಲೆಂಟಿನಾ ಬ್ರಹ್ಮ ಮತ್ತು ಕುಲಾಧಿಪತಿ ಡಾ. ಚೆನ್‌ರಾಜ್ ರಾಯಚಂದ್ ಇದ್ದರು –ಪ್ರಜಾವಾಣಿ ಚಿತ್ರ

ಐಸಿಎಫ್‌ಎಐ ಬಿಸಿನೆಸ್ ಸ್ಕೂಲ್ ಬೆಂಗಳೂರು ನಗರದಲ್ಲಿ ಹಮ್ಮಿಕೊಂಡಿದ್ದ ಘಟಿಕೋತ್ಸವದಲ್ಲಿ 270 ವಿದ್ಯಾರ್ಥಿಗಳಿಗೆ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಪದವಿ ಪ್ರದಾನ ಮಾಡಲಾಯಿತು. ಅಧಿಕ ಅಂಕ ಪಡೆದ ಸ್ನೇಹಾ ದಾಸ್ ಅವರಿಗೆ 'ಎನ್.ಜೆ. ಯಶಸ್ವಿ' ಬಂಗಾರದ ಪದಕವನ್ನು ಗೌರಿಶಂಕರ್ ಎಸ್. ಪ್ರದಾನ ಮಾಡಿದರು

ಬಸವನಗುಡಿಯಲ್ಲಿ ಇತ್ತೀಚೆಗೆ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಶಾಸಕ ರವಿಸುಬ್ರಮಣ್ಯ ಉದ್ಘಾಟಿಸಿದರು. ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಧರಣೇಶ್ ಕುಮಾರ್, ಪ್ರೊ. ಎಂ. ಪ್ರಿಯದರ್ಶಿನಿ, ಕೆ.ಎಚ್. ಕುಮಾರ್ ಇದ್ದರು

ಒಂದೇ ದಿನ ₹22.49 ಲಕ್ಷ ದಂಡ ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಲಾಗಿದ್ದು, ಗುರುವಾರ ಬೆಳಿಗ್ಗೆಯಿಂದ ರಾತ್ರಿ 8 ಗಂಟೆಯವರೆಗೆ ₹22.49 ಲಕ್ಷ ದಂಡ ಸಂಗ್ರಹವಾಗಿದೆ.

ರಿಯಾಯಿತಿ ಘೋಷಣೆ ಆದೇಶ ಹೊರಬೀಳುತ್ತಿದ್ದಂತೆ ಆನ್‌ಲೈನ್ ಹಾಗೂ ಆಫ್‌ಲೈನ್ ಮೂಲಕ ದಂಡ ಪಾವತಿಸಲು ಪೊಲೀಸರು ವ್ಯವಸ್ಥೆ ಮಾಡಿದ್ದಾರೆ. ಇದರಿಂದಾಗಿ ಮೊದಲ ದಿನವೇ ಜನರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, 7,216 ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡಿದ್ದಾರೆ.

ರಿಯಾಯಿತಿ ಬಗ್ಗೆ ಗುರುವಾರ ಪತ್ರಿಕಾ ಪ್ರಕಟಣೆ ನೀಡಿರುವ ಸಂಚಾರ ಪೊಲೀಸರು, '2023ರ ಫೆಬ್ರುವರಿ 11ರೊಳಗಿನ ಪ್ರಕರಣಗ-ಳಿಗೆ ರಿಯಾಯಿತಿ ಸೌಲಭ್ಯ ಅನ್ವಯ-ವಾಗಲಿದೆ. ಸೆಪ್ಟೆಂಬರ್ 9ರವರೆಗೆ ದಂಡ ಪಾವತಿಸಲು ಅವಕಾಶವಿದೆ' ಎಂದಿದ್ದಾರೆ.

'ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾಗಿರುವ ಹೈಕೋರ್ಟ್ ನ್ಯಾಯಮೂರ್ತಿ-ಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಕೋರಿಕೆಯಂತೆ ದಂಡದ ಮೊತ್ತದಲ್ಲಿ ಶೇ 50ರಷ್ಟು ರಿಯಾಯಿತಿ ಜಾರಿಗೆ ತರಲಾಗಿದೆ. ದಂಡ ಬಾಕಿ ಉಳಿಸಿಕೊಂಡಿರುವ ಸಾರ್ವಜನಿಕರು, ನಿಗದಿತ ಅವಧಿಯೊಳಗೆ ದಂಡ ಪಾವತಿಸ ಮಾಡಿ ರಶೀದಿ ಪಡೆದುಕೊ-ಳ್ಳಬೇಕು' ಎಂದೂ ಕೋರಿದ್ದಾರೆ.

ದಂಡ ಪಾವತಿ ಹೇಗೆ: ಸಂಚಾರ ನಿರ್ವಹಣೆ ಕೇಂದ್ರ (ಟಿಎಂಸಿ), ಸಂಚಾರ ಪೊಲೀಸ್ ಠಾಣೆಗಳಲ್ಲಿ, ಕರ್ನಾಟಕ ಒನ್ ಹಾಗೂ ಬೆಂಗಳೂರು ಒನ್ ಕೇಂದ್ರಗಳಲ್ಲಿ ದಂಡ ಪಾವತಿಸಬಹುದು. ಕರ್ನಾಟಕ ಸ್ಟೇಟ್ ಪೊಲೀಸ್ (ಕೆಎಸ್‌ಪಿ) ಆ್ಯಪ್ ಮೂಲಕ ದಂಡ ಪಾವತಿಸಬಹುದು.

ಸಂಜೆ ಕಾಲೇಜು ಮುಚ್ಚಲು ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಧ ಶತಮಾನದಿಂದ ಕಾರ್ಯನಿರ್ವಹಿಸುತ್ತಿರುವ ಬಿಎಂಎಸ್ ಎಂಜಿನಿಯರಿಂಗ್ ಸಂಜೆ ಕಾಲೇಜನ್ನು ಮುಚ್ಚಬಾರದು ಎಂದು ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘ ಒತ್ತಾಯಿಸಿದೆ.

ಈ ಬಗ್ಗೆ ಸಂಘದ ಅಧ್ಯಕ್ಷ ಆರ್. ಅಶ್ವಥ್, ಕಾರ್ಯದರ್ಶಿ ಧರ್ಮನಾಯಕ್ ಬಿ.ಬಿ. ಮತ್ತು ಪದಾಧಿಕಾರಿಗಳು ಉನ್ನತ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ.

ಸರ್ಕಾರ ಮತ್ತು ಬಿಎಂಎಸ್ ಎಜ್ಯುಕೇಷನಲ್ ಟ್ರಸ್ಟ್ ಸೇರಿ ಎಂಜಿನಿಯರಿಂಗ್ ಸಂಜೆ ಕಾಲೇಜು ಪ್ರಾರಂಭ ಮಾಡಿದ್ದರಿಂದ ಬೆಂಗಳೂರು ನಗರದ ಉದ್ಯೋಗಸ್ಥ ಡಿಪ್ಲೊಮಾದಾರರು ಬಿ.ಇ. ಓದಲು ಸಾಧ್ಯವಾಗಿತ್ತು. ಬಿಎಂಎಸ್ ಸಂಜೆ ಎಂಜಿನಿಯರಿಂಗ್ ಕಾಲೇಜನ್ನು ಮುಚ್ಚುವುದಾಗಿ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ. ಮುರಳೀಧರ್ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆ ಖಂಡನೀಯ. ಸಂಜೆ ಕಾಲೇಜು ಮುಚ್ಚದಂತೆ ಕ್ರಮಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದರು.

ಬಿಎಂಎಸ್ ಎಂಜಿನಿಯರಿಂಗ್ ಸಂಜೆ ಕಾಲೇಜನ್ನು ಮುಚ್ಚಬಾರದು ಎಂದು ಆಗ್ರಹಿಸಿ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಆರ್. ಅಶ್ವಥ್, ಕಾರ್ಯದರ್ಶಿ ಧರ್ಮನಾಯಕ್ ಬಿ.ಬಿ. ಮತ್ತು ಪದಾಧಿಕಾರಿಗಳು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರಿಗೆ ಮನವಿ ಸಲ್ಲಿಸಿದರು.

ಉನ್ನತ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಕ್ರಮ ಕೈಕೊಳ್ಳುವುದಾಗಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಭರವಸೆ ನೀಡಿದರು.

ಆಟೊ ಉರುಳಿ ಚಾಲಕ ಸಾವು

ಬೆಂಗಳೂರು: ಗೆಳೆಯರ ಬಳಗ ಬಡಾವಣೆಯ ಯಶಸ್ವಿನಿ ಜಂಕ್ಷನ್ ಬಳಿ ಆಟೊ ಉರುಳಿಬಿದ್ದು ಅಪಘಾತ ಸಂಭವಿಸಿದ್ದು, ಚಾಲಕ ರಂಗನಾಥ್ (45) ಮೃತಪಟ್ಟಿದ್ದಾರೆ.

'ಚಂದ್ರಾಲೇಔಟ್ ಮಾರುತಿ ನಗರದ ನಿವಾಸಿ ರಂಗನಾಥ್, ಬುಧವಾರ ರಾತ್ರಿ ಮನೆಯಿಂದ ಯಶವಂತಪುರದತ್ತ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ರಾಜಾಜಿನಗರ ಸಂಚಾರ ಠಾಣೆ ಪೊಲೀಸರು ಹೇಳಿದರು. 'ವೇಗವಾಗಿ ಆಟೊ ಚಲಾಯಿಸಿದ್ದರಿಂದ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು, ಉರುಳಿಬಿದ್ದಿತ್ತು. ಇದರಿಂದ ತೀವ್ರ ಗಾಯಗೊಂಡು ರಂಗನಾಥ್ ಮೃತ-ಪಟ್ಟಿದ್ದಾರೆ' ಎಂದರು.

'ನಾಡಹಬ್ಬ'ದಲ್ಲಿ ಶಾಸಕ ರಿಜ್ವಾನ್ ಅರ್ಷದ್ ಅಭಿಮತ

'ಜಾನಪದ ಕಲೆಗಳಿಂದ ಆತ್ಮಸಂತೋಷ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲೆಗಳು ವ್ಯಕ್ತಿತ್ವ ವಿಕಸನಕ್ಕೆ ಪೂರಕ ಮತ್ತು ಪ್ರೇರಕವಾ-ಗಿರುತ್ತವೆ. ಆಧುನಿಕ ಕಲಾ ಪ್ರಕಾರಗಳು ಮನಸ್ಸನ್ನು ಸಂತೋಷಗೊಳಿಸಿದರೆ, ಜಾನಪದ ಕಲೆಗಳು ಆತ್ಮಸಂತೋಷ ನೀಡುತ್ತವೆ' ಎಂದು ಶಾಸಕ ರಿಜ್ವಾನ್ ಅರ್ಷದ್ ತಿಳಿಸಿದರು.

ಸರ್ಕಾರಿ ಕಲಾ ಕಾಲೇಜಿನ ಕನ್ನಡ ಸಂಘವು ನಗರದಲ್ಲಿ ಗುರುವಾರ ಹಮ್ಮಿಕೊಂಡ ನಾಡಹಬ್ಬ ಕಾರ್ಯಕ್ರ-ಮದಲ್ಲಿ ವಿದ್ಯಾರ್ಥಿಗಳ ಜಾನಪದ ಕಲಾ ಪ್ರದರ್ಶನ ವೀಕ್ಷಿಸಿ, ಮಾತನಾಡಿದರು. 'ಕರ್ನಾಟಕವು ಕಲೆಗಳ ತವರೂರು. ಮನಸ್ಸಿನಲ್ಲಿರುವ ದುಗುಡವನ್ನು ಪರಿಹರಿಸಿ, ನವೋಲ್ಲಾಸ ತುಂಬುವ ಚೈತನ್ಯ ಜಾನಪದ ಕಲೆಗಳಿಗಿವೆ. ಯಾವುದೇ ಭೇದಭಾವ ಮೂಡಿಸದೆ ಭಾವೈಕ್ಯತೆಯನ್ನು ಉಂಟುಮಾಡುವ ಶಕ್ತಿ ಜಾನಪದ ಕಲೆಗಿದೆ' ಎಂದು ಶ್ಲಾಘಿಸಿದರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್.ದೊರೆಸ್ವಾಮಿ, 'ಸರ್ಕಾರದ ಶಿಕ್ಷಣ ಸಲಹೆಗಾರ-ನಾಗಿದ್ದಾಗ ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಹಲವು ಶಿಫಾರ-ಸುಗಳನ್ನು ಮಾಡಲಾಗಿತ್ತು. ನಾಲ್ಕು ಸಾವಿರ ಶಾಲೆಗಳ ನವೀಕರಣವನ್ನೂ ಕೈಗೊಳ್ಳಲಾಯಿತು. ನಮ್ಮ ವಿಶ್ವವಿ-ದ್ಯಾಲಯವು ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು, ಅಭಿವೃದ್ಧಿ-ಪಡಿಸಿದೆ. ಸರ್ಕಾರಿ ಕಲಾ ಕಾಲೇಜಿನ ಅಭಿವೃದ್ಧಿಗೂ ನಾನು ನೆರವಾಗುತ್ತೇನೆ' ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್. ಬಾಲಾಜಿ ಅವರಿಗೆ ರಂಗ ಗೌರವ ಪ್ರದಾನ ಮಾಡಲಾಯಿತು. ಹಿದಾಯತ್ ಆಹಮದ್, ಕನ್ನಡ ಸಂಘದ ಸಂಚಾಲಕ ರುದ್ರೇಶ್ ಆದರಂಗಿ, ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ, ರಿಜ್ವಾನ್ ಅರ್ಷದ್, ಎಂ.ಆರ್. ದೊರೆಸ್ವಾಮಿ ಹಾಗೂ ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಪಿ.ಟಿ.ಶ್ರೀನಿವಾಸ ನಾಯಕ ಇದ್ದರು

ಕಲಾವಿದ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ ಅವರು ತಮಟೆ ನುಡಿಸಿ ರಂಜಿಸಿದರು. ರಂಗ ಚಾರಕ ಫೌಂಡೇಶನ್ ಅಧ್ಯಕ್ಷ ಹಿದಾಯತ್ ಅಹಮದ್ ಅವರ ನಿರ್ದೇಶನದಲ್ಲಿ ವಿದ್ಯಾರ್ಥಿಗಳು ಡೊಳ್ಳು, ಕಂಸಾಳೆ, ಕೋಲಾಟ, ಪಟ ಕುಣಿತ, ಸೋಮನ ಕುಣಿತ, ಕೀಲು ಕುದುರೆ, ಯಕ್ಷಗಾನ ಹಾಗೂ ತಮಟೆ ವಾದನವನ್ನು ಪ್ರಸ್ತು-ತಪಡಿಸಿದರು. ಮಧ್ಯಾಹ್ನ ಪ್ರದೀಪ್ ತಿಪಟೂರು ನಿರ್ದೇಶನದಲ್ಲಿ 'ಚಮ್ಮಾರನ ಚಾಲೂಕಿ ಹೆಂಡತಿ' ನಾಟಕ ಪ್ರದರ್ಶನ ಕಂಡಿತು.

ಕರ್ನಾಟಕಕ್ಕೆ ಕುಲಾಂತರಿ ಸಾಸಿವೆ ಬೇಡ: ಒತ್ತಾಯ

ಬೆಂಗಳೂರು: ಕುಲಾಂತರಿ ಸಾಸಿವೆಯನ್ನು ಹೊಲಗಳಲ್ಲಿ ಬೆಳೆಯಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಕರ್ನಾಟಕ ಸರ್ಕಾರ ಅದಕ್ಕೆ ಅವಕಾಶ ಕೊಡದೇ ನಿಷೇಧ ಹೇರಬೇಕು ಎಂದು ಸಾಮಾಜಿಕ ಕಾರ್ಯಕರ್ತರು, ಲೇಖಕರು ಒತ್ತಾಯಿ-ಸಿದ್ದಾರೆ.

ಈ ಕುರಿತು ಪತ್ರ ಬರೆದಿರುವ ಎಸ್.ಜಿ. ಸಿದ್ಧರಾಮಯ್ಯ, ಶಾರದಾ ಗೋಪಾಲ, ನಾಗೇಶ ಹೆಗಡೆ, ಸಂತೋಷ ಕೌಲಗಿ, ಕೆ.ಪಿ. ಸುರೇಶ್, ಕವಿತಾ ಕುರುಗಂಟಿ, ಮಲ್ಲಿಕಾರ್ಜುನ ಹೊಸಪಾಳ್ಯ, ಆನಂದತೀರ್ಥ ಪ್ಯಾಟಿ, ಜಿ. ಕೃಷ್ಣಪ್ರಸಾದ್, ಅಣೆಕಟ್ಟೆ ವಿಶ್ವನಾಥ್, ಈ ಸಾಸಿವೆ ಬಳಸಿದರೆ ಮನುಷ್ಯರ ಆರೋಗ್ಯದ ಮೇಲಾಗುವ ಪರಿಣಾಮದ ಬಗ್ಗೆಯೂ ಪರೀಕ್ಷೆ ನಡೆದಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ಕುಲಾಂತರಿ ಸಾಸಿವೆಯಲ್ಲಿ ಕೀಟನಿರೋಧಕ ಶಕ್ತಿ ಇಲ್ಲ. ಹೈಬ್ರಿಡೈಸೇಶನ್ ತಂತ್ರಜ್ಞಾನ ಎಂದು ಕರೆಯಲಾಗುತ್ತಿದ್ದರೂ ಇಳುವರಿ ಹೆಚ್ಚಳದ ಯಾವುದೇ ಪುರಾವೆಗಳಿಲ್ಲ. ಗ್ಲುಪೋಸಿನೇಟ್ ಕಳೆನಾಶಕವನ್ನು ಸುರಿದರೆ ಸಸ್ಯಕ್ಕೆ ಏನೂ ಆಗುವುದಿಲ್ಲ ಎಂಬುದೊಂದೇ ಇದರ ಗುಣ. ಆದರೆ, ಸುತ್ತಲಿನ ಕಳೆಗಳೆಲ್ಲ ಸುಟ್ಟು ಹೋಗುತ್ತವೆ. ಕಳೆ ತೆಗೆಯುವ ಮಹಿಳೆಯರು ಉದ್ಯೋಗ ಕಳೆದುಕೊ-ಳ್ಳಲಿದ್ದಾರೆ. ಮುಂದೆ ಬಳಕೆದಾರರು ಎಣ್ಣೆಗಾಣಗಳು, ಹೋಟೆಲ್‌ಗಳು ಈ ಸಾಸಿವೆ ನಿರಾಕರಿಸಿದರೆ ರೈತರ ಶ್ರಮ ಮಣ್ಣುಪಾಲಾಗಲಿದೆ ಎಂದರು.

ಸಾಸಿವೆಯ ಮಟ್ಟಿಗೆ ದೇಶವು ಸ್ವಾವಲಂಬಿಯಾಗಿದೆ. ಕುಲಾಂತರಿ ತಳಿಯ ಅಗತ್ಯವಿಲ್ಲ. ಆದರೂ ಹೊಲಕ್ಕೆ ನುಗ್ಗಿಸಲು ಪ್ರಯತ್ನಿಸಲಾಗುತ್ತಿದೆ. ಒಮ್ಮೆ ಪ್ರವೇಶ ಸಿಕ್ಕಿದರೆ ಮುಂದೆ ಕುಲಾಂತರಿ ಬದನೆ, ಮೆಣಸು, ಬೆಂಡೆ, ಟೊಮಟೊ, ಕೋಸು, ಕೊತ್ತಂಬರಿ-ಗಳಿಗೂ ಅನುಮತಿ ಪಡೆಯುವುದು ಬಹುರಾಷ್ಟ್ರೀಯ ಕಂಪನಿಗಳಿಗೆ ಸುಲಭ ವಾಗಲಿದೆ. ಸ್ಥಳೀಯ ತಳಿ ವೈವಿಧ್ಯ ಮೂಲೆ ಗುಂಪಾಗಲಿವೆ ಎಂದು ಹೇಳಿದರು.

ಗಣ
ವೇದಿಕಾ

‘ಕ್ಷೇತ್ರಪತಿ’ಯಲ್ಲಿ ಉ.ಕರ್ನಾಟಕ ಸೊಗಡು

ಸಿನಿಮಾತು ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಯಾವ ಪಾತ್ರ ಕೊಟ್ಟರೂ ಬಣ್ಣ ತುಂಬಬಲ್ಲ ನಟ ‘ಗುಲ್ಟು’ ಖ್ಯಾತಿಯ ನವೀನ್ ಶಂಕರ್. ಅವರ ನಟನೆಯ ‘ಕ್ಷೇತ್ರಪತಿ’ ಆಗಸ್ಟ್ 18ರಂದು ತೆರೆ ಕಾಣುತ್ತಿದೆ. ಉತ್ತರ ಕರ್ನಾಟಕದ ಸಂಸ್ಕೃತಿ, ಸೊಗಡು, ಭಾಷೆಯನ್ನು ಅಧಿಕೃತವಾಗಿ ಹೊಂದಿರುವ ಈ ಚಿತ್ರದ ಕುರಿತು ನವೀನ್ ‘ಸಿನಿಮಾ ಪುರವಣಿ’ ಜೊತೆ ಒಂದಷ್ಟು ಮಾಹಿತಿ ಹಂಚಿಕೊಂಡಿದ್ದಾರೆ.

ವಿನಾಯಕ ಕೆ.ಎಸ್.

• ಚಿತ್ರ ಬಿಡುಗಡೆ ಮುಂದಕ್ಕೆ ಹೋಗಿದ್ದೇಕೆ? ಸಿದ್ಧತೆ ಹೇಗಿದೆ?

ಸಿನಿಮಾ ಜುಲೈ 28ಕ್ಕೆ ಬಿಡುಗಡೆಗೊಳ್ಳಬೇಕಿತ್ತು. ಆದರೆ ಚಿತ್ರದ ಕೆಲಸದ ವೇಗ ನೋಡಿದಾಗ ಪೂರ್ಣಗೊಳ್ಳಲು ಸ್ವಲ್ಪ ಹೆಚ್ಚು ಸಮಯ ಬೇಕು ಎನ್ನಿಸಿತು. ಅಲ್ಲದೇ ಒಂದಷ್ಟು ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಹೀಗಾಗಿ ಆ.18ಕ್ಕೆ ತೆರೆಗೆ ಬರುತ್ತಿದ್ದೇವೆ.

• ‘ಕ್ಷೇತ್ರಪತಿ’ ಯಾವ ಜಾನರ್‌ನ ಕಥೆ?

ಒಬ್ಬ ಸಾಮಾನ್ಯನ ಹೋರಾಟದ ಕಥೆ. ಉತ್ತರ ಕರ್ನಾಟಕದಿಂದ ಈ ಹೋರಾಟ ಪ್ರಾರಂಭವಾಗುತ್ತದೆ. ತಂದೆ ಮತ್ತು ಮಗನನ್ನು ಇಟ್ಟುಕೊಂಡು ಒಂದು ಸಾರ್ವತ್ರಿಕ ಸಮಸ್ಯೆಯನ್ನು ಹೇಳುತ್ತ ಹೋಗುತ್ತೇವೆ. ಉತ್ತರ ಕರ್ನಾಟಕದ ಭಾಗಕ್ಕೆ ಹೆಚ್ಚು ಆಪ್ತವಾಗುವ ವಿಷಯ. ನಾನು ಮತ್ತು ಚಿತ್ರದ ನಿರ್ದೇಶಕ ಶ್ರೀಕಾಂತ್ ಇಬ್ಬರೂ ಅಲ್ಲೇ ಹುಟ್ಟಿ ಬೆಳೆದವರು. ಹೀಗಾಗಿ ಉತ್ತರ ಕರ್ನಾಟಕದ ಸಂಸ್ಕೃತಿ, ಸೊಗಡು ಮತ್ತು ಭಾಷೆಯನ್ನು ಬಹಳ ಅಧಿಕೃತವಾಗಿ ಚಿತ್ರದಲ್ಲಿ ಬಳಸಿಕೊಂಡಿದ್ದೇವೆ.

• ಸಿನಿಮಾ ಉತ್ತರ ಕರ್ನಾಟಕದಲ್ಲಿಯೇ ಚಿತ್ರೀಕರಣಗೊಂಡಿದೆಯೇ?

ಹೌದು. ಶೇಕಡ 95ರಷ್ಟು ಭಾಗ ಗದಗ, ತಿಮ್ಮಾಪುರ, ಲಕ್ಕುಂಡಿಯಲ್ಲಿ ಚಿತ್ರೀಕರಣಗೊಂಡಿದೆ. ನಮಗೆಲ್ಲ ಗೊತ್ತಿರುವ ಸಮಸ್ಯೆಯದೇ ಕಥೆಯನ್ನು ಸಿನಿಮಾ ಒಳಗೊಂಡಿದೆ. ಅಚ್ಯುತ್ ಕುಮಾರ್, ನಾಯಕಿ ಅರ್ಚನಾ ಜೋಯಿಸ್ ಹೊರತುಪಡಿಸಿ ಉಳಿದವರೆಲ್ಲರೂ ಉತ್ತರ ಕರ್ನಾಟಕದ ರಂಗಭೂಮಿ ಕಲಾವಿದರು. ‘ನಾಗಮಂಡಲ’, ‘ಹುಲಿಯಾ’ ಸೇರಿದಂತೆ ಕೆಲ ಚಿತ್ರಗಳಷ್ಟೇ ಉತ್ತರ ಕರ್ನಾಟಕ ಭಾಷೆಯ ಸೊಗಡಿತ್ತು. ಹೀಗಾಗಿ ಒಂದು ಗಟ್ಟಿಯಾದ ವಿಷಯ ಇಟ್ಟುಕೊಂಡು ಕಮರ್ಷಿಯಲ್ ಆಗಿ ‘ಕ್ಷೇತ್ರಪತಿ’ ಕಥೆ ಹೇಳಿದ್ದೇವೆ.

• ಉತ್ತರ ಕರ್ನಾಟಕವನ್ನೇ ಕೇಂದ್ರೀಕರಿಸಿ, ಬಿಡುಗಡೆ ಮಾಡುವಿರೇ?

ಕಥೆ ಸಾರ್ವತ್ರಿಕವಾಗಿದೆ. ಹೀಗಾಗಿ ರಾಜ್ಯದೆಲ್ಲೆಡೆ ಸಿನಿಮಾ ಬಿಡುಗಡೆ ಮಾಡುತ್ತೇವೆ. ಶೇಕಡಾ 5ರಷ್ಟು ಬೆಂಗಳೂರಿನಲ್ಲಿಯೂ ಚಿತ್ರೀಕರಣ ಮಾಡಿದ್ದೇವೆ. ಅಲ್ಲದೇ ರಾಜಧಾನಿಯಲ್ಲಿಯೂ ಸಾಕಷ್ಟು ಉತ್ತರ ಕರ್ನಾಟಕದ ಜನರಿದ್ದಾರೆ. ಪ್ರಚಾರ ಕಾರ್ಯಗಳನ್ನು ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಮಾಡುತ್ತೇವೆ. ಇಲ್ಲಿ ದೊಡ್ಡ ಪ್ರಚಾರ ಕಾರ್ಯಕ್ರಮ ನಡೆಸುವ ಯೋಚನೆಯಿದೆ.

• ‘ಗುಲ್ಟು’ ನಂತರ ತುಸು ಹೆಚ್ಚೇ ವಿರಾಮ ತೆಗೆದುಕೊಂಡಿದ್ದು ಏಕೆ?

ಕಥೆಗಳ ಆಯ್ಕೆಗೆ ಸಮಯ ತೆಗೆದುಕೊಂಡೆ. ‘ಗುಲ್ಟು’ ಬಳಿಕ ಎರಡು ಕಥೆಗಳೊಂದಿಗೆ ಪ್ರಯಾಣ ಮಾಡಿದೆ. ಆದರೆ ಒಂದು ಕಥೆ ಬೇರೆ ನಾಯಕನಿಗೆ ಸಿನಿಮಾವಾಯ್ತು. ಇನ್ನೊಂದು ಕಥೆ ಮುಂದಕ್ಕೆ ಹೋಗಲಿಲ್ಲ. ಕಾಯುತ್ತ ಕುಳಿತರೆ ಸಮಯ ಕಳೆದು ಹೋಗುತ್ತದೆ ಎಂದು ನಂತರ ‘ಧರಣಿಮಂಡಲ’ ಮತ್ತು ‘ಹೊಂದಿಸಿ ಬರೆಯಿರಿ’ ಒಪ್ಪಿಕೊಂಡೆ. ಎರಡೂ ಸಿನಿಮಾಗಳು ಚಿತ್ರಮಂದಿರದಲ್ಲಿ ಪ್ರೇಕ್ಷಕರನ್ನು ಸೆಳೆಯುವಲ್ಲಿ ಸ್ವಲ್ಪ ವಿಫಲವಾದವು. ‘ಹೊಂದಿಸಿ ಬರೆಯಿರಿ’ ಬಿಡುಗಡೆಯಾದ ಮೂರು ವಾರಕ್ಕೆ ಸುಮಾರು 45 ಚಿತ್ರಗಳು ಬಿಡುಗಡೆಗೊಂಡಿದ್ದವು. ‘ಧರಣಿಮಂಡಲ’ ಬಿಡುಗಡೆ ಸಮಯ ಕೂಡ ಒಂದು ರೀತಿ ಕೋವಿಡ್ ಕ್ಲಿಯರೆನ್ಸ್ ಸಮಯ ಎಂಬಂತೆ ಆಗಿತ್ತು.

• ‘ಗುರುದೇವ್ ಹೊಯ್ಸಳ’ದ ನಂತರ ನಿಮ್ಮ ಬೇಡಿಕೆ ಹೆಚ್ಚಾಗಿದೆಯೆ?

‘ಹೊಯ್ಸಳ’ ಚಿತ್ರದಲ್ಲಿ ಒಂದೊಳ್ಳೆ ಪಾತ್ರ ಸಿಕ್ಕಿತ್ತು. ‘ಹೊಂದಿಸಿ ಬರೆಯಿರಿ’ ಒಟಿಟಿಯಲ್ಲಿ ಬರುವ ವೇಳೆಗೆ ‘ಹೊಯ್ಸಳ’ ಚಿತ್ರಮಂದಿರದಲ್ಲಿತ್ತು. ಹೆಚ್ಚು ಜನರು ನನ್ನನ್ನು ಗುರುತಿಸಿದರು. ಒಳ್ಳೆಯ ಮೈಲೇಜ್ ಸಿಕ್ಕಿತು. ಬೇಡಿಕೆ ಹೆಚ್ಚಳಕ್ಕಿಂತ ಬರುವ ಕಥೆಗಳ ಬಜೆಟ್ ಗಾತ್ರ ಹೆಚ್ಚಾಗಿದೆ. ದೊಡ್ಡ ಬಜೆಟ್‌ನ ಕಥೆಗಳು ಬರುತ್ತಿವೆ.

• ನಿಮ್ಮ ಮುಂದಿನ ಚಿತ್ರಗಳು?

ಕೆಆರ್‌ಜಿ ಸ್ಟುಡಿಯೋಸ್ ಜೊತೆ ‘ಕಿರಿಕ್ et-11’ ಚಿತ್ರೀಕರಣ ಪ್ರಾರಂಭವಾಗುತ್ತಿದೆ. ‘ಫ್ಯಾಮಿಲಿ ಮ್ಯಾನ್’ ವೆಬ್ ಸರಣಿ ಬರಹಗಾರ ಇದರ ನಿರ್ದೇಶಕರು. ಭಾವನಾತ್ಮಕ ಪಯಣದೊಂದಿಗೆ ನಗಿಸುವ ಕಥೆಯನ್ನು ಹೊಂದಿರುವ ಚಿತ್ರ. ‘ನೋಡಿದವರು ಏನಂತಾರೆ?’ ಚಿತ್ರ ಬಿಡುಗಡೆಗೆ ಸಿದ್ಧವಿದೆ. ‘ಗುಲ್ಟು’ ಜನಾರ್ದನ್ ಚಿಕ್ಕಣ್ಣ ಜೊತೆ ಇನ್ನೊಂದು ಸಿನಿಮಾ ಮಾಡುವ ತಯಾರಿ ನಡೆಯುತ್ತಿದೆ. ಯಾವ ರೀತಿ ಕಥೆ ಆಯ್ಕೆ ಮಾಡಿಕೊಳ್ಳಬೇಕೆಂಬ ಚರ್ಚೆ ನಡೆಯುತ್ತಿದೆ. ಇದಲ್ಲದೆ ಇನ್ನೊಂದು ಸಸ್ಪೆನ್ಸ್ ಥ್ರಿಲ್ಲರ್ ಕಥೆ ಕೂಡ ಕೇಳಿರುವೆ.

ಕ್ಷೇತ್ರಪತಿ
ನವೀನ್ ಶಂಕರ್

ಹೀಗಿದೆ ಪ್ರಜ್ವಲ್ ‘ಗಣ’!

ನಟ ಪ್ರಜ್ವಲ್ ದೇವರಾಜ್ ನಾಯಕರಾಗಿ ನಟಿಸಿರುವ ‘ಗಣ’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ. ಪ್ರಜ್ವಲ್ ಅವರ ತಾಯಿ ಚಂದ್ರಲೇಖ ಟೀಸರ್ ಬಿಡುಗಡೆ ಮಾಡಿ, ದೇವರಾಜ್ ಸೇರಿದಂತೆ ಕುಟುಂಬದ ಸದಸ್ಯರೆಲ್ಲ ಚಿತ್ರಕ್ಕೆ ಶುಭ ಕೋರಿದ್ದು ವಿಶೇಷವಾಗಿತ್ತು.

‘ಐಟಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ನನಗೆ ಕನ್ನಡ ಚಿತ್ರ ನಿರ್ಮಾಣ ಮಾಡಬೇಕೆಂಬ ಆಸೆಯಾಯಿತು. ಹಾಗಾಗಿ ಈ ಚಿತ್ರ ನಿರ್ಮಾಣ ಮಾಡುತ್ತಿದ್ದೇನೆ. ಸಾಮಾಜಿಕ ಜಾಲತಾಣಗಳಲ್ಲಿ ಸಂಶೋಧನೆ ನಡೆಸಿ ಪ್ರಜ್ವಲ್ ಅವರ ಅಭಿಮಾನಿಗಳು ನಿರೀಕ್ಷಿಸುತ್ತಿರುವ ಚಿತ್ರ ಮಾಡಿದ್ದೇವೆ. ಚಿತ್ರೀಕರಣ ಮುಕ್ತಾಯವಾಗಿದ್ದು, ನಂತರ ಕೆಲಸಗಳು ನಡೆಯುತ್ತಿವೆ’ ಎಂದರು ನಿರ್ಮಾಪಕ ಪಾರ್ಥು.

ಪ್ರಜ್ವಲ್ ದೇವರಾಜ್

ತೆಲುಗಿನ ಹರಿಪ್ರಾಸಾದ್ ಜಕ್ಕ ಈ ಚಿತ್ರದ ನಿರ್ದೇಶಕರು. ‘1993 ಹಾಗೂ 2023 ಎರಡು ಕಾಲಘಟ್ಟದಲ್ಲಿ ಈ ಕಥೆ ನಡೆಯುತ್ತದೆ. ಸಮಯದ ಜೊತೆ ಹೋರಾಡುವ ಚಿತ್ರ ಎನ್ನಬಹುದು. ವಿಭಿನ್ನ ಜಾನರ್‌ನ ಕಥೆ. ನನ್ನ ಜೊತೆ ಅಭಿನಯಿಸಿರುವ ಎಲ್ಲಾ ಕಲಾವಿದರ ಅಭಿನಯ ಹಾಗೂ ತಂತ್ರಜ್ಞರ ಕಾರ್ಯವೈಖರಿ ಅದ್ಭುತವಾಗಿದೆ. ನಮ್ಮ ಚಿತ್ರಕ್ಕೆ ನಿಮ್ಮ ಪ್ರೋತ್ಸಾಹವಿರಲಿ’ ಎಂದರು ನಟ ಪ್ರಜ್ವಲ್.

ವೇದಿಕಾ, ಕೃಷಿ ತಾಪಂಡ ಚಿತ್ರದ ನಾಯಕಿಯರು. ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ಜೈ ಆನಂದ್ ಛಾಯಾಗ್ರಹಣ, ಹರೀಶ್ ಕೊಮ್ಮೆ ಸಂಕಲನ ಚಿತ್ರಕ್ಕಿದೆ. ಶ್ರೀನಿವಾಸ್ ಚಿಕ್ಕಬಳ್ಳಾಪುರ ಈ ಚಿತ್ರದ ಕಾರ್ಯಕಾರಿ ನಿರ್ಮಾಪಕರು.

ಸಿನಿ ಸಂಕ್ಷಿಪ್ತ

ಮಾಫಿಯಾ ಪೋಸ್ಟರ್ ಬಿಡುಗಡೆ: ಬೆಂಗಳೂರು ಕುಮಾರ್ ಫಿಲ್ಮ್ಸ್ ಲಾಂಛನದಲ್ಲಿ ಕುಮಾರ್ ಬಿ. ನಿರ್ಮಿಸಿರುವ, ಪ್ರಜ್ವಲ್ ದೇವರಾಜ್ ನಾಯಕರಾಗಿ ನಟಿಸಿರುವ ಹಾಗೂ ಲೋಹಿತ್ ಎಚ್. ನಿರ್ದೇಶಿಸಿರುವ ಸಿನಿಮಾ ‘ಮಾಫಿಯಾ’. ಪ್ರಜ್ವಲ್ ಜನ್ಮದಿನದ ಸಂದರ್ಭದಲ್ಲಿ ಚಿತ್ರದ ಹೊಸ ಪೋಸ್ಟರ್ ಬಿಡುಗಡೆಯಾಗಿದೆ. ಚಿತ್ರದ ಚಿತ್ರೀಕರಣ ಮುಕ್ತಾಯವಾಗಿ, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಬಿರುಸಿನಿಂದ ನಡೆಯುತ್ತಿವೆ. ಚಿತ್ರವನ್ನು ಆಗಸ್ಟ್‌ನಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ಸಿದ್ಧತೆ ಆರಂಭಿಸಿದೆ. ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರ ಅದ್ದೂರಿಯಾಗಿ ನಿರ್ಮಾಣವಾಗಿದೆ. ಇದು ಅವರ ನಟನೆಯ ಮೂವತ್ತೈದನೇ ಚಿತ್ರ. ಈ ಚಿತ್ರದಲ್ಲಿ ಮೂರು ಹಾಡುಗಳಿದೆ. ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ. ಈ ಚಿತ್ರದ ತಾರಾಬಳಗದಲ್ಲಿ ಅದಿತಿ ಪ್ರಭುದೇವ, ದೇವರಾಜ್, ಸಾಧುಕೋಕಿಲ, ಶೈನ್ ಶೆಟ್ಟಿ, ವಿಜಯ್ ಚೆಂಡೂರ್, ವಾಸುಕಿ ವೈಭವ್ ಮುಂತಾದವರಿದ್ದಾರೆ ಎಂದಿದೆ ಚಿತ್ರತಂಡ.

ಮತ್ತೊಮ್ಮೆ ಕೃಷ್ಣನಾದ ‘ಗಣೇಶ’

ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 41ನೇ ಚಿತ್ರ ಸದ್ದಿಲ್ಲದೇ ಸೆಟ್ಟೇರಿದೆ. ‘ಕೃಷ್ಣಂ ಪ್ರಣಯ ಸಖಿ’ ಶೀರ್ಷಿಕೆಯ ಈ ಸಿನಿಮಾದ ಫಸ್ಟ್‌ಲುಕ್ ಇತ್ತೀಚೆಗೆ ಬಿಡುಗಡೆಯಾಗಿದೆ. ನಿರ್ದೇಶಕ ಶ್ರೀನಿವಾಸರಾಜು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರದ ಚಿತ್ರೀಕರಣ ಬೆಂಗಳೂರಿನಲ್ಲಿ ಬಿರುಸಿನಿಂದ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಮೈಸೂರು, ರಾಜಸ್ಥಾನ ಹಾಗೂ ಯುರೋಪ್‌ನಲ್ಲಿ ಚಿತ್ರೀಕರಣ ನಡೆಯಲಿದೆ ಎಂದಿದೆ ಚಿತ್ರತಂಡ. ತ್ರಿಶೂಲ್ ಎಂಟರ್‌ಟೇನ್ಮೆಂಟ್ ಲಾಂಛನದಲ್ಲಿ ಪ್ರಶಾಂತ್ ಜಿ. ರುದ್ರಪ್ಪ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಈ ಸಂಸ್ಥೆಯಿಂದ ನಿರ್ಮಾಣವಾಗುತ್ತಿರುವ ಮೂರನೇ ಚಿತ್ರವಿದು. ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಗಣೇಶ್ ಅವರಿಗೆ ನಾಯಕಿಯಾಗಿ ಮಾಳವಿಕ ನಾಯರ್ ನಟಿಸುತ್ತಿದ್ದಾರೆ. ಸಾಧುಕೋಕಿಲ, ರಂಗಾಯಣ ರಘು, ಶಶಿಕುಮಾರ್, ಶ್ರುತಿ, ಸುಧಾರಾಣಿ, ಶ್ರೀನಿವಾಸಮೂರ್ತಿ, ಶಿವಧ್ವಜ್, ಬೆನಕ ಗಿರಿ ಮುಂತಾದ ಕಲಾವಿದರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಗಣೇಶ್

‘ಸೀಸ್‌ಫೈರ್’ ಎಂದ ನೀಲ್

ಪ್ರಭಾಸ್–ಪ್ರಶಾಂತ್ ನೀಲ್ ಕಾಂಬಿನೇಷನ್‌ನ ಬಹುನಿರೀಕ್ಷಿತ ‘ಸಲಾರ್’ ಸಿನಿಮಾದ ಟೀಸರ್ ಬಿಡುಗಡೆಯಾಗಿದ್ದು, ಈ ಸಿನಿಮಾ ಕೂಡ ‘ಕೆ.ಜಿ.ಎಫ್.’ನಂತೆ ಎರಡು ಭಾಗಗಳಲ್ಲಿ ತೆರೆಕಾಣಲಿದೆ. ಸಿನಿಮಾದ ಮೊದಲ ಭಾಗಕ್ಕೆ ‘ಸೀಸ್‌ಫೈರ್’ ಎಂಬ ಅಡಿಬರಹ ನೀಡಿದ್ದಾರೆ ನೀಲ್.

ಹೊಂಬಾಳೆ ಫಿಲ್ಮ್ಸ್‌ನಡಿ ನಿರ್ಮಾಪಕ ವಿಜಯ್ ಕಿರಗಂದೂರು ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಭರ್ಜರಿ ಆ್ಯಕ್ಷನ್ ದೃಶ್ಯಗಳು ಮತ್ತು ಸಂಭಾಷಣೆಗಳಿಂದ ಕೂಡಿರುವ ಟೀಸರ್ ಬಿಡುಗಡೆಯಾದ ಕೆಲ ಗಂಟೆಗಳಲ್ಲೇ 62 ಮಿಲಿಯನ್ ವ್ಯೂಸ್ ಪಡೆದಿದೆ. ‘ಕೆ.ಜಿ.ಎಫ್.’ ಮೂಲಕ ಇಡೀ ದೇಶವೇ ಕನ್ನಡ ಚಿತ್ರರಂಗದತ್ತ ತಿರುಗಿ ನೋಡುವಂತೆ ಮಾಡಿದ್ದ ಪ್ರಶಾಂತ್ ನೀಲ್, ಈ ಬಾರಿ ‘ಸಲಾರ್’ ಮೂಲಕ ಇನ್ನೊಂದು ಹೊಸ ಪ್ರಪಂಚ ಸೃಷ್ಟಿಸಿದ್ದಾರೆ. ಹೈದರಾಬಾದ್‌ನ ರಾಮೋಜಿ ಫಿಲ್ಮ್ ಸಿಟಿ ಬಳಿ 14 ಬೃಹತ್ ಸೆಟ್‌ಗಳನ್ನು ಈ ಚಿತ್ರಕ್ಕಾಗಿ ನಿರ್ಮಿಸಿ, ಅಲ್ಲಿ ಚಿತ್ರೀಕರಣ ಮಾಡಲಾಗಿದೆ.

₹400 ಕೋಟಿ ವೆಚ್ಚ: ಕನ್ನಡದ ನಿರ್ಮಾಣ ಸಂಸ್ಥೆ, ನಿರ್ದೇಶಕರು, ತಂತ್ರಜ್ಞರು ಮತ್ತು ಕಲಾವಿದರು, ತೆಲುಗಿನ ಸ್ಟಾರ್ ನಟ ಪ್ರಭಾಸ್, ಮಲಯಾಳಂ ನಟ ಪೃಥ್ವಿರಾಜ್ ಸುಕುಮಾರನ್, ತಮಿಳಿನ ಶ್ರುತಿ ಹಾಸನ್ ಹೀಗೆ ಎಲ್ಲ ಭಾಷೆಯ ಕಲಾವಿದರು ಮತ್ತು ತಂತ್ರಜ್ಞರು ‘ಸಲಾರ್’ ಚಿತ್ರತಂಡದಲ್ಲಿದ್ದಾರೆ. ಚಿತ್ರ ಸೆಪ್ಟೆಂಬರ್ 28ರಂದು ಬಿಡುಗಡೆಯಾಗಲಿದೆ. ಸುಮಾರು ₹400 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ನಿರ್ಮಾಣ ಮಾಡಲಾಗಿದೆ ಎಂದಿದೆ ಚಿತ್ರತಂಡ.

ವಿದೇಶಗಳಲ್ಲೂ ಚಿತ್ರದ ವಿಎಫ್‌ಎಕ್ಸ್ ಕೆಲಸ ನಡೆದಿದ್ದು, ಆ್ಯಕ್ಷನ್ ದೃಶ್ಯಗಳಲ್ಲಿ ಬೇರೆ ದೇಶಗಳಿಂದ ಬಂದ ಹಲವು ನುರಿತ ಸಾಹಸ ಕಲಾವಿದರು ಕೆಲಸ ಮಾಡಿರುವುದು ಚಿತ್ರದ ವಿಶೇಷತೆಗಳಲ್ಲೊಂದು. ಜಗಪತಿ ಬಾಬು, ಈಶ್ವರಿ ರಾವ್, ಶ್ರೀಯಾ ರೆಡ್ಡಿ ಮುಂತಾದವರು ಈ ಚಿತ್ರದಲ್ಲಿ ರವಿ ಬಸ್ರೂರು ಅವರ ಸಂಗೀತ, ಭುವನ್ ಗೌಡ ಛಾಯಾಚಿತ್ರಗ್ರಹಣ, ಶಿವಕುಮಾರ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಪ್ರಶಾಂತ್ ನೀಲ್ ಹಾಗೂ ಪ್ರಭಾಸ್

ಪ್ರೇಮಿಗಳ ಕಾವಲಿನ ಕಥೆಯಿದು...

ಪ್ರೀತಿಸಿ ಮದುವೆಯಾಗುವುದೊಂದೇ ಪ್ರೀತಿಯ ಉದ್ದೇಶವಲ್ಲ. ಒಬ್ಬರಿಗೊಬ್ಬರು ಜೀವನಪೂರ್ತಿ ಕಾವಲುಗಾರರಾಗಿರಬೇಕು ಎಂಬ ಸಂದೇಶ ಹೊಂದಿರುವ ‘ಕಾವಲು’ ಚಿತ್ರದ ಪೋಸ್ಟರ್ ಇತ್ತೀಚೆಗೆ ಬಿಡುಗಡೆಗೊಂಡಿದೆ. ಕಿರುತೆರೆಯಲ್ಲಿ ಕೆಲಸ ಮಾಡಿ ಅನುಭವ ಹೊಂದಿರುವ ಜಗ್ಗಿಮುಡೇನಹಳ್ಳಿ ಈ ಚಿತ್ರದ ನಿರ್ದೇಶಕರು. ಇಂಚರ ಎಂಟರ್‌ಪ್ರೈಸಸ್ ಮೂಲಕ ಉದ್ಯಮಿ ಆರ್.ವಾಸುದೇವರಡ್ಡಿ, ಸವಿತಾರೆಡ್ಡಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘ಪ್ರೀತಿ ಮಾಡಿದರೆ ಮದುವೆಯಾಗುವುದೇ ಪರಮ ಗುರಿ ಎಂದುಕೊಂಡಿರುತ್ತಾರೆ. ಆದರೆ ಪ್ರೇಮಿಗಳು ಒಬ್ಬರಿಗೊಬ್ಬರು ಕನಸಿಗೆ, ಸಾಧನೆಗೆ ಮೆಟ್ಟಲಾಗಿರಬೇಕು. ರಕ್ಷಕರಾಗಿ, ಸಂಗಾತಿಯಾಗಿ ಜೀವನಪೂರ್ತಿ ಕಾವಲುಗಾರರಾಗಿ, ಏನೇ ಕಷ್ಟ ಬಂದರೂ ಬೆಂಗಾವಲಾಗಿರಬೇಕು ಎಂಬುದನ್ನು ಈ ಕಥೆ ಹೇಳುತ್ತದೆ. ವಿದ್ಯೆ ಎನ್ನುವುದು ಹೆಣ್ಣುಮಕ್ಕಳಿಗೆ ಎಷ್ಟು ಮುಖ್ಯ ಎಂಬುದನ್ನೂ ಹೇಳಿದ್ದೇವೆ’ ಎನ್ನುತ್ತಾರೆ ನಿರ್ದೇಶಕ ಜಗ್ಗಿಮುಡೇನಹಳ್ಳಿ.

ರಣ್ವಿತ್ ಈ ಚಿತ್ರದ ನಾಯಕ. ಸಾತ್ವಿಕ ಓಂಪ್ರಕಾಶ್‌ರಾವ್, ಪವಿತ್ರಾ ಬಿ.ನಾಯಕ್ ನಾಯಕಿಯರು. ಪ್ರಮೋದ್ ಶೆಟ್ಟಿ, ಕಾರ್ತಿಕ್, ಸುಷ್ಮಿತಾ ಮುಂತಾದವರು ಚಿತ್ರದಲ್ಲಿದ್ದಾರೆ. ಬಿ.ಆರ್.ಸುರೇಂದ್ರನಾಥ್ ಸಂಗೀತ, ಮಧು ಸುಗುಟ ಛಾಯಾಗ್ರಹಣ, ಆಕಾಶ್ ಮಹೇಂದ್ರಕರ್ ಅವರ ಸಂಕಲನ ಚಿತ್ರಕ್ಕಿದೆ. ಕಳಸ, ಹಾರೋಹಳ್ಳಿ, ಕನಕಪುರ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ.

ಮಹಿಳೆಯರ ಸಾರಥ್ಯದ ‘ಆಚಾರ್ & ಕೋ.’

ಸಿನಿಮಾ ಕನಸು ಹೊತ್ತು ಬರುವ ಹೊಸಬರಿಗೆ ಬೆನ್ನೆಲುಬಾಗಿ ನಿಲ್ಲುತ್ತಿರುವ ಪಿಆರ್‌ಕೆ ಪ್ರೊಡಕ್ಷನ್ಸ್ ಇದೀಗ ಮತ್ತೊಂದು ಹೊಸ ಚಿತ್ರದೊಂದಿಗೆ ಪ್ರೇಕ್ಷಕರೆದುರಿಗೆ ಬರುತ್ತಿದೆ. ಸಿಂಧು ಶ್ರೀನಿವಾಸಮೂರ್ತಿ ಅವರ ಚೊಚ್ಚಲ ನಿರ್ದೇಶನದ ‘ಆಚಾರ್ & ಕೋ.’ ಚಿತ್ರ ಇದೇ ಜುಲೈ 28ಕ್ಕೆ ತೆರೆಕಾಣುತ್ತಿದೆ.

ಸಿಂಧು ಶ್ರೀನಿವಾಸಮೂರ್ತಿ ಅವರು ಈ ಚಿತ್ರದ ಬರವಣಿಗೆ, ನಿರ್ದೇಶನದ ಜವಾಬ್ದಾರಿಯ ಜೊತೆಗೆ ತಾವೇ ಮುಖ್ಯ ಪಾತ್ರವನ್ನೂ ನಿರ್ವಹಿಸಿರುವುದು ವಿಶೇಷ. ‘ಆಚಾರ್ & ಕೋ.’ ಚಿತ್ರದ ಹೆಚ್ಚಿನ ವಿಭಾಗಗಳಲ್ಲಿ ಮಹಿಳೆಯರೇ ಕೆಲಸ ಮಾಡಿದ್ದಾರೆ. ಈ ಚಿತ್ರಕ್ಕೆ ನಿರ್ಮಾಪಕರು, ನಿರ್ದೇಶಕರು, ಸಂಗೀತ ನಿರ್ದೇಶಕರು, ಮುಖ್ಯ ಪಾತ್ರಧಾರಿ, ಸೌಂಡ್ ಎಂಜಿನಿಯರ್, ವಸ್ತ್ರ ವಿನ್ಯಾಸಕರು, ಕ್ರಿಯಾಶೀಲ ನಿರ್ಮಾಪಕರು ಮತ್ತು ಇನ್ನೂ ಹಲವು ವಿಭಾಗಗಳನ್ನು ಮಹಿಳೆಯರೇ ನಿಭಾಯಿಸಿದ್ದು, ಅನೇಕ ಮಹಿಳಾ ಪ್ರತಿಭೆಗಳ ಸಂಗಮ ಇದಾಗಿದೆ ಎಂದಿದೆ ಚಿತ್ರತಂಡ.

1960ರ ಕಾಲಘಟ್ಟದಲ್ಲಿ ಬೆಂಗಳೂರಿನಲ್ಲಿ ನಡೆಯುವ ಈ ಕಥೆ ಒಂದು ಕುಟುಂಬ ತಮ್ಮ ಕನಸುಗಳನ್ನು ಬೆನ್ನತ್ತುವ ಹಾದಿಯಲ್ಲಿ ಹೇಗೆ ಸವಾಲುಗಳನ್ನು ಎದುರಿಸುತ್ತದೆ, ಸಂಪ್ರದಾಯಗಳನ್ನೂ ಮೀರದೇ ಆಧುನಿಕ ಜಗತ್ತಿನ ಅವಶ್ಯಕತೆಗಳನ್ನೂ ಹೇಗೆ ನಿಭಾಯಿಸಿ ಗೆಲ್ಲುತ್ತದೆ ಎಂಬುದನ್ನು ಹೇಳುವ ಒಂದು ಭಾವನಾತ್ಮಕ ಚಿತ್ರ. ಭಾವುಕತೆಯಷ್ಟೇ ಹಾಸ್ಯವೂ ಚಿತ್ರದಲ್ಲಿದೆ ಎನ್ನುತ್ತದೆ ಚಿತ್ರತಂಡ.

ವಸ್ತ್ರವಿನ್ಯಾಸ ಮತ್ತು ಕಲಾ ನಿರ್ದೇಶನದ ಮೂಲಕ 1960 ಮತ್ತು 70ರ ದಶಕದ ಬೆಂಗಳೂರನ್ನು ತೆರೆಯ ಮೇಲೆ ಸಮರ್ಥವಾಗಿ ಮರುಸೃಷ್ಟಿ ಮಾಡಲಾಗಿದೆ. ಈ ಕುಟುಂಬದ ಕಥೆಯನ್ನು ನೋಡುತ್ತಾ ಪ್ರೇಕ್ಷಕರು ತಮಗೇ ಗೊತ್ತಿಲ್ಲದಂತೆ ಅಂದಿನ ಕಾಲಕ್ಕೆ ರವಾನೆಯಾಗುತ್ತಾರೆ, ಆ ಕುಟುಂಬದ ಪಯಣದಲ್ಲಿ ತಾವೂ ಭಾಗಿಯಾಗುತ್ತಾರೆ ಎಂಬ ಭರವಸೆ ಚಿತ್ರತಂಡಕ್ಕಿದೆ.

‘ಸಿಂಧು ಅವರ ಕ್ರಿಯಾಶೀಲತೆ ಮತ್ತು ಸಿನಿಮಾದ ಬಗ್ಗೆ ಅವರಿಗಿರುವ ಬದ್ಧತೆಯೇ ನಾವು ಅವರೊಂದಿಗೆ ಕೈ ಜೋಡಿಸಲು ಮುಖ್ಯ ಕಾರಣ. ಎಲ್ಲಾ ವರ್ಗದ ಪ್ರೇಕ್ಷಕರನ್ನು ಮುಟ್ಟುವ, ಎಲ್ಲರಿಗೂ ಆಪ್ತವಾಗುವ ಒಂದು ಕಥೆಯನ್ನು ಹೊತ್ತು ತಂದಿದ್ದೇವೆ’ ಎಂದಿದ್ದಾರೆ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್.

ಬಿಂದುಮಾಲಿನಿ ನಾರಾಯಣಸ್ವಾಮಿ ಸಂಗೀತ ನಿರ್ದೇಶನ, ಇಂಚರಾ ಸುರೇಶ್ ವಸ್ತ್ರ ವಿನ್ಯಾಸ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ ಹಾಗೂ ಅಭಿಮನ್ಯು ಸದಾನಂದ್ ಅವರ ಛಾಯಾಚಿತ್ರಗ್ರಹಣ ‘ಆಚಾರ್ & ಕೋ.’ ಚಿತ್ರಕ್ಕಿದೆ. ಸೌಂಡ್ ಇಂಜಿನಿಯರ್ ಆಗಿ ಹೇಮಾ ಸುವರ್ಣ ಕಾರ್ಯನಿರ್ವಹಿಸಿದ್ದಾರೆ.

ಕೇರಳದ ಕಾಸರಗೂಡಿನ ಹೊಸಅಂಗಡಿಯಲ್ಲಿ ನಿರ್ಮಾಣ ಹಂತದಲ್ಲಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರಿ ಮಳೆಗೆ ಭೂಕುಸಿತ ಉಂಟಾಗಿ ಒಂದು ಮನೆ ಬಿದ್ದುಹೋಗಿದೆ. ಹೆದ್ದಾರಿಯಲ್ಲಿ ಮಳೆ ನೀರು ನಿಂತು ಕಾಮಗಾರಿ ಸ್ಥಗಿತಗೊಂಡಿದೆ – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್



ಹೊಸನಗರ ತಾಲ್ಲುಕಿನ ಗಡಿಭಾಗ ಹುಲಿಕಲ್ ಘಾಟ್‌ನಲ್ಲಿರುವ ಬಾಳೆಬರೇ ಜಲಪಾತ ದುಮ್ಮಿಕ್ಕುತ್ತಿದೆ

ಹಲವು ಗ್ರಾಮಗಳು ಜಲಾವೃತ ● 200ಕ್ಕೂ ಹೆಚ್ಚು ಜನರ ಸ್ಥಳಾಂತರ

ಉಡುಪಿಯಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು ಜಿಲ್ಲೆಯಾದ್ಯಂತ ಭಾರಿ ಮಳೆ ಗುರುವಾರವೂ ಮುಂದುವರಿದಿದ್ದು, ತುಂಗಾ, ಭದ್ರಾ, ಲಿಂಗನಮಕ್ಕಿ ಜಲಾಶಯಗಳಿಗೆ ಒಳಹರಿವು ಹೆಚ್ಚಳವಾಗಿದೆ.

ಬುಧವಾರ ರಾತ್ರಿಯಿಡೀ ಸುರಿದ ಭಾರಿ ಮಳೆಗೆ ಉಡುಪಿ ಜಿಲ್ಲೆಯ ಬನ್ನಂಜೆ, ಮಠದ ಬೆಟ್ಟು, ಮೂಡನಿಡಂಬೂರು, ಗುಂಡಿಬೈಲು, ಕಲ್ಸಂಕ, ಉದ್ಯಾವರ, ತೆಂಕಪೇಟೆ, ಬೈಲೂರು, ಕಿದಿಯೂರು, ಅಂಬಲಪಾಡಿ, ಕಿದಿಯೂರು, ಕೆಮ್ಮೂರು, ಕೊಂಡಕೂರಿನಲ್ಲಿ ನೂರಾರು ಮನೆಗಳಿಗೆ ಮಳೆಯ ನೀರು ನುಗ್ಗಿತು.

ಬೆಳಗಿನ ಜಾವ ರಕ್ಷಣಾ ಕಾರ್ಯಾಚರಣೆಗಿಳಿದ ಮಲ್ಪೆ ಹಾಗೂ ಉಡುಪಿ ಅಗ್ನಿಶಾಮಕ ದಳದ 30ಕ್ಕೂ ಹೆಚ್ಚು ಸಿಬ್ಬಂದಿ ಮೂರು ಬೋಟ್‌ಗಳನ್ನು ಬಳಸಿ, ನೆರೆಯಲ್ಲಿ ಸಿಲುಕಿದ್ದ 200ಕ್ಕೂ ಹೆಚ್ಚು ಜನರನ್ನು ರಕ್ಷಣೆ ಮಾಡಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದರು.

ಉಡುಪಿ ತಾಲ್ಲೂಕಿನಲ್ಲಿ 115ಕ್ಕೂ ಹೆಚ್ಚು ಮಂದಿ ಹಾಗೂ ಕಾಪು ತಾಲ್ಲೂಕಿನ ಪಾಂಗಳ, ಉಳಿಯಾರಗೋಳಿ, ಮಲ್ಲಾರು, ಎಲ್ಲೂರು, ನಂದಿಕೂರು, ಪಾದೆಬೆಟ್ಟು, ಮಟ್ಟು, ತೆಂಕ, ಮಜೂರಿನಲ್ಲಿ 154 ಸಂತ್ರಸ್ತರನ್ನು ರಕ್ಷಿಸಲಾಯಿತು. ಸಂತ್ರಸ್ತರಿಗೆ ಉಡುಪಿಯ ಬನ್ನಂಜೆ ಮಹಾಲಿಂಗೇಶ್ವರ ದೇವಸ್ಥಾನ ಹಾಗೂ ಕಾಪು ತಾಲ್ಲೂಕಿನಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಪ್ರವಾಸಿತಾಣಗಳಾದ ಬಪ್ಪನಾಡು ಶ್ರೀದುರ್ಗಾಪರಮೇಶ್ವರಿ ದೇವಸ್ಥಾನ, ಸಸಿಹಿತ್ಲು ಶ್ರೀಭಗವತಿ ದೇವಸ್ಥಾನ, ಶಿಮಂತೂರು ಶ್ರೀಆದಿ ಜನಾರ್ದನ ದೇವಸ್ಥಾನಗಳು ಜಲಾವೃತಗೊಂಡಿವೆ.

ಕುಮಾರಧಾರ ನದಿ ಉಕ್ಕಿ ಹರಿಯುತ್ತಿದ್ದು, ಕುಕ್ಕೆ ಸುಬ್ರಹ್ಮಣ್ಯದ ಸ್ನಾನ ಘಟ್ಟ ಭಾಗಶಃ ಮುಳುಗಡೆಯಾಗಿದೆ. ಭಕ್ತರು ನೀರಿಗಿಳಿಯದಂತೆ ಸೂಚನೆ ನೀಡಲಾಗಿದೆ. ಪುತ್ತೂರು ತಾಲ್ಲೂಕಿನ ಇರ್ದೆ ಗ್ರಾಮದ ಚೆಲ್ಯಡ್ಕದಲ್ಲಿರುವ ಪರ್ಲಡ್ಕ-ಕುಂಜೂರುಪಂಜ- ಪಾಣಾಜೆ ರಸ್ತೆಯ ಸೇತುವೆ ಮುಳುಗಡೆಯಾಗಿತ್ತು. ಸುಳ್ಯ ತಾಲ್ಲೂಕಿನ ಬಾಳುಗೋಡು ಗ್ರಾಮದ ಪದಕದಲ್ಲಿ ಸೇತುವೆ ಮುಳುಗಡೆಯಾಗಿ ವಾಹನಗಳ ಸಂಚಾರಕ್ಕೆ ಕೆಲ ಹೊತ್ತು ತೊಂದರೆ ಉಂಟಾಗಿತ್ತು.

ಕೇರಳದ ಕಾಸರಗೋಡು ಜಿಲ್ಲೆಯ ಮಧುವಾಹಿನಿ ನದಿ ಉಕ್ಕಿ ಹರಿದು ಮಧೂರು ಶ್ರೀಮದನಂತೇಶ್ವರ ವಿನಾಯಕ ದೇವಾಲಯ ಜಲಾವೃತವಾಗಿದೆ. ಹೊಸಂಗಡಿಯ ರಾಷ್ಟ್ರೀಯ ಹೆದ್ದಾರಿ ನವೀಕರಣ ಕಾಮಗಾರಿ ನಡೆಯುತ್ತಿರುವ ಕೆಲವು ಪ್ರದೇಶಗಳಲ್ಲಿ ಜಲಾವೃತವಾಗಿವೆ. ಬಂದ್ಯೋಡು ಬಳಿಯ ಜೋಡುಕಲ್ಲು-ಮಡಂತೂರು-ದೇರ್ಬಳ ರಸ್ತೆ ಕುಸಿದಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯ ಆರ್ಭಟ ಜೋರಾಗಿದ್ದು, ನದಿಗಳು ಭರ್ತಿಯಾಗಿ ಹರಿಯುತ್ತಿವೆ. 50ಕ್ಕೂ ಹೆಚ್ಚು ಅಡಿಕೆ ಮರಗಳು ಮುರಿದು ಬಿದ್ದಿವೆ.

ಜಲಾಶಯಗಳಿಗೆ ಒಳಹರಿವು ಹೆಚ್ಚಳ: ಶಿವಮೊಗ್ಗ ಜಿಲ್ಲೆಯಲ್ಲಿ ಆರಿದ್ರಾ ಮಳೆ ಮತ್ತೆ ಬಿರುಸು ಪಡೆದಿದ್ದು, ಜಲಾಶಯಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಲಕ್ಕವಳ್ಳಿಯ ಭದ್ರಾ ಜಲಾಶಯದ ನೀರಿನ ಮಟ್ಟ 138 ಅಡಿಗೆ ಏರಿದ್ದು, ಒಳಹರಿವು 6,479 ಕ್ಯುಸೆಕ್‌ಗೆ ಏರಿಕೆಯಾಗಿದೆ. ಲಿಂಗನಮಕ್ಕಿಯಲ್ಲಿ ಗುರುವಾರ 15,466 ಕ್ಯುಸೆಕ್ ಒಳಹರಿವು ದಾಖಲಾಗಿದೆ. ಸದ್ಯ 1,698 ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ನಂದಿನಿ ನದಿಯು ಕಟೀಲು ಶ್ರೀದುರ್ಗಾಪರಮೇಶ್ವರಿ ದೇವಸ್ಥಾನವನ್ನು ಸುತ್ತುವರಿದು ಹರಿಯುವ ದೃಶ್ಯ ಗುರುವಾರ ಕಂಡುಬಂದಿದ್ದು ಹೀಗೆ

ಉಡುಪಿಯ ಗುಂಡಿಬೈಲಿನಲ್ಲಿ ನೆರೆಗೆ ಸಿಲುಕಿದ್ದವರನ್ನು ಅಗ್ನಿಶಾಮಕ ಸಿಬ್ಬಂದಿ ಬೋಟ್‌ನಲ್ಲಿ ಸುರಕ್ಷಿತವಾಗಿ ಕರೆತಂದರು

ಶಾಲೆ–ಕಾಲೇಜಿಗೆ ರಜೆ

ದಕ್ಷಿಣ ಕನ್ನಡ ಜಿಲ್ಲೆಯ ಶಾಲಾ–ಕಾಲೇಜುಗಳಿಗೆ, ಉಡುಪಿ ಜಿಲ್ಲೆಯ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪ, ಕಳಸ ಮತ್ತು ಚಿಕ್ಕಮಗಳೂರು ತಾಲ್ಲೂಕಿನ 5 ಹೋಬಳಿಗಳ ಶಾಲೆ ಮತ್ತು ಅಂಗನವಾಡಿಗಳಿಗೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದ ತಾಲ್ಲೂಕುಗಳ ಶಾಲಾ–ಕಾಲೇಜುಗಳಿಗೆ 7ರಂದು ರಜೆ ಘೋಷಿಸಲಾಗಿದೆ.

ಚಾರಣಕ್ಕೆ ನಿಷೇಧ

ಭಾರಿ ಮಳೆಯಾಗುತ್ತಿದ್ದು, ಕಲ್ಲುಗಳು ಜಾರುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ನಡ ಗ್ರಾಮದ ಗಡಾಯಿಕಲ್ಲು (ಜಮಾಲಾಬಾದ್/ ನರಸಿಂಹಗಡ) ಚಾರಣಕ್ಕೆ ತಾತ್ಕಾಲಿಕ ನಿಷೇಧ ಹೇರಲಾಗಿದೆ. ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ವ್ಯಾಪ್ತಿಯಲ್ಲಿರುವ ಗಡಾಯಿಕಲ್ಲಿಗೆ ಜುಲೈ 7ರಿಂದ ಮುಂದಿನ ಆದೇಶದ ವರೆಗೆ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ವನ್ಯಜೀವಿ ವಿಭಾಗದ ಬೆಳ್ತಂಗಡಿ ವಲಯ ಅರಣ್ಯ ಅಧಿಕಾರಿ ಸ್ವಾತಿ ತಿಳಿಸಿದ್ದಾರೆ.

ಕೆಲವೆಡೆ ಸೇತುವೆಗಳು ಮುಳುಗಡೆ

ಹುಬ್ಬಳ್ಳಿ/ಮಡಿಕೇರಿ: ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನಲ್ಲಿ 13 ಮನೆಗಳಿಗೆ ಹಾನಿಯಾಗಿದೆ. ಕಾರವಾರ ತಾಲ್ಲೂಕಿನ ಬಿಣಗಾದ ಒಕ್ಕಲು ಕೇರಿ, ಇಡೂರು ಗ್ರಾಮಗಳು ಜಲಾವೃತಗೊಂಡಿವೆ.

ಗಂಗಾವಳಿ ನೀರಿನ ಮಟ್ಟ ಏರಿಕೆಯಾಗಿ ಯಲ್ಲಾಪುರ ತಾಲ್ಲೂಕಿನ ಗುಳ್ಳಾಪುರ-ಹೆಗ್ಗಾರ ಸಂಪರ್ಕಿಸುವ ತಾತ್ಕಾಲಿಕ ಸೇತುವೆ ಮುಳುಗಿದೆ. ಇದರಿಂದ ಅಂಕೋಲಾ ತಾಲ್ಲೂಕಿನ ಐದಕ್ಕೂ ಹೆಚ್ಚು ಗ್ರಾಮಗಳಿಗೆ ಯಲ್ಲಾಪುರದ ಸಂಪರ್ಕ ತಪ್ಪಿದೆ. ಶಿರಸಿ ತಾಲ್ಲೂಕಿನ ನೀರಕೋಣೆಯಲ್ಲಿ ದೊಡ್ಡ ಗಾತ್ರದ ಮರ ಉರುಳಿದ್ದು, ರಸ್ತೆ ಸಂಪರ್ಕ ಕಡಿತವಾಗಿದೆ.

ಕೊಡಗು ಜಿಲ್ಲೆಯಲ್ಲಿ ಗುರುವಾರ ಭಾರಿ ಮಳೆ ಸುರಿದಿದ್ದು ಮೂರ್ನಾಡು– ಪಾರಣೆ ಮಧ್ಯದ ಬಲಮುರಿಯ ಕಿರು ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ. ಆದರೆ, ಇಲ್ಲಿ ಎತ್ತರದ ಸೇತುವೆ ಇದ್ದು, ಸಂಚಾರಕ್ಕೆ ತೊಂದರೆಯಾಗಿಲ್ಲ. ಸಮೀಪದ ಕಕ್ಕಬೆಯಲ್ಲಿ ಕಕ್ಕಬೆ ಹೊಳೆ ತುಂಬಿ ಹರಿಯುತ್ತಿದೆ. ನಾಲಡಿ ಗ್ರಾಮದ ಸಂಪರ್ಕ ರಸ್ತೆಯ ಮೇಲೂ ನೀರು ಉಕ್ಕಿ ಹರಿಯುತ್ತಿದೆ.

ಲಾಂಚ್‌ನಲ್ಲಿ ವಾಹನ ಸಾಗಾಟ ಇಂದಿನಿಂದ

ಶಿವಮೊಗ್ಗ: ಶರಾವತಿ ಹಿನ್ನೀರಿನ ಹೊಳೆಬಾಗಿಲು- ಅಂಬಾರಗೋಡ್ಲು ಮಾರ್ಗದ ಸಿಗಂದೂರು ಲಾಂಚ್‌ನಲ್ಲಿ ವಾಹನ ಸಾಗಾಟಕ್ಕೆ ಶುಕ್ರವಾರದಿಂದ ಅವಕಾಶ ಕಲ್ಪಿಸಲಾಗಿದೆ ಎಂದು ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ ಮಾಹಿತಿ ನೀಡಿದೆ.

ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಮಟ್ಟ ಕುಸಿದು ಶರಾವತಿ ಹಿನ್ನೀರಿನಲ್ಲೂ ನೀರಿನ ಕೊರತೆ ಉಂಟಾಗಿದ್ದರಿಂದ ಲಾಂಚ್ ಸೇವೆಯಲ್ಲಿ ವ್ಯತ್ಯಯ ಉಂಟಾಗಿತ್ತು. ಸುರಕ್ಷತೆಯ ದೃಷ್ಟಿಯಿಂದ ಜೂನ್ 14ರಿಂದ ಸಿಗಂದೂರು ಲಾಂಚಿನಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ಹೇರಲಾಗಿತ್ತು.

ಉಚಿತ ಪ್ರಯಾಣಕ್ಕೆ ಬುರ್ಖಾ ತೊಟ್ಟ ವ್ಯಕ್ತಿ

ಕುಂದಗೋಳ (ಧಾರವಾಡ): ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಲು ಬುರ್ಖಾ ತೊಟ್ಟಿದ್ದ ವೀರಭದ್ರಯ್ಯ ನಿಂಗಯ್ಯ (58) ಎಂಬವರನ್ನು ಸಂಶಿಯ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಗುರುವಾರ ಗ್ರಾಮಸ್ಥರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಬಸ್ ನಿಲ್ದಾಣದಲ್ಲಿ ಕೂತಿರುವುದನ್ನು ಗಮನಿಸಿದ ಸ್ಥಳೀಯರಿಗೆ 'ಬುರ್ಖಾ ತೊಟ್ಟ ವ್ಯಕ್ತಿ ಮಹಿಳೆಯಲ್ಲ, ಪುರುಷ' ಎಂದು ಗೊತ್ತಾಗಿದೆ. ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಲು ಮಾಡಿದ ತಂತ್ರ ಎಂದು ಅನುಮಾನಗೊಂಡು ಗ್ರಾಮಸ್ಥರು ಹಿಡಿದು, ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

'ಬುರ್ಖಾ ತೊಟ್ಟಿದ್ದ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಗೋಲಗೇರಿಯ ವೀರಭದ್ರಯ್ಯ ನಿಂಗಯ್ಯ ಬೆಂಗಳೂರಿನಿಂದ ರೈಲಿನಲ್ಲಿ ಬಂದು ಸಂಶಿಯಲ್ಲಿ ಇಳಿದಿದ್ದರು. ರೈಲು ನಿಲ್ದಾಣದಲ್ಲಿ ಸಿಕ್ಕ ಹಳೆಯ ಚೀಲದಲ್ಲಿ ಇದ್ದ ಬುರ್ಖಾ ತೊಟ್ಟು ಬಸ್ ನಿಲ್ದಾಣಕ್ಕೆ ಬಂದು ಕೂತಿದ್ದು, ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡುತ್ತಾರೆ ಎಂಬುದು ವಿಚಾರಣೆಯಿಂದ ಗೊತ್ತಾಗಿದೆ' ಎಂದು ಕುಂದಗೋಳ ಠಾಣೆ ಪೊಲೀಸರು 'ಪ್ರಜಾವಾಣಿ'ಗೆ ತಿಳಿಸಿದರು.

ಕುಂದಗೋಳ ತಾಲ್ಲೂಕಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕೂತಿದ್ದ ಬುರ್ಖಾಧಾರಿ ವ್ಯಕ್ತಿ

ಪೊಲೀಸ್ ವರ್ಗಕ್ಕೆ ಶಿಫಾರಸು ಪತ್ರ ಬರೆದ ಶಾಸಕ ರಾಯರಡ್ಡಿ

ಕೊಪ್ಪಳ: ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಯನ್ನು ವರ್ಗಾವಣೆ ಮಾಡಿ ಎಂದು ಜಿಲ್ಲೆಯ ಯಲಬುರ್ಗಾ ಶಾಸಕ ಬಸವರಾಜ ರಾಯರಡ್ಡಿ ಅವರು ಬಳ್ಳಾರಿ ಐಜಿಪಿಗೆ ಬರೆದಿರುವ ಶಿಫಾರಸು ಪತ್ರ ಸಾಮಾಜಿಕ ತಾಣಗಳಲ್ಲಿ ಹರಿದಾಡಿದೆ.

ಯಾವ ಸಿಬ್ಬಂದಿಯನ್ನು ಯಾವ ಸ್ಥಳಕ್ಕೆ ನಿಯೋಜಿಸಬೇಕು ಎನ್ನುವುದನ್ನೂ ಶಾಸಕರೇ ಸೂಚಿಸಿದ್ದು ಚರ್ಚೆಗೆ ಗ್ರಾಸವಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ರಾಯರಡ್ಡಿ, 'ವರ್ಗಾವಣೆ ಮಾಡುವಂತೆ ಪತ್ರ ಬರೆದಿದ್ದು ನಿಜ. ಇದರಲ್ಲಿ ನನ್ನ ಹಿತಾಸಕ್ತಿ ಏನಿಲ್ಲ. ಸಾರ್ವಜನಿಕರ ದೂರು, ನೌಕರರ ಸಂಬಂಧಿಕರ ಕೋರಿಕೆ ಮತ್ತು ನಮ್ಮ ಪಕ್ಷದ ಕಾರ್ಯಕರ್ತರ ಬೇಡಿಕೆಗೆ ಮಣಿದು ಪತ್ರ ಬರೆದಿದ್ದೇನೆ' ಎಂದರು.

'ವರ್ಗಾವಣೆಯು ಕಳೆದ 20 ವರ್ಷಗಳಿಂದ ಎಲ್ಲಾ ಸರ್ಕಾರದಲ್ಲಿ ನಡೆದುಕೊಂಡ ಬಂದ ವ್ಯವಸ್ಥಿತ ದಂಧೆಯಾಗಿದೆ. ಈ ಕೆಟ್ಟ ಪರಂಪರೆಗೆ ಕಡಿವಾಣ ಹಾಕಬೇಕೆಂಬುದು ನನ್ನ ವೈಯಕ್ತಿಕ ಒತ್ತಾಯವಿದೆ. ಇತ್ತೀಚೆಗೆ ಇದೊಂದು ಉದ್ದಿಮೆಯಂತೆ ಆಗಿದೆ. ಇದು ಕೇವಲ ನನ್ನ ಕ್ಷೇತ್ರದಲ್ಲಿ ಮಾತ್ರವಲ್ಲ, ರಾಜ್ಯದ ಎಲ್ಲ ಪಕ್ಷಗಳ ಶಾಸಕರು ಶಿಫಾರಸು ಮಾಡುತ್ತಿದ್ದಾರೆ' ಎಂದಿದ್ದಾರೆ.

ಬಸವರಾಜ ರಾಯರಡ್ಡಿ

'ವರ್ಗಾವಣೆಗೆ ಪಕ್ಷದ ಕಾರ್ಯಕರ್ತರು ಹಾಕುತ್ತಿರುವ ಒತ್ತಡಕ್ಕೆ ಎಲ್ಲಾ ಜನಪ್ರತಿನಿಧಿಗಳು ಸಿಲುಕುತ್ತಿದ್ದಾರೆ. ಒತ್ತಡಕ್ಕೆ ಮಣಿದು ಅನಿವಾರ್ಯವಾಗಿ ಮನಸ್ಸಿನ ವಿರುದ್ಧವಾಗಿ ನಡೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ವರ್ಗಾವಣೆ ದಂಧೆಗೆ ಕಡಿವಾಣದ ಅಗತ್ಯವಿದೆ. ಸರ್ಕಾರ ಈ ಬಗ್ಗೆ ಸ್ಪಷ್ಟವಾದ ನಿಯಮಾವಳಿ ರೂಪಿಸಬೇಕು. ವರ್ಗಾವಣೆ ಬಯಸಿ ಬರುವ ಸರ್ಕಾರಿ ನೌಕರರನ್ನು ಅಮಾನತು ಮಾಡುವ ಕಠಿಣ ಕ್ರಮ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟರು.

ಅಪಹರಣ: ₹5 ಕೋಟಿಗೆ ಬೇಡಿಕೆ

ಮಾಲೂರು (ಕೋಲಾರ): ಪಟ್ಟಣದ ಮಾರುತಿ ಬಡಾವಣೆ ನಿವಾಸಿ, ಇಟ್ಟಿಗೆ ಕಾರ್ಖಾನೆ ಮಾಲೀಕ ಟಿಂಬರ್ ಬಾಬು (63) ಎಂಬವರನ್ನು ದುಷ್ಕರ್ಮಿಗಳು ಅಪಹರಿಸಿ ₹5 ಕೋಟಿಗೆ ಬೇಡಿಕೆ ಇಟ್ಟಿರುವುದು ಗೊತ್ತಾಗಿದೆ.

ಮಾಲೂರು- ತೊರನಹಳ್ಳಿ ರಸ್ತೆಯ ಹೆಡಗಿನ ಬೆಲೆ ಗೇಟ್ ಬಳಿ ಇರುವ ಅವರ ಇಟ್ಟಿಗೆ ಕಾರ್ಖಾನೆ ಬಳಿ ಬುಧವಾರ ಬೆಳಿಗ್ಗೆ 11.30ಕ್ಕೆ ಅಪಹರಣ ನಡೆದಿದೆ ಎಂದು ಪಟ್ಟಣದ ಠಾಣೆಯಲ್ಲಿ ದೂರು ದಾಖಲಾಗಿದೆ.

ಟಿಂಬರ್ ಬಾಬು

'ಟಿಂಬರ್ ಬಾಬು ಎಂದಿನಂತೆ ಇಟ್ಟಿಗೆ ಕಾರ್ಖಾನೆಗೆ ಹೋಗುತ್ತಿದ್ದರು. ಕಾರಿನಲ್ಲಿ ಬಂದ ಅಪರಿಚಿತರು ಅವರನ್ನು ಅಡ್ಡಗಟ್ಟಿ ಈ ಕೃತ್ಯ ಎಸಗಿದ್ದಾರೆ' ಎಂದು ಬಾಬು ಅವರ ಪುತ್ರ ಮಂಜುನಾಥ್ ದೂರಿನಲ್ಲಿ ತಿಳಿಸಿದ್ದಾರೆ.

ಕೊಡಗು ಜಿಲ್ಲೆಯ ಭಾಗಮಂಡಲದ ತ್ರಿವೇಣಿ ಸಂಗಮ ಗುರುವಾರ ಭರ್ತಿಯಾಯಿತು

ಮೈದುಂಬಿದ ಕಾವೇರಿ

ಒಂದನೇ ಪುಟದಿಂದ...

ವ್ಯಕ್ತಿ ಸಾವು: ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ತಾಲ್ಲೂಕಿನ ಮಾಂಟ್ರಾಡಿಯ ಗದ್ದೆ ಹುಣಿಯಲ್ಲಿ ಬುಧವಾರ ರಾತ್ರಿ ನಡೆದುಕೊಂಡು ಹೋಗುತ್ತಿದ್ದ ಅಂಗವಿಕಲ ನಿರಂಜನ್ ಜೈನ್ (42) ಕೆರೆಗೆ ಜಾರಿಬಿದ್ದು ಮೃತಪಟ್ಟಿದ್ದಾರೆ. ಅವರ ಮೃತದೇಹ ಗುರುವಾರ ಪತ್ತೆಯಾಗಿದೆ.

ಸುಳ್ಯ ತಾಲ್ಲೂಕಿನ ಅಲೆಟ್ಟಿಯ ಕೂರ್ನಡ್ಕ ಬಳಿ ಕಾಲುಸಂಕ ದಾಟುತ್ತಿದ್ದಾಗ ಆಯತಪ್ಪಿ ಬಿದ್ದ ಕೇರಳದ ಕೂಲಿ ಕಾರ್ಮಿಕ ಮಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

ಉಡುಪಿಯ ಹಲವು ಗ್ರಾಮಗಳ ಮನೆಗಳಿಗೆ ಮಳೆಯ ನೀರು ನುಗ್ಗಿದ್ದರಿಂದ ಜನ ಜೀವನ ಅಸ್ತವ್ಯಸ್ತವಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೋಟ್‌ಗಳ ನೆರವಿನಿಂದ 200ಕ್ಕೂ ಹೆಚ್ಚು ಜನರನ್ನು ರಕ್ಷಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ಪಟ್ಟಣದಲ್ಲಿ ಬಿರುಗಾಳಿಗೆ 29ಕ್ಕೂ ಹೆಚ್ಚು ಮರಗಳು ಮುರಿದು ಬಿದ್ದವು. ಇದರಿಂದ ವ್ಯಕ್ತಿಯೊಬ್ಬರ ತಲೆಗೆ ಏಟಾಗಿದ್ದು, ಕೆಲ ಅಂಗಡಿ, ಮನೆಗಳಿಗೆ ಹಾನಿಯಾಗಿವೆ.

ರಾಜ್ಯದಲ್ಲಿ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಶುಕ್ರವಾರವೂ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಮೂರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ ಐದು ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಿಸಿದೆ.

ಕರಾವಳಿಯ ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡಕ್ಕೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಹಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗೆ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ. ಉತ್ತರ ಒಳನಾಡಿನ ಬೆಳಗಾವಿ, ಬೀದರ್, ಹಾವೇರಿ ಜಿಲ್ಲೆಯ ಕೆಲವೆಡೆ ಭಾರಿ ಮಳೆಯಾಗುವ ಸಾಧ್ಯತೆ ಇದೆ ಇಲಾಖೆ ತಿಳಿಸಿದೆ.

ಕರಾವಳಿಯಲ್ಲಿ 40–55 ಕಿ.ಮೀ.ಯಿಂದ 65 ಕಿ.ಮೀ ವೇಗದಲ್ಲಿ ಬಿರುಗಾಳಿ ಬೀಸುವ ಸಂಭವವಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ ಎಂದು ಹೇಳಿದೆ.

TAMIL NADU NEWSPRINT AND PAPERS LIMITED
Kagithapuram-639 136. Karur Dist. Tamil Nadu
Ph : 04324-277001 (10 Lines). Email: purchase.recycle@tnpl.co.in
NOTICE INVITING TENDER

Tender No.	Work Description	Due Date
232413 002435	Procurement of 1000 MT ± 5 % Office Waste Paper (White Records) in Bale form from Karnataka for TNPL Unit-I at Kagithapuram	13.07.23

Corrigendum if any will be issued in TNPL Website & NIC Portal only. Detailed Terms & conditions, tender fee, EMD etc., are available in tender document at our websites: www.tnpl.com/ https://tntenders.gov.in/nicgep/app
DIPR/3443/Tender/2023
TNPL - Maker of bagasse based eco-friendly Paper
"சோதனை கடந்து சுதந்திரம் அடைந்தோம் சாதனை புரிந்து சரித்திரம் படைப்போம்"

ಗಗನಕ್ಕೇರುತ್ತಿರುವ ಬೆಲೆ; ಕಳ್ಳರ ಕಾಟ: ಮಳೆಗೆ ಕೊಳೆಯುವ ಭೀತಿ

ಜಮೀನಿನಲ್ಲಿ ಟೊಮೆಟೊಗೆ ರೈತರ ಕಾವಲು

ಪ್ರಜಾವಾಣಿ ವಾರ್ತೆ

ಹಳೇಬೀಡು: ತಾಲ್ಲೂಕಿನ ಗಣಿಸೋಮನಹಳ್ಳಿಯಲ್ಲಿ ಟೊಮೆಟೊ ಕಳವು ಪ್ರಕರಣ ನಡೆದ ಬಳಿಕ ಬೆಳೆಗಾರರು ರಾತ್ರಿ ವೇಳೆ ಚಳಿ, ಮಳೆ, ಗಾಳಿ, ಸೊಳ್ಳೆಕಾಟದ ನಡುವೆ ನಿದ್ದೆಗಟ್ಟು ಬೆಳೆಯ ಕಾವಲಿಗೆ ನಿಂತಿದ್ದಾರೆ. ತುಂತುರು ಮಳೆ ಬೀಳುತ್ತಿರುವುದರಿಂದ ಬೆಳೆ ಕೊಳೆಯುವ ಆತಂಕವೂ ಮೂಡಿದೆ. 'ಎಡೆಬಿಡದೇ ಹೊಲದಲ್ಲಿದ್ದರೆ ಮಾತ್ರ ಬೆಳೆ ಉಳಿಸಿಕೊಳ್ಳಲು ಸಾಧ್ಯ' ಎಂಬ ಮಾತು ರೈತರಿಂದ ಕೇಳಿ ಬರುತ್ತಿದೆ.

'ಗುಡ್ಡದ ಬಳಿಯ ಜಮೀನುಗಳಲ್ಲಿ ಚಿರತೆ ಮೊದಲಾದ ವನ್ಯಜೀವಿಗಳು ಆಗಾಗ್ಗೆ ಕಾಣಿಸುತ್ತವೆ. ಇಂಥ ಅಪಾಯಕಾರಿ ಪರಿಸ್ಥಿತಿಯಲ್ಲಿಯೂ ಬೆಳೆಯನ್ನು ಕಾಯಬೇಕಾಗಿದೆ' ಎಂದು ಬೆಳೆಗಾರ ಬಸ್ತಿಹಳ್ಳಿ ಗಣೇಶ್ ಅಳಲು ತೋಡಿಕೊಂಡರು.

'ಹಗಲೆಲ್ಲ ಹೊಲದಲ್ಲಿ ಕೆಲಸ ಮಾಡಿ ದಣಿವಾಗಿರುತ್ತದೆ. ರಾತ್ರಿ ವಿಶ್ರಾಂತಿ ಪಡೆಯುವುದಕ್ಕೂ ಅವಕಾಶವಿಲ್ಲ. ಕಳೆದ ವರ್ಷ ಟೊಮೆಟೊ ಕೇಳುವವರಿಲ್ಲದೆ ನಷ್ಟವಾಗಿತ್ತು. ಈ ವರ್ಷ ನಮ್ಮ ಆದಾಯವನ್ನು ಕಳ್ಳರು ಕಸಿದುಕೊಳ್ಳುತ್ತಾರೆಂದು ಭಯವಾಗಿದೆ' ಎಂದರು.

ಗಣಿ ಸೋಮನಹಳ್ಳಿಯ ಗಡಿಯಲ್ಲಿರುವ ಕುಮಾರ್ ಅವರ ಜಮೀನಿನಲ್ಲಿ ಕಳ್ಳರು ಮಂಗಳವಾರ ರಾತ್ರಿ ಎರಡು ಕ್ರೇಟ್‌ನಷ್ಟು ಟೊಮೆಟೊ ಕೊಯ್ಲು ಮಾಡಿದ್ದರು. ಅದೇ ಸಮಯಕ್ಕೆ ಕುಮಾರ್ ಬಂದಿದ್ದರಿಂದ ಟೊಮೆಟೊ ಬಿಟ್ಟು ಓಡಿಹೋದ ಘಟನೆಯೂ ನಡೆದಿದೆ. ದೂರು ದಾಖಲಾಗಿಲ್ಲ.

ಹಳೇಬೀಡಿನ ಗಂಗೂರು ರಸ್ತೆಯ ಜಮೀನಿನಲ್ಲಿ ಗುರುವಾರ ಮಳೆಯ ನಡುವೆಯೇ ಟೊಮೆಟೊ ಬೆಳೆಯನ್ನು ಕ್ರೇಟ್‌ಗಳಿಗೆ ತುಂಬಿಸಲಾಯಿತು.

ಟೊಮೆಟೊ ಕೊಳೆಯುವ ಕಳವಳ

ಚಿನ್ನದ ಬೆಲೆ ಬಂದಿರುವ ಟೊಮೆಟೊಗೆ ಎರಡು ದಿನದಿಂದ ಬೀಳುತ್ತಿರುವ ತುಂತುರು ಮಳೆಯಿಂದ ಹಾನಿಯಾಗುವ ಸಾಧ್ಯತೆ ಇದೆ. ಎಡಬಿಡದೆ ಮಳೆ ಸುರಿಯುತ್ತಿರುವುದರಿಂದ ಟೊಮೆಟೊ ಸತತವಾಗಿ ಮಳೆ ನೀರಿನಲ್ಲಿ ನೆನೆದರೆ ಕೊಳೆತು ಹೋಗುತ್ತದೆ.

'ಮಳೆ ಹೆಚ್ಚಾದರೆ ಬೆಲೆ ಮತ್ತಷ್ಟು ಏರಿಕೆಯಾಗಬಹುದು. ಆದರೆ ಫಸಲು ಕೈಗೆ ಸಿಗದಿದ್ದರೆ, ಬೆಲೆ ಇದ್ದರೂ ರೈತರ ನಷ್ಟ ಅನುಭವಿಸುವಂತಾಗುತ್ತದೆ. ಈಗ ಮಳೆಯಿಂದ ಫಸಲು ನಾಶವಾಗುವ ಸಾಧ್ಯತೆ ಇದೆ. ಮೋಡದ ವಾತಾವರಣದಿಂದ ಟೊಮೆಟೊ ಹೂವಾಗಿ ಕಾಯಿ ಕಟ್ಟುವುದಕ್ಕೂ ತೊಂದರೆಯಾಗುತ್ತದೆ. ಗಿಡದ ಕುಡಿ ಮುದುರಿ ಬೆಳೆಯ ಬೆಳವಣಿಗೆ ಕುಂಠಿತವಾಗುತ್ತದೆ. ರೋಗ ಬಾಧೆ ಸಾಧ್ಯತೆ ಹೆಚ್ಚಿದೆ' ಎಂದು ರೈತ ಬಸ್ತಿಹಳ್ಳಿ ಚೇತನ್ ಸಮಸ್ಯೆ ಬಿಚ್ಚಿಟ್ಟರು.

> **ಹಗಲೆಲ್ಲ ಕೆಲಸ ಮಾಡಿ, ರಾತ್ರಿ ಟೊಮೆಟೊ ಹೊಲ ಕಾಯುವ ಕೆಲಸ ಪ್ರಯಾಸದಾಯಕ. ರೈತ ಕುಟುಂಬದವರು ಸರದಿಯಲ್ಲಿ ಎಡೆಬಿಡದೆ ಹೊಲ ಕಾಯ್ದರೆ ಮಾತ್ರ ಫಸಲು ಉಳಿಸಿಕೊಳ್ಳಬಹುದು**
> **ಗಣೇಶ,** ರೈತ ಬಸ್ತಿಹಳ್ಳಿ

ಪೂರೈಕೆ ವೇಳೆ ಬಾಕ್ಸ್‌ಗಳಿಗೆ ಕನ್ನ

ಚಿಂತಾಮಣಿ: ಟೊಮೆಟೊ ಬೆಲೆ ಹೆಚ್ಚಳದಿಂದ ರೈತರು ಹಗಲು ಮತ್ತು ರಾತ್ರಿ ಟೊಮೊಟೊ ತೋಟ ಕಾವಲು ಕಾಯುತ್ತಿದ್ದಾರೆ.

ಕೊಯ್ಲು ಮಾಡಿ ವಾಹನಗಳಿಗೆ ತುಂಬಿ ಮಾರುಕಟ್ಟೆಗೆ ಸಾಗಿಸುವವರೆಗೂ ಜತೆಯಲ್ಲೇ ಇರಬೇಕಾಗಿದೆ. ಇತ್ತೀಚಿನವರೆಗೂ ಹಣ್ಣು ಕಟಾವು ಮಾಡಿ ಬಾಕ್ಸ್‌ಗಳನ್ನು ವಾಹನಕ್ಕೆ ತುಂಬಿದರೆ, ವಾಹನದ ಸಿಬ್ಬಂದಿಯೇ ಮಾರುಕಟ್ಟೆಯಲ್ಲಿ ಇಳಿಸುತ್ತಿದ್ದರು. ರೈತರು ಹರಾಜಿನ ಸಮಯಕ್ಕೆ ಹೋಗುತ್ತಿದ್ದರು. ಆದರೆ, ಈಗ ವಾಹನದ ಜತೆಯಲ್ಲಿಯೇ ರೈತರು ಮಾರುಕಟ್ಟೆಗೆ ಹೋಗುತ್ತಿದ್ದಾರೆ.

ಎಪಿಎಂಸಿಯಲ್ಲಿ ಯಾಮಾರಿದರೆ ಕಳ್ಳತನ ಆಗುತ್ತದೆ. ರೈತರು ತಿಂಡಿ, ಕಾಫಿಗೂ ಹೋಗದೆ ಹದ್ದಿನ ಕಣ್ಣಿನಿಂದ ಟೊಮೆಟೊ ಕಾಪಾಡಬೇಕಿದೆ. ಕಳ್ಳತನಕ್ಕಾಗಿಯೇ ಕೆಲವರು ಕಾದಿರುತ್ತಾರೆ. ರೈತರು ತಲಾ 15 ಕೆ.ಜಿಯ 100 ಬಾಕ್ಸ್ ಟೊಮೆಟೊ ಕಳುಹಿಸಿದ್ದರೆ ಸಾಗಾಣಿಕೆ ಮಾಡುವವರು ಈ ಬಾಕ್ಸ್‌ಗಳಿಂದ ಹಣ್ಣನ್ನು ತೆಗೆದು 110 ಬಾಕ್ಸ್ ಮಾಡಿರುತ್ತಾರೆ. ಅವುಗಳಲ್ಲಿ10 ಬಾಕ್ಸ್ ಕದಿಯುತ್ತಾರೆ ಎಂದು ವ್ಯಾಪಾರಿಗಳು ಆರೋಪಿಸುತ್ತಾರೆ.

25 ಕೆ.ಜಿ.ಗೆ ₹2,100

25 ಕೆ.ಜಿ. ತೂಕದ ಒಂದು ಕ್ರೇಟ್ ಟೊಮೆಟೊ ₹2,050ರಿಂದ ₹2,100ರಂತೆ ಹೊಲದಲ್ಲಿಯೇ ಮಾರಾಟವಾಗುತ್ತಿದೆ. ಮಾರುಕಟ್ಟೆಯಲ್ಲಿ ₹2,300ಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿದೆ. 15 ಕೆ.ಜಿ. ತೂಕದ ಒಂದು ಚೀಲ ₹900ರಿಂದ ₹1,300ರವರೆಗೆ ಹಳೇಬೀಡಿನಲ್ಲಿ ಮಾರಾಟವಾಗುತ್ತಿದೆ. ಗ್ರಾಹಕರಿಗೆ ಕಡಿಮೆ ಗುಣಮಟ್ಟದ ಟೊಮೆಟೊ ಸಹ ₹100ಕ್ಕಿಂತ ಕಡಿಮೆ ಬೆಲೆಗೆ ದೊರಕುತ್ತಿಲ್ಲ.

'ಮಳೆ ಬೀಳದೇ ಅಂತರ್ಜಲ ಕಡಿಮೆ ಆಗಿರುವುದರಿಂದ ಎಲ್ಲ ಬೆಳೆಗಾರರು ಟೊಮೆಟೊ ಬೆಳೆಯಲು ಸಾಧ್ಯವಾಗಿಲ್ಲ. ಹೀಗಾಗಿ ಬೆಲೆ ಏರಿಕೆಯಾಗಿದೆ. ಬೇಡಿಕೆಗೆ ಅನುಗುಣವಾಗಿ ಟೊಮೆಟೊ ಫಸಲು ಬಂದಿಲ್ಲ. ಕೆಲವೇ ರೈತರು ಆದಾಯ ಕಾಣುತ್ತಿದ್ದಾರೆ. ಎಲ್ಲ ಬೆಳೆಗಾರರಿಗೂ ಏರಿದ ಬೆಲೆಯ ಉಪಯೋಗ ಆಗುತ್ತಿಲ್ಲ' ಎಂದು ರೈತ ಮುಖಂಡ ಎಲ್.ಈ. ಶಿವಪ್ಪ ತಿಳಿಸಿದರು.

> **ಕೊಯ್ಲು ಮಾಡಿದ ಟೊಮೆಟೊವನ್ನು ತಕ್ಷಣ ಮಾರುಕಟ್ಟೆಗೆ ಸಾಗಿಸಬೇಕು. ಹೊಲದಲ್ಲಿಯೇ ಬಿಟ್ಟರೆ ಕಳ್ಳರ ಪಾಲಾಗುತ್ತದೆ. ನೆಮ್ಮದಿ ಇಲ್ಲದೇ ಹೊಲ ಕಾಯುವುದು ಕೆಲಸಕ್ಕಿಂತ ಕಷ್ಟ**
> **ಹರೀಶ್,** ಮುಖಂಡ ಗೋಣಿಸೋಮನಹಳ್ಳಿ

> **ಕಳೆದ ವರ್ಷ ಅತಿವೃಷ್ಟಿ, ಬೆಲೆ ಕುಸಿತದಿಂದ ಬೆಳೆಗಾರರು ತತ್ತರಿಸಿದ್ದರು. ಈ ವರ್ಷ ಕೆಲವೇ ಜಮೀನಿನಲ್ಲಿ ಟೊಮೆಟೊ ಇದೆ. ಈಗಿನ ಚಿನ್ನದ ದರ ಎಲ್ಲರಿಗೂ ದೊರಕುತ್ತಿಲ್ಲ**
> **ಎಲ್.ಈ.ಶಿವಪ್ಪ,** ರೈತ ಸಂಘ ಮುಖಂಡ ಲಿಂಗಪ್ಪನಕೊಪ್ಪಲು

ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ ಮೈಸೂರು ಜಿಲ್ಲೆ–571602
TOWN MUNICIPAL COUNCIL
KRISHNARAJANAGAR MYSORE DIST.
ಈ–ಮೇಲ್: itstaff_ulb_krnagar@yahoo.co.in ಫ್ಯಾಕ್ಸ್ : 08223–262242 ಕಛೇರಿ ಫೋನ್ : 262242
E-mail : itstaff_ulb_krnagar@yahoo.co.in Fax : 08223-262242 office Phone : 262242

ಸಂ: ಪುಸಕೃ/ಘವನಿ/ಎಸ್.ಬಿ.ಎಂ1.0/2023–24 ದಿನಾಂಕ: 04–07–2023

ಟೆಂಡರ್ ಪ್ರಕಟಣೆ

ಕೆ.ಆರ್.ನಗರ ಪುರಸಭೆಯ ಸ್ವಚ್ಛ ಭಾರತ್ 1.0 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಹ ಟೆಂಡರ್‌ದಾರರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು.

ಕ್ರ.ಸಂ	ಟೆಂಡರ್ ಇಂಡೆಂಟ್ ಸಂಖ್ಯೆ	ವಿವರ	E.M.D ಮೊತ್ತ ರೂ.	ಅಂದಾಜು ಮೊತ್ತ
1	DMA/2023-24/IND0025	ರೂಫ್‌ಟಾಪ್ 40 KW ರೂಫ್ ಟಾಪ್ ಸೋಲಾರ್ ಪವರ್ ಪ್ಲಾಂಟ್ ಅಳವಡಿಸುವ	ರೂ. 1,08,240/–	ರೂ. 54,12,000/–

ಸಾಮಾನ್ಯ ಸೂಚನೆಗಳು:
1) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್‌ಮಾಡಿ ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು.
2) ಮೇಲ್ಕಂಡ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ರಲ್ಲಿ ನೋಡಿಕೊಳ್ಳುವುದು
3) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೇ ಬದಲಾವಣೆಗಳಿದಲ್ಲಿ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ರಲ್ಲಿ ನೋಡಿಕೊಳ್ಳುವುದು.

ಆಡಳಿತಾಧಿಕಾರಿಗಳು, ಪುರಸಭೆ, ಕೆ.ಆರ್. ನಗರ
ಮುಖ್ಯಾಧಿಕಾರಿಗಳು, ಪುರಸಭೆ, ಕೆ.ಆರ್. ನಗರ

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ
ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು
ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಟಿಎನ್–1/ /2023–24 ದಿನಾಂಕ:

ಟೆಂಡರ್ ಪ್ರಕಟಣೆ
ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 5.30 ಗಂಟೆ ನಂತರ	ಸಂಜೆ 5.30 ಗಂಟೆ ಒಳಗೆ	ಸಂಜೆ 5.45 ಗಂಟೆ ನಂತರ
ಕ್ರ. ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್/ ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1, Kw-2 & Kw-4	79 ಸಂಖ್ಯೆ	1583.20	14–07–2023	31–07–2023	01–08–2023
2	Service Tender Kc-2	5 ಸಂಖ್ಯೆ	122.57	12–07–2023	27–07–2023	28–07–2023
3	Service Tender Kc-2	10 ಸಂಖ್ಯೆ	–	12–07–2023	27–07–2023	28–07–2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು
ನೀಸ&ಒಚ(ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸುಭಾಷಿತ

ವಯಸ್ಸಾದವರು ಹೇಗೆ ಯೋಚಿಸುತ್ತಾರೆ ಮತ್ತು ಭಾವಿಸುತ್ತಾರೆ ಎಂಬುದು ಯುವಜನರಿಗೆ ತಿಳಿದಿರುವುದಿಲ್ಲ. ಆದರೆ, ಯೌವನದಲ್ಲಿದ್ದಾಗ ತಮ್ಮ ಭಾವನೆಗಳು ಹೇಗಿದ್ದವು ಎನ್ನುವುದನ್ನು ವಯಸ್ಕರು ಮರೆತರೆ ಅದು ತಪ್ಪು.

–ಜೆ.ಕೆ.ರೋಲಿಂಗ್

ಸುಂದರ ಚಿತ್ರಣ ನೀಡಿದ ವರದಿ ಸಣ್ಣ ಸಾಲದ ವಿಚಾರದಲ್ಲಿ ನಿಗಾ ಬೇಕು

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸಿದ್ಧಪಡಿಸುವ ಹಣಕಾಸು ಸ್ಥಿರತೆ ವರದಿಯು ದೇಶದ ಹಣಕಾಸು ವ್ಯವಸ್ಥೆಯ ಕುರಿತಾಗಿ ಸುಂದರ ಚಿತ್ರಣವೊಂದನ್ನು ನೀಡಿದೆ. ಹಲವು ವಲಯಗಳಲ್ಲಿ ಸಾಧನೆಯು ಉತ್ತಮವಾಗಿದೆ ಎಂದು ಅದು ಹೇಳಿದೆ. ದೇಶದ ಹಣಕಾಸು ವಲಯವು ಆರೋಗ್ಯಕರ ಸ್ಥಿತಿಯಲ್ಲಿದೆ, ಭವಿಷ್ಯದಲ್ಲಿ ಎದುರಾಗಬಹುದಾದ ಕೆಟ್ಟ ಪರಿಸ್ಥಿತಿಗಳನ್ನು ನಿಭಾಯಿಸಲು ಸನ್ನದ್ಧವಾಗಿ ಇದೆ ಎಂದು ವರದಿಯಲ್ಲಿ ಹೇಳಲಾಗಿದೆ. ಬ್ಯಾಂಕ್‌ಗಳು ನೀಡುವ ಸಾಲದ ಪ್ರಮಾಣದಲ್ಲಿ ಹೆಚ್ಚಳ ಆಗಿದೆ, ವಸೂಲಾಗದ ಸಾಲಗಳನ್ನು ನಿಭಾಯಿಸಲು ತೆಗೆದು ಇರಿಸಬೇಕಾದ ಮೊತ್ತವು ಕಡಿಮೆ ಆಗುತ್ತಿದೆ ಎಂದು ಕೂಡ ವರದಿ ಹೇಳಿದೆ. ಅಂದರೆ, ಅರ್ಥ ವ್ಯವಸ್ಥೆಯಲ್ಲಿ ಕೆಟ್ಟ ಸಂದರ್ಭಗಳು ಎದುರಾದರೆ ಅದನ್ನು ತಾಳಿಕೊಳ್ಳಲು ಬೇಕಿರುವ ಮೀಸಲು ಮೊತ್ತವನ್ನು ಇರಿಸಿಕೊಳ್ಳಲು ಬ್ಯಾಂಕ್‌ಗಳಿಗೆ ಸಾಧ್ಯವಾಗುತ್ತದೆ. ಮಾರ್ಚ್‌ಗೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಒಟ್ಟು ಅನುತ್ಪಾದಕ ಸಾಲಗಳ ಪ್ರಮಾಣ (ಎನ್‌ಪಿಎ) ಹತ್ತು ವರ್ಷಗಳ ಕನಿಷ್ಠ ಮಟ್ಟವಾದ ಶೇಕಡ 3.9ಕ್ಕೆ ಇಳಿಕೆಯಾಗಿದೆ. ಸುಧಾರಣೆಯು ಎಲ್ಲ ವಲಯಗಳಲ್ಲಿಯೂ ಆಗಿದೆ, ದೇಶದ ಖಾಸಗಿ ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಸುಧಾರಣೆ ಕಂಡುಬಂದಿದೆ. ಮುಂದಿನ ದಿನಗಳಲ್ಲಿ ಈ ಎನ್‌ಪಿಎ ಪ್ರಮಾಣವು ಶೇಕಡ 3.6ಕ್ಕೆ ಇಳಿಕೆ ಕಾಣಲಿದೆ ಎಂಬುದು ಆರ್‌ಬಿಐ ನಿರೀಕ್ಷೆ.

ಹಣದುಬ್ಬರದ ಏರಿಕೆಯು ಮುಂದೆಯೂ ಸವಾಲಾಗಿಯೇ ಉಳಿಯಲಿರುವುದರಿಂದ, ಸಾಲ ಮರುಪಾವತಿ ವಿಚಾರದಲ್ಲಿ ಹೆಚ್ಚಿನ ಗಮನ ಹರಿಸಬೇಕಾದ ಅಗತ್ಯ ಇದೆ

ಹಲವು ಕಾರಣಗಳಿಂದಾಗಿ ಹಣಕಾಸು ವಲಯದ ಕುರಿತು ಕಳವಳಗಳು ಮೂಡಿದ್ದವು. ಕೋವಿಡ್ ಸಾಂಕ್ರಾಮಿಕವು ತೀವ್ರವಾಗಿದ್ದ ಅವಧಿಯಲ್ಲಿ ಹಣಕಾಸು ಸಂಸ್ಥೆಗಳಿಗೆ ನೆರವು ನೀಡುವ ಉದ್ದೇಶದಿಂದ ಹಲವು ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಅದರಲ್ಲೂ ಮುಖ್ಯವಾಗಿ ಬ್ಯಾಂಕ್‌ಗಳಿಗೆ ಹಲವು ನೆರವು ಕ್ರಮಗಳನ್ನು ಪ್ರಕಟಿಸಲಾಗಿತ್ತು. ಈಗ ಆ ಕ್ರಮಗಳನ್ನು ಹಿಂದಕ್ಕೆ ಪಡೆಯಲಾಗಿದೆ. ನೆರವಿನ ಹಸ್ತವನ್ನು ಹಿಂದಕ್ಕೆ ಪಡೆದಿರುವುದು ಬ್ಯಾಂಕ್‌ಗಳ ಮೇಲೆ ಪರಿಣಾಮ ಉಂಟುಮಾಡಬಹುದು ಎಂಬ ನಿರೀಕ್ಷೆ ಇತ್ತು. ಆದರೆ ಬ್ಯಾಂಕ್‌ಗಳು ಸಾಂಕ್ರಾಮಿಕದ ಪರಿಣಾಮವನ್ನು ನಿಭಾಯಿಸಿರುವುದಷ್ಟೇ ಅಲ್ಲ, ಅವು ಮೊದಲಿಗಿಂತ ಹೆಚ್ಚು ದಕ್ಷವಾಗಿ ಕೂಡ ಕೆಲಸ ನಿರ್ವಹಿಸಿವೆ. ಹಣಕಾಸು ಸ್ಥಿರತೆ ವರದಿಯ ಪ್ರಕಾರ, ಹಣಕಾಸು ವಲಯಕ್ಕೆ ಸಂಬಂಧಿಸಿರದ ಕೆಲವು ಕಂಪನಿಗಳು ಕೂಡ ತಮ್ಮ ಸಾಲದ ಪ್ರಮಾಣವನ್ನು ಕಡಿಮೆ ಮಾಡಿಕೊಂಡಿವೆ ಮತ್ತು ಸಾಲ ತೀರಿಸುವ ಅವುಗಳ ಸಾಮರ್ಥ್ಯವು ಸುಧಾರಣೆ ಕಂಡಿದೆ. ಆದರೆ ಈ ಎಲ್ಲ ಉತ್ತಮ ಅಂಶಗಳನ್ನು ಒಂದು ಚೌಕಟ್ಟಿನಲ್ಲಿ ಇಟ್ಟು ಗ್ರಹಿಸಬೇಕಾದ ಅಗತ್ಯ ಇದೆ. ಸಾಂಕ್ರಾಮಿಕದ ನಂತರದಲ್ಲಿ ಆರ್ಥಿಕ ಚಟುವಟಿಕೆಗಳು ಪೂರ್ಣ ಪ್ರಮಾಣದಲ್ಲಿ ಚುರುಕು ಪಡೆದಿಲ್ಲ. ಬ್ಯಾಂಕ್‌ಗಳು ವಸೂಲಾಗದ ಸಾಲಗಳನ್ನು ರೈಟ್ ಆಫ್ ಮಾಡಿದ ಹಾಗೂ ಆಸ್ತಿ–ಹೊರೆ ಪಟ್ಟಿಯಿಂದ ತೆಗೆದುಹಾಕಲು ತಮ್ಮ ವಾರ್ಷಿಕ ವಹಿವಾಟಿನಲ್ಲಿ ದೊಡ್ಡ ಪ್ರಮಾಣದ ಮೊತ್ತವನ್ನು ತೆಗೆದಿರಿಸಿದ ನಿದರ್ಶನಗಳೂ ಇವೆ. ಆ ಮೂಲಕ ಹಲವು ಬ್ಯಾಂಕ್‌ಗಳು ತಮ್ಮ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದು ತೋರಿಸಿಕೊಂಡಿವೆ. ಹಣಕಾಸು ವಲಯದ ಚಟುವಟಿಕೆಗಳ ಬಗ್ಗೆ ಕಂಡುಬಂದ ಎಚ್ಚರಿಕೆಯ ನಡೆಯು ಮುಂದಿನ ದಿನಗಳಲ್ಲಿ ಕಾಣಿಸಲಿಕ್ಕಿಲ್ಲ.

ಕಳವಳಕ್ಕೆ ಕಾರಣವಾಗುವ ಇತರ ಕೆಲವು ಅಂಶಗಳೂ ಇವೆ. ಸಣ್ಣ ಸಾಲಗಳ ವಿಚಾರದಲ್ಲಿ ಒಂದಿಷ್ಟು ಕಳವಳ ಮೂಡುವಂಥ ಸಂಗತಿಗಳು ಇವೆ. ಸಣ್ಣ ಸಾಲದ ಪ್ರಮಾಣವು ಹೆಚ್ಚಾಗಿದೆ. ಇತರ ವರ್ಗಗಳ ಅಡಿಯಲ್ಲಿ ಬರುವ ಸಾಲಗಳಿಗಿಂತ ಈ ಬಗೆಯ ಸಾಲಗಳು ಬ್ಯಾಂಕ್‌ಗಳ ಪಾಲಿಗೆ ಕಡಿಮೆ ಪ್ರಮಾಣದ ಅಪಾಯ ಒಳಗೊಂಡಿರುತ್ತವೆ ಎಂಬ ಕಾರಣಕ್ಕೆ, ಈ ಸಾಲ ವಿತರಣೆಗೆ ಬ್ಯಾಂಕ್‌ಗಳ ಕಡೆಯಿಂದ ಉತ್ತೇಜನವೂ ಇದೆ. ಸಣ್ಣ ಪ್ರಮಾಣದ ಸಾಲಗಳಲ್ಲಿ ಎನ್‌ಪಿಎ ಪ್ರಮಾಣವು ಬಹಳ ಕಡಿಮೆ ಇರುತ್ತದೆಯಾದರೂ, ಈ ಬಗೆಯ ಕೆಲವು ಸಾಲಗಳ ಮರುಪಾವತಿ ವಿಳಂಬ ಆಗುತ್ತಿರುವುದನ್ನು ಹಣಕಾಸು ಸ್ಥಿರತೆ ವರದಿಯು ಗುರುತಿಸಿದೆ. ನಿರ್ದಿಷ್ಟ ಅವಧಿಯ ಸಾಲಗಳು, ಶಿಕ್ಷಣ ಸಾಲ ಹಾಗೂ ಕ್ರೆಡಿಟ್ ಕಾರ್ಡ್ ಬಾಕಿ ಮರುಪಾವತಿಯಲ್ಲಿ ಹಲವು ವೈಫಲ್ಯಗಳು ವರದಿಯಾಗಿವೆ. ಹಣದುಬ್ಬರ ಪ್ರಮಾಣ ಹೆಚ್ಚಾಗುತ್ತ ಇರುವುದು ಸಾಲ ಮರುಪಾವತಿಯನ್ನು ವಿಳಂಬ ಮಾಡಬಹುದು ಹಾಗೂ ಇನ್ನಷ್ಟು ಸಾಲಕ್ಕೆ ಬೇಡಿಕೆ ಸೃಷ್ಟಿಸಬಹುದು ಎಂದು ಹೇಳಲಾಗಿದೆ. ಹಣದುಬ್ಬರದ ಏರಿಕೆಯು ಮುಂದೆಯೂ ಸವಾಲಾಗಿಯೇ ಉಳಿಯಲಿದೆ. ಹೀಗಾಗಿ ಸಾಲ ಮರುಪಾವತಿ ವಿಚಾರದಲ್ಲಿ ಇದು ಮುಂದೆ ಇನ್ನಷ್ಟು ಸಮಸ್ಯೆಗಳನ್ನು ಸೃಷ್ಟಿಸಬಹುದು. ಹೀಗಾಗಿ ಮುಂದಿನ ದಿನಗಳಲ್ಲಿ ಈ ವಲಯದ ಕಡೆ ಹೆಚ್ಚಿನ ಗಮನ ಹರಿಸಬೇಕಾದ ಅಗತ್ಯ ಇದೆ.

ದಿನದ ಟ್ವೀಟ್

ಸುರಕ್ಷಿತ ವಾತಾವರಣ ನಿರ್ಮಿಸಿ

ಪಾರ್ಸೆಲ್ ಒಂದನ್ನು ತಲುಪಿಸಲು ಅಂಚೆಯಾಕೆ ಇಂದು ಬಂದಿದ್ದಳು. ನಮ್ಮ ಪಟ್ಟಣದಲ್ಲಿ 17 ವರ್ಷಗಳಿಂದಲೂ ಅಂಚೆ ತಲುಪಿಸುವ ಕೆಲಸದಲ್ಲಿ ಆಕೆ ತೊಡಗಿದ್ದಾಳೆ. ಎಂದಾದರೂ ಅಸುರಕ್ಷಿತ ಭಾವ ಕಾಡಿದ್ದಿದೆಯೇ ಎಂದು ಕೇಳಿದೆ. ಒಂಟಿಮನೆಗಳಿಗೂ ಆಕೆ ತೆರಳಬೇಕಾಗುತ್ತದೆ. 'ಇಲ್ಲ' ಎಂದಳು. ಒಂದೇ ಒಂದು ಬಾರಿಯೂ ಆಕೆಗೆ ಕಿರುಕುಳದ ಅನುಭವ ಆಗಿಲ್ಲ. ಸುರಕ್ಷಿತ ವಾತಾವರಣ ನಿರ್ಮಿಸಿದರೆ, ಮಹಿಳೆ ಮುಂದೆ ಬರುತ್ತಾಳೆ.

ಪಾರೋಮಿತಾ ಬಾರದೋಲೋಯಿ, ಲೇಖಕಿ

ಕಿಡಿನುಡಿ

ರೈಲುಗಳು ಈಗಾಗಲೇ ಇರುವುದೇ ಸಾಧಾರಣವಾಗಿ. ಈಗ ವಂದೇ ಸಾಧಾರಣ್?!

(ಭಾರತೀಯ ರೈಲ್ವೆಯು ಸಾಮಾನ್ಯ ಜನರಿಗೆ ಅನುಕೂಲ ಆಗುವಂತೆ ಜಾರಿಗೆ ತರಲಿರುವ 'ವಂದೇ ಸಾಧಾರಣ್' ರೈಲು ಯೋಜನೆಗೆ ಸಂಬಂಧಿಸಿದ ಪ್ರತಿಕ್ರಿಯೆ)

ಸುಮಂತ್ ರಾಮನ್, ವಿಶ್ಲೇಷಕ

25 ವರ್ಷಗಳ ಹಿಂದೆ

ಮಂಗಳವಾರ, 7-7-1998

• ಅವಶ್ಯ ವಸ್ತುಗಳ ಬೆಲೆ ಏರಿಕೆ: ಲೋಕಸಭೆಯಲ್ಲಿ ಆಕ್ರೋಶ

ನವದೆಹಲಿ, ಜುಲೈ 6– ತರಕಾರಿ, ಅಡುಗೆ ಎಣ್ಣೆ ಸೇರಿದಂತೆ ಅವಶ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿರುವ ಬಗೆಗೆ ಲೋಕಸಭೆಯಲ್ಲಿ ಇಂದು ಪ್ರತಿಪಕ್ಷಗಳ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ಈ ಬಗ್ಗೆ ಪ್ರತ್ಯೇಕ ಚರ್ಚೆಗೆ ಸಿದ್ಧವಿರುವುದಾಗಿ ಸರ್ಕಾರ ಆಶ್ವಾಸನೆ ನೀಡಿತು.

ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ಸೂರ್ಯಕಾಂತ ಪಾಟೀಲ್ ಅವರು ಅವಶ್ಯ ವಸ್ತುಗಳ ಬೆಲೆ ಏರಿಕೆಯನ್ನು ಪ್ರಸ್ತಾಪಿಸಿದರು.

ಟೊಮೆಟೊ ಬೆಲೆಯು ಕೆ.ಜಿ.ಗೆ ₹ 40, ಆಲೂಗಡ್ಡೆ ₹ 15 ಹೀಗೆ ಎಲ್ಲ ಬಗೆಯ ಕಾಯಿಪಲ್ಲೆಗಳು ಮತ್ತು ಜೋಳ, ಅಕ್ಕಿ ಮುಂತಾದ ಆಹಾರಧಾನ್ಯಗಳ ಬೆಲೆಗಳು ವಿಪರೀತವಾಗಿ ಹೆಚ್ಚಿವೆ. ಬಡವರು ಮತ್ತು ಮಧ್ಯಮ ವರ್ಗಗಳ ಜನರು ಜೀವನ ಸಾಗಿಸುವುದೇ ಕಷ್ಟವಾಗಿದೆ ಎಂದು ನುಡಿದರು.

• ಟೀಕೆಗೆ ನೊಂದು ಸಚಿವರ ರಾಜೀನಾಮೆ ಇಂಗಿತ

ಬೆಂಗಳೂರು, ಜುಲೈ 6– 'ನಾವು ಅದಕ್ಷರು, ಅಪ್ರಾಮಾಣಿಕರು ಎಂದು ನಮ್ಮ ಮೇಲೆ ದೂರುಗಳಿದ್ದರೆ ನಾವು ರಾಜೀನಾಮೆ ಕೊಡುತ್ತೇವೆ' ಎಂದು ಐವರು ಒಕ್ಕಲಿಗ ಸಚಿವರು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರಿಗೆ ಸಚಿವ ಸಂಪುಟ ಸಭೆ ವೇಳೆ ರಾಜೀನಾಮೆ ಸಲ್ಲಿಸಲು ಮುಂದಾದ ಅಪರೂಪದ ಘಟನೆ ಇಂದು ಇಲ್ಲಿ ನಡೆದಿದೆ.

ಆದರೆ, ಮುಖ್ಯಮಂತ್ರಿ ಪಟೇಲ್ ಅವರು 'ನಾನು ಯಾರ ರಾಜೀನಾಮೆಯನ್ನೂ ಕೇಳಿಲ್ಲ. ಅದನ್ನು ಕೊಡುವ ಅವಶ್ಯಕತೆಯೂ ಈಗ ಇಲ್ಲ. ರಾಜೀನಾಮೆ ಕೊಟ್ಟರೂ ನಾನು ಅವನ್ನು ಅಂಗೀಕರಿಸುವುದೂ ಇಲ್ಲ' ಎಂದು ಸ್ಪಷ್ಟವಾಗಿ ತಿಳಿಸಿದರು ಎಂದು ಹೇಳಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 7-7-1973

• ಪಾಕ್‌ನಲ್ಲೇ 28ರಂದು ಅಧಿಕಾರಿ ಮಟ್ಟದ ಸಭೆ ನಡೆಸಲು ಸಲಹೆ

ನವದೆಹಲಿ, ಜುಲೈ 6– ಭಾರತ, ಬಾಂಗ್ಲಾದೇಶ ಸಂಯುಕ್ತ ಘೋಷಣೆಯನ್ನು ಆಧರಿಸಿ, ಭಾರತ ಮತ್ತು ಪಾಕಿಸ್ತಾನದ ನಡುವೆ ಅಧಿಕಾರಿ ಮಟ್ಟದ ಚರ್ಚೆ ನಡೆಸುವುದಕ್ಕಾಗಿ ಪಾಕಿಸ್ತಾನವು ಜುಲೈ 28ನೇ ತಾರೀಖನ್ನು ಸಲಹೆ ಮಾಡಿದೆ.

ಭಾರತದ ವಿದೇಶಾಂಗ ಸಚಿವ ಸ್ವರಣ್ ಸಿಂಗ್ ಅವರು ಜುಲೈ 3ರಂದು ಬರೆದ ಪತ್ರಕ್ಕೆ ಪಾಕಿಸ್ತಾನ ಕಳುಹಿಸಿದ ಉತ್ತರವು ನೇರ ಟೆಲಿಫೋನ್ ಸಂಪರ್ಕದಲ್ಲಿ (ಹಾಟ್‌ಲೈನ್) ಗುರುವಾರ ಸಂಜೆ ದೆಹಲಿ ತಲುಪಿತು.

ಕಳೆದ ಬಾರಿ ಸಭೆ ಭಾರತದಲ್ಲಿ ನಡೆದ ಕಾರಣ ಈ ಬಾರಿಯ ಸಮಾವೇಶ ಪಾಕಿಸ್ತಾನದಲ್ಲೇ ನಡೆಯಬೇಕೆಂದು ಪಾಕಿಸ್ತಾನ ಪತ್ರದಲ್ಲಿ ಒತ್ತಾಯಪಡಿಸಿದೆ ಎಂದು ಇಲ್ಲಿನ ಅಧಿಕೃತ ಮೂಲಗಳು ತಿಳಿಸಿವೆ.

• ಕಾಳಿನದಿ– ದೂಧ್‌ಸಾಗರ ಯೋಜನೆ ರಾಜ್ಯದ ಜತೆ ಗೋವಾ ಸಂಧಾನ

ಮದ್ರಾಸ್, ಜುಲೈ 6– ದೂಧ್‌ಸಾಗರದಲ್ಲಿ ತಮ್ಮ ಸರ್ಕಾರ ಪ್ರಾರಂಭಿಸಲಿರುವ ಮೊದಲ ವಿದ್ಯುತ್ ಯೋಜನೆಯನ್ನು ಮೈಸೂರಿನೊಡನೆ ಕೂಡಿಕೊಂಡು ನಿರ್ವಹಿಸುವುದಕ್ಕಾಗಿ ಆ ರಾಜ್ಯದೊಡನೆ ಸಂಧಾನ ನಡೆಸುತ್ತಿರುವುದಾಗಿ ಗೋವಾ ನೀರಾವರಿ ಮತ್ತು ವಿದ್ಯುತ್ ಸಚಿವ ಉಸ್‌ಗಾಂವ್‌ಕರ್ ಅವರು ಇಂದು ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಈ ಸಂಬಂಧ ತಾವು ಮೈಸೂರು ಲೋಕೋಪಯೋಗಿ ಸಚಿವ ಎಚ್.ಎಂ. ಚನ್ನಬಸಪ್ಪ ಹಾಗೂ ಕೇಂದ್ರ ನೀರಾವರಿ ಮತ್ತು ವಿದ್ಯುತ್ ಸಚಿವ ಡಾ. ಕೆ.ಎಲ್. ರಾವ್ ಅವರೊಡನೆ ಮಾತುಕತೆ ನಡೆಸಿರುವುದಾಗಿ ಅವರು ಹೇಳಿದರು.

ಚುನಾವಣೆಯಲ್ಲಿ ಜಾತಿಭೇದ ಮರೆತು ವೋಟು ಮಾಡಿ ಭ್ರಷ್ಟತನ ಸೋಲಿಸಿದವರೇ ಅಲ್ಲಮರು

ಭ್ರಷ್ಟಾಚಾರ ಮೀಮಾಂಸೆ ಮತ್ತು ಜನಕಲ್ಯಾಣ

ವಿಶ್ಲೇಷಣೆ

ಪ್ರಸನ್ನ

ಭ್ರಷ್ಟಾಚಾರ ಎಂದರೆ ಬರೀ ಲಂಚ, ರುಷುವತ್ತುಗಳಲ್ಲ. ಬರೀ ಪೊಲೀಸ್ ಪಡೆಯನ್ನು ಹೆಚ್ಚು ಮಾಡುವುದರಿಂದ ಅಥವಾ ಕಾನೂನುಗಳನ್ನು ಹೆಚ್ಚು ಮಾಡುವುದರಿಂದ ಭ್ರಷ್ಟಾಚಾರ ನಿವಾರಣೆಯಾಗುವುದಿಲ್ಲ. ವ್ಯವಸ್ಥೆ ದೊಡ್ಡದಾದಷ್ಟೂ ಸಂಕೀರ್ಣವಾದಷ್ಟೂ ವ್ಯವಸ್ಥಿತ ಭ್ರಷ್ಟಾಚಾರ ಎಂಬುದು ಸಹ ದೊಡ್ಡದಾಗುತ್ತಾ ಹೋಗುತ್ತದೆ.

ಹೌದು, ಭ್ರಷ್ಟತೆಗೂ ವ್ಯವಸ್ಥೆಗಳಿಗೂ ಬಲವಾದ ನಂಟಿದೆ. ಸರ್ಕಾರಗಳು ಮಾತ್ರವೇ ಏಕೆ ಮತಮಾನ್ಯಗಳು, ಶಾಲೆಗಳು, ಸಂಸಾರಗಳು, ಧರ್ಮಗಳು ಎಲ್ಲವೂ ವ್ಯವಸ್ಥೆಗಳೇ ತಾನೆ? ಎಲ್ಲ ವ್ಯವಸ್ಥೆಗಳೂ ಅದರ ನಾಯಕರ ನೈತಿಕತೆ ಸಡಿಲಗೊಂಡಾಗ ನಾರತೊಡಗುತ್ತವೆ ತಾನೆ? ಆದರೆ, ಇದೇ ಜನ ನೈತಿಕ ಗಟ್ಟಿತನ ತೋರಿದಾಗ ವ್ಯವಸ್ಥೆಗಳು ಬೆಳಗುತ್ತವೆ, ಸಾಮಾನ್ಯ ಸ್ಥಿತಿಯಲ್ಲಿದ್ದಾಗ ಸಾಮಾನ್ಯವಾಗಿ ನಡೆದುಕೊಂಡು ಹೋಗುತ್ತಿರುತ್ತವೆ. ದುರಂತವೆಂದರೆ, ಇಂದಿನದು ನೈತಿಕ ಗಟ್ಟಿತನದ ಯುಗವೂ ಅಲ್ಲ ಅಥವಾ ಸಾಮಾನ್ಯ ಯುಗವೂ ಅಲ್ಲ. ಇದು ಅಸಾಮಾನ್ಯ ಅವಸರದ ಯುಗವಾಗಿದೆ. ಇಂತಹ ಅವಸರದ ಯುಗಗಳಲ್ಲಿ ನೈತಿಕತೆ ಹಾಗೂ ನಿಯಮಗಳನ್ನು ಗಂಭೀರವಾಗಿ ಪರಿಗಣಿಸುವುದೇ ಅಪರಾಧವಾಗುತ್ತದೆ. ಹಾಗಾಗಿ ಭ್ರಷ್ಟಾಚಾರಕ್ಕೆ ಹೇಳಿ ಮಾಡಿಸಿದ ಯುಗವಿದು.

ವ್ಯವಸ್ಥೆಗಳಿಗೆ ಎರಡು ಆಯಾಮಗಳಿರುತ್ತವೆ. ವ್ಯವಸ್ಥೆಯನ್ನು ರೂಪಿಸಿದ ಆಶಯ ಹಾಗೂ ಆಶಯದ ನಿರ್ವಹಣೆಗಾಗಿ ಮಾಡಿಕೊಂಡಿರುವ ವ್ಯವಸ್ಥೆ. ಅಥವಾ, ಆಡಳಿತ ಅಥವಾ ಕಾನೂನು ಅಥವಾ ನೀತಿನಿಯಮ ಅಥವಾ ಆಚರಣೆ. ವ್ಯವಸ್ಥೆ ಎಂತಹದ್ದೇ ಇರಲಿ ಭ್ರಷ್ಟತೆ ಇದ್ದೇ ಇರುತ್ತದೆ. ಏಕೆಂದರೆ, ಮನುಷ್ಯನಿಗೆ ಲಾಲಸೆ ಸಹಜವಾದದ್ದು ತಾನೆ? ಆಶಯಕ್ಕೆ ಆಕಾರ ಕೊಡಬೇಕಾದವರು ನಾವೇ ತಾನೆ? ಕೆಲಸವೊಂದನ್ನು ಯಾಕಾಗಿ ಮಾಡುತ್ತಿದ್ದೇವೆ, ಯಾರಿಗಾಗಿ ಮಾಡುತ್ತಿದ್ದೇವೆ, ಮೂಲ ಆಶಯವಾದರೂ ಏನು ಎಂಬ ಪ್ರಶ್ನೆಗೆ ನಾವು ಪುನಃ ಪುನಃ ಮರಳುತ್ತಿರಬೇಕು. ಮಾತ್ರವಲ್ಲ, ಗಾಂಧೀಜಿ ಹೇಳಿದ ಹಾಗೆ, ಈ ವಿಷಯದಲ್ಲಿ ಗೊಂದಲ ಮೂಡಿದಾಗಲೆಲ್ಲ ಸಮಾಜದ ಕಟ್ಟಕಡೆಯ ದರಿದ್ರನ ದೃಷ್ಟಿಕೋನದಲ್ಲಿ ನಮ್ಮನ್ನು ನಾವೇ ವಿಮರ್ಶಿಸಿಕೊಳ್ಳುತ್ತಿರಬೇಕು. ಆಗಮಾತ್ರ ವ್ಯವಸ್ಥಿತ ಭ್ರಷ್ಟಾಚಾರ ಎಂಬುದು ಕೊಂಚ ಹಿಡಿತದಲ್ಲಿರುತ್ತದೆ. ಹಾಗೆ ನೋಡಿದರೆ, ಆಚರಣೆಗಳ ಬಗೆಗಿನ ಬ್ರಾಹ್ಮಣಿಕೆ ಹಾಗೂ ಆಶಯದ ಬಗೆಗಿನ ಅಸಡ್ಡೆಯೇ ಭ್ರಷ್ಟಾಚಾರದ ಮೂಲವಾಗಿದೆ.

ನನ್ನೀ ಮಾತಿನಿಂದಾಗಿ ಜಾತಿ ಬ್ರಾಹ್ಮಣರು ನೊಂದುಕೊಳ್ಳಬೇಕಾದ ಅಗತ್ಯವಿಲ್ಲ. ಬ್ರಾಹ್ಮಣಿಕೆ ಎಂಬುದು ಯಾವುದೇ ಒಂದು ಜಾತಿಗೆ ಸೀಮಿತವಾದ ರೋಗವಾಗಿ ಉಳಿದಿಲ್ಲ ಇಂದು. ಎಲ್ಲರೂ ಎಲ್ಲವನ್ನೂ ಬರೀ ಮಂತ್ರವನ್ನಾಗಿಸಿ ಬರಿದೇ ಉಗುಳುವುದನ್ನು ಕಲಿತಿದ್ದೇವೆ. ಎಲ್ಲ ಮಹತ್ತರವಾದ ಸಂಗತಿಗಳನ್ನೂ ಸುಲಭ ಕರ್ಮಕಾಂಡಗಳನ್ನಾಗಿಸಿ ಬರಿದೇ ಮೆರೆಸುತ್ತಿದ್ದೇವೆ. ಕೇವಲ ಬೃಹತ್ ಮಂದಿರಗಳು, ಬೃಹತ್ ಮಸೀದಿಗಳು, ಬೃಹತ್ ವಿಧಾನ ಸೌಧಗಳಂತಹವನ್ನು ನಿರ್ಮಿಸುವುದು ಬ್ರಾಹ್ಮಣಿಕೆ ಅಥವಾ ಕೆಂಪುಪಟ್ಟಿ ವ್ಯವಸ್ಥೆ. ಫೈಲುಗಳಿಗೆ ಷರಾ ಬರೆದು ಅದನ್ನು ಪರಿಶುದ್ಧ ಕೆಂಪುಪಟ್ಟಿಯಿಂದ ಬಿಗಿದು ಪರಿಶುದ್ಧ ಕಪಾಟುಗಳಲ್ಲಿ ಜೋಡಿಸಿದರೆ ಜನಕಲ್ಯಾಣ ಸಾಧಿಸಿಬಿಡುತ್ತದೆ ಎಂದು ನಂಬುವ ಪ್ರವೃತ್ತಿಯಿದು.

ಹದಿನಾರನೇ ಶತಮಾನಕ್ಕೆ ಸಂಬಂಧಿಸಿದ ಕತೆಯೊಂದು ಈ ಹೊತ್ತಲ್ಲಿ ನೆನಪಾಗುತ್ತದೆ. ಕಲ್ಯಾಣದ ಕ್ರಾಂತಿ ಮುಗಿದು ನಾಲ್ಕು ಶತಮಾನ ಕಳೆದಿತ್ತು. ಲಿಂಗಾಯತವು ಭದ್ರವಾದ ಒಂದು ಜಾತಿಯಾಗಿ ರೂಪುಗೊಂಡಿತ್ತು. ಕಾಯಕವೆಂದರೆ ಕೌಶಲಪೂರ್ಣವಾದ ಕೈಕೆಲಸ ಎಂಬ ಪರಿಕಲ್ಪನೆ ಕ್ರಮೇಣ ಹಿನ್ನೆಲೆಗೆ ಸರಿದಿತ್ತು. ಬದಲಿಗೆ, ಕಾಯಕವೆಂದರೆ ಲಿಂಗಪೂಜೆ ಎಂಬ ಬ್ರಾಹ್ಮಣಿಕೆ ಮುನ್ನೆಲೆಗೆ ಬಂದಿತ್ತು. ಕಲ್ಯಾಣದ ಕ್ರಾಂತಿಯ ಕಾರ್ಯಕರ್ತರೆಲ್ಲರೂ ಪರಿಶುದ್ಧವಾದ ಕಾವಿ ತೊಟ್ಟು ವಿಭೂತಿ ತೊಟ್ಟು ದಾಸೋಹದ ಹೆಸರಿನಲ್ಲಿ ಭೂರಿ ಭೋಜನ ಉಣ್ಣುತ್ತ ಜಂಗಮ ಬ್ರಾಹ್ಮಣರಾಗಿ ಪರಿವರ್ತಿತರಾಗಿದ್ದರು. ಲಿಂಗಾಯತವು ಕಳೆಗುಂದಿತ್ತು. ಇತ್ತ, ಕಾಯಕಜೀವಿಗಳು ಮತ್ತಷ್ಟು ಹೀನಾಯರಾಗಿದ್ದರು. ಆಗ, ಅಲ್ಲಮರು ಮತ್ತೊಮ್ಮೆ ಎದ್ದು ಬರುತ್ತಾರೆ.

'ಇದು ಸರಿಯಲ್ಲ, ಈಗ ಮತ್ತೊಂದು ಕ್ರಾಂತಿಯ ಅಗತ್ಯವಿದೆ!' ಎಂದು ಅವರು ನಿರ್ಧರಿಸುತ್ತಾರೆ. ಮತ್ತೆ ಕಲ್ಯಾಣದತ್ತ ಹೆಜ್ಜೆಹಾಕುತ್ತಾರೆ. ದೂರದಲ್ಲಿ ಮಹಾಮನೆ ಕಾಣುತ್ತದೆ. ಮಹಾಮನೆಯ ಸುತ್ತ ನೆರೆದಿರುವ ಸಾವಿರಾರು ದಷ್ಟಪುಷ್ಟ ಜಂಗಮಬ್ರಾಹ್ಮಣರು ಕಾಣುತ್ತಾರೆ. 'ಓಹೋ! ಕಾವಿ ಬಟ್ಟೆಯೇ ಮಲಿನವಾಗಿದೆ, ಈಗ ನಾನು ಅದೇ ಬಟ್ಟೆ ತೊಟ್ಟು ಹೋಗಬಾರದು!' ಅನ್ನಿಸಿ, ಕಾವಿವಸ್ತ್ರವನ್ನು ಗಲೀಜು ಮಾಡಿಕೊಳ್ಳುತ್ತಾರೆ ಅಲ್ಲಮರು. ಹರಿದುಕೊಂಡು ಚಿಂದಿಯಾಗಿಸಿಕೊಳ್ಳುತ್ತಾರೆ. ಮೈಯಿಂದ ಕೀವು, ರಕ್ತ ಒಸರುವಂತೆ ಮಾಡಿಕೊಳ್ಳುತ್ತಾರೆ. ಬಾಯಿಂದ ಹೆಂಡದ ದುರ್ನಾತ ಒಸರಿಸಿಕೊಳ್ಳುತ್ತಾರೆ. ಮಹಾಮನೆಯ ಮುಂದೆ ನಿಂತು, 'ಅಪ್ಪಾ! ಶರಣು ಬಂದಿದ್ದೇನೆ, ಹಸಿದಿದ್ದೇನೆ, ಒಳಗೆ ಬಿಡಿ' ಅನ್ನುತ್ತಾರೆ. ಜಂಗಮರು ಗಲೀಜು ದರಿದ್ರನನ್ನು ಥಳಿಸಿ ಅಟ್ಟಿಬಿಡುತ್ತಾರೆ. ಅಲ್ಲಮರು ರೋಷಾವೇಶ ತೋರಿಸುತ್ತ ಅಸ್ಪೃಶ್ಯನ ಮನೆಯ ತಿಪ್ಪೆಯ ಮೇಲೆ ಮಲಗಿಬಿಡುತ್ತಾರೆ.

ಇತ್ತ ಮಹಾಮನೆಯಲ್ಲಿ ಅರಿವಿನ ಗಂಟೆ ಬಾರಿಸುತ್ತದೆ. ಬಸವಣ್ಣನವರಿಗೆ, 'ಓಹೋ ದೇವರು ಬಂದರು!' ಎಂಬ ಅರಿವಾಗುತ್ತದೆ. ನೀಲಾಂಬಿಕೆಯೊಟ್ಟಿಗೆ ಧಾವಿಸಿ ಹೊರಬರುತ್ತಾರೆ ಅವರು. ಗಲೀಜು ದರಿದ್ರನ ವೇಷಧಾರಿ ಅಲ್ಲಮರನ್ನು ಕಾಡಿಬೇಡಿ ತಿಪ್ಪೆಯಿಂದೆಬ್ಬಿಸಿ ಮಹಾಮನೆಯೊಳಗೆ ಕರೆತರುತ್ತಾರೆ. ಕಾಲಿಗೆ ಬಿದ್ದು ಕ್ಷಮೆ ಕೋರುತ್ತಾರೆ. ಅಲ್ಲಮರು, ಬ್ರಾಹ್ಮಣಿಕೆ ತೋರಿದ ಜಂಗಮರನ್ನು ಶಪಿಸಿ, ಪ್ರಮಥರನ್ನು ಕ್ಷಮಿಸಿ ಧರ್ಮೋದ್ಧಾರ ಮಾಡುತ್ತಾರೆ. ಇದು ಕತೆ. ಈಗ, ನಲವತ್ತು ಪರ್ಸೆಂಟ್ ಭ್ರಷ್ಟಾಚಾರದತ್ತ ಹೊರಳೋಣ.

ಧರ್ಮಗಳಿಗೆ ಮಾತ್ರವಲ್ಲ ಸರ್ಕಾರಗಳಿಗೂ ಒಬ್ಬ ಅಲ್ಲಮರ ಅಗತ್ಯವಿದೆ ಇಂದು. ನೀವೇ ನೋಡಿ! ವ್ಯವಸ್ಥೆ ಹಿಂದೆಂದಿಗಿಂತಲೂ ಭವ್ಯವಾಗಿದೆ. ಅಲ್ಲಮರನ್ನು ಒಳಗೇ ಸೇರಿಸದಂತೆ ತಡೆದ ಜಂಗಮ ಪಡೆಯಂತೆಯೇ ವಿಧಾನಸೌಧದ ಸುತ್ತ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಸೇನೆ ನೆರೆದಿದೆ. ಪೊಲೀಸರ ಪಡೆ ನೆರೆದಿದೆ. ಕಬ್ಬಿಣದ ಬೇಲಿಗಳು, ಬಂದೂಕುಗಳು ನೆರೆದಿವೆ. ಆದರೆ ಇವು ಕಾರಿನಲ್ಲಿ ಆಗಮಿಸುವ ದುಡ್ಡಿನ ಕುಳಗಳನ್ನು ತಡೆಯುವುದಿಲ್ಲ. ಏಕೆಂದರೆ ಅವರು ನಾರುತ್ತಿರುವುದಿಲ್ಲ, ಮುಗುಳುನಗೆ ಬೀರುತ್ತಿರುತ್ತಾರೆ. ಬಿಳಿ ವ್ಯವಸ್ಥೆ ತಡೆಹಿಡಿಯುವುದು 'ಗಲೀಜು' ಜನರನ್ನು ಮಾತ್ರ.

ಕೌಶಲಪೂರ್ಣನಾಗಿದ್ದ ಕಾಯಕಜೀವಿ ಇಂದು ನಿರುದ್ಯೋಗಿಯಾಗಿದ್ದಾನೆ. ಕೌಶಲ ಮರೆತಿದ್ದಾನೆ. ಅತ್ತ, ಜಂಗಮರು ಭವ್ಯರಾಗಿದ್ದಾರೆ. ಒಡೆದ ಹಾಲಿನಂತಾಗಿದೆ ಇಂದಿನ ವ್ಯವಸ್ಥೆ. ಮೇಲೆ ನಿಂತ ಹಾಲೂ ವಿಷವಾಗಿದೆ, ಕೆಳಗುಳಿದ ನೀರೂ ವಿಷವಾಗಿದೆ. ಕರ್ನಾಟಕದ ಸಮಕಾಲೀನ ಸಂದರ್ಭದಲ್ಲಿ ಭ್ರಷ್ಟ ಜಂಗಮರಾರು, ಕರ್ಮಕಾಂಡಗಳಲ್ಲಿ ಮುಳುಗಿರುವ ಪ್ರಮಥರಾರು, ಇವರೆಲ್ಲರನ್ನೂ ಬಡಿದೆಬ್ಬಿಸಬಲ್ಲ ಅಲ್ಲಮರಾರು ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಸಿದ್ದರಾಮಯ್ಯ ಅವರಾಗಲೀ ಯಡಿಯೂರಪ್ಪನವರಾಗಲೀ ಪ್ರಮಥರಾಗಬಲ್ಲರೇ ವಿನಾ ಅಲ್ಲಮರಾಗಲಾರರು.

ಒಂದರ್ಥದಲ್ಲಿ, ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಜಾತಿಭೇದ ಮರೆತು ವೋಟು ಮಾಡಿ ಭ್ರಷ್ಟತೆಯನ್ನು ಸೋಲಿಸಿದ ಬಡಜನತೆಯೇ ಅಲ್ಲಮರು, ಅರ್ಥಾತ್ ಅವರಂತೆ ಕಾಣುವ ನಾಯಕನೇ ಅಲ್ಲಮರು. ಅವರಿಗೆ ಪೂರಕವಾಗಿ ನಿಲ್ಲಬೇಕು ನಾವು, ಅವರನ್ನು ತಿದ್ದಿ, ಅವರ ಕಾಯಕವನ್ನು ಅವರಿಗೆ ಹಿಂದಿರುಗಿಸಿ ಕೊಡಬೇಕು ನಾವು. ಅವರ ನಿರಾಶೆ, ಆಲಸ್ಯವನ್ನು ನಿವಾರಿಸಬೇಕು. ಗಾಂಧೀಜಿ ಪ್ರತಿಪಾದಿಸಿದ ರಚನಾತ್ಮಕ ಚಳವಳಿ ಇದುವೇ ಆಗಿದೆ. ಅಲ್ಲಮರು ಸರ್ಕಾರಗಳಿಂದ ಹಾಗೂ ಅಧಿಕಾರ ಸ್ಥಾನಗಳಿಂದ, ಗಾಂಧೀಜಿಯಂತೆಯೇ ದೂರ ಉಳಿಯಬೇಕಾಗಿದೆ.

ಭ್ರಷ್ಟಾಚಾರ ನಿವಾರಣೆಗೂ ಗ್ರಾಮೋದ್ಯೋಗ ಸೃಷ್ಟಿಗೂ ಗಾಢವಾದ ಸಂಬಂಧವಿದೆ. ಅಷ್ಟೇ ಏಕೆ, ಪಾರಂಪರಿಕವೆಂದು ನಾವು ಭಾವಿಸುವ ಕಾಯಕಕ್ಕೂ ಆಧುನಿಕವೆಂದು ಭಾವಿಸುವ ಸಮಾಜವಾದಕ್ಕೂ ಸಂಬಂಧವಿದೆ. ಗ್ರಾಮೋದ್ಯೋಗ ಎಂಬುದು ನಾಳಿನ ಉದ್ದಿಮೆ ಎಂದು ತಿಳಿಯಬೇಕಿದೆ ನಾವು. ಯಂತ್ರ ಮಾನವನ ಮೇಲೆ ದೇವರು ಮುನಿದಿದ್ದಾನೆ ಎಂದು ತಿಳಿಯಬೇಕಿದೆ ನಾವು. ಹೇಗೂ, ಭೂಮಿ ಬಗೆಯದೆ, ಕಾಡು ಕಡಿಯದೆ, ಬೆಂಕಿಯುರಿಸದೆ ನಡೆಸಬಹುದಾದ ಉದ್ದಿಮೆಗಳ ಅಗತ್ಯ ಒದಗಿಬಂದಿದೆ ಈಗ. ಗರಿಷ್ಠ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಮಾಡುತ್ತಲೇ, ಅತ್ತ ಪ್ರಕೃತಿಯನ್ನೂ ಸಲಹುತ್ತಲೇ, ಅತ್ತ ಧರ್ಮ ಹಾಗೂ ಜಾತ್ಯತೀತತೆ ಎರಡನ್ನೂ ಬೆಸೆಯುತ್ತಲೇ ಬದುಕು ಕಟ್ಟಿಕೊಡಬಲ್ಲ ರಾಜಕಾರಣದ ಅಗತ್ಯವಿದೆ ಇಂದು.

ಹೊರಗೆ ದರಿದ್ರರೂಪ ಧರಿಸಿ ಒಳಗೆ ಹೃದಯವೈಶಾಲ್ಯ ಮೆರೆಯಬಲ್ಲ ಅಲ್ಲಮರನ್ನು, ನಾವು ಕನ್ನಡಿಗರು, ಮಂಟೇಸ್ವಾಮಿಗಳೆಂದು ಕರೆದು ಗೌರವಿಸಿದ್ದೇವೆ. ಮಂಟೇಸ್ವಾಮಿಗಳ ಹಾದಿ ತುಳಿಯದೆ ಭ್ರಷ್ಟಾಚಾರ ನಿವಾರಣೆ ಸಾಧ್ಯವಿಲ್ಲ.

ಚುರುಮುರಿ

ದಮ್ಮು, ತಾಕತ್ತು!

• ಬಿ.ಎನ್.ಮಲ್ಲೇಶ್

'ನೋಡ್ರಪ, ಯಾರ್‍ಯಾರ್ದು ಎಷ್ಟೆಷ್ಟು ಬಾಕಿ ಐತೆ ಮೊದ್ಲು ತೀರ್ಸಿ, ಇಲ್ಲಾಂದ್ರೆ ಇವತ್ತಿಂದ ಚಾ-ತಿಂಡಿ ಇಲ್ಲ' ಹೋಟೆಲ್ ಮಂಜಮ್ಮ ಕಡ್ಡಿ ಮುರಿದಂಗೆ ಹೇಳಿದಾಗ ಗುಡ್ಡೆ ಆಕ್ಷೇಪಿಸಿದ. 'ಅಲ್ಲ ಮಂಜಮ್ಮ, ಒಂದೇಪಟಗೆ ಹಂಗಂದ್ರೆ ಹೆಂಗೆ? ಕೊಡ್ತೀವಿ ಬಿಡು, ಎಲ್ಲಾದ್ರು ಓಡಿ ಹೋಗ್ತೀವಾ?' ಅಂದ.

'ಲೇ ದುಬ್ಬೀರ, ನಿಂದೇ ಬಾಕಿ ಜಾಸ್ತಿ ಇರೋದು. ಯಾರ್‍ಯಾರ್ಗೋ ಮಿನಿಸ್ಟ್ರು ಲೆಟರ್ ಕೊಡಿಸ್ತೀಯಂತೆ, ಟ್ರಾನ್ಸ್‌ಫರ್ ಮಾಡಿಸ್ತೀಯಂತೆ, ಪಾಪ ಮಂಜಮ್ಮನ ಬಾಕಿ ತೀರ್ಸಕ್ಕೆ ಆಗಲ್ವಾ?' ತೆಪರೇಸಿ ಪ್ರಶ್ನಿಸಿದ.

'ಅಲ್ಲೋ ದುಬ್ಬೀರ, ಒಂದೊಂದು ಟ್ರಾನ್ಸ್‌ಫರ್‌ಗೆ 30 ಲಕ್ಷ ಅಂತೆ? ನಿಂಗೂ ಕಮಿಷನ್ ಬಂದಿರಲ್ವಾ?' ಗುಡ್ಡೆ ಕೇಳಿದ.

'ತಾಯ್ ಸಾಕ್ಷಿ, ಅಗ್ನಿ ಸಾಕ್ಷಿ ನಾನು ಅದೆಲ್ಲ ಮಾಡಲ್ಲ ಕಣ್ರಲೆ, ಸುಮ್ನೆ ತಲೆ ಕೆಡಿಸಬ್ಯಾಡ್ರಿ...' ದುಬ್ಬೀರ ರೇಗಿದ.

'ಅಲ್ಲ 'ಅಗ್ನಿ ಸಾಕ್ಷಿ' ಸೀರಿಯಲ್ ಮುಗೀತು ಬಿಡು, ನಮ್ಮತ್ರ ಪೆನ್ ಡ್ರೈವ್ ಸಾಕ್ಷಿ ಐತೆ'.

'ಪೆನ್ ಡ್ರೈವೋ ಸೀಡಿನೋ ಅದ್ರಾಗೆ ಏನೈತಿ ತೋರ್ಸು ನೋಡಾಣ'.

'ಅದನ್ನ ನಿಂಗ್ಯಾಕೆ ತೋರಿಸ್ಲಿ? ಮಂಜಮ್ಮನ ಬಾಕಿ ಕೊಡ್ಲಿಲ್ಲ ಅಂದ್ರೆ ಟಿ.ವಿ.ಯೋರಿಗೆ ತೋರಿಸ್ತೀನಿ ಅಷ್ಟೆ'.

'ಲೇ ಗುಡ್ಡೆ, ನಿಂಗೆ ದಮ್ಮಿದ್ರೆ, ತಾಕತ್ತಿದ್ರೆ ಇವತ್ತೇ ಟಿ.ವಿ.ಗೆ ಹಾಕ್ಸಲೆ, ನಾನೂ ನೋಡ್ತೀನಿ' ದುಬ್ಬೀರ ರಾಂಗಾದ.

'ಅದ್ನ ಟೈಂ ಬಂದಾಗ ತೋರಿಸ್ತೀನಿ, ನಿಂಗೂ ದಮ್ಮಿದ್ರೆ, ತಾಕತ್ತಿದ್ರೆ ಮಂಜಮ್ಮನ ಬಾಕಿ ತೀರ್ಸಲೆ ನೋಡಾಣ' ಗುಡ್ಡೆಯೂ ತಿರುಗೇಟು ಕೊಟ್ಟ.

'ಗುಡ್ಡೆ ಹತ್ರ ಪೆನ್ನೂ ಇಲ್ಲ, ಪೆನ್ಸಿಲ್ಲೂ ಇಲ್ಲ, ಸುಮ್ನೆ ಬುರುಡೆ ಕಣ್ರಲೆ' ಕೊಟ್ರೇಶಿ ನಕ್ಕ.

'ಲೇ ಕೊಟ್ರ ಬ್ಯಾಡ ನೋಡು... ನಿಂಗೆ ದಮ್ಮಿದ್ರೆ, ತಾಕತ್ತಿದ್ರೆ...'

'ಸ್ಟಾಪ್...' ಗುಡ್ಡೆ ಮಾತನ್ನ ಅರ್ಧಕ್ಕೇ ತಡೆದ ತೆಪರೇಸಿ, 'ಕೊಟ್ರಂಗೆ ದಮ್ಮು ಐತೆ, ತಾಕತ್ತಿಲ್ಲ'.

'ಅಂದ್ರೆ?'

'ಅಂದ್ರೇ ಕೊಟ್ರಂಗೆ ದಮ್ಮು, ಐಮೀನ್ ಅಸ್ತಮಾ ಐತೆ, ತಾಕತ್ತಿಲ್ಲ ಅಂದೆ'.

ತೆಪರೇಸಿ ಮಾತಿಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಬಿಡುಗಡೆಯ ಹಾದಿಗೆ ಸೃಜನಶೀಲ ಸಾಹಿತ್ಯ

ಶಾಲಾ ಕಾಲೇಜು ಪಠ್ಯವಾಗಿರುತ್ತಿದ್ದ ಸೃಜನಶೀಲ ಸಾಹಿತ್ಯದಿಂದ, ಸಾಮಾಜಿಕ ಸಂಬಂಧಗಳ ನಡುವಿನ ಬೇಲಿಗಳನ್ನು ಮೀರುವ ಹೊಸ ಅರಿವೊಂದು ನಮಗೆ ದಕ್ಕುತ್ತಿತ್ತು

• ಡಾ. ಕಿರಣ್ ಎಂ. ಗಾಜನೂರು

ಕುಂ.ವೀರಭದ್ರಪ್ಪ ಅವರ 'ದೇವರ ಹೆಣ' ಎಂಬ ಕಥೆಯು ಪ್ರಬಲ ಜಾತಿಯ ಪ್ರಜ್ಞೆ ಹೇಗೆ ದಲಿತ ಸಮುದಾಯದ ಹಸಿವನ್ನು ಅಪಮಾನಕ್ಕೆ ಒಡ್ಡುತ್ತದೆ ಎಂಬುದನ್ನು ವಿಶ್ಲೇಷಿಸುತ್ತದೆ. ಈ ಮೂಲಕ 'ದಲಿತರ ಸಮಸ್ಯೆ ಹಸಿವಷ್ಟೇ ಅಲ್ಲ ಅಪಮಾನವೂ ಹೌದು' ಎಂಬ ಅರಿವನ್ನು ನನಗೆ ಕಟ್ಟಿಕೊಟ್ಟ ಕಥೆ ಇದು. ಅದಾದ ನಂತರ ಪದವಿಯಲ್ಲಿ ಲಕ್ಷ್ಮಣ ಗಾಯಕವಾಡ ಅವರ 'ಉಚಲ್ಯಾ' ಆತ್ಮಕಥೆಯ ಓದು, ನಮ್ಮ ಸಮಾಜದಲ್ಲಿನ ಜಾತಿ ಆಧರಿಸಿದ ನಡವಳಿಕೆ ಕುರಿತು ನನ್ನಲ್ಲಿ ಹೇವರಿಕೆ ಹುಟ್ಟಿಸಿತ್ತು. ನಂತರ ಓದಿದ ಶಿವರಾಮ ಕಾರಂತರ 'ಚೋಮನ ದುಡಿ' ಜಾತಿ ಅಸಮಾನತೆ ಕುರಿತ ನನ್ನ ಆಲೋಚನೆಗಳನ್ನು ಮತ್ತೊಂದು ಹಂತಕ್ಕೆ ವಿಸ್ತರಿಸಿತ್ತು.

ಅಲ್ಲಿಯತನಕ, ಹಳ್ಳಿಯಲ್ಲಿ ದಲಿತರಿಗೆ ಪ್ರತ್ಯೇಕ ಕೇರಿ, ಅವರನ್ನು ಮನೆಗೆ ಸೇರಿಸದಿರುವಂತಹ ಸಂಗತಿಗಳು ಸಹಜವಾಗಿ ಕಾಣುತ್ತಿದ್ದ ನನಗೆ, ಈ ಸೃಜನಶೀಲ ಬರಹಗಳು ಕಣ್ಣು ತೆರೆಸಿದ್ದವು. ನನ್ನದೇ ಊರಿನಲ್ಲಿನ ಈ ಪ್ರತ್ಯೇಕತೆಯ ಹಿಂದಿರುವ ರೋಗಗ್ರಸ್ತ ಮನಃಸ್ಥಿತಿಯನ್ನು ವಿರೋಧಿಸುವ ಹುಚ್ಚುಧೈರ್ಯವನ್ನು ತುಂಬಿದ್ದವು.

ಇಂಥ ತಾರತಮ್ಯವನ್ನು ಹೋಗಲಾಡಿಸಬೇಕೆಂಬ ತೀವ್ರ ಉಮೇದಿನಲ್ಲಿ, ನಾಲ್ಕಾರು ಹುಡುಗರನ್ನು ಸೇರಿಸಿಕೊಂಡು, ದಲಿತರ ಕೇರಿಯಲ್ಲಿ ಗಣಪತಿ ಮೂರ್ತಿಯನ್ನು ಕೂರಿಸಿಬಿಟ್ಟಿದ್ದೆ! ಏನಾಗುತ್ತಿದೆ ಎಂದು ಆರಂಭದಲ್ಲಿ ಯಾರಿಗೂ ಅರ್ಥವಾಗಲಿಲ್ಲ. ಆದರೆ ಸಂಜೆಯ ಹೊತ್ತಿಗೆ ಇಡೀ ಊರು ನನ್ನನ್ನು ವಿರೋಧಿಸಿತ್ತು, ಹೊಡೆಯುವುದೊಂದು ಬಾಕಿ. ದೊಡ್ಡವರ(?) ಮಧ್ಯಪ್ರವೇಶದಿಂದ 'ಊರಿಗೆ ಒಂದೇ ಗಣಪತಿ ಇಡಬೇಕು, ಅದೂ ದೇವಸ್ಥಾನದಲ್ಲಿ ಇರಬೇಕು' ಎಂದು ಸಬೂಬು ಹೇಳಿ, ನಮ್ಮ ಗಣಪತಿ ಮೂರ್ತಿಯನ್ನು ರಾತ್ರೋರಾತ್ರಿ ಎತ್ತಿಕೊಂಡು ಹೋಗಿದ್ದರು.

ಈಗ ಏಕೆ ಈ ಪ್ರಕರಣ ನೆನಪಾಯಿತು ಅಂದರೆ, ನಮ್ಮ ಶಾಲಾ ಕಾಲೇಜು ಪಠ್ಯಗಳ ಭಾಗವಾಗಿರುತ್ತಿದ್ದ ಸೃಜನಶೀಲ ಸಾಹಿತ್ಯ ಬರಹಗಳು ನಮ್ಮ ಸಮಾಜದಲ್ಲಿ ಜಾತಿ ಸಮಸ್ಯೆಯನ್ನು, ಅದು ಸೃಷ್ಟಿಸುವ ಸಾಮಾಜಿಕ ಅಸಮಾನತೆಯನ್ನು ಪರಿಣಾಮಕಾರಿಯಾಗಿ ನಮಗೆ ದಾಟಿಸುತ್ತಿದ್ದವು. ಅವುಗಳನ್ನು ಓದುತ್ತಿದ್ದ ನಮಗೆ ನಮ್ಮ ಸಮಾಜವನ್ನು ಅರ್ಥಮಾಡಿಕೊಳ್ಳುವ, ಸಾಮಾಜಿಕ ಸಂಬಂಧಗಳ ನಡುವಿನ ಬೇಲಿಗಳನ್ನು ಮೀರುವ ಹೊಸ ಅರಿವೊಂದು ದಕ್ಕುತ್ತಿತ್ತು. ಆದರೆ ಇಂದು ಕಾಲ ಬದಲಾಗಿದೆ. ಸೃಜಲಶೀಲ ಸಾಹಿತ್ಯದ ಜಾಗದಲ್ಲಿ ಜಾತಿವಾದಿ, ಕೋಮುವಾದಿ ನಿರೂಪಣೆಗಳುಳ್ಳ ಬರಹಗಳು ಡಿಜಿಟಲ್ ಮಾಧ್ಯಮದ ಮೂಲಕ ಜನಸಮುದಾಯವನ್ನು ತಲುಪುತ್ತಿವೆ. ಸಾಮಾಜಿಕ ಜಾಲತಾಣಗಳು ಯಾವ ಅಡೆತಡೆಯೂ ಇಲ್ಲದೆ ಜಾತಿ, ಧರ್ಮ ಕುರಿತ ಹಿಂಸಾತ್ಮಕ ಬರಹ ಪ್ರಕಟಿಸುತ್ತಿವೆ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗವು 2016ರಲ್ಲಿ ಪ್ರಕಟಿಸಿದ 'ಜಾತಿ ಆಧಾರಿತ ತಾರತಮ್ಯ' ಕುರಿತ ವರದಿಯು 'ಜಾತಿ ಎಂಬ ರೋಗ ಇಂದು ವಿಶ್ವವ್ಯಾಪಿಯಾಗುತ್ತಿದೆ' ಎಂಬ ಸಂಗತಿಯನ್ನು ಹೊರಹಾಕಿದೆ. ವಿಶ್ವಸಂಸ್ಥೆಯ ಮತ್ತೊಂದು ವರದಿಯು ಭಾರತದಲ್ಲಿ ಕೋಟ್ಯಂತರ ಜನರ ಮೇಲೆ ನಡೆಸಲಾಗುತ್ತಿರುವ ಅಮಾನವೀಯ, ಅನಾಗರಿಕ ನಡವಳಿಕೆಗಳನ್ನು ಜಾತಿಯ ಆಧಾರದಲ್ಲಿ ಸಮರ್ಥಿಸಲಾಗುತ್ತಿದೆ ಎಂಬ ಆಘಾತಕಾರಿ ವಿಷಯವನ್ನು ಪ್ರಸ್ತಾಪಿಸುತ್ತದೆ.

ಈ ಎಲ್ಲಾ ಸಂಗತಿಗಳನ್ನು ಮುಂದಿಟ್ಟುಕೊಂಡು, ಈಗ ಮಧ್ಯಪ್ರದೇಶದಲ್ಲಿ ಪ್ರವೇಶ್ ಶುಕ್ಲಾ ಎಂಬ ಜಾತಿವಾದಿಯು ಬುಡಕಟ್ಟು ಯುವಕನೊಬ್ಬನ ಮೇಲೆ ಮೂತ್ರ ವಿಸರ್ಜನೆ ಮಾಡಿರುವ ಕ್ರೌರ್ಯವನ್ನು, ನಮ್ಮದೇ ಕರ್ನಾಟಕದ ಕೋಲಾರ ಮತ್ತು ಬಳ್ಳಾರಿಯಲ್ಲಿ ಸ್ವಂತ ಕುಟುಂಬದವರೇ ಇತ್ತೀಚೆಗೆ ನಡೆಸಿದ ಮರ್ಯಾದೆಗೇಡು ಹತ್ಯೆಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಜೊತೆಗೆ ಇವರಿಗೆ ಇಷ್ಟು ಧೈರ್ಯ ಎಲ್ಲಿಂದ ಬಂತು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ. ಇದಕ್ಕೆ ಉತ್ತರವಾಗಿ ಮೊದಲು ಜಾತಿಯ ಹಿಂಸೆಯನ್ನು 'ವ್ಯಕ್ತಿಗತ ಹಿಂಸೆ' ಎಂದು ವಿಶ್ಲೇಷಿಸುವ ಕ್ರಮವನ್ನು ಬಿಡಬೇಕಿದೆ.

2012ರಲ್ಲಿ ಪ್ರಕಟವಾದ ಜೆಫ್ರಿ ಸಿ. ಅಲೆಕ್ಸಾಂಡರ್ ಅವರ 'ಟ್ರಾಮ: ಎ ಸೋಷಿಯಲ್ ಥಿಯರಿ' ಎಂಬ ಪುಸ್ತಕದಲ್ಲಿ, ಹೇಗೆ ನಿರ್ದಿಷ್ಟ ಜಾತಿಗಳಿಗೆ ಸೇರಿದ ಬಿಡಿ ಬಿಡಿ ವ್ಯಕ್ತಿಗಳ ಮೇಲೆ ನಡೆಯುವ ದಾಳಿಗಳು ಆಳದಲ್ಲಿ ಆ ಒಟ್ಟು ಸಮುದಾಯದ ಮೇಲಿನ ದಾಳಿಗಳಾಗಿರುತ್ತವೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಭಾರತದಲ್ಲಿ ಕುದುರೆ ಓಡಿಸಿದ್ದಕ್ಕೆ, ಮೀಸೆ ಬಿಟ್ಟಿದ್ದಕ್ಕೆ, ದೇವಸ್ಥಾನ ಪ್ರವೇಶಿಸಿದ್ದಕ್ಕೆ, ಕೊನೆಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ಹಾಡಿನ ರಿಂಗ್ ಟೋನ್ ಇಟ್ಟುಕೊಂಡ ಕಾರಣಕ್ಕೇ ದಲಿತ ಸಮುದಾಯದ ಹುಡುಗರ ಮೇಲೆ ಹೇಗೆ ಭೀಕರ ದಾಳಿಗಳಾಗುತ್ತವೆ, ಕೊಲೆಗಳಾಗುತ್ತವೆ ಎಂಬ ಅಂಶವನ್ನು ವಕೀಲರಾದ ಪ್ರಶಾಂತ್ ಭವರೇ ವಿಶ್ಲೇಷಿಸಿದ್ದಾರೆ.

ಈ ಸಮಸ್ಯೆಯನ್ನು ಮೀರುವ ಹಾದಿ ಯಾವುದು ಎಂಬುದಕ್ಕೆ ಅಂಬೇಡ್ಕರ್ ಅವರೇ ಉತ್ತರವಾಗುತ್ತಾರೆ. ಅವರ ಪ್ರಕಾರ, ಇಂದು ಎಲ್ಲ ನಾಗರಿಕರಿಗೆ ಸಾಂವಿಧಾನಿಕ ಹಕ್ಕುಗಳಿದ್ದರೂ ಅವುಗಳನ್ನು ಸಂರಕ್ಷಿಸಿಕೊಳ್ಳಲು ನಮಗೆ ಸಾಧ್ಯವಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ ಉತ್ತರ 'ಇಲ್ಲ' ಎಂಬುದಾಗಿದೆ. ಏಕೆಂದರೆ 'ಬರೀ ಕಾನೂನುಗಳ ಮೂಲಕವೇ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಾಧ್ಯವಿಲ್ಲ. ನಾವು ರೂಪಿಸಿಕೊಳ್ಳುವ ಸಾಮಾಜಿಕ ಪ್ರಜ್ಞೆ ಮತ್ತು ನೈತಿಕತೆಯು ಸಾಂವಿಧಾನಿಕ ಹಕ್ಕುಗಳನ್ನು ಗುರುತಿಸಿದಾಗ ಅವುಗಳ ರಕ್ಷಣೆ ಸಾಧ್ಯ' ಎಂಬ ವಾದವನ್ನು ಮುಂದಿಡುತ್ತಾರೆ.

ಈ ಅರ್ಥದಲ್ಲಿ ಸೃಜನಶೀಲ ಸಾಹಿತ್ಯವನ್ನು ಶಿಕ್ಷಣದ ಮೂಲಕ ಹೆಚ್ಚು ಹೆಚ್ಚು ಒಳಗೊಳ್ಳುವುದು ಜಾತಿಯ ಕೂಪದಿಂದ ಬಿಡುಗಡೆಯಾಗುವ ಒಂದು ಹಾದಿ ಆಗಬಹುದು ಅನ್ನಿಸುತ್ತದೆ.

ವಾಚಕರ ವಾಣಿ

ಕಲಾಪಕ್ಕೆ ಗೈರು: ಹೆಸರು ಬಹಿರಂಗಗೊಳ್ಳಲಿ

ಕೆಲವು ಶಾಸಕರು ವಿಧಾನಸಭೆಯ ಅಧಿವೇಶನಕ್ಕೆ ಸೂಕ್ತ ಕಾರಣಗಳಿಲ್ಲದೇ ಗೈರುಹಾಜರಾಗುತ್ತಿದ್ದಾರೆ. ಜನರು ತಮ್ಮನ್ನು ಆಯ್ಕೆ ಮಾಡಿ ಕಳಿಸಿರುವುದು ಶಾಸನಸಭೆಗಳಲ್ಲಿ ಪಾಲ್ಗೊಂಡು ಕ್ಷೇತ್ರದ ಪ್ರಜೆಗಳ ಕಷ್ಟ ಕಾರ್ಪಣ್ಯಗಳಿಗೆ ಧ್ವನಿಯಾಗಲಿ, ಅವುಗಳ ಕುರಿತು ಸದನದಲ್ಲಿ ಚರ್ಚೆಯಾಗುವಂತೆ ನೋಡಿಕೊಳ್ಳಲಿ ಎಂಬ ಕಾರಣಕ್ಕೆ ಎಂಬುದನ್ನು ಜನಪ್ರತಿನಿಧಿಗಳು ಮರೆಯಬಾರದು.

ಅನವಶ್ಯವಾಗಿ ಗೈರುಹಾಜರಾಗುವ ಶಾಸಕರ ಹೆಸರನ್ನು ಮಾಧ್ಯಮಗಳಲ್ಲಿ ಪ್ರಕಟಿಸಲು ವಿಧಾನಸಭೆಯ ಸ್ಪೀಕರ್ ಸುತ್ತೋಲೆ ಹೊರಡಿಸಬೇಕು. ಇದರಿಂದ ಆಗಬಹುದಾದ ಮುಜುಗರದಿಂದ ತಪ್ಪಿಸಿಕೊಳ್ಳುವ ಸಲುವಾಗಿಯಾದರೂ ನಮ್ಮನ್ನು ಆಳುವವರು ಅಧಿವೇಶನಕ್ಕೆ ಸರಿಯಾಗಿ ಹಾಜರಾಗಬಹುದು.

ರಿಯಾಝ್ ಅಹ್ಮದ್, ರೋಣ

ನಿರರ್ಥಕ ಆಚರಣೆ ಸಲ್ಲ, ಬೇಕು ಜಾಗೃತಿ

ಬೆಳಗಾವಿ ಜಿಲ್ಲೆಯ ಮೂಡಲಗಿಯಲ್ಲಿ ಮಳೆಗಾಗಿ ಪ್ರಾರ್ಥಿಸಿ ವ್ಯಾಪಾರಸ್ಥರು ನಾಲ್ಕು ಶುಕ್ರವಾರ, ಒಂದು ಮಂಗಳವಾರ ಅಂಗಡಿಗಳನ್ನು ಬಂದ್ ಮಾಡಿ, ಊರಿನ ದೇವತೆಗಳಿಗೆ ಹರಕೆ ತೀರಿಸಿದ್ದು ವರದಿಯಾಗಿದೆ (ಪ್ರ.ವಾ., ಜುಲೈ 5). ರಾಜ್ಯದಲ್ಲಿ ಈ ಮುಂಗಾರಿನ ಅವಧಿಯಲ್ಲಿ ರೈತರ ಬಿತ್ತನೆಗೆ ಅಗತ್ಯವಾದ ಮಳೆಯ ಕೊರತೆ ಎದುರಾಗಿದೆ. ಜಲಾಶಯಗಳು ಬರಿದಾಗಿದ್ದು, ಬರಗಾಲದ ಆತಂಕ ತಲೆದೋರಿದೆ. ಮಳೆಗಾಗಿ ಪ್ರಾರ್ಥಿಸಿ ಜನರು ಕಪ್ಪೆಗಳ ಮದುವೆ, ಕತ್ತೆಗಳ ಮದುವೆ, ದೇವರಿಗೆ ವಿಶೇಷ ಪೂಜೆ, ಹೋಮ, ಹವನ, ವ್ರತಗಳನ್ನು ಮಾಡುತ್ತಿದ್ದಾರೆ.

ಇಂತಹ ಆಚರಣೆಗಳಿಂದ ಜನರಿಗೆ ತುಸು ನೆಮ್ಮದಿ, ಆಶಾಭಾವ ಮೂಡಬಹುದು. ಆದರೆ ವೈಜ್ಞಾನಿಕ ಯುಗದಲ್ಲಿ ಈ ಬಗೆಯ ಆಚರಣೆಗಳು ನಿರರ್ಥಕ ಎನಿಸುತ್ತವೆ. ಅರಣ್ಯ ಇಲಾಖೆ, ಶಿಕ್ಷಣ ಇಲಾಖೆ, ಸಂಘ ಸಂಸ್ಥೆಗಳು ಜೊತೆಯಾಗಿ, ರಸ್ತೆಗಳ ಎರಡೂ ಬದಿಗಳಲ್ಲಿ, ಶಾಲಾ ಮೈದಾನ, ಮನೆಗಳ ಮುಂಭಾಗ, ಹಿತ್ತಿಲುಗಳು, ಜಮೀನುಗಳು, ಕಚೇರಿಗಳ ಖಾಲಿ ಪ್ರದೇಶಗಳಲ್ಲಿ, ಆಟದ ಮೈದಾನದ ಸುತ್ತಮುತ್ತ ಗಿಡಗಳನ್ನು ನೆಡಲು ಜನರಲ್ಲಿ ತಿಳಿವಳಿಕೆ ಮೂಡಿಸಬೇಕು. ಬೀದಿ ನಾಟಕ, ಸಮೂಹ ಮಾಧ್ಯಮಗಳ ಮೂಲಕ ಜನಜಾಗೃತಿ ಮೂಡಿಸಿ, ಗಿಡಮರಗಳನ್ನು ಹೆಚ್ಚು ಬೆಳೆಸುವುದರಿಂದ ಮಾತ್ರ ಬರಗಾಲವನ್ನು ದೂರ ಮಾಡಲು ಸಾಧ್ಯ ಎಂಬ ಅರಿವು ಮೂಡಿಸಬೇಕು.

ಸುರೇಶ ಅರಳಿಮರ, ಬಾದಾಮಿ

ಅಪಮಾರ್ಗದಲ್ಲಿ ಬೀಳಿಸುವ ಹುನ್ನಾರ?

'ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಪತನಗೊಳ್ಳುವ ಕಾಲ ಸಮೀಪಿಸುತ್ತಿದೆ' ಎಂದು ಬಿಜೆಪಿ ಮುಖಂಡ ಬಸವರಾಜ ಬೊಮ್ಮಾಯಿ ಅವರು ಹೇಳಿರುವುದು (ಕಿಡಿನುಡಿ, ಜುಲೈ 6) ಹಾಸ್ಯಾಸ್ಪದ ಹಾಗೂ ಅಪಾಯಕಾರಿ ಬೆಳವಣಿಗೆಯ ಮುನ್ಸೂಚನೆಯಾಗಿದೆ. ಇಂತಹ ಬೆಳವಣಿಗೆಗಳು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಾರಕವಾದವು. ಜನರಿಂದ ಬಹುಮತದೊಂದಿಗೆ ಚುನಾಯಿತವಾದ ಸರ್ಕಾರವನ್ನು ಅಪಮಾರ್ಗದಲ್ಲಿ ಕೆಡವಲಾಗುತ್ತದೆ ಎಂಬ ಸುಳಿವನ್ನು ಒಬ್ಬ ಮಾಜಿ ಮುಖ್ಯಮಂತ್ರಿ ನೀಡುತ್ತಾರೆ ಎಂದರೆ, ಇದು ಅಧಿಕಾರ ಕಳೆದುಕೊಂಡವರ ಅಸಹನೆ, ಹಪಹಪಿತನ ಹಾಗೂ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಗೆಯುವ ದ್ರೋಹವಾಗುತ್ತದೆ.

ಈ ಹಿಂದೆ ಕೂಡ ರಾಜ್ಯದಲ್ಲಿ ಪಕ್ಷಾಂತರದ ಮೂಲಕ ರಚಿಸಿದ ಕೂಡಿಕೆ ಸರ್ಕಾರದ ನೇತೃತ್ವವನ್ನು ಇವರೇ ವಹಿಸಿದ್ದರು ಎಂಬುದು ಜನರಿಗೆ ತಿಳಿದಿದೆ. ಅದಾದ ನಂತರ ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರದಲ್ಲೂ ಇವರ ಪಕ್ಷ ಸಂವಿಧಾನವನ್ನು ಅಣಕಿಸುವ ರೀತಿಯಲ್ಲಿ ಸರ್ಕಾರ ರಚಿಸಿರುವುದನ್ನು ದೇಶದ ಮತದಾರರು ಕಂಡಿದ್ದಾರೆ. ಈಗ ಇವರು ರಾಜ್ಯದಲ್ಲಿ ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತು ಸರ್ಕಾರದ ಏಳುಬೀಳುಗಳನ್ನು ತಿದ್ದುವ ಕೆಲಸ ಮಾಡುವುದನ್ನು ಬಿಟ್ಟು, ಅದನ್ನು ಬೀಳಿಸುವ ದಿಸೆಯಲ್ಲಿ ಚಿಂತಿಸುತ್ತಿರುವುದು ಸರಿಯಲ್ಲ.

ಪ್ರೊ. ಎಂ.ಜಿ.ರಂಗಸ್ವಾಮಿ, ಹಿರಿಯೂರು

ಮಕ್ಕಳ ಕ್ರೀಡಾಕೂಟ: ಸರ್ಕಾರದ ಪಾಲಿರಲಿ

ಪ್ರತಿವರ್ಷ ಶಾಲಾ ಕ್ರೀಡಾಕೂಟ ನಡೆಸುವುದೇ ಪ್ರತಿ ವಿದ್ಯಾರ್ಥಿಯಿಂದ ವಸೂಲು ಮಾಡುವ ಇಪ್ಪತ್ತು ರೂಪಾಯಿಯ ವಿದ್ಯಾರ್ಥಿಗಳ ವಿಶೇಷ ಕ್ರೀಡಾನಿಧಿಯಿಂದ. ಸರ್ಕಾರದಿಂದ ಈ ಶಾಲಾ ಕ್ರೀಡಾಕೂಟಕ್ಕೆ ಬಿಡಿಗಾಸೂ ಸಲ್ಲದಿರುವುದು ವಿಪರ್ಯಾಸವೇ ಸರಿ. ಮಕ್ಕಳ ಈ ಹಣವು ಯಾವುದಕ್ಕೂ ಸಾಲುವುದಿಲ್ಲ. ಹಾಗಾಗಿ ಹೋಬಳಿ ಮತ್ತು ತಾಲ್ಲೂಕು ಕ್ರೀಡಾಕೂಟವನ್ನು ನಡೆಸಲು ಪ್ರತಿಯೊಂದು ಶಾಲೆಗೆ ಸರದಿಯಂತೆ ಜವಾಬ್ದಾರಿ ಹಂಚಲಾಗುತ್ತಿದೆ.

ಸರ್ಕಾರವು ಮಕ್ಕಳ ಕ್ರೀಡೆಗೆ ಉತ್ತೇಜನ ನೀಡುವ ಘೋಷಣೆ ಮಾಡುತ್ತಿದೆಯೇ ವಿನಾ, ಅದಕ್ಕೆ ಪೂರಕವಾದ ಪೋಷಣೆಯು ಶಾಲೆಗಳಲ್ಲಿ ಆಗುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ. ಇನ್ನಾದರೂ ಸರ್ಕಾರವು ಮಕ್ಕಳ ಕ್ರೀಡಾಕೂಟದ ಸಂಘಟನೆಗೆ, ಬಹುಮಾನ ನೀಡಲು, ಶಾಲೆಯಲ್ಲಿ ಕ್ರೀಡಾ ಸಾಮಗ್ರಿ ಖರೀದಿಸಲು ಹಣ ಬಿಡುಗಡೆ ಮಾಡಲಿ.

ಜಿ. ಪಳನಿಸ್ವಾಮಿ ಜಾಗೇರಿ, ಸೂರಾಪುರ, ಕೊಳ್ಳೇಗಾಲ

ವರ್ಗಾವಣೆಗೆ ಕೌನ್ಸೆಲಿಂಗ್ ಏಕಿಲ್ಲ?

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕವೇ ಮಾಡಬೇಕೆಂದು, ಈ ಸಂಬಂಧದ ಮಸೂದೆಯನ್ನು ಉಭಯ ಸದನಗಳಲ್ಲಿ ಮಂಡಿಸಿ ಅನುಮೋದನೆ ಪಡೆದು ಜಾರಿಗೊಳಿಸಲಾಗಿದೆ. ಅಚ್ಚರಿಯೆಂದರೆ, ಈ ನಿಯಮಗಳನ್ನು ಇಟ್ಟುಕೊಂಡೂ ಸರ್ಕಾರವು ಮಂತ್ರಿಮಹೋದಯರ ಶಿಫಾರಸಿನ ಮೇಲೆಯೇ ವರ್ಗಾವಣೆಗಳನ್ನು ಮಾಡುತ್ತಿದೆ. ಹಾಗಾದರೆ ವಿರೋಧಪಕ್ಷಗಳು ಆರೋಪಿಸುತ್ತಿರುವ ಹಣದ ಪ್ರಭಾವ ಈ ಪ್ರಕ್ರಿಯೆಯಲ್ಲಿ ಇಲ್ಲವೆಂದು ಭಾವಿಸದಿರಲು ಹೇಗೆ ಸಾಧ್ಯ?

ಪಾರದರ್ಶಕತೆ, ಪ್ರಾಮಾಣಿಕತೆಯಿಂದ ವರ್ಗಾವಣೆಗಳು ನಡೆಯಲಿ ಎಂಬ ಸದುದ್ದೇಶದಿಂದ ಜಾರಿಗೆ ತಂದ ನಿಯಮಗಳನ್ನು ಪಾಲಿಸುವುದಿಲ್ಲ, ಪರಿಗಣಿಸುವುದಿಲ್ಲ ಎಂದಾದರೆ, ಭ್ರಷ್ಟಾಚಾರದ ಬಗ್ಗೆ ಎಷ್ಟು ಮಾತನಾಡಿದರೂ ಪ್ರಯೋಜನ ಇರುವುದಿಲ್ಲ. ಭ್ರಷ್ಟಾಚಾರದ ಮೂಲ ಬೇರು ವರ್ಗಾವಣೆಯೇ ಆಗಿರುತ್ತದೆ. ಎಲ್ಲ ಇಲಾಖೆಗಳಲ್ಲಿಯೂ ಕೌನ್ಸೆಲಿಂಗ್ ಮೂಲಕವೇ ವರ್ಗಾವಣೆ ಮಾಡಬೇಕು. ಇದರಿಂದ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತೊಲಗಿಸಲು ಸಾಧ್ಯವಿಲ್ಲದಿದ್ದರೂ ಸ್ವಲ್ಪಮಟ್ಟಿಗಾದರೂ ತಗ್ಗಿಸಲು ಸಾಧ್ಯ.

ಮಹೇಶ ಸಿ.ಎಚ್., ರಾಣೆಬೆನ್ನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸುಳ್ಳುಸುದ್ದಿಗಳಿಗೆ ನಾಲ್ಕಾರು ಆಯಾಮ

ದೇಶದಲ್ಲಿ ಒಂದು ಧರ್ಮ, ವಿರೋಧ ಪಕ್ಷಗಳನ್ನು ಗುರಿಯಾಗಿಸಿಕೊಂಡ ಸುಳ್ಳುಸುದ್ದಿಗಳು ಮತ್ತು ಪ್ರಚೋದನಕಾರಿ ಸುದ್ದಿಗಳು ಒಂದು ದೊಡ್ಡ ಪಿಡುಗಿನಂತಾಗಿದೆ. ಸಾಮರಸ್ಯಕ್ಕೆ, ಕೋಮುಸೌಹಾರ್ದಕ್ಕೆ ಧಕ್ಕೆ ತರುವ ಅಂತಹ ಸುಳ್ಳುಸುದ್ದಿಗಳ ನಿಯಂತ್ರಣಕ್ಕೆ ಕೇಂದ್ರ ಸರ್ಕಾರವು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡೇ ಇಲ್ಲ. ಬದಲಿಗೆ ತನ್ನ ವಿರುದ್ಧದ, ತನ್ನ ಯೋಜನೆಗಳ ವಿರುದ್ಧದ ಸುಳ್ಳುಸುದ್ದಿಗಳ ನಿಯಂತ್ರಣಕ್ಕಷ್ಟೇ ಗಮನ ನೀಡುತ್ತಿದೆ

ಪ್ರಜಾವಾಣಿ ವಾರ್ತೆ

‘ಉಗ್ರನನ್ನು ಬಂಧಿಸಿ ಕರೆದೊಯ್ಯುತ್ತಿದ್ದ ಸೇನಾ ವಾಹನಗಳಿಗೆ ಮುಸ್ಲಿಮರ ತಡೆ’

‘ನಿಮ್ಮ ಅಬ್ದುಲ್ಲಾನೂ ಅವನಂತೆಯೇ’

‘ಬಾಲೇಶ್ವರ ರೈಲು ದುರಂತದಲ್ಲಿ ಅಮೀರ್ ಖಾನ್ ಎಂಬ ಅಧಿಕಾರಿಯ ಕೈವಾಡ’

ಈಚೆಗೆ ಹೆಚ್ಚು ಪ್ರಚಲಿತದಲ್ಲಿರುವ ಸುಳ್ಳು ಸುದ್ದಿಗಳು ಮತ್ತು ಪ್ರಚೋದನಕಾರಿ ಪೋಸ್ಟ್‌ಗಳ ಒಕ್ಕಣೆ ಇವು. ವದಂತಿಗಳು ಭಾರತಕ್ಕೆ ಹೊಸತಲ್ಲವಾದರೂ, ಸುಳ್ಳು ಸುದ್ದಿಗಳು ತೀರಾ ಈಚಿನ ವರ್ಷಗಳ ವಿದ್ಯಮಾನ. ಭಾರತದಲ್ಲಿ ಮೊಬೈಲ್ ಇಂಟರ್ನೆಟ್‌ನ ಬಳಕೆ ತೀವ್ರವಾದುದು ಮತ್ತು ಸಾಮಾಜಿಕ ಜಾಲತಾಣಗಳ ಬಳಕೆ ಹೆಚ್ಚಾದುದರ ಜೊತೆಗೇ ಸುಳ್ಳು ಸುದ್ದಿಗಳೂ ಮುನ್ನೆಲೆಗೆ ಬಂದಿದ್ದನ್ನು ಗುರುತಿಸಬಹುದು.

2014ರ ನಂತರ ಭಾರತದಲ್ಲಿ ಅಗ್ಗದ ದರದ ಮೊಬೈಲ್ ಇಂಟರ್ನೆಟ್ ಬಳಕೆಗೆ ಬಂದಿತು. ಜತೆಗೆ ಫೇಸ್‌ಬುಕ್, ಟ್ವಿಟರ್‌ನಂತಹ ಸಾಮಾಜಿಕ ಜಾಲತಾಣಗಳ ಬಳಕೆಯೂ ಹೆಚ್ಚಾಯಿತು. ನಂತರದ ವರ್ಷಗಳಲ್ಲಿ ವಾಟ್ಸ್‌ಆ್ಯಪ್ ಸಹ ಕೋಟ್ಯಂತರ ಬಳಕೆದಾರರನ್ನು ಸೆಳೆದುಕೊಂಡಿತು. ಆರಂಭದಲ್ಲಿ ಚಿತ್ರಗಳು, ವಿಡಿಯೊಗಳನ್ನು ಹಂಚಿಕೊಳ್ಳಲಷ್ಟೇ ಇವು ಬಳಕೆಯಾಗುತ್ತಿದ್ದವು. ಆದರೆ, ಕ್ರಮೇಣ ಸಾಮಾಜಿಕ ಜಾಲತಾಣಗಳು ಸುದ್ದಿಗಳನ್ನು ಹಂಚಿಕೊಳ್ಳುವ ವೇದಿಕೆಯೂ ಆಯಿತು. ಇವು ಸುದ್ದಿಗಳನ್ನು ಜನಸಾಮಾನ್ಯರ ಬಳಿಗೆ ಸುಲಭವಾಗಿ ತಲುಪಿಸುವುದರ ಜತೆಗೆ, ಸುಳ್ಳು ಸುದ್ದಿಗಳಿಗೂ ಅವಕಾಶ ಮಾಡಿಕೊಟ್ಟವು. ಸುಳ್ಳು ಸುದ್ದಿ ತಡೆಯಲು ಸರ್ಕಾರವು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳದೇ ಇರುವ ಕಾರಣ, ಈಗ ಭಾರತದಲ್ಲಿ ಸುಳ್ಳು ಸುದ್ದಿ ಒಂದು ದೊಡ್ಡ ಪಿಡುಗಾಗಿ ಬೆಳೆದಿದೆ.

ಸುಳ್ಳು ಸುದ್ದಿಗಳ ಬಗ್ಗೆ ದೇಶದಲ್ಲಿ ಹಲವು ಅಧ್ಯಯನಗಳು ನಡೆದಿವೆ. ಐಐಎಂ ಇಂಧೋರ್‌ನ ಗಂಧರ್ವ ಧ್ರುವ ಮದನ್ ಅವರು ನಡೆಸಿದ್ದ ಅಧ್ಯಯನ ವರದಿಯು ಈ ಬಗ್ಗೆ ಹೆಚ್ಚು ಬೆಳಕು ಚೆಲ್ಲುತ್ತದೆ. ಸುಳ್ಳು ಸುದ್ದಿ ಸೃಷ್ಟಿಸುವುದರ ಮತ್ತು ಅದನ್ನು ಪಸರಿಸುವುದರ ಹಿಂದೆ ಹಲವು ಕಾರಣಗಳನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ರಾಜಕೀಯ ಲಾಭ, ಆರ್ಥಿಕ ಲಾಭ ಅಂತಹ ಕಾರಣಗಳಲ್ಲಿ ಮುಖ್ಯವಾದವುಗಳು.

ಭಾರತದಲ್ಲಿ ಸೃಷ್ಟಿಯಾಗುವ ಸುಳ್ಳು ಸುದ್ದಿಗಳ ಹಿಂದೆ ರಾಜಕೀಯ ಹಿತಾಸಕ್ತಿ ಇರುತ್ತದೆ. ಯಾವುದೋ ಒಂದು ರಾಜಕೀಯ ಪಕ್ಷ ಮತ್ತು ರಾಜಕೀಯ ಸಿದ್ಧಾಂತವನ್ನು ಓಲೈಸುವ ಹಾಗೂ ಬೇರೊಂದು ರಾಜಕೀಯ ಪಕ್ಷ ಮತ್ತು ಅದರ ರಾಜಕೀಯ ಸಿದ್ಧಾಂತವನ್ನು ಹೀಗಳೆಯುವ ಸ್ವರೂಪದ ಸುಳ್ಳುಸುದ್ದಿಗಳು ಇವಾಗಿರುತ್ತವೆ. ಇನ್ನು ಆರ್ಥಿಕ ಲಾಭದ ಸುಳ್ಳುಸುದ್ದಿಗಳೂ ಇದೇ ಸ್ವರೂಪದ್ದಾಗಿರುತ್ತವೆ. ಇಂತಹ ಸುಳ್ಳು ಸುದ್ದಿಗಳನ್ನು ತಡೆಯಲು ಸರ್ಕಾರವು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡೇ ಇಲ್ಲ.

ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳಿಗೆ ಹೆಚ್ಚು ವ್ಯೂಗಳು ಬಂದರೆ, ಹಣ ಗಳಿಸಲು ಸಾಧ್ಯವಿದೆ. ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯುಟ್ಯೂಬ್‌ಗಳಲ್ಲಿ ಉತ್ತಮ ಮೊತ್ತವನ್ನು ಹೀಗೆ ಗಳಿಸಲು ಸಾಧ್ಯವಿದೆ. ಹೆಚ್ಚು ವ್ಯೂ ಸಾಧಿಸಲು ಪ್ರಚೋದನಕಾರಿ, ಉದ್ರೇಕಕಾರಿ, ದ್ವೇಷಪೂರಿತ ಪೋಸ್ಟ್‌ಗಳು ಮತ್ತು ವ್ಲಾಗ್‌ಗಳನ್ನು ಸೃಷ್ಟಿಸುವ ಪ್ರವೃತ್ತಿಯೂ ಹೆಚ್ಚಾಯಿತು. ಪೋಸ್ಟ್‌ಗಳು ಹೆಚ್ಚು ಪ್ರಚೋದನಕಾರಿಯಾಗಿದ್ದರೆ, ಹೆಚ್ಚು ಜನರು ಅವನ್ನು ನೋಡುತ್ತಾರೆ, ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಹಂಚಿಕೊಳ್ಳುತ್ತಾರೆ. ಒಂದೆಡೆ ಸುಳ್ಳುಸುದ್ದಿಗಳು ಹರಡುತ್ತಿದ್ದರೆ, ಇನ್ನೊಂದೆಡೆ ಅವನ್ನು ಸೃಷ್ಟಿಸಿದವರ ಜೇಬು ತುಂಬುತ್ತಿರುತ್ತದೆ. ಅವು ಸುಳ್ಳುಸುದ್ದಿ ಎಂದು ಗೊತ್ತಿರದವರು, ಅವನ್ನು ಹಂಚಿಕೊಳ್ಳುತ್ತಿರುತ್ತಾರೆ ಮತ್ತು ಆ ಸುಳ್ಳುಸುದ್ದಿಗಳನ್ನು ನಂಬುತ್ತಿರುತ್ತಾರೆ.

ಸುಳ್ಳುಸುದ್ದಿಗಳನ್ನು ತಡೆಗಟ್ಟಲು ಕೇಂದ್ರ ಸರ್ಕಾರವು ಒಂದು ಫ್ಯಾಕ್ಟ್‌ಚೆಕ್ ಘಟಕವನ್ನು ಆರಂಭಿಸಿದೆ. ಪ್ರೆಸ್ ಇನ್ಫರ್ಮೇಷನ್ ಬ್ಯೂರೊ (ಪಿಐಬಿ) ಅಡಿಯಲ್ಲಿ ಈ ಘಟಕ ಕೆಲಸ ಮಾಡುತ್ತದೆ. ಪಿಐಬಿ ಫ್ಯಾಕ್ಟ್‌ಚೆಕ್ ಘಟಕವು ಕೇಂದ್ರ ಸರ್ಕಾರದ ಯೋಜನೆಗಳ ಕುರಿತಾದ ಸುಳ್ಳುಸುದ್ದಿಗಳ ಕುರಿತಾದ ಫ್ಯಾಕ್ಟ್‌ಚೆಕ್ ಮಾತ್ರ ಪ್ರಕಟಿಸುತ್ತದೆ. ಕೇಂದ್ರ ಸರ್ಕಾರವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಸುಳ್ಳು ಸುದ್ದಿ ಪ್ರಕಟವಾಗುವ ಜಾಲತಾಣಗಳು, ಸಾಮಾಜಿಕ ಜಾಲತಾಣಗಳ ನಿಷೇಧಕ್ಕೆ ನಿಯಮಗಳನ್ನು ಜಾರಿಗೆ ತಂದಿದೆ. ಆದರೆ ಧರ್ಮಾಧಾರಿತ, ದ್ವೇಷಪೂರಿತ, ಕೋಮುಭಾವನೆ ಪ್ರಚೋದಿಸುವಂತಹ ಸುಳ್ಳುಸುದ್ದಿಗಳ ನಿಯಂತ್ರಣಕ್ಕೆ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಸರ್ಕಾರದ ಈ ಸೀಮಿತವಾದ ಕ್ರಮಗಳ ಕಾರಣದಿಂದಲೇ ವಿಧ್ವಂಸಕ ಉದ್ದೇಶದ ಸುಳ್ಳುಸುದ್ದಿಗಳ ನಿಯಂತ್ರಣ ಸಾಧ್ಯವಾಗುತ್ತಿಲ್ಲ.

ಆಧಾರ: ಪಿಟಿಐ, ಪಿಟಿಐ ಫ್ಯಾಕ್ಟ್‌ಚೆಕ್, ಪಿಐಬಿ, ಪಿಐಬಿ ಫ್ಯಾಕ್ಟ್‌ಚೆಕ್, ಆಲ್ಟ್‌ನ್ಯೂಸ್, ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್, ಬಿಬಿಸಿ

ಧರ್ಮಾಧಾರಿತ ಸುಳ್ಳುಸುದ್ದಿ

ಭಾರತದಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಸೃಷ್ಟಿಸುವ ಸುಳ್ಳುಸುದ್ದಿಗಳದ್ದೇ ಸಿಂಹಪಾಲು. ದೇಶದಲ್ಲಿ ಯಾವುದೋ ಒಂದು ಅವಘಡ ಸಂಭವಿಸಿದಾಗ ಅದಕ್ಕೆ ಕಾರಣ ಮುಸ್ಲಿಮರೇ ಎಂದು ತರಹೇವಾರಿ ಸುಳ್ಳುಸುದ್ದಿಗಳನ್ನು ಸೃಷ್ಟಿಸಲಾಗುತ್ತದೆ. ಈಚಿನ ಏಳೆಂಟು ವರ್ಷಗಳಲ್ಲಿ ಈ ಪ್ರವೃತ್ತಿ ಬೆಳೆದಿದೆ.

ಮುಸ್ಲಿಂ ಯುವಕರು ಹಿಂದೂ ಯುವತಿಯರನ್ನು ಓಲೈಸಿ, ಪ್ರೀತಿಸುವ ನಾಟಕವಾಡುತ್ತಾರೆ. ನಂತರ ಅವರನ್ನು ಇಸ್ಲಾಂಗೆ ಮತಾಂತರ ಮಾಡುತ್ತಾರೆ ಎಂಬುದು ಆರಂಭದ ದಿನಗಳಲ್ಲಿ ಸೃಷ್ಟಿಸಲಾದ ಸುಳ್ಳುಸುದ್ದಿಗಳು. ಇದಕ್ಕೆ ‘ಲವ್ ಜಿಹಾದ್’ ಎಂದು ಹೆಸರಿಡಲಾಯಿತು. ಈಗಲೂ ಇಂತಹ ಸುಳ್ಳುಸುದ್ದಿಗಳು ಪ್ರತಿದಿನ ಹರಿದಾಡುತ್ತವೆ. ದೆಹಲಿಯ ಶ್ರದ್ಧಾ ವಾಲ್ಕರ್ ಅವರನ್ನು ಆಕೆಯ ಸಹಜೀವನ ಸಂಗಾತಿ ಅಫ್ತಾಬ್ ಪೂನಾವಾಲಾ ಹತ್ಯೆ ಮಾಡಿದ ನಂತರ ‘ಲವ್ ಜಿಹಾದ್’ಗೆ ಮತ್ತೊಂದು ಆಯಾಮವನ್ನು ಕೊಡಲಾಗಿದೆ. ಮುಸ್ಲಿಂ ಯುವಕರು ಹಿಂದೂ ಯುವತಿಯರನ್ನು ಪ್ರೀತಿಸಿ, ಮತಾಂತರ ಮಾಡುತ್ತಾರೆ ಮತ್ತು ಅವರನ್ನು ಕೊಂದು ತುಂಡುತುಂಡಾಗಿ ಕತ್ತರಿಸುತ್ತಾರೆ. ನಂತರ ಫ್ರಿಡ್ಜ್‌ನಲ್ಲಿ ಇಡುತ್ತಾರೆ ಎಂಬಂತಹ ಸುಳ್ಳುಸುದ್ದಿಗಳನ್ನು ಈಚಿನ ದಿನಗಳಲ್ಲಿ ಹೆಚ್ಚು ಹಂಚಿಕೊಳ್ಳಲಾಗುತ್ತಿದೆ.

ಶ್ರದ್ಧಾ ವಾಲ್ಕರ್ ಪ್ರಕರಣದ ನಂತರ ದೇಶದಲ್ಲಿ ಇಂತಹ ಹಲವು ಪ್ರಕರಣಗಳು ನಡೆದಿವೆಯಾದರೂ, ಹಿಂದೂ ಯುವಕ/ವ್ಯಕ್ತಿಗಳೇ ಆರೋಪಿಗಳಾಗಿರುವ ಪ್ರಕರಣಗಳನ್ನು ಕಡೆಗಣಿಸಲಾಗುತ್ತದೆ. ಮುಸ್ಲಿಮರು ಆರೋಪಿಗಳಾಗಿರುವ ಪ್ರಕರಣಗಳನ್ನು ವಿಜೃಂಭಿಸಲಾಗುತ್ತದೆ. ಬಿಜೆಪಿ ನಾಯಕಿಯಾಗಿದ್ದ ನೂಪುರ್ ಶರ್ಮಾ ಅವರು ಇಂತಹ ಸುಳ್ಳುಸುದ್ದಿಗಳಿಗೆ ಬೇರೊಂದು ಸ್ವರೂಪ ನೀಡಿದ್ದಾರೆ, ‘ನಿಮ್ಮ ಅಬ್ದುಲ್ಲಾ ಅವನಂತೆಯೇ’ ಎಂದು ಅವರು ಟ್ವೀಟ್ ಮಾಡಿದ್ದರು. ಆನಂತರ ಲವ್ ಜಿಹಾದ್ ಆರೋಪದ ಎಲ್ಲಾ ಸುಳ್ಳುಸುದ್ದಿಗಳಿಗೆ ‘ನಿಮ್ಮ ಅಬ್ದುಲ್ಲಾ ಅವನಂತೆಯೇ’ ಎಂದು ಅಡಿಬರಹ ನೀಡಲಾಗುತ್ತಿದೆ. ಇದನ್ನೇ ಆಧರಿಸಿ ಸಾವಿರಾರು ವ್ಯಂಗ್ಯಚಿತ್ರಗಳು, ವ್ಲಾಗ್‌ಗಳನ್ನು ಸೃಷ್ಟಿಸಲಾಗಿದೆ. ಅವೆಲ್ಲಾ ಸುಳ್ಳುಸುದ್ದಿಗಳು ಎಂಬುದನ್ನು ಹಲವು ಫ್ಯಾಕ್ಟ್‌ಚೆಕ್ ವೇದಿಕೆಗಳು ಸಾಬೀತುಮಾಡಿವೆ.

ಲವ್‌ಜಿಹಾದ್ ಕುರಿತು ಈಚೆಗೆ ಕನ್ನಡದಲ್ಲಿ ಹರಿಬಿಡಲಾಗಿದ್ದ ಸುಳ್ಳು ಸುದ್ದಿಯ ಪೋಸ್ಟರ್

ದೇಶದಲ್ಲಿ ಕೋವಿಡ್ ಹರಡಿದಾಗ, ಅದಕ್ಕೂ ಮುಸ್ಲಿಮರೇ ಕಾರಣ ಎಂಬ ಸುಳ್ಳುಸುದ್ದಿಗಳನ್ನು ಸೃಷ್ಟಿಸಲಾಗಿತ್ತು. ಈಚೆಗೆ ಒಡಿಶಾದ ಬಾಲೇಶ್ವರದಲ್ಲಿ ರೈಲು ಅಪಘಾತ ಸಂಭವಿಸಿದಾಗ ಅದಕ್ಕೂ ಮುಸ್ಲಿಮರೇ ಕಾರಣ ಎಂಬ ಹತ್ತಾರು ಸುಳ್ಳುಸುದ್ದಿಗಳನ್ನು ಸೃಷ್ಟಿಸಲಾಗಿತ್ತು. ಅಂತಹ ಸುಳ್ಳುಸುದ್ದಿ ಹರಡಿದವರ ವಿರುದ್ಧ ಒಡಿಶಾ ಸರ್ಕಾರವು ಪ್ರಕರಣಗಳನ್ನು ದಾಖಲಿಸಿದೆ.

ಮುಸ್ಲಿಮರು ಅಡುಗೆ, ತಿನಿಸು ಸಿದ್ಧಪಡಿಸುವಾಗ ಅದರಲ್ಲಿ ಉಗುಳುತ್ತಾರೆ. ಆ ಮೂಲಕ ಹಿಂದೂಗಳ ಧರ್ಮವನ್ನು ಕೆಡಿಸುತ್ತಾರೆ ಎಂಬಂತಹ ಸುಳ್ಳುಸುದ್ದಿಗಳಿಗೂ ಬರವಿಲ್ಲ. ಅವರು ನಮಾಜ್‌ಗಾಗಿ ರಸ್ತೆಗಳನ್ನು ಅತಿಕ್ರಮಿಸಿಕೊಳ್ಳುತ್ತಾರೆ ಎಂದು ಬೇರೆ ಬೇರೆ ದೇಶಗಳ ವಿಡಿಯೊವನ್ನು ಭಾರತದ್ದೆಂದು ಸುಳ್ಳುಸುದ್ದಿ ಸೃಷ್ಟಿಸಲಾಗುತ್ತಿದೆ.

ರಾಜಕೀಯ ಉದ್ದೇಶ

ಭಾರತದಲ್ಲಿ ರಾಜಕೀಯ ಸುಳ್ಳುಸುದ್ದಿಗಳಿಗೂ ಬರವಿಲ್ಲ. ಕಾಂಗ್ರೆಸ್ ಸರ್ಕಾರ ಯಾವುದೇ ಕೆಲಸ ಮಾಡಿಲ್ಲ, ಬಿಜೆಪಿ ಸರ್ಕಾರ ಹೆಚ್ಚು ಕೆಲಸ ಮಾಡಿದೆ. 70 ವರ್ಷಗಳಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ, ದೇಶದಲ್ಲಿ ಈಗಷ್ಟೇ ಅಭಿವೃದ್ಧಿ ಸಾಧ್ಯವಾಗುತ್ತಿದೆ ಎಂಬಂತಹ ಸುಳ್ಳುಸುದ್ದಿಗಳು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸಿಗುತ್ತವೆ.

ಬಿಜೆಪಿ ಐಟಿ ಘಟಕವು ಇಂತಹ ಹಲವು ಸುಳ್ಳುಸುದ್ದಿಗಳನ್ನು ಸೃಷ್ಟಿಸಿದೆ. ಕೇಂದ್ರ ಸರ್ಕಾರದ ಸಾಧನೆಗಳನ್ನು ಈ ಸುಳ್ಳುಸುದ್ದಿಗಳಲ್ಲಿ ತಪ್ಪಾಗಿ ಬಿಂಬಿಸಲಾಗಿದೆ. ಸರ್ಕಾರದ ಪರವಾಗಿ ತಿರುಚಲಾದ ಸುದ್ದಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೃಷ್ಟಿಸಲಾಗುತ್ತಿದೆ. ಇನ್ನು ಎಲ್ಲಾ ವಿರೋಧ ಪಕ್ಷಗಳನ್ನು ಹೀಗಳೆಯುವಂತಹ ಸುಳ್ಳುಸುದ್ದಿಗಳನ್ನು, ದಾರಿತಪ್ಪಿಸುವಂತಹ ಸುಳ್ಳುಸುದ್ದಿಗಳು ಸಾಮಾನ್ಯ ಎಂಬಂತಾಗಿವೆ.

ಸರ್ಕಾರದ ವಿರುದ್ಧ ಸುಳ್ಳುಸುದ್ದಿ ಸೃಷ್ಟಿಸುವಲ್ಲಿ ವಿರೋಧ ಪಕ್ಷಗಳೂ ಹಿಂದೆ ಬಿದ್ದಿಲ್ಲ. ಪಶ್ಚಿಮ ಬಂಗಾಳ, ಈಶಾನ್ಯ ಭಾರತದ ರಾಜ್ಯಗಳಲ್ಲಿನ ಕಾಂಗ್ರೆಸ್ ಮತ್ತು ಕೆಲವು ಪ್ರಾದೇಶಿಕ ಪಕ್ಷಗಳು ಸುಳ್ಳುಸುದ್ದಿ ಸೃಷ್ಟಿಸಿದ ಆರೋಪ ಎದುರಿಸುತ್ತಿವೆ.

ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ಟ್ವೀಟ್ ಮಾಡಿದ್ದ ಒಂದು ಸುಳ್ಳು ಸುದ್ದಿ. ‘ಇದು ತಿರುಚಲಾದ ಸುದ್ದಿ’ ಎಂದು ಟ್ವಿಟರ್ ವರ್ಗೀಕರಿಸಿತ್ತು

ಪತ್ರಿಕೆಗಳ ವರದಿಯ ವಿನ್ಯಾಸ ಬಳಕೆ

ಪತ್ರಿಕೆಗಳ ವರದಿಯ ರೀತಿಯಲ್ಲಿ ಪೋಸ್ಟರ್‌ಗಳನ್ನು ರಚಿಸಿ, ಅವುಗಳಲ್ಲಿ ಸುಳ್ಳುಸುದ್ದಿ ಸೃಷ್ಟಿಸುವ ಪ್ರವೃತ್ತಿ ಈಚೆಗೆ ಆರಂಭವಾಗಿದೆ. ಪ್ರಮುಖ ಪತ್ರಿಕೆಗಳ ವಿನ್ಯಾಸವನ್ನು ಇದಕ್ಕಾಗಿ ಬಳಸಿಕೊಳ್ಳಲಾಗಿದೆ. ನ್ಯೂಯಾರ್ಕ್ ಟೈಮ್ಸ್, ವಾಷಿಂಗ್ಟನ್ ಪೋಸ್ಟ್, ಭಾರತದ ದೈನಿಕ್ ಬಾಸ್ಕರ್ ಪತ್ರಿಕೆಗಳ ವಿನ್ಯಾಸವನ್ನು ಈ ರೀತಿ ಬಳಸಿಕೊಳ್ಳಲಾಗಿದೆ.

‘ಕಾನೂನು ರದ್ದಾಗುವುದೇ ಸರಿ’: ಕೇಂದ್ರ ಸರ್ಕಾರದ ವಿರುದ್ಧದ ಸುಳ್ಳುಸುದ್ದಿಗಳನ್ನು ನಿಯಂತ್ರಿಸಲು ಜಾರಿಗೆ ತಂದಿರುವ ನಿಯಮಗಳು ಸಂವಿಧಾನಕ್ಕೆ ವಿರುದ್ಧವಾಗಿವೆ. ಅವು ಸರ್ಕಾರದ ವಿರುದ್ಧದ ಟೀಕೆಯನ್ನು ಹತ್ತಿಕ್ಕುವ ಸ್ವರೂಪದಲ್ಲಿವೆ ಎಂದು ಕಮಿಡಿಯನ್ ಕುನಾಲ್ ಕಮ್ರಾ ಸೇರಿದಂತೆ ಹಲವರು ಬಾಂಬೆ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಅವರ ವಾದವನ್ನು ಆಲಿಸಿರುವ ಹೈಕೋರ್ಟ್, ‘ಕಾನೂನುಗಳು ಎಷ್ಟೇ ಸರಿಯಾಗಿದ್ದರೂ ಅವುಗಳ ಪರಿಣಾಮವು ಸಂವಿಧಾನಬಾಹಿರವಾಗಿದ್ದರೆ, ಅಂತಹ ಕಾನೂನುಗಳು ರದ್ದಾಗುವುದೇ ಸರಿ’ ಎಂದು ಗುರುವಾರವಷ್ಟೇ ಅಭಿಪ್ರಾಯಪಟ್ಟಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ದಿ ನ್ಯೂಯಾರ್ಕ್ ಟೈಮ್ಸ್ ವರದಿ ಪ್ರಕಟಿಸಿದೆ ಎಂದು ಸೃಷ್ಟಿಸಲಾಗಿರುವ ಸುಳ್ಳುಸುದ್ದಿ

ಸುಳ್ಳಿನ ಪ್ರಪಂಚದ ಸತ್ಯದ ಅನಾವರಣ

‘ಮುಂದಿನ ಪೀಳಿಗೆಯ ರಾಜಕಾರಣಿ ಆಗಬೇಕು ಎನ್ನುವ ಇಚ್ಛೆ ಇದ್ದರೆ, ಅಂತರ್ಜಾಲವನ್ನು ಚೆನ್ನಾಗಿ ಬಲ್ಲವನಾಗಬೇಕು’– ಎಂದು ಐಟಿ ಸೆಲ್‌ನ ವ್ಯಕ್ತಿಯೊಬ್ಬರು ಯುವ ರಾಜಕಾರಣಿಯೊಬ್ಬರಿಗೆ ನಿರ್ದೇಶಕ ಸುಧೀರ್ ಮಿಶ್ರಾ ಅವರ ‘ಅಫ್ವಾ’ ಸಿನಿಮಾದಲ್ಲಿ ಹೇಳುತ್ತಾರೆ. ಈ ಸಂಭಾಷಣೆಯು ಆಧುನಿಕ ಯುಗದ ‘ಸುಳ್ಳುಸುದ್ದಿ ರಾಜಕಾರಣ’ವನ್ನು ತೆರೆದಿಡುತ್ತದೆ. ಅನುಭವ್ ಸಿನ್ಹಾ ಸಿನಿಮಾವನ್ನು ನಿರ್ಮಿಸಿದ್ದಾರೆ.

ಸಾಮಾಜಿಕ ಜಾಲತಾಣಗಳು ಸಮಾಜದಿಂದ ಬೇರ್ಪಟ್ಟು ಬೇರೆಯದೆ ಸುಳ್ಳಿನ ಸಮಾಜಗಳನ್ನು ನಿರ್ಮಿಸಿಕೊಂಡಿವೆ. ತಮ್ಮ ಅಧಿಕಾರ ಲಾಲಸೆಗಾಗಿ ರಾಜಕಾರಣಿಗಳು ಇಂಥ ಸುಳ್ಳಿನ ಸಮಾಜಗಳನ್ನು ಬಳಸಿಕೊಳ್ಳುತ್ತಾರೆ. ಈ ಸುಳ್ಳನ್ನೇ ನಿಜ ಎಂದು ನಂಬಿಸುತ್ತಾರೆ. ಕೃತಕ ಬುದ್ಧಿಮತ್ತೆಯ ಈ ಕಾಲಘಟ್ಟದಲ್ಲಿ ಇಂಥ ಸುಳ್ಳಿನ ಸಮಾಜಗಳೇ ಜನರನ್ನು ಆಳುತ್ತಿವೆ, ಅಭಿಪ್ರಾಯ ರೂಪಿಸುತ್ತಿವೆ. ನಿಜದ ಸಮಾಜದ ಜನರ ಮೇಲೆ ಸುಳ್ಳಿನ ಸಮಾಜದ ಜನರು ನಡೆಸುವ ದಾಳಿಗಳು, ಇದರಿಂದ ಹುಟ್ಟುಕೊಳ್ಳುವ ದಂಗೆಗಳಿಂದ ಆದ ಗಾಯಗಳು ಮಾತ್ರ ವ್ರಣವಾಗುತ್ತವೆ. ಈ ಎಲ್ಲದರ ಕುರಿತು ಸಿನಿಮಾವು ತೀಕ್ಷ್ಣವಾಗಿ, ಅಷ್ಟೇ ನೇರವಾಗಿ ನಮ್ಮ ಮುಂದೆ ತೆರೆದುಕೊಳ್ಳುತ್ತದೆ.

ರಾಜಸ್ಥಾನದ ಸಾವಲ್‌ಪುರ ಈ ಸಿನಿಮಾದ ಕತೆ ನಡೆಯುವ ಸ್ಥಳ. ಈ ಪ್ರದೇಶದ ಯುವ ರಾಜಕಾರಣಿಯು ತನ್ನ ರಾಜಕೀಯ ಜೀವನವನ್ನು ರೂಪಿಸಿಕೊಳ್ಳುವ ತವಕದಲ್ಲಿ ಇದ್ದಾನೆ. ಇದಕ್ಕಾಗಿ ಆತ ಏನನ್ನೂ ಮಾಡಲು ತಯಾರಾಗಿ ನಿಂತಿದ್ದಾನೆ.

‘ನಾವು ಇನ್ನು ಸಹಿಸಿಕೊಳ್ಳುವುದಿಲ್ಲ’ ಎಂದು ಮುಸ್ಲಿಮರು ಹೆಚ್ಚಿರುವ ಪ್ರದೇಶದಲ್ಲಿ ಈತ ರೋಡ್ ಶೋ ನಡೆಸುತ್ತಾನೆ. ಈ ವೇಳೆಗೆ ಈತನ ತಲೆಗೆ ಯಾರೋ ಕಲ್ಲೆಸೆಯುತ್ತಾರೆ. ಇದರಿಂದ ಕುಪಿತಗೊಂಡ ಆತನ ಚೇಲಾ ಮುಸ್ಲಿಂ ವ್ಯಕ್ತಿಯೊಬ್ಬರನ್ನು ಕೊಲೆ ಮಾಡುತ್ತಾನೆ. ಯುವ ರಾಜಕಾರಣಿ ಹೇಳಿದ್ದರಿಂದಲೇ ಈ ಕೊಲೆ ನಡೆದಿದೆ ಎನ್ನುವ ಸುದ್ದಿ ವೇಗವಾಗಿ ಸುದ್ದಿ ವಾಹಿನಿಗಳಲ್ಲಿ ಪ್ರಸಾರವಾಗುತ್ತದೆ. ಈ ಮುಜುಗರದಿಂದ ತಪ್ಪಿಸಿಕೊಳ್ಳಲು ಚೇಲಾನನ್ನು ಕೊಲೆ ಮಾಡುವಂತೆ ಪೊಲೀಸ್ ಅಧಿಕಾರಿಯೊಬ್ಬರಿಗೆ ಸೂಚಿಸುತ್ತಾನೆ. ಇದು ಸಫಲಗೊಳ್ಳುವುದಿಲ್ಲ.



ತನ್ನ ರಾಜಕೀಯ ನಿಲುವಿನ ಕಾರಣಕ್ಕಾಗಿ ತನ್ನನ್ನು ವರಿಸಬೇಕಿದ್ದ ಹುಡುಗಿಯು ತನ್ನನ್ನು ಬಿಟ್ಟು ಹೋಗುವುದು ತನಗೆ ಅವಮಾನ ಮತ್ತು ಇದು ತನ್ನ ರಾಜಕೀಯ ಜೀವನಕ್ಕೆ ಬಿದ್ದ ಕೊಡಲಿ ಏಟು ಎಂದು ಭಾವಿಸಿಕೊಳ್ಳುತ್ತಾನೆ. ಮದುವೆ ಧಿಕ್ಕರಿಸಿ ಓಡಿಹೋದ ಹುಡುಗಿಗೆ ವ್ಯಕ್ತಿಯೊಬ್ಬ ಸಹಾಯ ಮಾಡುತ್ತಾನೆ. ಈ ವ್ಯಕ್ತಿಯು ಮುಸ್ಲಿಂ ಎಂದು ಮಾಹಿತಿ ಪಡೆದುಕೊಂಡ ಯುವ ರಾಜಕಾರಣಿಯು ‘ಸಾವಲ್‌ಪುರಲ್ಲಿ ಹುಡುಗಿಯೊಬ್ಬಳು ಮುಸ್ಲಿಂ ಯುವಕನೊಂದಿಗೆ ಓಡಿ ಹೋಗಿದ್ದಾಳೆ #lovejihad’ ಎಂಬ ಬರಹವುಳ್ಳ ವಿಡಿಯೊವನ್ನು ಹರಿಬಿಡುತ್ತಾನೆ. ಈ ಸುದ್ದಿಯು ಕಾಡ್ಗಿಚ್ಚಿನಂತೆ ದೇಶದಾದ್ಯಂತ ಹರಿದಾಡ ತೊಡಗುತ್ತದೆ.

ಮುಸ್ಲಿಂ ವ್ಯಕ್ತಿಯ ಹಿಂದೂ ಹೆಂಡತಿಯು ಲೇಖಕಿ. ಆಕೆಯ ಪುಸ್ತಕವೊಂದು ‘ಸಾಹಿತ್ಯ ಉತ್ಸವ’ವೊಂದರಲ್ಲಿ ಬಿಡುಗಡೆ ಆಗಲಿರುತ್ತದೆ. ಈ ಕಾರ್ಯಕ್ರಮಕ್ಕಾಗಿಯೇ ಮುಸ್ಲಿಂ ವ್ಯಕ್ತಿಯು ಹೊರಟಿರುತ್ತಾನೆ. ಆದರೆ, ಮಾರ್ಗ ಮಧ್ಯದಲ್ಲಿ ಹಲವು ಘಟನೆಗಳು ಜರುಗುತ್ತದೆ. ಇದರ ಮಧ್ಯೆ ಕೊಲೆಗಾರ ಚೇಲಾ ತಪ್ಪಿಸಿಕೊಂಡು ಲಾರಿಯೊಂದರಲ್ಲಿ ಸುರಕ್ಷಿತ ಸ್ಥಳಕ್ಕೆ ಹೋಗುತ್ತಿರುತ್ತಾನೆ. ಆ ಲಾರಿಯೊಳಗೆ ಗೋವುಗಳನ್ನು ಹೊತ್ತೊಯ್ಯಲಾಗುತ್ತಿದೆ ಎಂದು ಮತ್ತೊಂದು ಸುಳ್ಳು ಸುದ್ದಿಯನ್ನು ಯುವರಾಜಕಾರಣಿ ಸಾಮಾಜಿಕ ಜಾಲತಾಣಗಳ ಮೂಲಕ ಹರಿಬಿಡುತ್ತಾನೆ. ಕೇಸರಿ ಶಾಲುಗಳನ್ನು ಹಾಕಿಕೊಂಡು ಲಾರಿಯನ್ನು ಹುಡುಕಲು ಸಾವಿರಾರು ಸಂಖ್ಯೆಯಲ್ಲಿ ಬೈಕ್‌ಗಳು ಬೀದಿಗಿಳಿಯುತ್ತವೆ.

ಮುಸ್ಲಿಂ ವ್ಯಕ್ತಿಯ ಸಾವಿನಿಂದ ಸಾವಲ್‌ಪುರಲ್ಲಿ ಕೋಮು ಸಂಘರ್ಷ ಎದ್ದಿರುತ್ತದೆ. ಇದಕ್ಕೆ ಸರಿಯಾಗಿ, ಈ ಎರಡು ಸುಳ್ಳು ಸುದ್ದಿಗಳು ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತವೆ.

ಸಾಹಿತ್ಯ ಉತ್ಸವ ನಡೆಯುವ ಸ್ಥಳಕ್ಕೆ ಲಾರಿಯಲ್ಲಿ ಬಂದಿಳಿದ ಮುಸ್ಲಿಂ ವ್ಯಕ್ತಿಯ ಪ್ರವೇಶವನ್ನು ಉತ್ಸವದ ಸಂಯೋಜಕರು ನಿರಾಕರಿಸುತ್ತಾರೆ. ಎಷ್ಟೇ ಬೇಡಿಕೊಂಡರು ಉತ್ಸವದ ಒಳಗೆ ಆತನಿಗೆ ಪ್ರವೇಶ ಸಿಗುವುದಿಲ್ಲ. ಈ ಹೊತ್ತಿಗೆ ಸಿನಿಮಾವು ಬೇರೆಯದೇ ಚರ್ಚೆಗೆ ಅಣಿಯಾಗುತ್ತಿರುತ್ತದೆ.

ಸಾಮಾಜಿಕ ಜಾಲತಾಣಗಳ ಮೂಲಕ ಸುಳ್ಳಿನ ಸಮಾಜ ನಿರ್ಮಾಣಗೊಂಡಿರುವುದು ಒಂದೆಡೆ. ಇನ್ನೊಂದೆಡೆ ಸಮಾಜದಲ್ಲಿ ಏನು ನಡೆಯುತ್ತಿದೆ ಎಂಬುದರ ಪರಿವೆಯೇ ಇಲ್ಲದೆ, ಸಂಸ್ಕೃತಿ, ಸಾಹಿತ್ಯ, ನಾಟಕ, ನೃತ್ಯ ಎಂದು ಮುಚ್ಚಿದ ಕೋಟೆಗಳ ಹಿಂದೆ ಇಂಥ ಉತ್ಸವಗಳ ನಡೆಯುತ್ತಿರುತ್ತವೆ. ಇಂಥ ಬುದ್ಧಿಜೀವಿಗಳ, ಚಿಂತಕರ ಕುರಿತು ಸಿನಿಮಾವು ಕಟು ವಿಮರ್ಶೆ ಮಾಡಿದೆ.

ಕೊನೆಯಲ್ಲಿ ಸುಳ್ಳು ಸುದ್ದಿ ಹಬ್ಬಿದ ಯುವ ರಾಜಕಾರಣಿಯು ತಾನು ಸೃಷ್ಟಿಸಿದ ಸುಳ್ಳಿನ ಕಾರಣಕ್ಕಾಗಿಯೇ ಹತ್ಯೆಗೀಡಾಗುತ್ತಾನೆ. ಇವೆಲ್ಲಾ ಸುಳ್ಳು ಸುದ್ದಿ ಎಂದು ಹೇಳಿ ಹುಡುಗಿಯು ಮಾಡಿದ ವಿಡಿಯೊವು ಯಾರ ಮೊಬೈಲ್‌ಗಳನ್ನು ತಲುಪುವುದೇ ಇಲ್ಲ. #lovejihad ಎಂಬ ಸುಳ್ಳು ಸುದ್ದಿ ಮಾತ್ರವೇ ಉಳಿದುಕೊಳ್ಳುತ್ತದೆ. ಅಧಿಕಾರದ ಆಸೆಗಾಗಿ ರಾಜಕಾರಣಿಯೊಬ್ಬ ಸೃಷ್ಟಿಸುವ ಸುಳ್ಳುಗಳು ಸಾಮುದಾಯಿಕವಾಗಿ ಬೀರುವ ಪರಿಣಾಮ ದೊಡ್ಡ ಮಟ್ಟದ್ದು. ಹೀಗೆ ಒಮ್ಮೆ ಹರಿಬಿಟ್ಟ ಸುದ್ದಿಯನ್ನು ಸರಿಪಡಿಸಲೂ ಆಗುವುದಿಲ್ಲ, ಬದಲಿಸಲೂ ಆಗುವುದಿಲ್ಲ, ಹಿಂಪಡೆಯಲೂ ಬರುವುದಿಲ್ಲ. ‘ಇದು ಸುಳ್ಳು ಸುದ್ದಿ ಅಲ್ಲವಾ?’. ‘ಹೌದು, ಯಾರು ಇದನ್ನು ಕೇರ್ ಮಾಡುತ್ತಾರೆ. ಹಬ್ಬಿಸುವವರು? ನಂಬುವವರು?’ ಎಂಬ ಸಿನಿಮಾದ ಸಂಭಾಷಣೆಗಳು ನಮ್ಮ ಪ್ರಜ್ಞೆಯನ್ನು ಎಚ್ಚರಿಸುತ್ತವೆ.

ಯುವ ರಾಜಕಾರಣಿ ಹತ್ಯೆ ನಡೆದ ಬಳಿಕ, ಘಟನಾಸ್ಥಳಕ್ಕೆ ಬರುವ ಪೊಲೀಸರು ಲಾರಿಯಲ್ಲೇನಿದೆ ಎಂದು ಪರೀಕ್ಷಿಸಲು ಲಾರಿಯ ಹಿಂಬಾಗಿಲನ್ನು ತೆರೆಯುತ್ತಾರೆ. ಹತ್ತಾರು ಕತ್ತೆಗಳು, ಜೋರಾಗಿ ಕೂಗಿಕೊಳ್ಳುತ್ತಾ ಹೊರ ಓಡಿಬರುತ್ತದೆ...!

–ಸುಕೃತ ಎಸ್.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

‘ಪ್ರಧಾನಿ ನರೇಂದ್ರ ಮೋದಿ ಹೆಸರನ್ನು ಈ ಬಾರಿಯ ನೊಬೆಲ್ ಶಾಂತಿ ಪುರಸ್ಕಾರಕ್ಕೆ ನಾಮನಿರ್ದೇಶನ ಮಾಡಲಾಗಿದೆ. ಈ ಬಗ್ಗೆ ನೊಬೆಲ್ ಪುರಸ್ಕಾರ ಆಯ್ಕೆ ಸಮಿತಿಯ ಸದಸ್ಯರೇ ಮಾಹಿತಿ ನೀಡಿದ್ದಾರೆ. ನೊಬೆಲ್ ಸಮಿತಿ ಉಪಾಧ್ಯಕ್ಷ ಅಸ್ಲೆ ಟೋಜೆ ಅವರು, ‘ಮೋದಿ ಅವರು ನೊಬೆಲ್ ಶಾಂತಿ ಪುರಸ್ಕಾರಕ್ಕೆ ಅತ್ಯಂತ ಸೂಕ್ತವಾದ ವ್ಯಕ್ತಿ’ ಎಂದು ಹೇಳಿದ್ದಾರೆ’ ಎಂದು ಹಲವು ಸುದ್ದಿವಾಹಿನಿಗಳು ವರದಿ ಪ್ರಸಾರ ಮಾಡಿದ್ದವು. ಆ ವರದಿಗಳ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಈಗಲೂ ಹಂಚಿಕೊಳ್ಳಲಾಗುತ್ತಿದೆ. ಆದರೆ ಇದು ಸುಳ್ಳು ಸುದ್ದಿ.



ಇದು ಸುಳ್ಳು ಸುದ್ದಿ ಎಂದು ಸಿಎನ್‌ಬಿಸಿ ಟಿ.ವಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಇಂತಹ ಸುದ್ದಿ ಮೊದಲು ಪ್ರಸಾರವಾಗಿದ್ದು ಇದೇ ಮಾರ್ಚ್ 15ರಂದು. ‘ಈ ಎಲ್ಲಾ ವರದಿಗಳು ಸಂಪೂರ್ಣ ಸುಳ್ಳು’ ಎಂದು ಅಸ್ಲೆ ಟೋಜೆ ಅವರು ಮಾರ್ಚ್ 16ರಂದು ಸ್ಪಷ್ಟನೆ ನೀಡಿದ್ದರು. ಮಾರ್ಚ್ 15ರಂದು ಸುದ್ದಿ ವಾಹಿನಿಯೊಂದು ಕೇಳಿದ್ದ ಪ್ರಶ್ನೆಗೆ ಉತ್ತರಿಸಿದ್ದ ಅವರು, ‘ರಷ್ಯಾ–ಉಕ್ರೇನ್ ವಿಚಾರದಲ್ಲಿ ಎಲ್ಲಾ ದೇಶಗಳ ಜಾಗತಿಕ ಹೊಣೆಗಾರಿಕೆಗೆ ಹೆಗಲು ಕೊಡಲು ಭಾರತ ಸಿದ್ಧವಾಗಿರುವುದು ಶ್ಲಾಘನೀಯ’ ಎಂದು ಹೇಳಿದ್ದರು. ಅದನ್ನೇ ಮಾಧ್ಯಮಗಳು ಶಾಂತಿ ಪುರಸ್ಕಾರಕ್ಕೆ ಮೋದಿ ನಾಮನಿರ್ದೇಶನ ಎಂದು ಸುದ್ದಿ ಪ್ರಸಾರ ಮಾಡಿದ್ದವು. ಹೀಗಾಗಿ ಇದು ಒಂದು ತಿರುಚಲಾದ ಸುದ್ದಿ ಎಂದು ಸಿಎನ್‌ಬಿಸಿ ಟಿ.ವಿ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ಕೃತಜ್ಞತೆಯ ಪ್ರಣಾಮಗಳು

ಎಲ್ಲರಿಗಮೀಗ ನಮೊ - ಬಂಧುಗಳೆ, ಭಾಗಿಗಳೆ |
ಉಲ್ಲಾಸವಿತ್ತವರೆ, ಮನವ ತೊಳೆದವರೆ ||
ಟೊಳ್ಳುಜಗ ಸಾಕು ಬಾಳ್ – ಎನಿಸಿ ಗುರುವಾದವರೆ |
ಕೊಳ್ಳಿರೀ ನಮನವನು – ಮಂಕುತಿಮ್ಮ || 922 ||

ಪದ-ಅರ್ಥ: ಎಲ್ಲರಗಮೀಗ = ಎಲ್ಲರಿಗಮ್ (ಎಲ್ಲ-ರಿಗೂ) + ಈಗ, ಟೊಳ್ಳು = ಪೊಳ್ಳು, ನಮನವನು- = ನಮಸ್ಕಾರವನ್ನು

ವಾಚ್ಯಾರ್ಥ: ಎಲ್ಲರಿಗೂ ಈಗ ನಮಸ್ಕಾರ. ಬಂಧುಗಳೇ, ಭಾಗಿಗಳೆ, ಮನಸ್ಸಿಗೆ ಉಲ್ಲಾಸ ನೀಡಿದವರೆ, ಮನಸ್ಸನ್ನು ಶುದ್ಧೀಕರಿಸಿದವರೆ, ಈ ಜಗತ್ತು ಕೇವಲ ಪೊಳ್ಳು, ಸಾಕಿನ್ನು ಬಾಳು ಎನ್ನಿಸಿ ನನಗೆ ಗುರುವಾದವರೆ. ನನ್ನ ನಮಸ್ಕಾರಗಳನ್ನು ಸ್ವೀಕರಿಸಿ.

ವಿವರಣೆ: ನನ್ನ ವೈಯಕ್ತಿಕ ಅನಿಸಿಕೆಯಂತೆ ಈ ಕಗ್ಗ ಚೌಪದಿ ಸರಣಿಯ ಕಡೆಯದಾಗಬೇಕಿತ್ತು. ಒಂದು ರೀತಿಯಲ್ಲಿ ಇದು ಕೃತಜ್ಞತಾ ಸಮರ್ಪಣೆ. ಎಲ್ಲರಿಗೂ ಕೃತಜ್ಞತೆಗಳನ್ನು, ನಮಸ್ಕಾರಗಳ-ನ್ನು ಹೇಳುವುದು ಇದರಲ್ಲಿದೆ. ಸಾಮಾನ್ಯವಾಗಿ ಸಂಪೂರ್ಣ ಜೀವನವನ್ನು ನಡೆಸಿ, ಅದರಿಂದ ಮುಕ್ತಿ ಬಯಸುವವನ ಮಾತುಗಳಿವು. ನಮ್ಮ ಬದುಕಿನುದ್ದಕ್ಕೂ ಪ್ರತಿಕ್ಷಣ ಅವೆಷ್ಟು ಭಗವಚ್ಛಕ್ತಿಗಳು ನಿರಂತರವಾಗಿ ಅವಲಂಬನೆಯನ್ನು ನೀಡುತ್ತಿರು-ವುವೆಂಬುದನ್ನು ನೆನೆದಾಗ ಎಲ್ಲರ, ಎಲ್ಲದರ ಬಗ್ಗೆ ಕೃತಜ್ಞತೆ ಉಕ್ಕುತ್ತದೆ. ಎಲ್ಲದಕ್ಕೂ ನಮ್ಮ ನಮನಗಳು ಸಲ್ಲಬೇಕು. ಜ್ಞಾನಯೋಗಾಶ್ರಮದ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ತಾವು ಲಿಂಗೈ-ಕ್ಯರಾಗುವುದಕ್ಕಿಂತ ಬಹಳ ಮೊದಲೇ ಒಂದು ಅಭಿನಂದನಾ ಪತ್ರವನ್ನು ಬರೆದಿರಿಸಿದ್ದರು. ಅದರ ಕೆಲಭಾಗ ಹೀಗಿದೆ.

“ನನ್ನದು ವಿರಾಮದ, ಸಾವಧಾನದ, ಸಾಮಾನ್ಯ ಜೀವನ. ಇದನ್ನು ರಚಿಸಿದ್ದು ‘ಗುರುದೇವ’ ಮತ್ತು ಅದನ್ನು ಅಳವಡಿಸಿಕೊಂಡವರು ದೇಶದ ಗೌರವಾನ್ವಿತ ಜನರು, ಹಿತೈಷಿಗಳು, ಸಹೃದಯರು, ಸಾಧಕರು ಮತ್ತು ಸಾಮಾನ್ಯ ಜನರು. ಪ್ರಕೃತಿ ಮನಸ್ಸಿಗೆ ಮುದ ನೀಡುತ್ತದೆ. ತಾತ್ವಿಕ ಚಿಂತನೆಗಳು ವ್ಯಾಪಕವಾಗಿ ಹರಡಿವೆ. ಜಾಗತಿಕ ತತ್ವಜ್ಞಾನಿಗಳು ಮತ್ತು ವಿಜ್ಞಾನಿಗಳ ಅವಿಷ್ಕಾರಗಳು ದೃಷ್ಟಿಯ ಗಡಿಗಳನ್ನು ದೂರ ಮತ್ತು ವ್ಯಾಪಕವಾಗಿ ತಳ್ಳಿವೆ. ಅದಕ್ಕಾಗಿಯೇ ನಾನು ಎಲ್ಲರಿಗೂ ಮತ್ತು ಎಲ್ಲದಕ್ಕೂ ಕೃತಜ್ಞನಾಗಿದ್ದೇನೆ. ನಾನು ಹಲವು ದಶಕಗಳಿಂದ ಅದ್ಭುತ ಜಗತ್ತಿನಲ್ಲಿ ವಾಸಿಸುತ್ತಿದ್ದೆ. ನಾನು ನೋಡಿದ್ದೇನೆ ಮತ್ತು ಅನುಭವಿಸಿದ್ದೇನೆ. ನನ್ನ ಜೀವನ ಮುಗಿಯುವ ಮೊದಲು ನಾನು ಅದನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳಬೇಕು”. ತಾವು ಬದುಕಿನಲ್ಲಿ ಪಡೆದ ಅನುಭವಕ್ಕೆ, ಸಹಕಾರಕ್ಕೆ ಎಲ್ಲರಿಗೂ ವಂದನೆಗಳನ್ನು ತಿಳಿಸಬೇಕು ಎಂದು ಭಾವಿಸಿದರು. ಪರಮಪೂಜ್ಯರು. ಇದೇ ಭಾವವನ್ನು ಈ ಕಗ್ಗ ಧ್ವನಿಸುತ್ತದೆ. ಬಂಧುಗಳೆ, ಸಹಕಾರಿಗಳೆ, ನನ್ನ ಬದುಕಿನಲ್ಲಿ ಆಗಾಗ ಸಂತೋಷವನ್ನು ತಂದವರೆ, ನಿಮಗೆ ನನ್ನ ನಮಸ್ಕಾರಗಳು. ಕೆಲವರು ನನ್ನ ಮನಸ್ಸಿನ ಕೊಳೆಯನ್ನು ಕಳೆದಿದ್ದಾರೆ ಮತ್ತೆ ಕೆಲವರು ಜಗದ ಅಶಾಶ್ವತತೆಯನ್ನೂ ತಿಳಿಸಿ ಇದು ಟೊಳ್ಳು ಜಗ, ಈ ಮೆರುಗಿನ ಬದುಕು ಸಾಕು ಎಂದು ತಿಳಿಸಿ ಗುರುವಾಗಿದ್ದಾರೆ. ನಿಮ್ಮೆಲ್ಲರಿಗೂ ನನ್ನ ಕೃತಜ್ಞತೆಯ ಪ್ರಣಾಮಗಳು. ಹೀಗೆ ನಮ್ಮ ಬದುಕನ್ನು ಹಸನುಗೊಳಿಸಿದವರು, ಶ್ರೀಮಂತಗೊಳಿಸಿದವರಿಗೆಲ್ಲ ನಮ್ಮ ನಮನಗಳು ಸಲ್ಲಬೇಕು ಎನ್ನುತ್ತದೆ ಕಗ್ಗ. ❖

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜುಲೈ 7, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಪಂಚಮಿ ಗಂ. 24-18, ನಕ್ಷತ್ರ: ಶತಭಿಷ ಗಂ. 22-16 ಯೋಗ: ಆಯುಷ್ಮಾನ್ ಗಂ. 20-30 ಕರಣ: ಕೌಲವ ಗಂ. 13-42, ಮಿಥುನ ಮಾಸದ 22ನೇ ದಿನ, ಮಳೆನಕ್ಷತ್ರ: ಪುನರ್ವಸು 1.
ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-13 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 18 ಜುಲ್‌ಹಿಜಾ
ದಿನ ವಿಶೇಷ : ಆಷಾಢ ಶುಕ್ರವಾರ
ಅದೃಷ್ಟ ಸಂಖ್ಯೆ : 8, 10

ಮೇಷ: ಆಟಿಕೆಗಳ ಮಾರಾಟದವರಿಗೆ ಉತ್ತಮ ಮಾರಾಟ ಹಾಗೂ ಲಾಭ ಸಿದ್ಧಿಸುತ್ತದೆ. ಮದುವೆ ಕೆಲಸಗಳಿಂದಾಗಿ ಓಡಾಟ ಹೆಚ್ಚುವುದು. ಕಾರ್ಮಿಕರ ಬೇಜವಾಬ್ದಾರಿತನದಿಂದಾಗಿ ಲಾಭಕ್ಕೆ ತೊಂದರೆ ಉಂಟಾಗಬಹುದು.

ವೃಷಭ: ಸೋಮಾರಿತನ, ಅತಿಯಾದ ನಿದ್ದೆ ಕಾರ್ಯಕ್ಕೆ ಭಂಗವನ್ನು ತರಲಿದೆ. ಪರಿಸರದ ಸನ್ನಿವೇಶವೂ ಇದಕ್ಕೆ ಪೂರಕವಾಗಿರುವುದು. ರಕ್ಷಣಾ ವೃತ್ತಿಗೆ ಸಂಬಂಧಿಸಿದವರು ಎಚ್ಚರದಿಂದ ಕಾರ್ಯ ನಿರ್ವಹಿಸಿ.

ಮಿಥುನ: ತಾಯಿಯ ದೇಹದಲ್ಲಿ ವಾಯು ಪ್ರಕೋಪದಿಂದಾಗಿ ಹಲವು ಸಮಸ್ಯೆಗಳು ಕಾಡಬಹುದು. ಅವರ ಆರೋಗ್ಯ ಸುಧಾರಿಸಲು ಧಾರ್ಮಿಕ ಕಾರ್ಯ ಮಾಡಿ. ಪ್ರೇಮಿಗಳ ಪಾಲಿಗೆ ಮಹತ್ತರ ಬೆಳವಣಿಗೆ ಕಂಡುಬರಲಿದೆ.

ಕರ್ಕಾಟಕ: ಬದುಕಿನಲ್ಲಿ ಸಕಾರಾತ್ಮಕವಾಗಿ ಯೋಚಿಸುವುದನ್ನು ಅಭ್ಯಾಸ ಮಾಡಿ. ಇಂದಿನ ದಿನದ ಕೆಲಸ, ಇಂದಿನ ದಿನವೇ ಮುಗಿಸುವುದನ್ನು ಕಾರ್ಯರೂಪಕ್ಕೆ ತಂದುಕೊಳ್ಳಿರಿ. ಶನೈಶ್ಚರನ ದರ್ಶನ ಮಾಡಿ ಕೃಪೆಗೆ ಪಾತ್ರರಾಗಿ.

ಸಿಂಹ: ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಮತ್ತು ಕಥೆ, ಕವನದ ಬರಹಗಾರರಿಗೆ ಅವಕಾಶ ಹೆಚ್ಚಲಿದೆ. ಪತ್ರಿಕಾರಂಗದವರಿಗೆ ಶುಭ ದಿನ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚು ಆಸಕ್ತಿ ಮೂಡಲಿದೆ.

ಕನ್ಯಾ: ಯೋಜನೆಗಳು ಸ್ಥಗಿತಗೊಂಡಂತೆ ಆಗಬಹುದು. ಕೃಷಿ ಕಾರ್ಯಗಳು ಚುರುಕುಗೊಂಡು ರೈತಾಪಿ ವರ್ಗದವರಲ್ಲಿ ಸಂತಸ ಮೂಡಲಿದೆ. ಸಡಗರದಲ್ಲಿ ವಸ್ತ್ರಾಭರಣ ಖರೀದಿಗೆ ಹಣ ವಿನಿಯೋಗ ಮಾಡುವಿರಿ.

ತುಲಾ: ಆರನೆಯ ಇಂದ್ರಿಯದ ಸೂಚನೆಯ ಸಹಾಯ ಉಪಯುಕ್ತವಾಗಲಿದೆ. ವ್ಯಾಪಾರದಲ್ಲಿ ಅತೀವ ಆಸಕ್ತಿ ಮೂಡುತ್ತದೆ. ಅಧಿಕ ಲಾಭಂಶ ಹೊಂದುವಿರಿ. ಅಪೇಕ್ಷಿಗಳಿಗೆ ಸಂತಾನ ಭಾಗ್ಯ ದೊರೆಯುವುದು.

ವೃಶ್ಚಿಕ: ಆತಂಕ ತುಂಬಿದ ಕೆಲಸಕಾರ್ಯದಲ್ಲಿರುವವರ ಮನೆಯಲ್ಲಿ ನೆಮ್ಮದಿ ತುಂಬುವುದು. ಸುಂದರ ಸಂಜೆ ನಿಮ್ಮದಾಗುತ್ತದೆ. ವ್ಯಾಪಾರ-ವ್ಯವಹಾರದಲ್ಲಿ ಮತ್ತು ಪ್ರಯಾಣ ನಡೆಸುವಾಗ ನಯವಂಚಕರ ಬಗ್ಗೆ ಎಚ್ಚರವಹಿಸಿ.

ಧನು: ಹಿಂಜರಿಕೆಯ ಸ್ವಭಾವದಿಂದ ವೃತ್ತಿಯನ್ನು ಸಂಪಾದಿಸಲು ಕಷ್ಟವಾಗುತ್ತದೆ. ಈ ದಿನ ದೇವತಾನುಗ್ರಹದಿಂದ ಆರ್ಥಿಕ ಖರ್ಚು-ವೆಚ್ಚಗಳ ಸಮತೋಲನ, ಕುಟುಂಬದಲ್ಲೂ ತೃಪ್ತಿ, ಆರೋಗ್ಯದಿಂದ ಮಾನಸಿಕ ಶಾಂತಿ ಕಾಣುವಿರಿ.

ಮಕರ: ನಡವಳಿಕೆಯು ಮನೆಯವರಲ್ಲಿ ಸಂತಸವನ್ನು ಮೂಡಿಸುತ್ತದೆ. ಹಾಲು, ಮೊಸರು, ತುಪ್ಪದಂತಹ ಗೋ ಉತ್ಪನ್ನ ವಸ್ತುಗಳ ಮಾರಾಟಗಾರರಿಗೆ ಲಾಭವಾಗಲಿದೆ. ಆಧ್ಯಾತ್ಮಿಕ ವಿಚಾರಗಳತ್ತ ಗಮನ ಹರಿಸುವಿರಿ.

ಕುಂಭ: ಮಕ್ಕಳ ಮದುವೆಯಂತಹ ವಿಚಾರವನ್ನು ತಿಳಿ ಮನಸ್ಸಿನಿಂದ ಆಲೋಚಿಸಿ, ಸಮಸ್ಯೆಗಳಿಗೆ ಉತ್ತರ ಸಿಗುವುದು. ಅನಿರೀಕ್ಷಿತ ಪ್ರಯಾಣ ಬದುಕಿನ ಹೊಸ ದಾರಿಗೆ ಕಾರಣವಾಗಲಿದೆ. ಧನವ್ಯಯದಲ್ಲಿ ಗಮನವಿರಲಿ.

ಮೀನ: ಬೆಂಕಿಯಿಂದ ಅಥವಾ ಸುಡುವ ಪದಾರ್ಥದಿಂದ ದೂರವಿರುವುದು ಉತ್ತಮ. ಪಿತ್ತಕೋಶಕ್ಕೆ ಸಂಬಂಧಿಸಿದಂತೆ ಅನಾರೋಗ್ಯಗಳು ಎದುರಾಗಬಹುದು. ತಾಯಿ ದುರ್ಗಾಪರಮೇಶ್ವರಿಯ ಆರಾಧನೆಯಿಂದ ಶುಭಪ್ರಾಪ್ತಿ.

ಪದಬಂಧ 5372
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಉತ್ಪಾದಕನಿಗೆ ಬೇಕಾದ ನೀರು (3)
3. ಇದು ವಾಸ್ತವವಲ್ಲ ಬಿಡಿ,ನಸುಕಿನಲ್ಲಿ ಬಿದ್ದ ಸ್ವಪ್ನ! (3)
4. ಮಡಿವಂತನು ಹಿಡಿದಿರುವ ಮಣ್ಣಿನ ಪಾತ್ರೆ (3)
6. ಕುಲದಲ್ಲಿರುವ ಕ್ಷೇಮ! (3)
7. ಕವಾಡಿಗನದ್ದೂ ಇದೇ ಸಂಪ್ರದಾಯವಂತೆ! (3)
9. ಪಾಪ! ಇನ್ನೂ ಕರುವಲ್ಲವೇ ಅದಕ್ಕೇ ಈ ದಯೆ (3)
11. ನಗರದವರೆಲ್ಲರೂ ಜರೂರಾಗಿ ಒಪ್ಪಿಸಿದ ಕಾಣಿಕೆ (3)
13. ಹೇಳಿದ ದಿನದೊಳಗೇ ಬಂದನಲ್ಲ ಈ ಮಂತ್ರಿ! (3)
15. ಪ್ರವಾಸದಲ್ಲಿ ಸಿಕ್ಕವರು ತತ್ವಜ್ಞಾನಿಯಂತೆ! (3)
17. ಲವಂಗ ತರದೇ ಸತಾಯಿಸಿಬಿಟ್ಟನಲ್ಲ ಈ ದುರಾಚಾರಿ! (3)
18. ತರ್ಕ ಮಾಡುತ್ತಿರುವ ವ್ಯಾಪಾರಿ (3)
19. ವಸತಿ ಬಳಿ ತಿರುಗಿಬಿಟ್ಟಳಲ್ಲಾ ಈ ಉಪಪತ್ನಿ (3)

ಮೇಲಿಂದ ಕೆಳಕ್ಕೆ
1. ಆ ಕೂಸು ಕುಳಿತಿದ್ದು ಈ ಮರಳಲ್ಲಿ! (3)
2. ಕಮಂಡಲ ಹಿಡಿದವ ನೀಡಿದ ತಾವರೆ (3)
3. ಕರವನ್ನು ಕಡಿಯಲು ಬಂದಿದೆಯಲ್ಲಾ ಈ ಭಲ್ಲೂಕ! (3)
5. ಹೆಸರು ಹೇಳದೇ ಸಿಡಿಸಿ ಬಿಟ್ಟನಲ್ಲಾ ಈ ರಾಡಿಯನ್ನು! (3)
7. ವಾಗುದ್ಧವೆಲ್ಲಾ ಮುಗಿದ ಮೇಲೆ ನೀಡಿದ ವಚನ (3)
8. ಕೆನ್ನೆ ಮೇಲೇ ಕಾಣುತ್ತಿದೆಯಲ್ಲ ಈ ನೆತ್ತರು ! (3)
9. ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
10. ದನಕ್ಕಾಗಿಯೇ ನಡೆದಿರುವ ಯುದ್ಧ! (3)
12. ಜಲ ತರುವುದೇ ಇಷ್ಟು ತೊಡಕು (3)
14. ಈತ ವಾದ್ಯ ನುಡಿಸುವವ! (3)
15. ಆತ ಪ್ರತಿಯೊಳಗೆ ತೋರಿಸಿದ ಏಳಿಗೆ (3)
16. ದವಸವನ್ನೆಲ್ಲಾ ತಂದ ದಿನ (3)



5371ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಲ್ಪನೆ 3.ಪ್ರತ್ಯಕ್ಷ
5.ನರಭಕ್ಷಕ 6.ಲೆಅ
8.ಪ್ರಾಣ 9.ನಾರು
10.ಭವಿ 14.ಧರ್ಮಬಾಹಿರ
15.ಆರುಮ 16.ಭಲ್ಲೂಕ

ಮೇಲಿಂದ ಕೆಳಕ್ಕೆ:
1.ಕರೆಯೋಲೆ 2.ನೆನಪು
3.ಪ್ರಕಟ 4.ಕ್ಷಮಾಗುಣ
7.ಅತ್ತರು 8.ಪ್ರಾರಂಭ
9.ನಾರಿಕೇಳ 11.ವಿದೂಷಕ
12.ಅಧಮ 13.ಶರಭ

ಸುಡೊಕು 5758

	3		4			2		7
7		4		3			5	
			1			8		3
		7		4				
3		2	9		1			
				6				2
1		8	3		4			5
	2					9	7	8
6		9		2			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5757 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

₹162ಕ್ಕೆ ಏರಿದ ಟೊಮೆಟೊ

ನವದೆಹಲಿ (ಪಿಟಿಐ): ದೇಶದಾದ್ಯಂತ ಟೊಮೆಟೊ ದರವು ಏರಿಕೆ ಕಾಣುತ್ತಲೇ ಇದೆ. ಉತ್ತರ ಪ್ರದೇಶದ ಶಹಜಹಾನ್‌ಪುರದಲ್ಲಿ ಗುರುವಾರ ಕೆ.ಜಿಗೆ ಗರಿಷ್ಠ ₹162ಕ್ಕೆ ತಲುಪಿದೆ.

ಗ್ರಾಹಕ ವ್ಯವಹಾರಗಳ ಸಚಿವಾಲಯದಲ್ಲಿ ಇರುವ ಮಾಹಿತಿಯ ಪ್ರಕಾರ, ಕೋಲ್ಕತ್ತದಲ್ಲಿ ಕೆ.ಜಿಗೆ ₹152, ದೆಹಲಿಯಲ್ಲಿ ₹120, ಚೆನ್ನೈನಲ್ಲಿ ₹117 ಮತ್ತು ಮುಂಬೈನಲ್ಲಿ ₹108ಕ್ಕೆ ಮಾರಾಟ ಆಗಿದೆ.

ರಾಜಸ್ಥಾನದ ಚುರು ಜಿಲ್ಲೆಯಲ್ಲಿ ಕೆ.ಜಿಗೆ ₹31ರಷ್ಟು ಇದೆ. ಇದು ಈಗ ಟೊಮೆಟೊಗೆ ದೇಶದಲ್ಲಿ ಕನಿಷ್ಠ ದರ. ಉಳಿದಂತೆ ಇತರ ಪ್ರಮುಖ ನಗರಗಳಲ್ಲಿಯೂ ಟೊಮೆಟೊ ದರ ಗರಿಷ್ಠ ಮಟ್ಟದಲ್ಲಿಯೇ ಇದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,398
ಇಂದಿನ ಅಂತ್ಯ	19,497
▲	99
ದಿನದ ಗರಿಷ್ಠ	19,512

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1700-2000
ಮಧ್ಯಮ	₹1300-1500
ಸಣ್ಣ	₹800-1200

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1715 (1705)
ಸೋಯಾ (ರಿಫೈನ್ಡ್)	₹965 (960)
ಸೂರ್ಯಕಾಂತಿ (ರಿಫೈನ್ಡ್)	₹955 (960)
ಪಾಮೋಲಿನ್	₹874 (865)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹153
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹130

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹260-401
ದ್ವಿತಳಿ (ಬಿ.ವಿ)	₹290-538

ಮುಂದುವರಿದ ವಿದೇಶಿ ಹೂಡಿಕೆ; ಹೊಸ ಎತ್ತರಕ್ಕೆ ಷೇರುಪೇಟೆಗಳು

ದಾಖಲೆ ಮಟ್ಟಕ್ಕೆ ಬಿಎಸ್‌ಇ ಮೌಲ್ಯ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತವಾಗಿರುವ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ಗುರುವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹301.70 ಲಕ್ಷ ಕೋಟಿಗೆ ಏರಿಕೆ ಕಂಡಿತು.

ಷೇರುಪೇಟೆಯಲ್ಲಿ ನಡೆದ ಸಕಾರಾತ್ಮಕ ವಹಿವಾಟು ಹಾಗೂ ಸೂಚ್ಯಂಕಗಳ ಏರಿಕೆಯು ಈ ದಾಖಲೆ ನಿರ್ಮಾಣಕ್ಕೆ ಕಾರಣವಾದವು.

ಬುಧವಾರದ ವಹಿವಾಟಿನ ಅಂತ್ಯಕ್ಕೆ ಮಾರುಕಟ್ಟೆ ಬಂಡವಾಳ ಮೌಲ್ಯ ₹299.90 ಲಕ್ಷ ಕೋಟಿ ಆಗಿತ್ತು. ಗುರುವಾರದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹1.80 ಲಕ್ಷ ಕೋಟಿಯಷ್ಟು ಹೆಚ್ಚಾಗಿದ್ದರಿಂದ ಒಟ್ಟು ಮೌಲ್ಯವು ₹301.70 ಲಕ್ಷ ಕೋಟಿಗೆ ತಲುಪಿತು.

ಮಾರುಕಟ್ಟೆ ಮೌಲ್ಯದ ಏರಿಕೆ ಹಾದಿ (ಲಕ್ಷ ಕೋಟಿ)



ಸೆನ್ಸೆಕ್ಸ್, ನಿಫ್ಟಿ ಏರಿಕೆ: ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಹೊಸ ಎತ್ತರದಲ್ಲಿ ವಹಿವಾಟು ಅಂತ್ಯಗೊಳಿಸಿವೆ. ಸೆನ್ಸೆಕ್ಸ್ 340 ಅಂಶ ಏರಿಕೆ ಕಂಡು 65,786 ಅಂಶಗಳಿಗೆ ತಲುಪಿತು. ನಿಫ್ಟಿ 99 ಅಂಶ ಹೆಚ್ಚಾಗಿ 19,497 ಅಂಶಗಳಿಗೆ ಏರಿಕೆ ಕಂಡಿತು.

ಬಿಎಸ್‌ಇನಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ ಷೇರು ಶೇ 5ರಷ್ಟು ಗರಿಷ್ಠ ಏರಿಕೆ ಕಂಡಿತು. ವಲಯವಾರು ಯುಟಿಲಿಟಿ ಶೇ 2.44, ರಿಯಾಲ್ಟಿ ಶೇ 2.17, ತೈಲ ಮತ್ತು ಅನಿಲ ಶೇ 2ರಷ್ಟು ಏರಿಕೆ ಕಂಡಿತು.

ಜಾಗತಿಕ ಮಾರುಕಟ್ಟೆಯು ಇಳಿಮುಖ ಆಗಿದ್ದರೂ ವಿದೇಶಿ ಹೂಡಿಕೆದಾರರ ಬೆಂಬಲದಿಂದಾಗಿ ದೇಶಿ ಷೇರುಪೇಟೆಗಳಲ್ಲಿ ಏರುಮುಖ ಚಲನೆ ಮುಂದುವರಿದಿದೆ. ಅಮೆರಿಕ-ಚೀನಾ ಬಿಕ್ಕಟ್ಟು ಮತ್ತು ಅಮೆರಿಕದ ಫೆಡರಲ್ ರಿಸರ್ವ್‌ನ ಹೇಳಿಕೆಯಿಂದಾಗಿ ಜಾಗತಿಕ ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕ್ಯಾಸಿನೊ, ಕುದುರೆ ರೇಸ್‌ಗೆ ಶೇ 28ರಷ್ಟು ಜಿಎಸ್‌ಟಿ?

ಆನ್‌ಲೈನ್ ಗೇಮಿಂಗ್‌ಗೆ ಶೇ 18 ತೆರಿಗೆಗೆ ಗೋವಾ ಸಲಹೆ

ನವದೆಹಲಿ (ಪಿಟಿಐ): ಕ್ಯಾಸಿನೊ, ಕುದುರೆ ರೇಸ್ ಮತ್ತು ಆನ್‌ಲೈನ್ ಗೇಮಿಂಗ್ ಸೇವೆಗಳಿಗೆ ಶೇಕಡ 28ರಷ್ಟು ಜಿಎಸ್‌ಟಿ ವಿಧಿಸಲು ಸಚಿವರ ತಂಡದ ಬಹುತೇಕ ಸದಸ್ಯರು ಒಪ್ಪಿಗೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ. ಆದರೆ, ಈ ಪ್ರಮಾಣದ ತೆರಿಗೆ ವಿಧಿಸುವುದಕ್ಕೆ ಗೋವಾ ಒಪ್ಪಿಲ್ಲ. ಆನ್‌ಲೈನ್ ಗೇಮಿಂಗ್‌ಗೆ ಶೇ 18ರಷ್ಟು ತೆರಿಗೆ ವಿಧಿಸಬೇಕು ಎಂದು ಗೋವಾ ಸಲಹೆ ನೀಡಿದೆ.

ಮುಖ್ಯಾಂಶಗಳು

- ಇದೇ 11ರಂದು ಜಿಎಸ್‌ಟಿ ಮಂಡಳಿ ಸಭೆ
- ನೋಂದಣಿ ನಿಯಮ ಇನ್ನಷ್ಟು ಬಿಗಿಗೊಳಿಸಲಿರುವ ಮಂಡಳಿ

ಜಿಎಸ್‌ಟಿ ಮಂಡಳಿಯು ಇದೇ 11ಕ್ಕೆ ಸಭೆ ಸೇರಲಿದ್ದು, ತೆರಿಗೆ ದರದ ಬಗ್ಗೆ ನಿರ್ಧಾರಕ್ಕೆ ಬರಲಿದೆ ಎಂದು ಮೂಲಗಳು ಹೇಳಿವೆ.

ಗೇಮಿಂಗ್‌ನ ಸರಾಸರಿ ವರಮಾನದ ಮೇಲೆ (ಜಿಜಿಆರ್) ಅಥವಾ ಪ್ಲಾಟ್‌ಫಾರ್ಮ್‌ಗಳು ವಿಧಿಸುವ ಶುಲ್ಕಕ್ಕೆ ಅಥವಾ ಆನ್‌ಲೈನ್ ಗೇಮಿಂಗ್‌ನಲ್ಲಿ ಆಟಗಾರರು ಕಟ್ಟುವ ಬೆಟ್‌ಗಳ ಮೌಲ್ಯಕ್ಕೆ ತೆರಿಗೆ ವಿಧಿಸಬೇಕೇ ಎನ್ನುವುದರ ಅಂತಿಮ ತೀರ್ಮಾನವನ್ನು ಜಿಎಸ್‌ಟಿ ಮಂಡಳಿ ತೆಗೆದುಕೊಳ್ಳಲಿದೆ.

ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ನೇತೃತ್ವದ ಸಚಿವರ ತಂಡವು ತನ್ನ ಅಭಿಪ್ರಾಯವನ್ನು ಜಿಎಸ್‌ಟಿ ಮಂಡಳಿಗೆ ನೀಡಿದೆ. ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಗೋವಾ, ತಮಿಳುನಾಡು, ತೆಲಂಗಾಣ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳ ಸಚಿವರು ಈ ತಂಡದಲ್ಲಿ ಇದ್ದಾರೆ.

ಸಚಿವರ ತಂಡವು 2022ರ ಜೂನ್‌ನಲ್ಲಿ ಜಿಎಸ್‌ಟಿ ಮಂಡಳಿಗೆ ತನ್ನ ಮೊದಲ ವರದಿ ಸಲ್ಲಿಸಿತ್ತು. ಅದರಲ್ಲಿ ಬೆಟ್ಟಿಂಗ್‌ನ ಮೌಲ್ಯದ ಮೇಲೆ ಶೇ 28ರಷ್ಟು ತೆರಿಗೆ ವಿಧಿಸಬಹುದು ಎನ್ನುವ ಸಲಹೆ ನೀಡಿತ್ತು. ಆದರೆ, ಕೆಲವು ರಾಜ್ಯಗಳು ವರದಿಯನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಒತ್ತಾಯಿಸಿದ್ದವು. ನಿರ್ದಿಷ್ಟವಾಗಿ ಗೋವಾ ರಾಜ್ಯವು ಕೆಲವು ನಿರ್ಬಂಧಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿತ್ತು. ಹಾಗಾಗಿ ಜಿಎಸ್‌ಟಿ ಮಂಡಳಿಯು ವರದಿಯನ್ನು ಮತ್ತೊಮ್ಮೆ ಪರಿಶೀಲಿಸಿ ಸಲ್ಲಿಸುವಂತೆ ಸಚಿವರ ತಂಡಕ್ಕೆ ಸೂಚನೆ ನೀಡಿತ್ತು.

ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸುವ ಔಷಧವನ್ನು ವೈಯಕ್ತಿಕ ಬಳಕೆಗೆ ಆಮದು ಮಾಡಿಕೊಳ್ಳುವುದಕ್ಕೆ ತೆರಿಗೆ ವಿನಾಯಿತಿ ನೀಡುವ ಸಾಧ್ಯತೆ ಇದೆ ಎಂದು ಕೂಡ ಮೂಲಗಳು ಹೇಳಿವೆ.

ಥ್ರೆಡ್ಸ್ ಬಿಡುಗಡೆ, ಟ್ವಿಟರ್‌ಗೆ ನೇರ ಪೈಪೋಟಿ

ಬೆಂಗಳೂರು (ರಾಯಿಟರ್ಸ್): ಮೆಟಾ ಪ್ಲಾಟ್‌ಫಾರ್ಮ್ಸ್ ಆರಂಭಿಸಿರುವ 'ಥ್ರೆಡ್ಸ್' ಸಾಮಾಜಿಕ ಜಾಲತಾಣವು ಟ್ವಿಟರ್ ಕಂಪನಿಗೆ ದೊಡ್ಡ ಸವಾಲು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಥ್ರೆಡ್ಸ್ ಸೇವೆಗಳನ್ನು ಮೆಟಾ ಕಂಪನಿಯು ಗುರುವಾರ ಆರಂಭಿಸಿದೆ. ಮೊದಲ ದಿನವೇ ಒಂದು ಕೋಟಿಗೂ ಹೆಚ್ಚು ಬಳಕೆದಾರರನ್ನು ಥ್ರೆಡ್ಸ್ ಪಡೆದುಕೊಂಡಿದೆ.

ಥ್ರೆಡ್ಸ್ ಬಳಸಲು ಪ್ರತ್ಯೇಕ ಆ್ಯಪ್ ಬಿಡುಗಡೆ ಮಾಡಲಾಗಿದೆ. ಬಳಕೆದಾರರು ತಮ್ಮ ಇನ್‌ಸ್ಟಾಗ್ರಾಮ್‌ನ ಹೆಸರು ಹಾಗೂ ಪಾಸ್‌ವರ್ಡ್ ಬಳಸಿ ಥ್ರೆಡ್ಸ್‌ಗೆ ಲಾಗಿನ್ ಆಗಬಹುದು.

ಟ್ವಿಟರ್ ರೀತಿಯಲ್ಲಿಯೇ ಕೆಲಸ ಮಾಡುವ ಮಾಸ್ಟೊಡನ್ ಆ್ಯಪ್ ತನ್ನ ಬಳಕೆದಾರರ ಸಂಖ್ಯೆ 17 ಲಕ್ಷ ಎಂದು ಹೇಳಿಕೊಂಡಿದೆ. ಥ್ರೆಡ್ಸ್ ಈಗ ನೂರಕ್ಕೂ ಹೆಚ್ಚು ದೇಶಗಳಲ್ಲಿ ಲಭ್ಯವಾಗಿದೆ.

ಥ್ರೆಡ್ಸ್‌ನಲ್ಲಿ ಈಗ ಹ್ಯಾಷ್‌ಟ್ಯಾಗ್ ಬಳಸಿ ಅಥವಾ ಪ್ರಮುಖ ಪದಗಳನ್ನು ಬಳಸಿ ಶೋಧಿಸುವ ಅವಕಾಶ ಇಲ್ಲ. ಆದರೆ ಈ ಸೌಲಭ್ಯವು ಟ್ವಿಟರ್‌ನಲ್ಲಿ ಇದೆ.

ಬೆಲೆ ಹೆಚ್ಚಿಸಿದ ಟೊಯೋಟ

ನವದೆಹಲಿ (ಪಿಟಿಐ): ಟೊಯೋಟ ಕಿರ್ಲೋಸ್ಕರ್ ಮೋಟರ್ ಕಂಪನಿಯು ಬುಧವಾರದಿಂದಲೇ ಜಾರಿಗೆ ಬರುವಂತೆ ತನ್ನೆಲ್ಲಾ ಮಾದರಿಗಳ ಬೆಲೆಯನ್ನು ಶೇ 1ರಷ್ಟು ಹೆಚ್ಚಿಸಿದೆ.

ತಯಾರಿಕಾ ವೆಚ್ಚದಲ್ಲಿ ಆಗುತ್ತಿರುವ ಏರಿಕೆಯಿಂದ ಈ ನಿರ್ಧಾರಕ್ಕೆ ಬಂದಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದೆ. ಕಂಪನಿಯು ಪ್ರಮುಖವಾಗಿ ಇನೊವಾ ಕ್ರಿಸ್ಟಾ, ಫಾರ್ಚೂನರ್ ಮಾದರಿಗಳನ್ನು ಮಾರಾಟ ಮಾಡುತ್ತಿದೆ.

ವಾಹನ ಮಾರಾಟ ಶೇ 10ರಷ್ಟು ಹೆಚ್ಚು

ನವದೆಹಲಿ (ಪಿಟಿಐ): ಜೂನ್ ತಿಂಗಳಲ್ಲಿ ದೇಶಿ ಮಾರುಕಟ್ಟೆಯಲ್ಲಿ ವಾಹನಗಳ ಮಾರಾಟ ಪ್ರಮಾಣವು ಶೇಕಡ 10ರಷ್ಟು ಹೆಚ್ಚಾಗಿದೆ ಎಂದು ಆಟೊಮೊಬೈಲ್ ಡೀಲರ್‌ಗಳ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ತಿಳಿಸಿದೆ.

ಜೂನ್ ತಿಂಗಳಲ್ಲಿ ದೇಶದಲ್ಲಿ ಒಟ್ಟು 18.63 ಲಕ್ಷ ವಾಹನಗಳನ್ನು ಮಾರಾಟ ಮಾಡಲಾಗಿದೆ. ಹಿಂದಿನ ವರ್ಷದ ಜೂನ್‌ನಲ್ಲಿ 17.01 ಲಕ್ಷ ವಾಹನಗಳು ಮಾರಾಟವಾಗಿದ್ದವು.

ಪ್ರಯಾಣಿಕ ವಾಹನಗಳ ಮಾರಾಟವು ಶೇ 5ರಷ್ಟು ಹೆಚ್ಚಾಗಿ 2.95 ಲಕ್ಷಕ್ಕೆ ತಲುಪಿದೆ. ಇದು ಹಿಂದಿನ ವರ್ಷದಲ್ಲಿ 2.81 ಲಕ್ಷ ಆಗಿತ್ತು. ದ್ವಿಚಕ್ರ ವಾಹನಗಳ ಮಾರಾಟವು ಶೇ 7ರಷ್ಟು ಹೆಚ್ಚಾಗಿ 13.10 ಲಕ್ಷಕ್ಕೆ ತಲುಪಿದೆ.

ತ್ರಿಚಕ್ರ ವಾಹನಗಳ ಮಾರಾಟವು ಶೇ 75ರಷ್ಟು ಹೆಚ್ಚಾಗಿದ್ದು 86 ಸಾವಿರಕ್ಕೆ ತಲುಪಿದೆ. ಟ್ರ್ಯಾಕ್ಟರ್‌ಗಳ ಮಾರಾಟದಲ್ಲಿ ಶೇ 45ರಷ್ಟು ಬೆಳವಣಿಗೆ ಕಂಡುಬಂದಿದೆ.

ಸಾಲ ಮರುಪಾವತಿಗೆ ಕಾಫಿ ಡೇ ವಿಫಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ ಕಂಪನಿಯು ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಒಟ್ಟು ₹440 ಕೋಟಿ ಸಾಲ ಮರುಪಾವತಿಸುವಲ್ಲಿ ವಿಫಲವಾಗಿದೆ.

ಕಂಪನಿಯು ಈ ವಿಚಾರವನ್ನು ಷೇರುಪೇಟೆಗೆ ತಿಳಿಸಿದೆ. ನಗದೀಕರಣಕ್ಕೆ ಸಂಬಂಧಿಸಿದ ಬಿಕ್ಕಟ್ಟಿನ ಕಾರಣದಿಂದಾಗಿ ಸಾಲ ಮರುಪಾವತಿ ಮಾಡಲು ಸಾಧ್ಯವಾಗಿಲ್ಲ ಎಂಬ ವಿಚಾರವನ್ನೂ ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000-1050
ಹರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿಉತ್ತಮ	1600-1650
ಕಾಳು ಮೆಣಸು	480
ಅಡಿಕೆ	
ಕುಮಟಾ	
ಚಿಪ್ಪು	31011-34761
ಕೋಕ	18181-34497
ಹಳೆಚಾಲಿ	36800-40909
ಹೊಸಚಾಲಿ	35499-39029
ಸಾಗರ	
ಬಿಳಿಗೋಟು	30109-35099
ಚಾಲಿ	34010-39339
ಕೋಕ	21009-36699
ಕೆಂಪುಗೋಟು	31099-42899
ರಾಶಿ	35899-55599
ಸಿಪ್ಪೆಗೋಟು	12510-22059
ಶಿವಮೊಗ್ಗ	
ಬೆಟ್ಟೆ	48009-56000
ರಾಶಿ	37179-56396
ಗೊರಬಲು	17629-43599
ಸರಕು	57109-76600
ಸಿದ್ದಾಪುರ	
ಬಿಳಿಗೋಟು	30609-34311
ಚಾಲಿ	36880-39509
ಕೋಕ	30899-33899
ಕೆಂಪುಗೋಟು	32369-36199
ರಾಶಿ	49099-52949
ತಟ್ಟಿಬೆಟ್ಟೆ	43109-51369
ಶಿರಸಿ	
ಬೆಟ್ಟೆ	36099-47099
ಬಿಳಿಗೋಟು	18213-34699
ಚಾಲಿ	30190-39899
ಕೆಂಪುಗೋಟು	28999-39699
ರಾಶಿ	41310-51869
ಸಿದ್ದಾಪುರ	
ಬಿಳಿಗೋಟು	24899-35899
ಚಾಲಿ	36011-39290
ಕೋಕ	16213-34899
ಕೆಂಪುಗೋಟು	31619-36999
ರಾಶಿ	47699-54028
ತಟ್ಟಿಬೆಟ್ಟೆ	42499-48719

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14400	14200	14250	158.90
ಎಸಿ	7280	7200	7300	
ಆರ್‌ಪಿ	10000	10200	10350	ಲಂಡನ್
ಆರ್‌ಸಿ	5830	226 on OT	5900	2512 ಡಾಲರ್

ಮುಂಬೈ ಧಾರಣೆ

ಶೇಂಗಾ

6–7-2023

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1725 (1710)
ಒಂದು ವಾರದ ಡೆಲಿವರಿ	1720 (1705)
ಸೋಯಾ ಕಚ್ಚಾ	907 (900)
ಪಾಮ್ ವಾರದ ಡೆಲಿವರಿ	872 (863)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,500 (58,850)
ಬೆಳ್ಳಿ ಕೆ.ಜಿ 70,900 (69,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕನ್ವಾರ್ ಯಾತ್ರೆ

ಶ್ರಾವಣ ಮಾಸದ ಅಂಗವಾಗಿ ಕನ್ವಾರ್ ಯಾತ್ರೆಯಲ್ಲಿ ಇರುವ ಶಿವಭಕ್ತರು ಗಂಗಾ ನದಿಯಿಂದ ಪವಿತ್ರವಾದ ನೀರನ್ನು ಸಂಗ್ರಹಿಸಲು ಉತ್ತರಾಖಂಡದ ಹರಿದ್ವಾರದ ಹರ್ ಕಿ ಪೌರಿ ಘಾಟ್ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಗುರುವಾರ ಸೇರಿದ್ದರು –ಪಿಟಿಐ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟವಾಸತಿವಿದೆ 13,000 - 17,000. 8951315839, 9880120052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ತಕ್ಷಣ ಬೇಕಾಗಿದ್ದಾರೆ: 7th, 8th, 10th, PUC, ITI ಡಿಪ್ಲೋಮ ಯಾವುದೇ ಪದವಿ ಪಾಸ್/ ಫೇಲ್, ಹುದ್ದೆಗೆ ನೇರ ನೇಮಕಾತಿ. ಕೂಡಲೇ ಸಂಪರ್ಕಿಸಿ: 8747949797, 8747909797

Engg/ Production Technical

BE/ DIPLOMA Civil Engg, Site Engineers STN INFRA PVT LTD, 98457 18249 sreeni@stninfra.com

ಪ್ರವಾಸ

Pilgrimage Tours

12/08/23 ಮಧ್ಯಪ್ರದೇಶ ಮಹಾಕಾಳೇಶ್ವರ, ಓಂಕಾರೇಶ್ವರ, ಮಾಂಡೋವ್, ಮಹೇಶ್ವರ 4ದಿನಗಳು. ಕಾಶಿ ಪ್ರವಾಸ 30/08/23 ಬಾಬಾ ವೈದ್ಯನಾಥ, ಕಾಶಿ ವಿಶ್ವನಾಥ, ಗಯಾ, ತ್ರಿವೇಣಿ ಸಂಗಮ, ಅಯೋಧ್ಯ, ನೈಮಿಷಾರಣ್ಯ 7ದಿನಗಳು 9008381022, 9019462508

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Whitefield

30X42 SITES for Sale in Premium Layout @ Varthur. Near Sub-Register Office, BBMP Limits. #6363777281

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸದನ: 'ಪೆನ್ ಡ್ರೈವ್' ಕದನ

ಒಂದನೇ ಪುಟದಿಂದ

'ನಾನು ನಿಮ್ಮ ಹೆಸರನ್ನು ಹೇಳಿಯೇ ಇಲ್ಲ. ನಿಮ್ಮ ಇಲಾಖೆ ಅಧಿಕಾರಿಗಳ ವರ್ಗಾವಣೆ ಯಾರು ಮಾಡುತ್ತಾರೆ ಎಂಬುದೂ ಗೊತ್ತಿದೆ. ಪೆನ್ ಡ್ರೈವ್ ಇಡುತ್ತೇನೆ. ತಾಕತ್ತಿದ್ದರೆ ಸಂಬಂಧಿಸಿದ ಸಚಿವರ ರಾಜೀನಾಮೆ ತೆಗೆದುಕೊಳ್ಳುತ್ತೀರಾ' ಎಂದು ಕುಮಾರಸ್ವಾಮಿ ಕೇಳಿದರು.

'ಪೆನ್ ಡ್ರೈವ್ ಜೇಬಲ್ಲಿ ಇಟ್ಟುಕೊಂಡು ಕುಳಿತರೆ ಆಗುತ್ತದಾ' ಎಂದು ಜಾರ್ಜ್ ಪ್ರಶ್ನಿಸಿದರೆ, 'ಸಾಕ್ಷ್ಯ ಮುಚ್ಚಿಡುವುದೂ ಅಪರಾಧ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು. 'ಆಯ್ತು, ಸಾಕ್ಷ್ಯ ಮುಚ್ಚಿಟ್ಟ ಆರೋಪದ ಮೇಲೆ ನನ್ನ ವಿರುದ್ಧ ದೂರು ಕೊಡಿ' ಎಂದು ಕುಮಾರಸ್ವಾಮಿ ಸವಾಲು ಹಾಕಿದರು.

'ಯಾವ ಹುದ್ದೆಗೆ ಎಷ್ಟು ಲಂಚ ತಗೋತೀರಿ ಎನ್ನುವುದು ಗೊತ್ತಿದೆ. ಸ್ಪೀಕರ್ ಒಪ್ಪಿದರೆ 224 ಜನರಿಗೂ ಆಡಿಯೊ ಕೇಳಿಸುವೆ' ಎಂದರು.

'40 ಪರ್ಸೆಂಟ್ ಲಂಚ ಎಂದು ಡಂಗುರ ಹೊಡೆದುಕೊಂಡು ತಿರುಗಿದ್ರಲ್ಲಾ, ಎಲ್ಲಿತ್ತು ಸಾಕ್ಷ್ಯ' ಎಂದು ಆಡಳಿತ ಪಕ್ಷದವರನ್ನು ಪ್ರಶ್ನಿಸಿದರು. ಬಿಜೆಪಿಯ ಸದಸ್ಯರು ಎದ್ದು ನಿಂತು ಬೆಂಬಲಿಸಿದರು.

'ನಿಮಗೆ ನಾಯಕರಿಲ್ಲ. ಕುಮಾರಸ್ವಾಮಿ ಅವರನ್ನೇ ನಾಯಕನ ಸ್ಥಾನದಲ್ಲಿ ಕೂರಿಸಿ. ಈ ನಾಟಕ ಬಿಡಿ' ಎಂದು ಜಾರ್ಜ್, ಬಿಜೆಪಿ ಸದಸ್ಯರಿಗೆ ಕುಟುಕಿದರು.

ವಿಧಾನಸಭೆ ಕಲಾಪದ ಬಿಡುವಿನ ಸಮಯದಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಜೆಡಿಎಸ್ ಶಾಸಕ ಎಚ್‌.ಡಿ.ರೇವಣ್ಣ ಮನವಿ ಪತ್ರಗಳನ್ನು ನೀಡಿದರು.

ಇಂದು ಸಿದ್ದರಾಮಯ್ಯ ಬಜೆಟ್ ಮಂಡನೆ

ಒಂದನೇ ಪುಟದಿಂದ

ಕಾಂಗ್ರೆಸ್ ಘೋಷಿಸಿದ ಗ್ಯಾರಂಟಿಗಳಿಗೆ ಮುಂದಿನ ಎಂಟು ತಿಂಗಳಿನಲ್ಲಿ ಸುಮಾರು ₹40 ಸಾವಿರ ಕೋಟಿ ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. ಅದಕ್ಕೆ ಸಂಪನ್ಮೂಲ ಹೊಂದಿಸಲು, ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುವ ದಾರಿಯನ್ನು ಹುಡುಕಲಾಗಿದೆ. ಯಾರನ್ನೋ ಒಲೈಸಲು ಬೊಕ್ಕಸದ ಹಣವನ್ನು ಬೇಕಾಬಿಟ್ಟಿ ಹಂಚಿಕೆ ಮಾಡುತ್ತಿದ್ದ ನೀತಿಯನ್ನು ಕೈಬಿಟ್ಟು, ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯಗಳಾದ ರಾಜ್ಯ ನಿರ್ದೇಶಕ ತತ್ವಗಳು ಜನರ ಹಕ್ಕುಗಳಾಗಬೇಕು ಎಂಬ ಸಂಕಲ್ಪ ಬಜೆಟ್‌ನ ಹೂರಣವಾಗಿರಲಿದೆ ಎಂದು ತಿಳಿಸಿವೆ.

ಆದಾಯ ಹೆಚ್ಚಿಸಿಕೊಳ್ಳಲು ಸೋರಿಕೆ ತಡೆಗೆ ಕಠಿಣ ಕ್ರಮಗಳನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗುತ್ತದೆ. ಜತೆಗೆ, ಮೋಟಾರು ವಾಹನ ಶುಲ್ಕ, ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಅಲ್ಪ ಪ್ರಮಾಣದಲ್ಲಿ ಹೆಚ್ಚಿಸುವ ಸಂಭವ ಇದೆ. ಮದ್ಯದ ಮೇಲಿನ ಸುಂಕ ಈಗಾಗಲೇ ಹೆಚ್ಚಿನ ಪ್ರಮಾಣದಲ್ಲಿದ್ದು, ಅದನ್ನು ಮುಟ್ಟುವ ಗೋಜಿಗೆ ಹೋಗುವ ಸಂಭವ ಕಡಿಮೆ ಎಂದೂ ಮೂಲಗಳು ಹೇಳಿವೆ.

ಹೆಚ್ಚು ಘೋಷಣೆಗಳಿಲ್ಲದೇ ಇದ್ದರೂ, 2013–18ರ ಅವಧಿಯ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜಾರಿಗೊಳಿಸಲಾಗಿದ್ದ ಕಲ್ಯಾಣ ಕಾರ್ಯಕ್ರಮಗಳನ್ನು ಮತ್ತೆ ಅನುಷ್ಠಾನ ಮಾಡುವುದಾಗಿ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗುತ್ತದೆ ಎಂದು ಗೊತ್ತಾಗಿದೆ.

ವಿದ್ಯಾರ್ಥಿನಿಯ ಸಜೀವ ಸಮಾಧಿ

ಮೆಲ್ಬೋರ್ನ್ (ಪಿಟಿಐ): ಪ್ರೀತಿ ವಂಚಿತನಾಗಿದ್ದ ಮಾಜಿ ಪ್ರಿಯಕರನೊಬ್ಬ ಪ್ರತೀಕಾರದ ಕ್ರಮವಾಗಿ ಭಾರತ ಮೂಲದ, 21 ವರ್ಷದ ನರ್ಸಿಂಗ್ ವಿದ್ಯಾರ್ಥಿನಿಯನ್ನು ಅಪಹರಿಸಿ, ಸುಮಾರು 644 ಕಿ.ಮೀ ದೂರ ಕರೆದೊಯ್ದಿದ್ದು, ಕತ್ತು ಕತ್ತರಿಸಿ ಜೀವಂತವಾಗಿ ಹೂತು ಹಾಕಿದ್ದಾನೆ.

ಈ ಬರ್ಬರ ಕೃತ್ಯ ಮಾರ್ಚ್ 5, 2021ರಲ್ಲಿ ದಕ್ಷಿಣ ಆಸ್ಟ್ರೇಲಿಯದ ಫ್ಲಿಂಡರ್ಸ್ ವಲಯದಲ್ಲಿ ನಡೆದಿದೆ. ತಾರಿಕ್‌ಜೊತ್ ಸಿಂಗ್ ಕೃತ್ಯ ಎಸಗಿದ್ದ ಆರೋಪಿ. ಮೃತ ನರ್ಸಿಂಗ್ ವಿದ್ಯಾರ್ಥಿನಿಯನ್ನು, ಅಡಿಲೇಡ್‌ನ ನಿವಾಸಿ ಜಾಸ್ಮೀನ್ ಕೌರ್ ಎಂದು ಗುರುತಿಸಲಾಗಿದೆ. 'ಕೆಲಸ ಮಾಡುತ್ತಿದ್ದ ಸ್ಥಳದಿಂದ ಆಕೆಯನ್ನು ಅಪಹರಿಸಿದ್ದ ಆರೋಪಿ, ಕಾರಿನ ಡಿಕ್ಕಿಯಲ್ಲಿ ಹಗ್ಗದಿಂದ ಕಟ್ಟಿಹಾಕಿದ್ದ. ಬಳಿಕ ಸುಮಾರು 644 ಕಿ.ಮೀ ದೂರದವರೆಗೂ ಕಾರಿನಲ್ಲಿ ತೆರಳಿದ್ದ' ಎಂದು ಪ್ರಕರಣದ ಕೋರ್ಟ್ ವಿಚಾರಣೆ ಆಧರಿಸಿ ಸ್ಥಳೀಯ ವೆಬ್‌ಗಳು ವರದಿ ಮಾಡಿವೆ.

ವಿದ್ಯಾರ್ಥಿನಿಯ ಕತ್ತು ಕೊಯ್ದಿದ್ದು, ಬಳಿಕ ಆಕೆಯನ್ನು ಜೀವಂತವಿರುವಂತೆಯೇ ಹೂತು ಹಾಕಿದ್ದ. ಬಹುಶಃ ಆಕೆ ಮಾರ್ಚ್ 6, 2021ರಂದು ಸತ್ತಿರಬಹುದು ಎನ್ನಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ವಿಚಾರಣೆಗೆ ಬಂದಾಗ ಕೃತ್ಯದ ವಿವರಗಳು ಬಹಿರಂಗವಾಗಿವೆ. ವಕೀಲ ಕಾರ್ಮೆನ್ ಮ್ಯಾಟ್ಟೆಯೊ ಅವರು, 'ಆಕೆಯ ಕೊಲೆಯಷ್ಟೇ ಅಲ್ಲ. ನರಳಿ ಪ್ರಾಣ ಬಿಡುವಂತೆ ಹತ್ಯೆ ಮಾಡಲಾಗಿದೆ. ಆಕೆಯ ಕೊಲೆ ಕಲ್ಪನೆಗೂ ಸಿಗದ ಕ್ರೂರತನವಾಗಿದೆ' ಎಂದರು. ಜಾಸ್ಮೀನ್ ಅವರ ತಾಯಿ ಸೇರಿ ಕುಟುಂಬದ ಸದಸ್ಯರು ವಿಚಾರಣೆ ವೇಳೆ ಹಾಜರಿದ್ದರು.

ಬಸ್ ಚಾಲಕ ಆತ್ಮಹತ್ಯೆ ಯತ್ನ: ಪೊಲೀಸ್ ತನಿಖೆ ಭರವಸೆ

ಮಂಡ್ಯ ಜಿಲ್ಲೆಯ ನಾಗಮಂಗಲದ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಜಗದೀಶ್ ಆತ್ಮಹತ್ಯೆ ಪ್ರಯತ್ನಕ್ಕೆ ಸಂಬಂಧಿಸಿದಂತೆ ಹಿರಿಯ ಪೊಲೀಸ್ ಅಧಿಕಾರಿಯಿಂದ ತನಿಖೆ ನಡೆಸುವುದಾಗಿ ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಆತ್ಮಹತ್ಯೆ ಪ್ರಯತ್ನದ ಬಗ್ಗೆ ವಿಧಾನಸೌಧದಲ್ಲಿ ಗುರುವಾರ ಬಿಜೆಪಿಯ ಬಸವರಾಜ ಬೊಮ್ಮಾಯಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದರೆ, ಜೆಡಿಎಸ್ ನಿಲುವಳಿ ಸೂಚನೆಯನ್ನು ಮಂಡಿಸಿತ್ತು. ಆತ್ಮಹತ್ಯೆ ಯತ್ನಕ್ಕೆ ಮುನ್ನ ಜಗದೀಶ್ ಬರೆದ ಪತ್ರದಲ್ಲಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಕಾರಣಕ್ಕೆ ತಮ್ಮನ್ನು ವರ್ಗಾವಣೆ ಮಾಡಲಾಗಿದೆ ಎಂಬ ಅಂಶ ಇದ್ದ ಕಾರಣ ಸಚಿವರು ರಾಜೀನಾಮೆ ನೀಡಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪಟ್ಟು ಹಿಡಿದರು.

ಕುಮಾರಸ್ವಾಮಿ ಮತ್ತು ಚಲುವರಾಯಸ್ವಾಮಿ ಹಾಗೂ ಕುಮಾರಸ್ವಾಮಿ ಮತ್ತು ಸಿದ್ದರಾಮಯ್ಯ ಮಧ್ಯೆ ಕಾವೇರಿದ ಮಾತಿನ ಚಕಮಕಿ ನಡೆಯಿತು. ಜೆಡಿಎಸ್ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ವಾಕ್ಸಮರಕ್ಕೂ ಸದನ ಸಾಕ್ಷಿಯಾಯಿತು. ಸಚಿವರ ರಾಜೀನಾಮೆ ಮತ್ತು ತನಿಖೆಗೆ ಒತ್ತಾಯಿಸಿ ಜೆಡಿಎಸ್ ಸದಸ್ಯರು ಧರಣಿ ನಡೆಸಿದರೆ, ತನಿಖೆಗೆ ಒತ್ತಾಯಿಸಿ ಬಿಜೆಪಿ ಸದಸ್ಯರೂ ಧರಣಿಯಲ್ಲಿ ಕೈಜೋಡಿಸಿದರು.

ಕೆಲ ನಿಮಿಷಗಳ ಕಾಲ ಕಲಾಪ ಮುಂದೂಡಿದ ಸಭಾಧ್ಯಕ್ಷ ಯು.ಟಿ.ಖಾದರ್ ಅವರು, ವಿರೋಧ ಪಕ್ಷಗಳ ನಾಯಕರನ್ನು ಕರೆಸಿ ಮಾತುಕತೆ ನಡೆಸಿದರು. ಗೃಹ ಸಚಿವರ ತನಿಖೆಯ ಭರವಸೆಯ ಬಳಿಕ ಬಿಜೆಪಿ ಮತ್ತು ಜೆಡಿಎಸ್ ಧರಣಿ ಕೈಬಿಟ್ಟರು.

ವಿಷಯ ಪ್ರಸ್ತಾಪಿಸಿದ ಎಚ್.ಡಿ.ಕುಮಾರಸ್ವಾಮಿ, 'ಚಾಲಕ ಜಗದೀಶ್ ಅವರು ತಮಗೆ ಮಾನಸಿಕ ಹಿಂಸೆ ನೀಡಿ ವರ್ಗಾವಣೆ ಮಾಡಲಾಗಿದೆ ಎಂದು ಪತ್ರ ಬರೆದಿಟ್ಟು ಆತ್ಮಹತ್ಯೆ ಯತ್ನ ನಡೆಸಿದ್ದಾರೆ. ಸಚಿವರ ಹೆಸರನ್ನೂ ಬರೆದಿದ್ದಾರೆ. ಈ ವಿಷಯ ಮಾಧ್ಯಮಗಳಲ್ಲಿ ಬಂದ ತಕ್ಷಣವೇ ವರ್ಗಾವಣೆ ಆದೇಶವನ್ನು ವಾಪಸ್ ಪಡೆಯಲಾಗಿದೆ ಮತ್ತು ಯಾವುದೇ ಅನುಚಿತ ಘಟನೆ ಚಾಲಕನಿಂದ ನಡೆದಿಲ್ಲ ಎಂದು ಜಿಲ್ಲಾಧಿಕಾರಿ ಸಮಾಜಾಯಿಷಿ ನೀಡಿದರು. ನಾಗಮಂಗಲದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಜಗದೀಶ್ ಅವರನ್ನು ನೋಡಲು ಹೋಗುತ್ತಿದ್ದೇನೆ ಎಂದು ಗೊತ್ತಾದ ತಕ್ಷಣವೇ ಅಲ್ಲಿಂದ ಬೇರೆ ಆಸ್ಪತ್ರೆಗೆ ಸ್ಥಳಾಂತರ ನಡೆಸುವ ಪ್ರಯತ್ನ ನಡೆಸಿದರು' ಎಂದು ದೂರಿದರು.

ಇದಕ್ಕೆ ತಿರುಗೇಟು ನೀಡಿದ ಚಲುವರಾಯಸ್ವಾಮಿ, 'ವರ್ಗಾವಣೆಗೆ ಸಂಬಂಧಿಸಿದಂತೆ ನಾನು ಯಾರ ಮೇಲೂ ಒತ್ತಡ ಹಾಕಿಲ್ಲ. ಅವರ ಪತ್ನಿ ಜೆಡಿಎಸ್ ಪಕ್ಷಕ್ಕೆ ಸೇರಿದವರು ಎಂಬ ವಿಚಾರವೂ ನನಗೆ ಗೊತ್ತಿಲ್ಲ. ಆತ್ಮಹತ್ಯೆ ಯತ್ನದ ವಿಚಾರ ಗಮನಕ್ಕೆ ಬಂದ ತಕ್ಷಣ ವರ್ಗಾವಣೆ ಆದೇಶ ತಡೆ ಮಾಡಿಸಿದೆ. ಆದರೆ, ಕುಮಾರಸ್ವಾಮಿ ಅವರು ಜೀವನ್ಮರಣ ಮಧ್ಯೆ ಹೋರಾಡುತ್ತಿದ್ದ ಜಗದೀಶ್ ಅವರನ್ನು ದೊಡ್ಡ ಆಸ್ಪತ್ರೆಗೆ ಸ್ಥಳಾಂತರಿಸುವುದಕ್ಕೆ ಅವಕಾಶ ನೀಡದೇ ತಡೆದರು. ಈ ವ್ಯಕ್ತಿಯನ್ನು ಮುಂದಿಟ್ಟುಕೊಂಡು ರಾಜಕೀಯ ನಡೆಸಲು ಮುಂದಾದರು. ಬಳಿಕ ಪೊಲೀಸ್ ಕರೆಸಿ ಸ್ಥಳಾಂತರಿಸಬೇಕಾಯಿತು' ಎಂದರು.

ಸಿ.ಎ ಇಂಟರ್ ಮೀಡಿಯೆಟ್ ಪರೀಕ್ಷೆ: ಆಳ್ವಾಸ್ ಸಾಧನೆ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಸಿ.ಎ. ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಆಳ್ವಾಸ್ ಕಾಲೇಜಿನ ಬಿ.ಕಾಂ. ವಿದ್ಯಾರ್ಥಿಗಳಾದ ದೀಪಕ್ ಹೆಗ್ಡೆ, ಪ್ರಜ್ವಲ್ ಎ.ಮೂಲ್ಯ ಅಖಿಲ ಭಾರತ ಮಟ್ಟದಲ್ಲಿ ಕ್ರಮವಾಗಿ 10 ಮತ್ತು 50ನೇ ರ‍್ಯಾಂಕ್ ಗಳಿಸಿದ್ದಾರೆ.

ಪ್ರಜ್ವಲ್

ದೀಪಕ್ ಹೆಗ್ಡೆ

ದೀಪಕ್ ಹೆಗ್ಡೆ ಅವರು ಬೆಳ್ತಂಗಡಿ ತಾಲ್ಲೂಕಿನ ಬಜಿರೆ ಮುದ್ದಾಡಿಯ ದಿವಾಕರ ಹೆಗ್ಡೆ-ನಳಿನಿ ಹೆಗ್ಡೆ ದಂಪತಿ ಪುತ್ರ. ತಾಯಿ ಗೃಹಿಣಿಯಾಗಿದ್ದು, ಅವರ ತಂದೆ ಗೂಡಂಗಡಿ ವ್ಯಾಪಾರಿ. ಆಳ್ವಾಸ್ ಕನ್ನಡ ಹೈಸ್ಕೂಲ್‌ನಲ್ಲಿ ಎಸ್‌ಎಸ್‌ಎಲ್‌ಸಿ, ಅದೇ ಸಂಸ್ಥೆಯಲ್ಲಿ ಪಿಯು ಓದಿದ್ದಾರೆ.

ಆಳ್ವಾಸ್ ಸಂಸ್ಥೆಯಲ್ಲಿ ಉತ್ತಮ ತರಬೇತಿ, ಅಣಕು ಪರೀಕ್ಷೆ, ಕಠಿಣ ಪರಿಶ್ರಮ ಈ ಸಾಧನೆಗೆ ನೆರವಾಯಿತು ಎಂದು ದೀಪಕ್ ಹೆಗ್ಡೆ ಹೇಳಿದರು.

ಜಯೇಶ್

ಸಿ.ಎ ಫೌಂಡೇಷನ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಅಗ್ರ ಸ್ಥಾನ ಗಳಿಸಿದ್ದರು.

ಕಲ್ಲಬೆಟ್ಟು ಗ್ರಾಮದ ಆನಂದ ಮೂಲ್ಯ- ಲಲಿತಾ ಮೂಲ್ಯ ದಂಪತಿಯ ಪುತ್ರ ಪ್ರಜ್ವಲ್ ಮೂಲ್ಯ 50ನೇ ರ‍್ಯಾಂಕ್ ಪಡೆದಿದ್ದಾರೆ.

ಸುರತ್ಕಲ್ ಕೃಷ್ಣಾಪುರದ ವಿಶ್ವನಾಥ ಶೆಟ್ಟಿಗಾರ್-ಊರ್ಮಿಳಾ ದಂಪತಿಯ ಪುತ್ರ, ಕಣ್ಣು ಕಾಣಿಸದ ವಿದ್ಯಾರ್ಥಿ ಆಳ್ವಾಸ್ ಸಂಸ್ಥೆಯ ಜಯೇಶ್ ಸಿ.ಎ. ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲೇ ಉತ್ತೀರ್ಣರಾಗಿದ್ದಾರೆ. ಈ ದಂಪತಿಯ ತ್ರಿವಳಿ ಮಕ್ಕಳ ಪೈಕಿ ಜೀವನ್ ಮತ್ತು ಜಿತೇಶ್ ಅವರಿಗೆ ಕೂಡ ಕಣ್ಣು ಕಾಣಿಸುವುದಿಲ್ಲ. ಅವರೂ ಸಿ.ಎ ಪರೀಕ್ಷೆ ಬರೆಯಲು ಸಿದ್ಧತೆ ನಡೆಸುತ್ತಿದ್ದಾರೆ.

ನಾನೇ ಎನ್‌ಸಿಪಿ ಅಧ್ಯಕ್ಷ: ಶರದ್

ಪ್ರಫುಲ್, ಸುನಿಲ್ ತತ್ಕರೆ ಉಚ್ಚಾಟನೆ • ವರಿಷ್ಠರ ತೀರ್ಮಾನಕ್ಕೆ ಪಕ್ಷದ ಕಾರ್ಯಕಾರಿ ಸಮಿತಿ ಅಸ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಾನೇ ಎನ್‌ಸಿಪಿ ಅಧ್ಯಕ್ಷ. ನನಗೆ 82 ಅಥವಾ 92 ವರ್ಷ ಆಗಿರಲಿ. ಸಮರ್ಥನಿದ್ದೇನೆ' ಎಂದು ಘೋಷಿಸಿರುವ ಹಿರಿಯ ರಾಜಕಾರಣಿ ಶರದ್ ಪವಾರ್, ಪಕ್ಷದಿಂದ ಪ್ರಫುಲ್ ಪಟೇಲ್, ಸುನಿಲ್ ತತ್ಕರೆ ಮತ್ತು ಶಿಂದೆ ಸಂಪುಟ ಸೇರಿರುವ ಒಂಭತ್ತು ಶಾಸಕರನ್ನು ಉಚ್ಚಾಟಿಸಿದ್ದಾರೆ.

ಒಂದೆಡೆ, ಅಜಿತ್ ಪವಾರ್ ಬಣ ಮಾನ್ಯತೆ ಕೋರಿ ಚುನಾವಣಾ ಆಯೋಗದ ಮೊರೆ ಹೋಗಿದ್ದರೂ, ಶರದ್ ಪವಾರ್ ಬಣವು 'ಪಕ್ಷವನ್ನು ಸಾಂಸ್ಥಿಕ ಸಂಘಟನೆಗಳಿಂದ ಗುರುತಿಸಲಾಗುತ್ತದೆ. ಶಾಸಕಾಂಗ ಪಕ್ಷದಿಂದ ಅಲ್ಲ' ಎಂದು ಪ್ರತಿಪಾದಿಸಿದೆ.

ಪ್ರಫುಲ್ ಸೇರಿ ಹಲವರನ್ನು ಉಚ್ಚಾಟಿಸುವ ಶರದ್ ಪವಾರ್ ನಿರ್ಧಾರವನ್ನು ಇಲ್ಲಿ ನಡೆದ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ಅನುಮೋದಿಸಿದೆ. ಸಭೆಯ ವಿವರ ನೀಡಿದ ಪಕ್ಷದ ಮುಖಂಡ ಪಿ.ಸಿ. ಚಾಕೊ, 'ಇದು ಸೇರಿ ಎಂಟು ನಿರ್ಣಯಗಳನ್ನು ಸಭೆ ಅಂಗೀಕರಿಸಿತು' ಎಂದರು.

'ಬಹುಮತ ಹೊಂದಿದ್ದೇನೆ ಎಂದು ಅಜಿತ್ ಪವಾರ್ ಹೇಳಿಕೊಂಡಿದ್ದಾರೆ. ಆದರೆ, ಸತ್ಯ ಶೀಘ್ರದಲ್ಲಿಯೇ ಬಹಿರಂಗವಾಗಲಿದೆ ಎಂದು ಶರದ್ ಪವಾರ್ ಸಭೆಯಲ್ಲಿ ಹೇಳಿದ್ದಾರೆ. ಎನ್‌ಸಿಪಿಯು ಶರದ್ ಪವಾರ್ ಬೆನ್ನಿಗಿದೆ' ಎಂದು ಚಾಕೊ ತಿಳಿಸಿದರು.

ನವದೆಹಲಿಯಲ್ಲಿ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಗುರುವಾರ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳ ಸಭೆ ನಡೆಸಿದರು –ಪಿಟಿಐ ಚಿತ್ರ

ರಾಹುಲ್ –ಶರದ್ ಭೇಟಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಗುರುವಾರ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಚರ್ಚಿಸಿದರು. ಬಿಕ್ಕಟ್ಟಿನ ಸಂದರ್ಭದಲ್ಲಿ ಶರದ್ ಪವಾರ್ ಅವರಿಗೆ ಬೆಂಬಲ ಸೂಚಿಸುವುದು ಭೇಟಿಯ ಉದ್ದೇಶ ಎನ್ನಲಾಗಿದೆ.

ಶರದ್ ಪವಾರ್ ಅವರನ್ನು ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆ ಮಾಡುವ ನಿರ್ಣಯವನ್ನು ಸಭೆಯು ಅಂಗೀಕರಿಸಿದೆ. ಯಾರು ಯಾರೋ ನಾನೇ ಎನ್‌ಸಿಪಿ ಅಧ್ಯಕ್ಷ ಎಂದು ಹೇಳಿಕೊಳ್ಳುವುದನ್ನು ಗಂಭೀರವಾಗಿ ಪರಿಗಣಿಸಲಾಗದು ಎಂದು ಹೇಳಿದರು.

ಎನ್‌ಸಿಪಿ ಸಂಘಟನೆಯು ದೃಢವಾಗಿದೆ ಮತ್ತು ನಾವೆಲ್ಲರೂ ಶರದ್ ಅವರ ಬೆಂಬಲಕ್ಕೆ ಇದ್ದೇವೆ. ಪಕ್ಷದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಚುನಾವಣೆ ನಡೆಯಲಿದ್ದು, ಕಾರ್ಯಕರ್ತರೇ ನೇರವಾಗಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಿದ್ದಾರೆ ಎಂದು ಹೇಳಿದರು.

ಈ ಮಧ್ಯೆ, ಪ್ರಫುಲ್ ಸೇರಿ ಹಲವರನ್ನು ಉಚ್ಚಾಟಿಸಿರುವ ಕುರಿತು ಶರದ್ ಪವಾರ್ ಅವರು ಟ್ವೀಟ್ ಮಾಡಿದ್ದಾರೆ. ಆದರೆ, ಸಾರ್ವಜನಿಕವಾಗಿ ಯಾವುದೇ ಹೇಳಿಕೆ ನೀಡಿಲ್ಲ. ಅಜಿತ್ ಪವಾರ್ ಅವರ ಹೆಸರನ್ನು ಯಾವುದೇ ಹಂತದಲ್ಲಿಯೂ ಉಲ್ಲೇಖಿಸಿಲ್ಲ.

ಸುದ್ದಿಗಾರರ ಜೊತೆಗೆ ಮಾತನಾಡಿದ ಶರದ್ ಪವಾರ್, ನಾನೇ ಎನ್‌ಸಿಪಿ ಅಧ್ಯಕ್ಷನಿದ್ದೇನೆ ಎಂದರು.

'ಆ ಸಭೆಗೆ ಮಾನ್ಯತೆ ಇಲ್ಲ'

ಮುಂಬೈ (ಪಿಟಿಐ): 'ಶರದ್ ಪವಾರ್ ಅವರು ಕರೆದಿದ್ದ ಎನ್‌ಸಿಪಿ ಕಾರ್ಯಕಾರಿ ಸಮಿತಿ ಸಭೆಗೆ ಯಾವುದೇ ಕಾನೂನಿನ ಮಾನ್ಯತೆ ಇಲ್ಲ' ಎಂದು ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಪ್ರತಿಪಾದಿಸಿದ್ದಾರೆ.

'ಶರದ್ ಪವಾರ್ ಅವರು ನವದೆಹಲಿಯಲ್ಲಿ ಇಂದು ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆ ಸೇರಿದಂತೆ ಹಲವು ಸಮಿತಿಗಳ ಸಭೆಗಳನ್ನು ಕರೆದಿದ್ದ ವಿಷಯ ಮಾಧ್ಯಮ ವರದಿಗಳಿಂದ ನನಗೆ ಗೊತ್ತಾಗಿದೆ' ಎಂದು ಅವರ ಪರವಾಗಿ ನೀಡಲಾದ ಹೇಳಿಕೆಯು ತಿಳಿಸಿದೆ.

'ಎನ್‌ಸಿಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಜೂನ್ 30ರಂದೇ ಅಜಿತ್ ಪವಾರ್ ಆಯ್ಕೆಯಾಗಿದ್ದಾರೆ. ಇವರಿಗೆ ಪಕ್ಷದ ಹಲವು ಚುನಾಯಿತ ಸದಸ್ಯರು ಹಾಗೂ ಸಾಂಸ್ಥಿಕ ಘಟಕಗಳ ಬೆಂಬಲ ಇದೆ. ನಮ್ಮದೆ ನಿಜವಾದ ಎನ್‌ಸಿಪಿ ಎಂದು ಚುನಾವಣಾ ಆಯೋಗಕ್ಕೂ ಅರ್ಜಿ ಸಲ್ಲಿಸಲಾಗಿದೆ. ಹೀಗಾಗಿ, ಪಕ್ಷದ ಹೆಸರು, ಚಿಹ್ನೆ ನಮ್ಮ ಬಣಕ್ಕೆ ಸಿಗಬೇಕಿದೆ' ಎಂದು ಅಜಿತ್ ಪವಾರ್ ಪರವಾಗಿ ನೀಡಲಾದ ಹೇಳಿಕೆಯಲ್ಲಿ ಪಕ್ಷ ಪ್ರತಿಪಾದಿಸಿದೆ. ನಿಜವಾದ ಎನ್‌ಸಿಪಿ ಯಾವುದು ಎಂದು ಈಗ ಚುನಾವಣಾ ಆಯೋಗ ನಿರ್ಧರಿಸಬೇಕಾಗಿದೆ. ಅಂತಿಮವಾಗಿ ಆಯೋಗ ತೀರ್ಮಾನಿಸುವವರೆಗೂ ಕಾರ್ಯಕಾರಿ ಸಮಿತಿ ಸೇರಿದಂತೆ ಯಾವುದೇ ಸಭೆಗಳಿಗೂ ಕಾನೂನು ಮಾನ್ಯತೆ ಇರುವುದಿಲ್ಲ ಎಂದಿದೆ.

ಆತ್ಮಾವಲೋಕನ ಮಾಡಿಕೊಳ್ಳಿ: ಬಿಜೆಪಿ

ನಾಗಪುರ (ಪಿಟಿಐ): 'ಶರದ್ ಪವಾರ್ ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಬಿಜೆಪಿಯನ್ನು ಟೀಕಿಸುವ ಬದಲಾಗಿ ತಮ್ಮ ಕುಟುಂಬ ಹಾಗೂ ಪಕ್ಷದತ್ತ ಗಮನಹರಿಸಬೇಕು' ಎಂದು ಬಿಜೆಪಿ ಪ್ರತಿಕ್ರಿಯಿಸಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ಬವಂಕುಲೆ ಅವರು, 'ಈಗ ಎನ್‌ಸಿಪಿ ಇಬ್ಭಾಗವಾಗಲು ಶರದ್ ಪವಾರ್ ಅವರೇ ಹೊಣೆ. ಬಿಜೆಪಿಯಲ್ಲ' ಎಂದು ಹೇಳಿದ್ದು, ಪೂರಕವಾಗಿ ಅಜಿತ್ ಹೇಳಿಕೆಯನ್ನು ಉಲ್ಲೇಖಿಸಿದ್ದಾರೆ.

ಪಕ್ಷದ ಸ್ಥಾನಮಾನ ಕುರಿತ ಪ್ರಶ್ನೆಗೆ, 'ನಮಗೆ ಚುನಾವಣಾ ಆಯೋಗದ ಮೇಲೆ ನಂಬಿಕೆ ಇದೆ. ಅದು ಪಕ್ಷದ ಸ್ಥಾನವನ್ನು ಕಡೆಗಣಿಸಿದರೆ, ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಹೋಗುವ ಕುರಿತು ಚಿಂತನೆ ನಡೆಯಲಿದೆ' ಎಂದರು.

ಶಿಂದೆ ಬಣದ ತಳಮಳ ಹೆಚ್ಚಿಸಿದ ಅಜಿತ್ ಪವಾರ್ ಸಿ.ಎಂ 'ಆಸೆ'

ಮುಂಬೈ (ಪಿಟಿಐ): ಎನ್‌ಸಿಪಿಯಿಂದ ಬಂಡಾಯ ಎದ್ದಿರುವ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ 'ಮುಖ್ಯಮಂತ್ರಿಯಾಗುವ ಅಭಿಲಾಷೆ', ರಾಜಕೀಯ ವಲಯದಲ್ಲಿ ಮುಖ್ಯವಾಗಿ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನೆಯಲ್ಲಿ ತಳಮಳ ಉಂಟು ಮಾಡಿದೆ.

ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿ ಶಿವಸೇನೆಯ ಉದ್ಧವ್ ಬಣವು ಸಲ್ಲಿಸಿರುವ ಅರ್ಜಿ ಕುರಿತು ಸ್ಪೀಕರ್ ನೀಡುವ ರೂಲಿಂಗ್‌ನ ನಿರೀಕ್ಷೆಯಲ್ಲಿ ಶಿಂದೆ ಬಣವಿದೆ. ಇದರ ಮಧ್ಯೆಯೇ ಅಜಿತ್ ಪವಾರ್ ಅವರು ಮುಖ್ಯಮಂತ್ರಿ ಆಗುವ ಆಕಾಂಕ್ಷೆ ವ್ಯಕ್ತಪಡಿಸಿದ್ದಾರೆ.

ಶಿವಸೇನೆ (ಉದ್ಧವ್ ಬಣ) ಸಂಸದ ವಿನಾಯಕ ರಾವುತ್ ಅವರು, 'ಅಜಿತ್ ಪವಾರ್ ಹೇಳಿಕೆ ನಂತರ ಶಿಂದೆ ಬಣದ ಹಲವು ಶಾಸಕರು ತಮ್ಮ ಸಂಪರ್ಕಕ್ಕೆ ಬಂದಿದ್ದಾರೆ. ಎನ್‌ಸಿಪಿಯ ಕೆಲವರು ಮಂತ್ರಿಯಾದ ಬೆನ್ನಲ್ಲೇ ಶಿವಸೇನೆ ಶಾಸಕರ ಬಂಡಾಯವು ಶುರುವಾಗಿದೆ' ಎಂದಿದ್ದಾರೆ.

'ಶಿಂದೆ ಬಣದ ಏಳು ಶಾಸಕರು ಸಂದೇಶ ಕಳುಹಿಸುತ್ತಿದ್ದಾರೆ. ನಮಗೆ 'ಮಾತೋಶ್ರೀ'ಯಿಂದ (ಉದ್ಧವ್ ಠಾಕ್ರೆ ನಿವಾಸ) ಕ್ಷಮಾಪಣೆ ಬೇಕಿದೆ. 'ಮಾತೋಶ್ರೀ'ಯಿಂದ ಕರೆ ಬಂದರೆ ಅದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತೇವೆ ಎಂದಿದ್ದಾರೆ' ಎಂದು ರಾವುತ್ ತಿಳಿಸಿದರು.

ಸಚಿವರಾಗುವ ಆಕಾಂಕ್ಷೆಯಿಂದ ಹೋಗಿ ಸಚಿವರಾಗದೇ ಇರುವವರು ಹಾಗೂ ಮುಂದಿನ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನವನ್ನು ಕಳೆದುಕೊಳ್ಳುವ ಸಾಧ್ಯತೆ ಇರುವವರು ಈಗ ನಮ್ಮ ಜೊತೆಗಿದ್ದಾರೆ ಎಂದು ಹೇಳಿದರು. ಅವರು ಯಾರೊಬ್ಬರ ಹೆಸರನ್ನು ಉಲ್ಲೇಖಿಸಲಿಲ್ಲ.

ಅಜಿತ್ ಪವಾರ್ ಬಣ ಸಂಪುಟ ಸೇರಿದ ಹಿಂದೆಯೇ ಶಿಂದೆ ಬಣದಲ್ಲಿ ಬಂಡಾಯ ಶುರುವಾಗಿದೆ. ಇವರಲ್ಲಿ ಬಹುತೇಕ ಶಾಸಕರು ಮಹಾರಾಷ್ಟ್ರದ ಪಶ್ಚಿಮ, ಉತ್ತರ ಮತ್ತು ಮರಾಠವಾಡಾ ವಲಯದವರು. ಇವರು ಈಗ ಮಾತೋಶ್ರೀ ಕ್ಷಮೆಯ ನಿರೀಕ್ಷೆಯಲ್ಲಿದ್ದಾರೆ ಎಂದು ವಿವರಿಸಿದರು.

ಆದರೆ, ಈ ಹೇಳಿಕೆಯನ್ನು ಶಿಂದೆ ಬಣದ ಶಿವಸೇನೆ ಉಪನಾಯಕರೂ ಆದ ಸಚಿವ ಉದಯ್ ಸಾಮಂತ್ ಸ್ಪಷ್ಟವಾಗಿ ತಳ್ಳಿಹಾಕಿದ್ದಾರೆ. 'ಬದಲಾಗಿ, ಉದ್ಧವ್ ಬಣದ 13 ಶಾಸಕರಲ್ಲಿ ಆರು ಮಂದಿ ತಮ್ಮ ಜೊತೆಗೇ ಸಂಪರ್ಕದಲ್ಲಿ ಇದ್ದಾರೆ' ಎಂದು ತಿರುಗೇಟು ನೀಡಿದ್ದಾರೆ.

ಶಿವಸೇನೆ (ಉದ್ಧವ್ ಬಣ) ಮುಖಂಡ, ರಾಜ್ಯಸಭೆ ಸದಸ್ಯ ಸಂಜಯ್ ರಾವುತ್, 'ಎನ್‌ಸಿಪಿಯ ದೊಡ್ಡ ಬಣ ಈಗ ಸರ್ಕಾರ ಸೇರಿರುವುದರಿಂದ ಸರ್ಕಾರಕ್ಕೆ ಅಗತ್ಯ ಬಹುಮತವಿದೆ. ಇದರ ಅರ್ಥ ಶಿಂದೆ ಬಣದ ಅಗತ್ಯ ಈಗ ಸರ್ಕಾರಕ್ಕೆ ಇಲ್ಲ' ಎಂದು ವಿಶ್ಲೇಷಿಸಿದ್ದಾರೆ.

ಮಹಾರಾಷ್ಟ್ರ ಶೀಘ್ರದಲ್ಲಿಯೇ ಹೊಸ ಮುಖ್ಯಮಂತ್ರಿಯನ್ನು ನೋಡಬಹುದು ಎಂದು ಅವರು ವಿಶ್ಲೇಸಿದ್ದಾರೆ.

ಸರ್ಕಾರ ದೃಢವಾಗಿದೆ: ಶಿಂದೆ

'ಅಜಿತ್ ಪವಾರ್ ಬಣವು ಸಂಪುಟ ಸೇರಿರುವ ಕುರಿತು ಶಿವಸೇನೆಯ ಯಾರಿಗೂ ಅಸಮಾಧಾನವಿಲ್ಲ. ಇದು, ವಿರೋಧ ಪಕ್ಷಗಳು ಹಬ್ಬಿಸುತ್ತಿರುವ ವದಂತಿ' ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಪ್ರತಿಕ್ರಿಯಿಸಿದ್ದಾರೆ.

ಬುಧವಾರ ನಡೆದ ಶಿವಸೇನೆಯ ಶಾಸಕರು, ಸಂಸದರು ಮತ್ತು ವಿಧಾನಪರಿಷತ್ತಿನ ಸದಸ್ಯರ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. 'ಅಜಿತ್ ಪವಾರ್ ಬಣದ ಸೇರ್ಪಡೆಯಿಂದಾಗಿ ಮುಖ್ಯಮಂತ್ರಿಯ ಕುರ್ಚಿ ಅಲುಗಾಡುತ್ತಿದೆ' ಎಂಬ ವರದಿಗಳನ್ನು ಅಲ್ಲಗಳೆದರು.

'ಶಿವಸೇನೆ –ಬಿಜೆಪಿ –ಎನ್‌ಸಿಪಿ ಮೈತ್ರಿಕೂಟದ ಸರ್ಕಾರಕ್ಕೆ ಯಾವುದೇ ಧಕ್ಕೆ ಇಲ್ಲ. ಶಿಂದೆ ಮುಖ್ಯಮಂತ್ರಿಯಾಗಿ ಮುಂದುವರಿಯುವರು. ಮೋದಿ ನೇತೃತ್ವದಲ್ಲಿ ರಾಜ್ಯವನ್ನು ಅಭಿವೃದ್ಧಿಪಥದಲ್ಲಿ ಮುನ್ನಡೆಸುವರು' ಎಂದು ಅವರ ನೇತೃತ್ವದ ಶಿವಸೇನೆಯು ಪ್ರತಿಪಾದಿಸಿದೆ.

ಪಕ್ಷಗಳ ಹೊಸ ಹೊಂದಾಣಿಕೆ ಹಿನ್ನೆಲೆಯಲ್ಲಿ ರಾಜಕೀಯ ಸ್ಥಿತಿಗತಿ ಕುರಿತಂತೆ ಶಿಂದೆ ಅವರು ಉಪ ಮುಖ್ಯಮಂತ್ರಿಗಳಾದ ಬಿಜೆಪಿಯ ದೇವೇಂದ್ರ ಫಡಣವೀಸ್, ಎನ್‌ಸಿಪಿಯ ಅಜಿತ್ ಪವಾರ್ ಜೊತೆಗೂ ಚರ್ಚಿಸಿದರು.

ಸಂಕ್ಷಿಪ್ತ ಸುದ್ದಿ

ಮಾನಹಾನಿ ಪ್ರಕರಣ: ತೀರ್ಪು ಇಂದು?

ಅಹಮದಾಬಾದ್: 'ಮೋದಿ ಉಪನಾಮ ಹೊಂದಿರುವವರೆಲ್ಲರೂ ಕಳ್ಳರು' ಎಂದಿದ್ದ ಕ್ರಿಮಿನಲ್ ಮಾನಹಾನಿ ಪ್ರಕರಣದಲ್ಲಿನ ಶಿಕ್ಷೆಗೆ ತಡೆ ಕೋರಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಗುಜರಾತ್ ಹೈಕೋರ್ಟ್, ಶುಕ್ರವಾರ ತೀರ್ಪು ಪ್ರಕಟಿಸುವ ಸಾಧ್ಯತೆಯಿದೆ.

ನ್ಯಾಯಮೂರ್ತಿ ಹೇಮಂತ್ ಪ್ರಚ್ಛಕ್, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇ 2ರಂದೇ ವಿಚಾರಣೆ ಪೂರ್ಣಗೊಳಿಸಿದ್ದು ಆದೇಶವನ್ನು ಕಾಯ್ದಿರಿಸಿದ್ದರು. ಮಧ್ಯಂತರ ಪರಿಹಾರದ ಆದೇಶ ನೀಡಲು ನಿರಾಕರಿಸಿದ್ದರು. ಬೇಸಿಗೆ ರಜೆ ಮುಗಿದ ಬಳಿಕವೇ ಆದೇಶ ಪ್ರಕಟಿಸುವುದಾಗಿ ತಿಳಿಸಿದ್ದರು.

ಔರಂಗಜೇಬ್ ಮಾರ್ಗಕ್ಕೆ ಅಬ್ದುಲ್ ಕಲಾಂ ಹೆಸರು

ನವದೆಹಲಿ (ಪಿಟಿಐ): ಇಲ್ಲಿನ ಲುಟಿಯೆನ್ಸ್ ಪ್ರದೇಶದಲ್ಲಿರುವ ಔರಂಗಜೇಬ್ ಮಾರ್ಗಕ್ಕೆ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಮಾರ್ಗ ಎಂದು ಮರುನಾಮಕರಣ ಮಾಡಲಾಗಿದೆ.

ಮರುನಾಮಕರಣ ಮಾಡಿರುವ ಈ ಮಾರ್ಗವು ಮಧ್ಯ ದೆಹಲಿಯ ಪೃಥ್ವಿರಾಜ್ ರಸ್ತೆಯೊಂದಿಗೆ ಅಬ್ದುಲ್ ಕಲಂ ರಸ್ತೆಗೂ ಸಂಪರ್ಕ ಕಲ್ಪಿಸುತ್ತದೆ.

ಅಬ್ದುಲ್ ಕಲಾಂ ಅವರ ಹೆಸರಿರುವ ಫಲಕವನ್ನು ಮಹಾನಗರ ಪಾಲಿಕೆ ಸ್ಥಾಪಿಸಿದೆ ಎಂದು ಮೂಲಗಳು ತಿಳಿಸಿವೆ.

ಎನ್‌ಎಸ್‌ಯುಐಗೆ ಕನ್ನಯ್ಯ ಉಸ್ತುವಾರಿ

ನವದೆಹಲಿ (ಪಿಟಿಐ): ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) ಎಐಸಿಸಿ ಉಸ್ತುವಾರಿಯಾಗಿ ಕನ್ನಯ್ಯ ಕುಮಾರ್ ಅವರನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಗುರುವಾರ ನೇಮಕ ಮಾಡಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕನ್ನಯ್ಯ ಅವರು ಈ ಹಿಂದೆ ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.

ಮಮತಾ ಬ್ಯಾನರ್ಜಿಗೆ ಮಂಡಿ ಶಸ್ತ್ರಚಿಕಿತ್ಸೆ ಸಾಧ್ಯತೆ

ಕೋಲ್ಕತ್ತ (ಪಿಟಿಐ): 'ಎಡಗಾಲಿನ ಮಂಡಿಗೆ ಗಾಯವಾಗಿರುವುದರಿಂದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗುವ ಸಾಧ್ಯತೆ ಇದೆ' ಎಂದು ಅವರ ಆಪ್ತರೊಬ್ಬರು ಗುರುವಾರ ತಿಳಿಸಿದರು.

'ಅವರಿಗೆ ಮಂಡಿಯಲ್ಲಿ ಊತವಿದೆ. ಅಧಿಕ ನೀರು ಶೇಖರಣೆಯಾಗಿ ಆ ಭಾಗದಲ್ಲಿ ಊತ ಬಂದಿರಬಹುದು. ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಬೇಕೆ, ಬೇಡವೆ ಎಂಬ ಬಗ್ಗೆ ಪರಿಶೀಲಿಸಬೇಕು' ಎಂದು ಮಮತಾ ಬ್ಯಾನರ್ಜಿ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರೊಬ್ಬರು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದರು.

ವಿವಿಧೆಡೆ ಭಾರಿ ಮಳೆ; 6 ಸಾವು

ನವದೆಹಲಿ (ಪಿಟಿಐ): ದೇಶದ ವಿವಿಧೆಡೆ ಗುರುವಾರ ಭಾರಿ ವರ್ಷಧಾರೆಯಾಗಿದೆ. ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಮಧ್ಯಪ್ರದೇಶದ ಬುಂದೇಲ್‌ಖಂಡ್ ಪ್ರದೇಶದಲ್ಲಿ ಸಿಡಿಲಿಗೆ ಐವರು ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ದಕ್ಷಿಣ ಗೋವಾದ ನಕೇರಿ ಬೇತುಲ್ ಗ್ರಾಮದಲ್ಲಿ ಗದ್ದೆಗೆ ಹೋಗಿದ್ದ ಫ್ಲೋರಿನಾ ಡಿಸೋಜಾ (56) ಎಂಬ ಮಹಿಳೆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ಮೃತಪಟ್ಟಿದ್ದಾರೆ.

ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹಲವು ರಾಜ್ಯಗಳಲ್ಲಿ 'ರೆಡ್/ಆರೆಂಜ್' ಮುನ್ಸೂಚನೆ ನೀಡಿದೆ.

ರಾಷ್ಟ್ರ ರಾಜಧಾನಿಯಲ್ಲಿ ಬೆಳಿಗ್ಗೆ ಸುರಿದ ಮಳೆಯಿಂದಾಗಿ ಹಲವು ಪ್ರದೇಶಗಳು ಜಲಾವೃತಗೊಂಡವು. ಕೆಲವೆಡೆ ಸಂಚಾರ ದಟ್ಟಣೆಯೂ ಉಂಟಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಾರಾಷ್ಟ್ರದ ಮುಂಬೈನಲ್ಲಿ ಬುಧವಾರ ರಾತ್ರಿಯಿಡಿ ಮಳೆ ಸುರಿದಿದೆ. ಭಾರಿ ಮಳೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. 'ಆರೆಂಜ್' ಅಲರ್ಟ್ ಘೋಷಿಸಿದೆ. ಮುಂಜಾನೆ ಬಸ್ ಸಂಚಾರಕ್ಕೆ ಅಡ್ಡಿಯಾಗಿತ್ತು. ಅಲ್ಪಾವಧಿಯ ವಿರಾಮದ ಬಳಿಕ ಕೇರಳದಲ್ಲಿ ಮಳೆ ಬಿರುಸುಗೊಂಡಿದೆ. ಕೆಲವು ಜಿಲ್ಲೆಗಳಲ್ಲಿ ಶಾಲಾ–ಕಾಲೇಜಿಗೆ ರಜೆ ನೀಡಲಾಗಿದೆ. ಅಸಂಖ್ಯಾತ ಜನರನ್ನು ಮನೆಗಳಿಂದ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಕಣ್ಣೂರು ಜಿಲ್ಲೆಯ ತಳಿಪರಂಬ ತಾಲ್ಲೂಕಿನ ಕಪ್ಪಿಮಲ ಗ್ರಾಮದಲ್ಲಿ ಭೂಕುಸಿತವಾಗಿದೆ. ಎರ್ನಾಕುಲಂನಲ್ಲಿ ಬಿರುಗಾಳಿ ಹೆಚ್ಚಿದೆ.

ಕೇರಳದಲ್ಲಿನ ತಿರುವಲ್ಲಾದ ಪ್ರವಾಹ ಪೀಡಿತ ಪ್ರದೇಶದಲ್ಲಿ ಗುರುವಾರ ಅನಾರೋಗ್ಯ ಪೀಡಿತ ವೃದ್ಧರೊಬ್ಬರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೊತ್ತೊಯ್ದ ಚಿತ್ರಣ –ಪಿಟಿಐ ಚಿತ್ರ

ರಾಜಸ್ಥಾನ: 'ಕೈ' ಒಗ್ಗಟ್ಟಿನ ಮಂತ್ರ

ಸೆಪ್ಟೆಂಬರ್‌ನಲ್ಲಿ ಅಭ್ಯರ್ಥಿಗಳ ಪಟ್ಟಿ • ಗೆಹಲೋತ್–ಪೈಲಟ್ ಭಿನ್ನಮತಕ್ಕೆ ತೇಪೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಸ್ಥಾನ ಮುಖ್ಯಮಂತ್ರಿ ಅಶೋಕ ಗೆಹಲೋತ್ ಹಾಗೂ ಪಕ್ಷದ ನಾಯಕ ಸಚಿನ್ ಪೈಲಟ್ ನಡುವಿನ ಭಿನ್ನಾಭಿಪ್ರಾಯಕ್ಕೆ ತೇಪೆ ಹಚ್ಚಿರುವ ಕಾಂಗ್ರೆಸ್ ಹೈಕಮಾಂಡ್, ವಿಧಾನಸಭಾ ಚುನಾವಣೆಯನ್ನು ಒಗ್ಗಟ್ಟಿನಿಂದ ಎದುರಿಸುವುದಾಗಿ ಹೇಳಿಕೊಂಡಿದೆ.

ನವೆಂಬರ್ ತಿಂಗಳಲ್ಲಿ ರಾಜಸ್ಥಾನ ವಿಧಾನಸಭಾ ಚುನಾವಣೆ ನಡೆಯಲಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಪಕ್ಷದ ಕೇಂದ್ರ ಕಚೇರಿಯಲ್ಲಿ ಗುರುವಾರ ನಡೆದ ಚುನಾವಣಾ ತಂತ್ರಗಾರಿಕೆಯ ಸಭೆಯಲ್ಲಿ ನಾಯಕರು ಒಗ್ಗಟ್ಟಿನ ಮಂತ್ರ ಪಠಿಸಿದರು.

ಭ್ರಷ್ಟಾಚಾರ ಪ್ರಕರಣಗಳ ತನಿಖೆ ಕುರಿತ ತಮ್ಮ ಬೇಡಿಕೆ ಈಡೇರಿಸಲು ಹೈಕಮಾಂಡ್ ಕ್ರಮ ಕೈಗೊಂಡಿದೆ ಎಂದು ಸಚಿನ್ ಪೈಲಟ್ ತೃಪ್ತಿ ವ್ಯಕ್ತಪಡಿಸಿದರು. ಚುನಾವಣೆಯಲ್ಲಿ ಪಕ್ಷ ಭಾರಿ ಗೆಲುವು ಸಾಧಿಸಲು ನಾವೆಲ್ಲ ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆ ಎಂದೂ ಹೇಳಿದರು. ಅವರನ್ನು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಥವಾ ರಾಜಸ್ಥಾನ ರಾಜ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ರಾಹುಲ್ ಗಾಂಧಿ– ಸಚಿನ್ ಪೈಲಟ್ ಮಾತುಕತೆ ನಡೆಸಿದರು

'ರಾಜ್ಯ ನಾಯಕತ್ವದ ವಿರುದ್ಧ ಯಾರೂ ಬಹಿರಂಗ ಹೇಳಿಕೆ ನೀಡಬಾರದು. ಪಕ್ಷದ ವೇದಿಕೆಯಲ್ಲೇ ಚರ್ಚಿಸಿ ಬಗೆಹರಿಸಿಕೊಳ್ಳಬೇಕು. ಒಂದು ವೇಳೆ ಬಹಿರಂಗ ಹೇಳಿಕೆಗಳನ್ನು ನೀಡಿದರೆ ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದು ರಾಷ್ಟ್ರೀಯ ನಾಯಕರು ಎಚ್ಚರಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, 'ಸೆಪ್ಟೆಂಬರ್ ಮೊದಲ ವಾರದೊಳಗೆ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳ ಆಯ್ಕೆಗೆ ಗೆಲುವೇ ಮಾನದಂಡವಾಗಿರಲಿದೆ' ಎಂದರು. 'ರಾಜ್ಯದಲ್ಲಿ ಯಾರ ನೇತೃತ್ವದಲ್ಲಿ ಚುನಾವಣೆ ಎದುರಿಸುತ್ತೀರಿ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ನಾವು ಚುನಾವಣೆಗೆ ಮುನ್ನ ಸಾಮಾನ್ಯವಾಗಿ ಮುಖ್ಯಮಂತ್ರಿ ಅಭ್ಯರ್ಥಿ ಹೆಸರನ್ನು ಘೋಷಿಸುವುದಿಲ್ಲ. ಆದರೆ, ಎಲ್ಲರೂ ಒಗ್ಗಟ್ಟಿನಿಂದ ಚುನಾವಣೆ ಎದುರಿಸುತ್ತೇವೆ' ಎಂದರು.

'ಮುಖ್ಯಮಂತ್ರಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಸೇರಿದಂತೆ 29 ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು. ಎಲ್ಲರೂ ಒಗ್ಗೂಡಿ ಪಕ್ಷವನ್ನು ಅಧಿಕಾರಕ್ಕೆ ತರುವ ವಾಗ್ದಾನ ಮಾಡಿದ್ದಾರೆ' ಎಂದರು.

ಗೆಹಲೋತ್ ಮತ್ತು ಸಚಿನ್ ನಡುವೆ ಸಂಧಾನ ಸೂತ್ರ ಏರ್ಪಟ್ಟಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಲು ವೇಣುಗೋಪಾಲ್ ನಿರಾಕರಿಸಿದರು. ಕಾಲ್ಬೆರಳುಗಳ ಮೂಳೆ ಮುರಿತದಿಂದ ಚೇತರಿಸಿಕೊಳ್ಳುತ್ತಿರುವ ಗೆಹಲೋತ್ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆಯಲ್ಲಿ ಪಾಲ್ಗೊಂಡರು.

ಚುನಾವಣಾ ಆಯೋಗಕ್ಕೆ ಸುಳ್ಳು ಮಾಹಿತಿ ಸಲ್ಲಿಸಿದ ಆರೋಪ ಪ್ರಕರಣ

ಸಂಸದ ರವೀಂದ್ರನಾಥ್ ಆಯ್ಕೆ ಅಸಿಂಧು

ಚೆನ್ನೈ (ಪಿಟಿಐ): ತಮಿಳುನಾಡಿನ ಥೇಣಿ ಕ್ಷೇತ್ರದ ಸಂಸದ, ಎಐಎಡಿಎಂಕೆ ಉಚ್ಚಾಟಿತ ಸದಸ್ಯ ಓ.ಪಿ. ರವೀಂದ್ರನಾಥ್ ಅವರ ಆಯ್ಕೆಯನ್ನು ಮದ್ರಾಸ್ ಹೈಕೋರ್ಟ್ ಗುರುವಾರ ಅಸಿಂಧುಗೊಳಿಸಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾಗಿರುವ ರವೀಂದ್ರನಾಥ್ ಪದಚ್ಯುತ ಎಐಎಡಿಎಂಕೆ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಓ.ಪನ್ನೀರ್‌ಸೆಲ್ವಂ ಅವರ ಪುತ್ರ.

ನ್ಯಾಯಮೂರ್ತಿ ಎಸ್.ಎಸ್. ಸುಂದರ್ ಅವರು, ಥೇಣಿ ಕ್ಷೇತ್ರ ಖಾಲಿಯಾಗಿದೆ ಎಂದು ಪ್ರಕಟಿಸಿದರು. ಆದರೆ, ರವೀಂದ್ರನಾಥ್ ಪರ ವಕೀಲರು ಮಾಡಿದ ಮನವಿಗೆ ಸಮ್ಮತಿ ಸೂಚಿಸಿದ ನ್ಯಾಯಮೂರ್ತಿ, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಆದೇಶ ಜಾರಿಯನ್ನು ಒಂದು ತಿಂಗಳು ಅಮಾನತಿನಲ್ಲಿ ಇರಿಸಿದರು.

ಥೇಣಿ ಕ್ಷೇತ್ರದ ಮತದಾರರಾದ ಪಿ. ಮಿಲಾನಿ ಎಂಬುವವರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿ ಈ ತೀರ್ಪು ನೀಡಲಾಗಿದೆ.

ಮಿಲಾನಿ ಪರ ವಕೀಲರಾದ ವಿ. ಅರುಣ್ ಅವರ ಪ್ರಕಾರ, ರವೀಂದ್ರನಾಥ್ ಅವರು ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ, ತಮ್ಮ ಮತ್ತು ಕುಟುಂಬ ಸದಸ್ಯರ ಹೆಸರಿನಲ್ಲಿರುವ ಸ್ಥಿರ ಮತ್ತು ಚರಾಸ್ತಿಗಳು ಸೇರಿ ಬೆಲೆಬಾಳುವ ವಿವಿಧ ವಸ್ತುಗಳ ವಿವರಗಳನ್ನು ಮುಚ್ಚಿಟ್ಟು, ಸುಳ್ಳು ಮಾಹಿತಿ ನೀಡಿದ್ದರು. ಈ ಆರೋಪ ರುಜುವಾತಿಗೆ ಸೂಕ್ತ ಸಾಕ್ಷ್ಯಾಧಾರಗಳನ್ನು ಒದಗಿಸಿದ್ದರು. ಸಾಕ್ಷಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರವೀಂದ್ರನಾಥ್ ಅವರು ಆಯ್ಕೆಯನ್ನು ಅಸಿಂಧು ಎಂದು ಘೋಷಿಸಿದರು.

ಪಕ್ಷದ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಕಳೆದ ವರ್ಷದ ಜುಲೈನಲ್ಲಿ ಎಐಎಡಿಎಂಕೆ ಹಂಗಾಮಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ತಕ್ಷಣ, ತಮ್ಮ ಪ್ರತಿಸ್ಪರ್ಧಿ ಪನ್ನೀರ್‌ಸೆಲ್ವಂ ಮತ್ತು ರವೀಂದ್ರನಾಥ್ ಸೇರಿ ಇತರರನ್ನು ಉಚ್ಚಾಟಿಸಿದ್ದರು. ರವೀಂದ್ರನಾಥ್ ಅವರನ್ನು ಪಕ್ಷದ ಸಂಸದನಾಗಿ ಪರಿಗಣಿಸದಂತೆಯೂ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪಳನಿಸ್ವಾಮಿ ಅವರು ಪತ್ರ ಬರೆದಿದ್ದರು.

'ಪ್ರಧಾನ್ ಪತಿ' ವ್ಯವಸ್ಥೆ ಪ್ರಶ್ನಿಸಿದ್ದ ಪಿಐಎಲ್ ವಜಾ

ನವದೆಹಲಿ: ಸ್ಥಳೀಯಾಡಳಿತ ಸಂಸ್ಥೆಗಳ ಮೀಸಲು ಕ್ಷೇತ್ರಗಳಲ್ಲಿ ಚುನಾಯಿತರಾಗುವ ಮಹಿಳೆಯರ ಅಧಿಕಾರದಲ್ಲಿ ಪತಿಯ ಹಸ್ತಕ್ಷೇಪವನ್ನು ತಡೆಯುವ ನಿಟ್ಟಿನಲ್ಲಿ ಸಮಿತಿಯೊಂದನ್ನು ರಚಿಸಲು ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಗೆ ಸುಪ್ರೀಂ ಕೋರ್ಟ್ ಗುರುವಾರ ನಿರಾಕರಿಸಿದೆ.

ಉತ್ತರ ಭಾರತದಲ್ಲಿ ಈ ವ್ಯವಸ್ಥೆಗೆ 'ಪ್ರಧಾನ್ ಪತಿ' ಎನ್ನಲಾಗುತ್ತಿದ್ದು, ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಚಾಲ್ತಿಯಲ್ಲಿದೆ.

'ಸಮಸ್ಯೆ ಇರುವುದು ನಿಜ. ಆದರೆ ಇದು ಆಡಳಿತದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ವಿಚಾರದಲ್ಲಿ ಭಾರತದಲ್ಲಿರುವ ವಿಕಸನ ಪ್ರಕ್ರಿಯೆಯ ಭಾಗವಾಗಿದೆ' ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರನ್ನೊಳಗೊಂಡ ನ್ಯಾಯಪೀಠವು ಅಭಿಪ್ರಾಯಪಟ್ಟಿದೆ.

ಮುಂಡೋನಾ ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್ ನ್ಯಾಯಾಲಯಕ್ಕೆ ಪಿಐಎಲ್ ಸಲ್ಲಿಸಿತ್ತು.

ದೆಹಲಿಯ ಸೇವಾ ನಿಯಂತ್ರಣಕ್ಕೆ ಸುಗ್ರೀವಾಜ್ಞೆ; 10ರಂದು ವಿಚಾರಣೆ

ನವದೆಹಲಿ (ಪಿಟಿಐ): ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರ ಸರ್ಕಾರವು ಹೊರಡಿಸಿರುವ ಸುಗ್ರೀವಾಜ್ಞೆ ಪ್ರಶ್ನಿಸಿ ದೆಹಲಿ ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಗುರುವಾರ ಸಮ್ಮತಿಸಿದೆ.

ತ್ವರಿತವಾಗಿ ವಿಚಾರಣೆ ನಡೆಸಬೇಕು ಎಂದು ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು, ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ, ಮನೋಜ್ ಮಿಶ್ರಾ ಅವರಿದ್ದ ಪೀಠಕ್ಕೆ ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, ಜುಲೈ 10ರಂದು ವಿಚಾರಣೆ ಕೈಗೆತ್ತಿಕೊಳ್ಳುವುದಾಗಿ ತಿಳಿಸಿತು.

ಸಾರ್ವಜನಿಕ ಭದ್ರತೆ, ಪೊಲೀಸ್(ಕಾನೂನು ಮತ್ತು ಸುವ್ಯವಸ್ಥೆ) ಹಾಗೂ ಭೂಮಿಗೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿ ಇತರ ಎಲ್ಲಾ ಸೇವೆಗಳ ವಿಚಾರದಲ್ಲಿ ದೆಹಲಿ ಸರ್ಕಾರವು ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರ ಹೊಂದಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಇದರ ವಿರುದ್ಧ ಕೇಂದ್ರವು ಸುಗ್ರೀವಾಜ್ಞೆ ಹೊರಡಿಸಿದೆ ಎಂದು ದೆಹಲಿ ಸರ್ಕಾರವು ಅರ್ಜಿಯಲ್ಲಿ ದೂರಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ತಾರತಮ್ಯ: ಮಾಹಿತಿ ನೀಡಲು 'ಸುಪ್ರೀಂ' ಸೂಚನೆ

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ತಾರತಮ್ಯ ಮಾಡುತ್ತಿರುವುದು ಗಂಭೀರ ಸಮಸ್ಯೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ತಾರತಮ್ಯ ಇಲ್ಲದ, ಉತ್ತಮ ವಾತಾವರಣ ಕಲ್ಪಿಸಲು ಕೈಗೊಂಡಿರುವ ಹಾಗೂ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳ ಕುರಿತು ಸ್ಪಷ್ಟಪಡಿಸುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ (ಯುಜಿಸಿ) ಸುಪ್ರೀಂ ಕೋರ್ಟ್ ಸೂಚಿಸಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರಮ್ಯದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾದ ರೋಹಿತ್ ವೇಮುಲ ಹಾಗೂ ಪಾಯಲ್ ತದ್ವಿ ಅವರ ಪೋಷಕರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ಎಂ.ಎಂ. ಸುಂದರೇಶ್ ಅವರು, ಈ ಸೂಚನೆ ನೀಡಿದ್ದಾರೆ. 2016ರಲ್ಲಿ ಹೈದರಾಬಾದ್ ಸೆಂಟ್ರಲ್ ಯುನಿವರ್ಸಿಟಿಯಲ್ಲಿ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲ ಹಾಗೂ 2019ರಲ್ಲಿ ಮುಂಬೈನ ಟಿ.ಎನ್. ಟೋಪಿವಾಲಾ ನ್ಯಾಷನಲ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ ಪಾಯಲ್ ತದ್ವಿ ಜಾತಿ ತಾರತಮ್ಯದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಗೃಹ ಸಚಿವಾಲಯದ ಸ್ಥಾಯಿ ಸಮಿತಿ ಸಭೆಗೆ ಸದಸ್ಯರ ಬಹಿಷ್ಕಾರ

ಮಣಿಪುರ ಸ್ಥಿತಿಗತಿ ಚರ್ಚೆಗೆ ನಿರಾಕರಣೆ

ನವದೆಹಲಿ (ಪಿಟಿಐ): ಮಣಿಪುರ ರಾಜ್ಯದಲ್ಲಿನ ಪರಿಸ್ಥಿತಿ ಕುರಿತು ಚರ್ಚಿಸಲು ಅವಕಾಶ ನಿರಾಕರಿಸಿದ ಅಧ್ಯಕ್ಷರ ನಡೆಯನ್ನು ಖಂಡಿಸಿ ಗೃಹ ಸಚಿವಾಲಯದ ಸಂಸದೀಯ ಸ್ಥಾಯಿ ಸಮಿತಿಯ ಮೂವರು ಸದಸ್ಯರು ಗುರುವಾರ ಸಭೆಯನ್ನು ಬಹಿಷ್ಕರಿಸಿದರು.

ತಮಿಳುನಾಡು, ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಕಾರಾಗೃಹಗಳ ಸುಧಾರಣೆ ಕುರಿತು ಚರ್ಚಿಸಲು ಸಭೆ ಕರೆಯಲಾಗಿತ್ತು. 'ಮಣಿಪುರದ ಈಗಿನ ಪರಿಸ್ಥಿತಿಯನ್ನು ಸಮಿತಿಯ ಸದಸ್ಯರು ಕಡೆಗಣಿಸಲಾಗದು, ಚರ್ಚೆಯಾಗಬೇಕು' ಎಂದು ಮೂವರು ಸದಸ್ಯರು ಪತ್ರ ನೀಡಿದರು.

ಟಿಎಂಸಿಯ ಡೆರೆಕ್ ಒಬ್ರಿಯಾನ್, ಕಾಂಗ್ರೆಸ್‌ನ ದಿಗ್ವಿಜಯ್ ಸಿಂಗ್ ಮತ್ತು ಪ್ರದೀಪ್ ಭಟ್ಟಾಚಾರ್ಯ ಅವರು ಜಂಟಿಯಾಗಿ ನೀಡಿದ ಈ ಮನವಿಗೆ ಸಮಿತಿಯ ಅಧ್ಯಕ್ಷ ಬ್ರಿಜ್‌ಲಾಲ್ ಅವರಿಂದ ಸ್ಪಂದನೆ ಸಿಗಲಿಲ್ಲ.

ಕಾರಾಗೃಹ ಸುಧಾರಣೆ ಕುರಿತು ಚರ್ಚಿಸಲು ಈಗಾಗಲೇ ಜುಲೈ ತಿಂಗಳಲ್ಲಿ ಮೂರು ಸಭೆಗಳು ನಿಗದಿಯಾಗಿವೆ. ಹೀಗಾಗಿ, ತುರ್ತು ಆದ್ಯತೆ ಮೇರೆಗೆ ಮಣಿಪುರ ಕುರಿತು ಚರ್ಚಿಸಲಾಗದು ಎಂದು ಅಧ್ಯಕ್ಷರು ಈ ಹಿಂದೆಯೇ ಡೆರೆಕ್ ಒಬ್ರಿಯಾನ್, ಸಿಂಗ್ ಅವರಿಗೆ ತಿಳಿಸಿದ್ದರು.

ಅಂತಿಮವಾಗಿ, ಮಣಿಪುರ ಪರಿಸ್ಥಿತಿ ಬಗ್ಗೆ ಚರ್ಚಿಸುವ ಹೊಣೆಯಿಂದ ನುಣುಚಿಕೊಳ್ಳುವ ನಡೆಯನ್ನು ಖಂಡಿಸಿ ಸಭೆಯಿಂದ ಹೊರನಡೆಯುತ್ತಿದ್ದೇವೆ ಎಂದು ಹೇಳಿದ ಸದಸ್ಯರು ಸಭೆಯನ್ನು ಬಹಿಷ್ಕರಿಸಿದರು. ಸಭೆಯಲ್ಲಿ ಅಧ್ಯಕ್ಷರನ್ನು ಒಳಗೊಂಡು ಏಳು ಸದಸ್ಯರು ಭಾಗವಹಿಸಿದ್ದರು.

'ಗೃಹ ಸಚಿವಾಲಯಕ್ಕೆ ಸಂಬಂಧಿಸಿದ ಸಮಿತಿಯ ಸದಸ್ಯರಾಗಿ ಮಣಿಪುರದ ಸ್ಥಿತಿಯನ್ನು ತುರ್ತಾಗಿ ಮತ್ತು ಪ್ರಾಮಾಣಿಕವಾಗಿ ಚರ್ಚೆ ನಡೆಸುವುದು ಸದಸ್ಯರ ನೈತಿಕ ಮತ್ತು ಸಾಂವಿಧಾನಿಕ ಹೊಣೆಯಾಗಿದೆ' ಎಂದು ಇವರು ಪ್ರತಿಪಾದಿಸಿದ್ದರು. 'ನೀವು ಹಿರಿಯ ಪೊಲೀಸ್ ಅಧಿಕಾರಿಯಾಗಿದ್ದವರು. ಮಣಿಪುರದಲ್ಲಿನ ಪರಿಸ್ಥಿತಿಯ ಗಂಭೀರತೆ ಅರ್ಥವಾಗಿರುತ್ತದೆ. ಆ ರಾಜ್ಯಕ್ಕೆ ಸದ್ಯ ಪರಿಹಾರದ ಅಗತ್ಯವಿದೆ. ಅಲ್ಲಿ ಹಿಂಸೆ ಕೊನೆಗಾಣಿಸಬೇಕಾಗಿದೆ. ಚುನಾಯಿತ ಪ್ರತಿನಿಧಿಗಳಾಗಿ ಇದನ್ನು ಅಲಕ್ಷಿಸಲಾಗದು' ಎಂದರು.

'ಕೆಲವು ಸದಸ್ಯರು ಕಳೆದ ತಿಂಗಳು ಕೂಡಾ ಚರ್ಚೆ ಕೋರಿ ಪತ್ರ ಬರೆದಿದ್ದವು. ಅದರೆ, ಅದನ್ನು ಸ್ವೀಕರಿಸಿಲ್ಲ' ಎಂದು ಹೇಳಿದರು. ಇದೇ ತಿಂಗಳು ಸಮಿತಿಯ ಇನ್ನೂ ಎರಡು ಸಭೆ ನಿಗದಿಯಾಗಿದೆ. ಆ ಸಭೆಗಳಿಗೂ ಈ ಮೂವರು ಸದಸ್ಯರು ಗೈರುಹಾಜರಾಗುವ ಸಾಧ್ಯತೆಗಳಿವೆ.

ಇಂಟರ್‌ನೆಟ್ ಸ್ಥಗಿತ: ಮಧ್ಯ ಪ್ರವೇಶಕ್ಕೆ ಸುಪ್ರೀಂ ನಕಾರ

ಮಣಿಪುರದಲ್ಲಿ ನಡೆಯುತ್ತಿರುವ ಘರ್ಷಣೆ ಹಿನ್ನೆಲೆಯಲ್ಲಿ ಇಂಟರ್‌ನೆಟ್ ಸ್ಥಗಿತಗೊಳಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದ್ದು, ದೆಹಲಿ ಹೈಕೋರ್ಟ್ ಈಗಾಗಲೇ ಈ ವಿಚಾರವನ್ನು ಕೈಗೆತ್ತಿಕೊಂಡಿದೆ ಎಂದು ಹೇಳಿದೆ.

ಡಿ.ವೈ.ಚಂದ್ರಚೂಡ್, ಪಿ.ಎಸ್ ನರಸಿಂಹ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು, ಹೈಕೋರ್ಟ್‌ನ ವಿಭಾಗೀಯ ಪೀಠವು ಅರ್ಜಿ ಪರಿಗಣಿಸುತ್ತಿದೆ, ಹೀಗಿದ್ದರೂ ಮಣಿಪುರದ ಇಬ್ಬರು ನಿವಾಸಿಗಳ ಪರವಾಗಿ ಹೈಕೋರ್ಟ್‌ಗೆ ಯಾಕೆ ಹೋಗುವುದಿಲ್ಲ ಎಂದು ವಕೀಲರನ್ನು ಪ್ರಶ್ನಿಸಿತು.

ಮಹಿಳೆಯ ಹತ್ಯೆ

ಗುವಾಹಟಿ: ಇಂಫಾಲ್‌ನ ಪಶ್ಚಿಮ ಜಿಲ್ಲೆಯ ಕ್ವಾಕಿತೆಲ್‌ನ ಶಾಲೆಯ ಹೊರಗೆ ಗುರುವಾರ ಬೆಳಿಗ್ಗೆ ಅಪರಿಚಿತರು ಗುಂಡಿನ ದಾಳಿ ನಡೆಸಿ ಮಹಿಳೆಯೊಬ್ಬರನ್ನು ಹತ್ಯೆ ಮಾಡಿದ್ದಾರೆ. ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತಿರುವ ಬಿಜೆಪಿ ಸರ್ಕಾರಕ್ಕೆ ಈ ಹತ್ಯೆ ಮತ್ತೊಂದು ಆಘಾತ ನೀಡಿದೆ.

'ಮೋಟಾರ್ ಸೈಕಲ್‌ನಲ್ಲಿ ಬಂದ ದುಷ್ಕರ್ಮಿಗಳು ಮಹಿಳೆಯ ಮೇಲೆ ಗುಂಡು ಹಾರಿಸಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೂತ್ರ ವಿಸರ್ಜನೆ ಪ್ರಕರಣ: ದೇಶದಾದ್ಯಂತ ಆಕ್ರೋಶ

ಸಂತ್ರಸ್ತ ಯುವಕನ ಪಾದ ತೊಳೆದ ಸಿ.ಎಂ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಸೀದೀ ಜಿಲ್ಲೆಯಲ್ಲಿ ಬುಡಕಟ್ಟು ಯುವಕನ ಮೇಲೆ ಮೂತ್ರ ವಿಸರ್ಜಿಸಿದ ಹೇಯಕೃತ್ಯಕ್ಕೆ ದೇಶದಾದ್ಯಂತ ವ್ಯಾಪಕ ಖಂಡನೆ ವ್ಯಕ್ತವಾದ ಬೆನ್ನಲ್ಲೇ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಸಂತ್ರಸ್ತ ದಶಮತ್ ರಾವತ್ ಅವರ ಪಾದಗಳನ್ನು ತೊಳೆದು ಕೃತ್ಯದ ಬಗ್ಗೆ ಕ್ಷಮೆಯಾಚಿಸಿದರು.

ಚೌಹಾಣ್ ಅವರು ಗುರುವಾರ ತಮ್ಮ ನಿವಾಸದಲ್ಲಿ ರಾವತ್ ಅವರ ಪಾದಗಳನ್ನು ತೊಳೆದ ಬಳಿಕ, ಅವರ ಕೊರಳಿಗೆ ಹೂ ಮಾಲೆ ಹಾಕಿ ಗೌರವಿಸಿದರು. ನಂತರ ಉಭಯ ಕುಶಲೋಪರಿ ನಡೆಸಿದರು. ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯ ತಲುಪಿದೆಯೇ ಎಂಬ ಬಗ್ಗೆ ಚರ್ಚಿಸಿದರು.

ರಾವತ್ ಅವರನ್ನು 'ಸುಧಾಮ' ಎಂದು ಕರೆದ ಚೌಹಾಣ್, 'ಯುವಕ ನನ್ನ ಸ್ನೇಹಿತ. ಬುಡಕಟ್ಟು ಯುವಕನ ಮೇಲೆ ಅಮಾನವೀಯವಾಗಿ ವರ್ತಿಸಿರುವುದು ನೋವು ತಂದಿದೆ' ಎಂದರು.

ಇದಕ್ಕೂ ಮೊದಲು ಸ್ಮಾರ್ಟ್‌ಸಿಟಿ ಉದ್ಯಾನದಲ್ಲಿ ಇಬ್ಬರೂ ಜೊತೆಗೂಡಿ ಸಸಿ ನೆಟ್ಟರು. ಈಗಾಗಲೇ, ಕೃತ್ಯ ಎಸಗಿದ ಆರೋಪಿ ಪ್ರವೇಶ್ ಶುಕ್ಲಾ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಬುಡಕಟ್ಟು ಸಮುದಾಯಕ್ಕೆ ಸೇರಿದ ಸಂತ್ರಸ್ತ ಯುವಕ ದಶಮತ್ ರಾವತ್ ಅವರ ಪಾದಗಳನ್ನು ತೊಳೆಯುತ್ತಿರುವ ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ –ಪಿಟಿಐ ಚಿತ್ರ

ಸ್ವತ್ತು ನೆಲಸಮಕ್ಕೆ ಸೂಚನೆ: ಶಿವಪುರಿ ಜಿಲ್ಲೆಯ ವರ್ಖಾಡಿ ಗ್ರಾಮದಲ್ಲಿ ಇಬ್ಬರು ದಲಿತ ಯುವಕರಿಗೆ ಥಳಿಸಿದ ಪ್ರಕರಣವನ್ನು ತೀವ್ರವಾಗಿ ಖಂಡಿಸಿರುವ ಚೌಹಾಣ್ ನೇತೃತ್ವದ ಸರ್ಕಾರವು, ಆರೋಪಿಗಳ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ(ಎನ್‌ಎಸ್‌ಎ) ಪ್ರಕರಣ ದಾಖಲಿಸಲು ನಿರ್ಧರಿಸಿದೆ.

ಸುದ್ದಿಗಾರರ ಜೊತೆ ಮಾತನಾಡಿದ ಗೃಹ ಸಚಿವ ನರೋತ್ತಮ್ ಮಿಶ್ರಾ, 'ಆರೋಪಿಗಳು ಅಕ್ರಮವಾಗಿ ಸ್ವತ್ತುಗಳನ್ನು ಹೊಂದಿದ್ದರೆ ನೆಲಸಮಗೊಳಿಸುವಂತೆ ಸ್ಥಳೀಯ ಆಡಳಿತಕ್ಕೆ ಸೂಚಿಸಿದ್ದೇನೆ. ಜೊತೆಗೆ, ಎನ್‌ಎಸ್‌ಎ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುವುದು' ಎಂದರು.

ಬುಡಕಟ್ಟು ಯುವಕನ ಮೇಲೆ ಮೂತ್ರ ವಿಸರ್ಜಿಸಿದ ಪ್ರಕರಣ ಕುರಿತು ಕಾಂಗ್ರೆಸ್, ಸರ್ಕಾರದ ವಿರುದ್ಧ ಹರಿಹಾಯ್ದಿತ್ತು. ಆದರೆ, ಥಳಿತ ಪ್ರಕರಣದ ಬಗ್ಗೆ ಮೌನವಹಿಸಿದೆ ಎಂದು ಟೀಕಿಸಿದರು.

ದುಲೀಪ್ ಟ್ರೋಫಿ: ಮಯಂಕ್ ಅರ್ಧಶತಕ; ಉತ್ತರ ವಲಯಕ್ಕೆ 3 ರನ್ ಮುನ್ನಡೆ

ವಿಹಾರಿ ಪಡೆಗೆ ಗೆಲುವೊಂದೇ ದಾರಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಗುರುವಾರ ಇಡೀ ದಿನ ಮಳೆಯ ಆಟದ ನಡುವೆ ಕ್ರಿಕೆಟ್ ಕೂಡ ನಡೆಯಿತು!

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಟೂರ್ನಿಯ ಸೆಮಿಫೈನಲ್‌ನ ಎರಡನೇ ದಿನ ಕೇವಲ 49 ಓವರ್‌ಗಳ ಆಟ ನಡೆಯಿತು. ಮೂರು ಬಾರಿ ಮಳೆಯಿಂದಾಗಿ ಆಟ ಸ್ಥಗಿತವಾಯಿತು. ಇದರಿಂದಾಗಿ ಸುಮಾರು ಎರಡೂವರೆ ಗಂಟೆಗಳ ಅವಧಿಯ ಆಟವು ಮಳೆಯ ಪಾಲಾಯಿತು.

ಇದ್ದರೂ ನಡುವೆ ಮಯಂಕ್ ಅಗರವಾಲ್ (76; 115ಎಸೆತ, 4X10) ಮತ್ತು ತಿಲಕ್ ವರ್ಮಾ (46; 101ಎ, 4X5) ಹೋರಾಟ ಮಾಡಿದರೂ ದಕ್ಷಿಣ ವಲಯ ತಂಡವು 3 ರನ್‌ಗಳ ಹಿನ್ನಡೆ ಅನುಭವಿಸಿತು. ಇದರಿಂದಾಗಿ ತಂಡವು ಫೈನಲ್ ತಲುಪಬೇಕಾದರೆ ಉತ್ತರ ವಲಯವನ್ನು ಸೋಲಿಸಲೇಬೇಕಾದ ಒತ್ತಡದಲ್ಲಿದೆ.

ಎರಡನೇ ಇನಿಂಗ್ಸ್ ಆರಂಭಿಸಿರುವ ಉತ್ತರ ವಲಯವು 11 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 51 ರನ್ ಗಳಿಸಿದೆ. ದಕ್ಷಿಣ ತಂಡದ ವೈಶಾಖ ವಿಜಯಕುಮಾರ್ ಮತ್ತು ವಿದ್ವತ್ ಕಾವೇರಪ್ಪ ತಲಾ ಒಂದು ವಿಕೆಟ್ ಗಳಿಸಿದ್ದಾರೆ. ಉತ್ತರ ತಂಡದ ಅಂಕಿತ್ ಖಲ್ಸಿ (ಬ್ಯಾಟಿಂಗ್ 21) ಮತ್ತು ಪ್ರಭಸಿಮ್ರನ್ ಸಿಂಗ್ (ಬ್ಯಾಟಿಂಗ್ 6) ಕ್ರೀಸ್‌ನಲ್ಲಿದ್ದಾರೆ.

50 ರನ್ 6 ವಿಕೆಟ್: ಮೊದಲ ಇನಿಂಗ್ಸ್‌ನಲ್ಲಿ ದಕ್ಷಿಣ ವಲಯವು ಆರಂಭಿಕ ಕುಸಿತ ಅನುಭವಿಸಿದ್ದ ನಂತರ ಮಯಂಕ್ ಅಗರವಾಲ್ ಮತ್ತು ತಿಲಕ್ ವರ್ಮಾ ಆಸರೆಯಾಗಿದ್ದರು. ಐದನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ ಗಳಿಸಿದ 110 ರನ್‌ಗಳಿಂದಾಗಿ ತಂಡವು ಮುನ್ನಡೆಯತ್ತ ಸಾಗುವ ಭರವಸೆ ಮೂಡಿತ್ತು.

ಆದರೆ, ಮಧ್ಯಮವೇಗಿ ವೈಭವ್ ಅರೋರಾ ಹಾಗೂ ಆಫ್‌ಸ್ಪಿನ್ನರ್ ಜಯಂತ್ ಯಾದವ್ ಅವರ ಪರಿಣಾಮಕಾರಿ ದಾಳಿಯಿಂದಾಗಿ ದಕ್ಷಿಣ ತಂಡವು 50 ರನ್‌ಗಳ ಅಂತರದಲ್ಲಿ ಆರು ವಿಕೆಟ್‌ಗಳನ್ನು ಕಳೆದುಕೊಂಡಿತು.

ಶತಕದ ಹಾದಿಯಲ್ಲಿದ್ದ ಮಯಂಕ್ ಅವರ ವಿಕೆಟ್ ಗಳಿಸಿದ ಜಯಂತ್ ಇನಿಂಗ್ಸ್‌ಗೆ ಪ್ರಮುಖ ತಿರುವು ನೀಡಿದರು. ತಿಲಕ್ ವರ್ಮಾ ಮತ್ತು ಸಾಯಿಕಿಶೋರ್ (21 ರನ್) ಒಂದಿಷ್ಟು ಹೋರಾಟ ಮಾಡಿದರು. ವೆಸ್ಟ್ ಇಂಡೀಸ್ ಪ್ರವಾಸಕ್ಕೆ ತೆರಳಲಿರುವ ಭಾರತ ಟಿ20 ತಂಡದಲ್ಲಿ ಸ್ಥಾನ ಪಡೆದಿರುವ ತಿಲಕ್ ವರ್ಮಾ ಇಲ್ಲಿ ನಾಲ್ಕು ರನ್‌ಗಳ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು. ಆದರೆ ಉಳಿದ ಬ್ಯಾಟರ್‌ಗಳು ತಾಳ್ಮೆಯಿಂದ ಆಡಲಿಲ್ಲ. ಇದು ಹಿನ್ನಡೆಗೆ ಕಾರಣವಾಯಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಉತ್ತರ ವಲಯ: 58.3 ಓವರ್‌ಗಳಲ್ಲಿ 198. ದಕ್ಷಿಣ ವಲಯ: 54.4 ಓವರ್‌ಗಳಲ್ಲಿ 195 (ಮಯಂಕ್ ಅಗರವಾಲ್ 76, ತಿಲಕ್ ವರ್ಮಾ 46, ರವಿಶ್ರೀನಿವಾಸನ್ ಸಾಯಿಕಿಶೋರ್ 21, ಬಲ್ತೇಜ್ ಸಿಂಗ್ 40ಕ್ಕೆ2, ವೈಭವ್ ಅರೋರಾ 57ಕ್ಕೆ3, ಹರ್ಷಿತ್ ರಾಣಾ 41ಕ್ಕೆ2, ಜಯಂತ್ ಯಾದವ್ 38ಕ್ಕೆ3) ಎರಡನೇ ಇನಿಂಗ್ಸ್: ಉತ್ತರ ವಲಯ: 11 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 51 (ಪ್ರಶಾಂತ್ ಚೋಪ್ರಾ 19, ಅಂಕಿತ್ ಖಲ್ಸಿ ಬ್ಯಾಟಿಂಗ್ 21, ಪ್ರಭಸಿಮ್ರನ್ ಸಿಂಗ್ ಬ್ಯಾಟಿಂಗ್ 6, ವಿದ್ವತ್ ಕಾವೇರಪ್ಪ 17ಕ್ಕೆ1, ವೈಶಾಖ 23ಕ್ಕೆ1)

ದಕ್ಷಿಣ ವಲಯ ತಂಡದ ಬ್ಯಾಟರ್ ಮಯಂಕ್ ಅಗರವಾಲ್ ಅವರ ಕ್ಯಾಚ್ ಪಡೆದ ಉತ್ತರ ವಲಯ ತಂಡದ ಅಂಕಿತ್ ಕುಮಾರ್ (ಎಡ ಚಿತ್ರ). ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯವನ್ನು ಗುರುವಾರ ವೀಕ್ಷಿಸಿದ ಭಾರತ ತಂಡದ ಆಟಗಾರ ರಿಷಭ್ ಪಂತ್ ಅವರು. ತಿಂಗಳುಗಳ ಹಿಂದೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ರಿಷಭ್ ಚಿಕಿತ್ಸೆಯ ನಂತರ ಚೇತರಿಸಿಕೊಂಡಿದ್ದಾರೆ. ಸದ್ಯ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಆರೈಕೆಯಲ್ಲಿದ್ದಾರೆ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಪೂಜಾರ, ಸೂರ್ಯ ಅರ್ಧಶತಕ

ಮಧ್ಯಮವೇಗಿ ಅರ್ಜನ್ ನಾಗವಸವಲ್ಲಾ (74ಕ್ಕೆ5) ಅವರ ಅಮೋಘ ಬೌಲಿಂಗ್ ಬಲದಿಂದ ಪಶ್ಚಿಮ ವಲಯ ತಂಡವು ಕೇಂದ್ರ ವಲಯದ ಎದುರು ಮೊದಲ ಇನಿಂಗ್ಸ್‌ನಲ್ಲಿ 96 ರನ್‌ಗಳ ಮುನ್ನಡೆ ಗಳಿಸಿತು.

ಆಲೂರಿನಲ್ಲಿರುವ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಸೆಮಿಫೈನಲ್‌ನಲ್ಲಿ ಗುರುವಾರ ದಿನದಾಟದ ಕೊನೆಗೆ ಪಶ್ಚಿಮ ವಲಯವು ಒಟ್ಟು 241 ರನ್‌ಗಳ ಮುನ್ನಡೆ ಗಳಿಸಿದೆ.

ಚೇತೇಶ್ವರ್ ಪೂಜಾರ (ಬ್ಯಾಟಿಂಗ್ 50; 103ಎ) ಮತ್ತು ಸೂರ್ಯಕುಮಾರ್ ಯಾದವ್ (52; 58ಎ, 4X8, 6X1) ಅವರ ಅರ್ಧಶತಕಗಳ ಬಲದಿಂದ ತಂಡವು ಎರಡನೇ ಇನಿಂಗ್ಸ್‌ನಲ್ಲಿ 39 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 149 ರನ್ ಗಳಿಸಿತು.

ಮೊದಲ ಇನಿಂಗ್ಸ್‌ನಲ್ಲಿ ಉತ್ತರ ವಲಯದ ನಾಯಕ ಮತ್ತು ಮಧ್ಯಮವೇಗಿ ಶಿವಂ ಮಾವಿ (43ಕ್ಕೆ6) ಅಮೋಘ ಬೌಲೀಂಗ್ ನಿಂದಾಗಿ ಪಶ್ಚಿಮ ತಂಡವು 220 ರನ್‌ಗಳಿಗೆ ಆಲೌಟ್ ಆಯಿತು.

ಆದರೆ, ಕೇಂದ್ರ ತಂಡವು 128 ರನ್‌ಗಳಿಗೆ ಆಲೌಟ್ ಆಗಲು ಅರ್ಜನ್ ಕಾರಣರಾದರು. ತಂಡದ ಧ್ರುವ ಜುರೇಲ್ (46; 55ಎ), ರಿಂಕು ಸಿಂಗ್ (48ರನ್) ಮತ್ತು ಸೌರಭ್ (12 ರನ್) ಬಿಟ್ಟರೆ ಉಳಿದ ಬ್ಯಾಟರ್‌ಗಳು ಎರಡಂಕಿ ಮುಟ್ಟಲಿಲ್ಲ.



ಅಮುಲ್ ಆಂಧ್ರಪ್ರದೇಶದಲ್ಲಿ ಶ್ವೇತ ಕ್ರಾಂತಿಯನ್ನು ಬಿಡುಗಡೆ ಮಾಡಿದೆ!

ತಮೀಮ್ ದಿಢೀರ್ ನಿವೃತ್ತಿ

ಚಿತ್ತಗಾಂಗ್ (ಬಾಂಗ್ಲಾದೇಶ) (ಎಎಫ್‌ಪಿ): ಬಾಂಗ್ಲಾದೇಶ ಏಕದಿನ ತಂಡದ ನಾಯಕ ತಮೀಮ್ ಇಕ್ಬಾಲ್ ಅವರು ತಕ್ಷಣದಿಂದ ಜಾರಿಗೆ ಬರುವಂತೆ ಎಲ್ಲ ಮಾದರಿಯ ಕ್ರಿಕೆಟ್‌ಗೆ ಗುರುವಾರ ನಿವೃತ್ತಿ ಘೋಷಿಸಿದ್ದಾರೆ. ಏಕದಿನ ವಿಶ್ವಕಪ್‌ಗೆ ಮೂರು ತಿಂಗಳು ಉಳಿದಿರುವಂತೆ ಅವರು ಅಚ್ಚರಿಯ ರೀತಿ ವಿದಾಯ ಹೇಳಿರುವುದು ತಂಡಕ್ಕೆ ಆಘಾತ ಮೂಡಿಸಿದೆ.

ಅಫ್ಗಾನಿಸ್ತಾನ ಎದುರು ಏಕದಿನ ಸರಣಿಯ ಮೊದಲ ಪಂದ್ಯ ಸೋತ ಮರುದಿನವೇ 34 ವರ್ಷದ ಎಡಗೈ ಆಟಗಾರ ತಮೀಮ್ ಈ ಅನಿರೀಕ್ಷಿತ ನಿರ್ಧಾರ ಕೈಗೊಂಡಿದ್ದಾರೆ.

'ಅಫ್ಗಾನಿಸ್ತಾನ ವಿರುದ್ಧ ನಿನ್ನೆಯ ಪಂದ್ಯ ನನ್ನ ಪಾಲಿಗೆ ಕೊನೆಯ ಅಂತರರಾಷ್ಟ್ರೀಯ ಪಂದ್ಯ. ಈಗಿಂದೀಗ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳುತ್ತಿದ್ದೇನೆ' ಎಂದು ತಮೀಮ್ ಸುದ್ದಿಗಾರರಿಗೆ ತಿಳಿಸಿದರು.

ತಮೀಮ್

ಬುಧವಾರ ನಡೆದ ಮೂರು ಪಂದ್ಯಗಳ ಸರಣಿಯ ಮೊದಲ ಏಕದಿನ ಪಂದ್ಯದಲ್ಲಿ ಅವರು, ಪೂರ್ಣ ಫಿಟ್ ಆಗದೇ ಆಡಲು ಮುಂದಾಗಿದ್ದು ವ್ಯಾಪಕ ಟೀಕೆಗೆ ಒಳಗಾಗಿತ್ತು. ಇದಾದ ಎರಡೇ ದಿನಗಳಲ್ಲಿ ಈ ನಿರ್ಧಾರಕ್ಕೆ ಬಂದಿದ್ದಾರೆ. ತಮೀಮ್ 241 ಏಕದಿನ ಪಂದ್ಯಗಳನ್ನಾಡಿದ್ದು 8,133 ರನ್ ಕಲೆಹಾಕಿದ್ದಾರೆ. 70 ಟೆಸ್ಟ್‌ಗಳ 134 ಇನ್ನಿಂಗ್ಸ್‌ಗಳಿಂದ 5,134 ರನ್ ಶೇಖರಿಸಿರುವ ತಮೀಮ್ 10 ಶತಕಗಳನ್ನು ಗಳಿಸಿದ್ದಾರೆ.

ಹಾಕಿ ಲೀಗ್: ಬಿಎಸ್‌ಸಿಗೆ ಗೆಲುವು

ಬೆಂಗಳೂರು: ಬಾಯ್ಸ್ ಸ್ಪೋರ್ಟ್ಸ್ ಕಂಪನಿ (ಬಿಎಸ್‌ಸಿ) ತಂಡದವರು ಏಳನೇ ಆವೃತ್ತಿಯ ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಎಫ್‌ಎಂಕೆಎಂಸಿ ಹಾಕಿ ಅರೆನಾದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಬಿಎಸ್‌ಸಿ 5–1 ಗೋಲುಗಳಿಂದ ಪೋಸ್ಟಲ್ ತಂಡವನ್ನು ಪರಾಭವಗೊಳಿಸಿತು.

ಮತ್ತೊಂದು ಪಂದ್ಯದಲ್ಲಿ ಕೆನರಾ ಬ್ಯಾಂಕ್ ತಂಡ 3–2 ಗೋಲುಗಳಿಂದ ಎಸ್‌ಎಐ ಎಸ್‌ಟಿಸಿ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸುದ್ದಿ

ಆರ್ಚರಿ: ಭಾರತ ಮಹಿಳಾ ತಂಡಕ್ಕೆ ಚಿನ್ನ

ಲಿಮೆರಿಕ್, ಐರ್ಲೆಂಡ್ (ಪಿಟಿಐ): ಭಾರತ ಮಹಿಳಾ ತಂಡವು ಇಲ್ಲಿ ನಡೆಯುತ್ತಿರುವ ವಿಶ್ವ ಆರ್ಚರಿ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿತು.

ಗುರುವಾರ ನಡೆದ ಸ್ಪರ್ಧೆಯಲ್ಲಿ ಭಾರತದ 18 ವರ್ಷದೊಳಗಿನವರ ಮಹಿಳಾ ತಂಡವು ಅಮೆರಿಕ ಬಳಗವನ್ನು ಮಣಿಸಿತು.

ಭಾರತ ತಂಡದಲ್ಲಿ ಐಶ್ವರ್ಯ ಶರ್ಮಾ, ಅದಿತಿ ಸ್ವಾಮಿ ಮತ್ತು ಏಕ್ತಾ ರಾಣಿ ಅವರ ನಿಖರ ಗುರಿಗಾರಿಕೆಯಿಂದಾಗಿ ಭಾರತವು 214–212 ರಿಂದ ಒಲಿವಿಯಾ ಡೀನ್, ಲೈಕೊ ಅರೆಒಲಾ ಮತ್ತು ಲೀನ್ ಡ್ರೇಕ್ ಅವರಿದ್ದ ಅಮೆರಿಕ ತಂಡದ ಎದುರು ಜಯಿಸಿತು.

ಈ ಸ್ಪರ್ಧೆಯಲ್ಲಿ ಭಾರತಕ್ಕೆ ಒಲಿದ ಎರಡನೇ ಚಿನ್ನದ ಪದಕ ಇದಾಗಿದೆ.

ವಿಂಡೀಸ್ ಸರಣಿಗೆ ಸೈಕಲ್ ಅಗರಬತ್ತಿ ಪ್ರಾಯೋಜಕತ್ವ

ಬೆಂಗಳೂರು: ಕರ್ನಾಟಕದ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯು ಭಾರತ ಮತ್ತು ವೆಸ್ಟ್ ಇಂಡೀಸ್ ಟೆಸ್ಟ್ ಸರಣಿಯನ್ನು ಪ್ರಾಯೋಜಿಸುತ್ತಿದೆ.

'ಉಭಯ ತಂಡಗಳ ನಡುವಣ 100ನೇ ಪಂದ್ಯ ನಡೆಯಲಿರುವ ಈ ಸರಣಿಯು ಐತಿಹಾಸಿಕವಾಗಿದೆ. ಆದ್ದರಿಂದ ಈ ಸರಣಿಯ ಪ್ರಮುಖ ಪ್ರಾಯೋಜಕರಾಗಲು ಹೆಮ್ಮೆಯೆನಿಸುತ್ತಿದೆ. 2023 ರ ಸರಣಿಯನ್ನು 'ಸೈಕಲ್ ಪ್ಯೂರ್ ಅಗರಬತ್ತಿ ಟೆಸ್ಟ್ ಸರಣಿಯೆಂದು ಕರೆಯಲಾಗುತ್ತದೆ' ಎಂದು ವ್ಯವಸ್ಥಾಪಕ ನಿರ್ದೇಶಕರಾದ ಅರ್ಜುನ್ ರಂಗಾ ತಿಳಿಸಿದ್ದಾರೆ.

ಟ್ರಿನಿಡಾಡ್‌ನಲ್ಲಿ ಇದೇ 20 ರಿಂದ 24 ರವರೆಗೆ ನಡೆಯಲಿರುವ ಎರಡನೇ ಟೆಸ್ಟ್ ಪಂದ್ಯವು ಉಭಯ ರಾಷ್ಟ್ರಗಳ ನಡುವಿನ 100 ನೇ ಪಂದ್ಯವಾಗಿದೆ.

ಟಿಟಿ: ಪ್ರಿ ಕ್ವಾರ್ಟರ್‌ಗೆ ಮಣಿಕಾ ಬಾತ್ರ

ಲುಬ್ಲಿಯಾನ, ಸ್ಲೊವೇನಿಯ (ಪಿಟಿಐ): ಭಾರತದ ಮಣಿಕಾ ಬಾತ್ರ ಅವರು ವಿಶ್ವ ಟೇಬಲ್ ಟೆನಿಸ್ ಕಂಟೆಂಡರ್ ಟೂರ್ನಿಯಲ್ಲಿ ವಿಶ್ವದ 15ನೇ ರ್‍ಯಾಂಕ್‌ನ ಆಟಗಾರ್ತಿ ಚೀನಾ ತೈಪೆಯ ಚೆನ್ ಐ ಚಿಂಗ್‌ಗೆ ಆಘಾತ ನೀಡಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಪಂದ್ಯದಲ್ಲಿ ಮಣಿಕಾ 11–4, 11–9, 11–7 ರಲ್ಲಿ ಗೆದ್ದರು.

ರುಬ್ಲೇವ್‌ಗೆ ಪ್ರಯಾಸದ ಜಯ

ವಿಂಬಲ್ಡನ್ ಟೆನಿಸ್: ವಾವ್ರಿಂಕಾಗೆ ಮೂರನೇ ಸುತ್ತಿನ ಎದುರಾಳಿ ಜೊಕೊವಿಚ್

ಲಂಡನ್ (ರಾಯಿಟರ್ಸ್): ರಷ್ಯದ ಆಂಡ್ರೆ ರುಬ್ಲೇವ್ ಆರಂಭದ ಸೆಟ್ ಹಿನ್ನಡೆಯಿಂದ ಚೇತರಿಸಿಕೊಂಡು ಸ್ವದೇಶದ ಅಸ್ಲಾನ್ ಕರಾಟ್ಸೇವ್ ಅವರನ್ನು ಮಣಿಸಿ ವಿಂಬಲ್ಡನ್ ಚಾಂಪಿಯನ್‌ಷಿಪ್ಸ್‌ನ ಮೂರನೇ ಸುತ್ತನ್ನು ತಲುಪಿದರು. ಹಳೆಯ ಹುಲಿ ಸ್ಟಾನಿಸ್ಲಾವ್ ವಾವ್ರಿಂಕಾ ಅವರೂ ಇತ್ತೀಚಿನ ವರ್ಷಗಳಲ್ಲಿ ಮೊದಲ ಬಾರಿ ಮೂರನೇ ಸುತ್ತನ್ನು ತಲುಪಿದ್ದು, ಎರಡನೇ ಶ್ರೇಯಾಂಕದ ನೊವಾಕ್ ಜೊಕೊವಿಚ್ ಅವರನ್ನು ಎದುರಿಸಲಿದ್ದಾರೆ.

ಏಳನೇ ಶ್ರೇಯಾಂಕದ ರುಬ್ಲೇವ್, ಗುರುವಾರ ನಡೆದ ಪಂದ್ಯದಲ್ಲಿ 6–7 (4), 6–3, 6–4, 7–5 ರಲ್ಲಿ ಅಸ್ಲಾನ್ ಮೇಲೆ ಜಯಗಳಿಸಿದರು. ಇವರಿಬ್ಬರ ನಡುವೆ ಈ ಹಿಂದಿನ ಏಕೈಕ ಮುಖಾಮುಖಿ ದುಬೈನಲ್ಲಿ 2021ರಲ್ಲಿ ನಡೆದಿದ್ದಾಗ ಕರಾಟ್ಸೇವ್ ಜಯಶಾಲಿಯಾಗಿದ್ದರು. ಪರಿಣಾಮಕಾರಿ ಸರ್ವ್ ಮತ್ತು ನೆಟ್ ಬಳಿಯ ಆಟದಲ್ಲಿ ರುಬ್ಲೇವ್ ಮಿಂಚಿದರು.

ರಷ್ಯ ಮತ್ತು ಬೆಲಾರಸ್ ಆಟಗಾರರಿಗೆ ನಿಷೇಧವಿದ್ದ ಕಾರಣ ರುಬ್ಲೇವ್ ಕಳೆದ ವರ್ಷ ಇಲ್ಲಿಗೆ ಬಂದಿರಲಿಲ್ಲ. ಈಗ ಅವರು ಮೂರನೇ ಸುತ್ತಿನಲ್ಲಿ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿರುವ ಡೇವಿಡ್ ಗೋಫಿನ್ ಅಥವಾ ಕ್ವಾಲಿಫೈಯರ್ ಥಾಮಸ್ ನಾರಿಯೋಸ್ ವೆರಾ ಅವರನ್ನು ಎದುರಿಸಲಿದ್ದಾರೆ.

ಆಂಡ್ರೆ ರುಬ್ಲೇವ್ ಗೆಲುವಿನ ಸಂಭ್ರಮ –ಎಎಫ್‌ಪಿ ಚಿತ್ರ

ವಾವ್ರಿಂಕಾ ಮುನ್ನಡೆ: ಸ್ವಿಜರ್ಲೆಂಡ್‌ನ 38 ವರ್ಷದ ಆಟಗಾರ ಸ್ಟಾನ್ ವಾವ್ರಿಂಕಾ ಯುವ ಆಟಗಾರರನ್ನು ಮೀರಿಸುವಂತೆ ಆಡಿ 6–3, 4–6, 6–4, 6–2 ರಿಂದ ಅರ್ಜೆಂಟಿನಾದ ಥಾಮಸ್ ಇಚ್‌ವೆರಿ ಅವರನ್ನು ಸೋಲಿಸಿ ಮೂರನೇ ಸುತ್ತನ್ನು ತಲುಪಿದರು. ಥಾಮಸ್ 29ನೇ ಶ್ರೇಯಾಂಕದ ಪಡೆದಿದ್ದಾರೆ.

ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ವಾವ್ರಿಂಕಾ ಮೂರನೇ ಸುತ್ತನ್ನು ತಲುಪುತ್ತಿರುವುದು ಮೂರು ವರ್ಷಗಳಲ್ಲಿ ಇದೇ ಮೊದಲು. ಈ ಗೆಲುವಿಗೆ ಅವರಿಗೆ ಸಿಗುವ 'ಉಡುಗೋರೆ' ನೊವಾಕ್ ಜೊಕೊವಿಚ್ ಎದುರಿನ ಮೂರನೇ ಸುತ್ತಿನ ಸೆಣಸಾಟ. 'ನೊವಾಕ್ ಅವರನ್ನು ಎದುರಿಸುವುದು ನನಗೊಂದು ಗೌರವ' ಎಂದಿದ್ದಾರೆ ಸ್ವಿಸ್ ಆಟಗಾರ.

ಪ್ರಸ್ತುತ 88ನೇ ಕ್ರಮಾಂಕದಲ್ಲಿರುವ ವಾವ್ರಿಂಕಾ ಎಂಟು ವರ್ಷಗಳ ಹಿಂದೆ ಜೊಕೊವಿಚ್ ಅವರಿಗೆ ಬೆವರಿಳಿಸಿದ್ದರು. 2015ರ ಆ ಫ್ರೆಂಚ್ ಓಪನ್ ಫೈನಲ್‌ನಲ್ಲಿ ಅವರು ಸರ್ಬಿಯಾ ಎದುರಾಳಿಯನ್ನು ಸೋಲಿಸಿದ್ದರು. ಇದರ ಜೊತೆಗೆ ಅವರು ತಲಾ ಒಂದು ಬಾರಿ ಆಸ್ಟ್ರೇಲಿಯಾ ಓಪನ್ (2014) ಮತ್ತು ಅಮೆರಿಕ ಓಪನ್ (2016) ನಲ್ಲಿ ಗೆದ್ದಿದ್ದಾರೆ. ಇವರಿಬ್ಬರ ನಡುವೆ ನಡೆದಿರುವ 26 ಮುಖಾಮುಖಿಗಳಲ್ಲಿ ಜೊಕೊವಿಚ್ 20 ಸಲ ವಿಜಯಿಯಾಗಿದ್ದಾರೆ.

ಎರಡನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ, 21 ವರ್ಷದ ಯಾನಿಕ್ ಸಿನ್ನರ್ 7–5, 6–1, 6–2 ರಿಂದ ಡೀಗೊ ಷ್ವಾಟ್ಸ್‌ಮನ್ ವಿರುದ್ಧ ಜಯಗಳಿಸಿದರು.

ಜ್ವೆರೇವ್ ಮುನ್ನಡೆ: ಭರ್ಜರಿ ಸರ್ವ್‌ಗಳಿಗೆ ಹೆಸರಾಗಿರುವ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ 6–4, 7–6 (7–4), 7–5 (5) ರಿಂದ ಅರ್ಹತಾ ಸುತ್ತಿನಿಂದ ಬಂದ ನೆದರ್ಲೆಂಡ್ಸ್‌ನ ಗಿಯ್ಸ್ ಬ್ರೂವರ್ ಅವರನ್ನು ಸೋಲಿಸಿ ಎರಡನೇ ಸುತ್ತನ್ನು ತಲುಪಿದರು. ಈ ಪಂದ್ಯದಲ್ಲಿ 20 ಏಸ್‌ಗಳನ್ನೂ ಸಿಡಿಸಿದರು.

ರೂಡ್‌ಗೆ ಆಘಾತ: ನಾಲ್ಕನೇ ಶ್ರೇಯಾಂಕದ ಆಟಗಾರ ನಾರ್ವೆಯ ಕ್ಯಾಸ್ಪರ್ ರೂಡ್ ಅವರು ಎರಡನೇ ಸುತ್ತಿನಲ್ಲಿ ಆಘಾತ ಅನುಭವಿಸಿದರು. ಬ್ರಿಟನ್‌ನ ಲಿಯಾಮ್ ಬ್ರಾಡಿ ಅವರು 6-4, 3-6, 4-6, 6-3, 6-0 ರಲ್ಲಿ ರೂಡ್ ವಿರುದ್ಧ ಗೆದ್ದು ಅಚ್ಚರಿಗೆ ಕಾರಣರಾದರು.

ಕುಸ್ತಿ ಆಯ್ಕೆ ಟ್ರಯಲ್ಸ್ 20ರಂದು?

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್‌ಗೆ ಭಾರತ ಕುಸ್ತಿ ತಂಡವನ್ನು ಅಂತಿಮಗೊಳಿಸಲು ಜುಲೈ 20ರಂದು ಆಯ್ಕೆ ಟ್ರಯಲ್ಸ್ ನಡೆಯುವ ಸಾಧ್ಯತೆಯಿದೆ. ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಈ ಕೂಟಕ್ಕೆ ಸ್ಪರ್ಧಿಗಳ ಪಟ್ಟಿಯನ್ನು ಕಳುಹಿಸಿಕೊಡಲು ಇದ್ದ ಅಂತಿಮ ಗಡುವನ್ನು ವಿಸ್ತರಿಸುವುದಾಗಿ ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾ (ಒಸಿಎ) 'ಅನಧಿಕೃತ'ವಾಗಿ ಭರವಸೆ ನೀಡಿದೆ.

ಆಯ್ಕೆಯಾದ ಕುಸ್ತಿಪಟುಗಳ ಪಟ್ಟಿಯನ್ನು ಕಳುಹಿಸಿಕೊಡಲು ಜುಲೈ 15 ಕೊನೆಯ ದಿನ ಎಂದು ಕ್ರೀಡೆಗಳ ಸಂಘಟನಾ ಸಮಿತಿ ಈ ಹಿಂದೆ ಗಡುವು ನೀಡಿತ್ತು. ಆದರೆ ಭಾರತ ಒಲಿಂಪಿಕ್ ಸಂಸ್ಥೆಯ ಅಡ್ ಹಾಕ್ ಸಮಿತಿ ಪ್ರಯತ್ನಗಳ ಕಾರಣ ಗಡುವನ್ನು ವಿಸ್ತರಿಸಲು ಒಸಿಎ ಪರಿಗಣಿಸುತ್ತಿದೆ ಎನ್ನಲಾಗಿದೆ.

ಭರವಸೆಯ ಹೊರತಾಗಿಯೂ, ಗಡುವನ್ನು ಎಷ್ಟು ದಿನ ವಿಸ್ತರಿಸಲಾಗಿದೆ ಎಂಬ ಮಾಹಿತಿ ಅಡ್‌ಹಾಕ್ ಸಮಿತಿಗೆ ಇನ್ನೂ ನೀಡಲಾಗಿಲ್ಲ. 'ಗಡುವಿನ ವಿಸ್ತರಣೆಗೆ ಸಂಬಂಧಿಸಿ ಒಸಿಎನಿಂದ ಇನ್ನೂ ಇ-ಮೇಲ್ ಬಂದಿಲ್ಲ. ಆದರೆ ಪ್ರವೇಶಗಳನ್ನು ಕಳುಹಿಸಲು ಈಗ ಇರುವ ಗಡುವನ್ನು ಸಡಿಲಿಸುವುದಾಗಿ ಅವರು ಹೇಳಿದ್ದಾರೆ. ಅವರಿಂದ ದೃಢೀಕರಣ ಬರುವವರೆಗೆ ಗಡುವನ್ನು ಎಷ್ಟು ದಿನ ವಿಸ್ತರಿಸಲಾಗಿದೆ ಎಂದು ಹೇಳಲು ಆಗದು' ಎಂದು ಅಡ್‌ಹಾಕ್ ಸಮಿತಿಯ ಸದಸ್ಯ ಗ್ಯಾನ್ ಸಿಂಗ್ ತಿಳಿಸಿದ್ದಾರೆ.

'ಆದರೆ ಆಯ್ಕೆ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗದಂತೆ, ನಾವು ಸೋಮವಾರದೊಳಗೆ (ಜುಲೈ 10) ಟ್ರಯಲ್ಸ್‌ಗೆ ದಿನಾಂಕ ನಿಗದಿಪಡಿಸುತ್ತೇವೆ. ಅದು ಜುಲೈ 20ರ ಸುಮಾರಿಗೆ ಇರಬಹುದು' ಎಂದರು.

ಪ್ರಿ ಕ್ವಾರ್ಟರ್‌ಗೆ ಸಿಂಧು, ಸೇನ್

ಕ್ಯಾಲ್ಗರಿ, ಕೆನಡಾ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಕೆನಡಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಬುಧವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಸಿಂಧು 21–16, 21–9 ರಲ್ಲಿ ಕೆನಡಾದ ತಲಿಯಾ ಎಂಗ್ ವಿರುದ್ಧ ಗೆದ್ದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸೇನ್ 21–18, 21–15 ರಲ್ಲಿ ಎರಡನೇ ಶ್ರೇಯಾಂಕದ ಆಟಗಾರ ಥಾಯ್ಲೆಂಡ್‌ನ ಕುನ್ಲಾವುತ್ ವಿತಿದ್‌ಸರನ್ ಅವರಿಗೆ ಆಘಾತ ನೀಡಿದರು. ಸೇನ್ ಅವರ ಮುಂದಿನ ಎದುರಾಳಿ ಬ್ರೆಜಿಲ್‌ನ ಇಗೊರ್ ಕೊಯೆಲೊ.

ಬಿ.ಸಾಯಿ ಪ್ರಣೀತ್ ಅವರು ಮೊದಲ ಸುತ್ತಿನಲ್ಲೇ ಎಡವಿದರು. ಅವರು ಕೊಯೆಲೊ ಕೈಯಲ್ಲಿ 12–21, 17–21 ರಲ್ಲಿ ಪರಾಭವಗೊಂಡರು.

ವಿಧಾತ್ರಿ ಅರಸ್

ಗಾಲ್ಫ್: ಮುನ್ನಡೆಯಲ್ಲಿ ವಿಧಾತ್ರಿ

ಬೆಂಗಳೂರು: ವಿಧಾತ್ರಿ ಅರಸ್ ಅವರು ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್‌ನ 10ನೇ ಲೆಗ್ ಟೂರ್ನಿಯ ಎರಡನೇ ಸುತ್ತಿನ ಬಳಿಕ ಮುನ್ನಡೆ ಸಾಧಿಸಿದ್ದಾರೆ.

ಪ್ರೆಸ್ಟೀಜ್ ಗಾಲ್ಫ್‌ಶೈರ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಅವರು ಗುರುವಾರ 73 ಸ್ಟ್ರೋಕ್‌ಗಳೊಂದಿಗೆ ಸ್ಪರ್ಧೆ ಕೊನೆಗೊಳಿಸಿದರು. ಎರಡು ಸುತ್ತುಗಳ ಬಳಿಕ ಒಟ್ಟು 144 (71–73) ಸ್ಕೋರ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ನೇಹಾ ತ್ರಿಪಾಠಿ (73–72) ಎರಡನೇ ಸ್ಥಾನದಲ್ಲಿದ್ದಾರೆ.

ಲೀಡ್ ಗೆಲುವಿನ ರೂವಾರಿ; ಸ್ಕಾಟ್ಲೆಂಡ್‌ಗೆ ನಿರಾಸೆ

ವಿಶ್ವಕಪ್‌ಗೆ ನೆದರ್ಲೆಂಡ್ಸ್ ಅರ್ಹತೆ

ಹರಾರೆ (ಎಎಫ್‌ಪಿ): ಬಾಸ್ ಡೆ ಲೀಡ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಸ್ಕಾಟ್ಲೆಂಡ್ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿದ ನೆದರ್ಲೆಂಡ್ಸ್, ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಅರ್ಹತೆ ಪಡೆದುಕೊಂಡಿತು.

ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸ್ಕಾಟ್ಲೆಂಡ್ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 277 ರನ್ ಗಳಿಸಿತು. ನೆದರ್ಲೆಂಡ್ಸ್ ತಂಡ ರನ್‌ರೇಟ್‌ನಲ್ಲಿ ಸ್ಕಾಟ್ಲೆಂಡ್‌ಅನ್ನು ಹಿಂದಿಕ್ಕಲು 44 ಓವರ್‌ಗಳಲ್ಲಿ ಈ ಗುರಿಯನ್ನು ಬೆನ್ನಟ್ಟಬೇಕಿತ್ತು.

ಡೆ ಲೀಡ್ (123 ರನ್, 92 ಎ., 4X7, 6X5) ಅವರ ಭರ್ಜರಿ ಶತಕದ ನೆರವಿನಿಂದ 42.5 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು. ಲೀಡ್ ಅವರು (52ಕ್ಕೆ 5) ಬೌಲಿಂಗ್‌ನಲ್ಲೂ ಮಿಂಚಿದ್ದರು.

ನೆದರ್ಲೆಂಡ್ಸ್ ಮತ್ತು ಸ್ಕಾಟ್ಲೆಂಡ್ ತಂಡಗಳು ತಲಾ ಆರು ಪಾಯಿಂಟ್ಸ್‌ಗಳೊಂದಿಗೆ 'ಸೂಪರ್ ಸಿಕ್ಸ್' ಹಂತದ ವ್ಯವಹಾರ ಕೊನೆಗೊಳಿಸಿದವು. ರನ್‌ರೇಟ್‌ನಲ್ಲಿ ಸ್ಕಾಟ್ಲೆಂಡ್‌ಅನ್ನು (0.102) ಹಿಂದಿಕ್ಕಿದ ಸ್ಕಾಟ್ ಎಡ್ವರ್ಡ್ಸ್ ನೇತೃತ್ವದ ನೆದರ್ಲೆಂಡ್ಸ್ (0.160), ಶ್ರೀಲಂಕಾ ತಂಡದ ಜೊತೆ ಭಾರತದಲ್ಲಿ ನಡೆಯಲಿರುವ ವಿಶ್ವಕಪ್‌ಗೆ 'ಟಿಕೆಟ್' ಗಿಟ್ಟಿಸಿಕೊಂಡಿತು.

ನೆದರ್ಲೆಂಡ್ಸ್ ತಂಡ ಒಟ್ಟಾರೆಯಾಗಿ ಐದನೇ ಬಾರಿ ಏಕದಿನ ವಿಶ್ವಕಪ್‌ಗೆ ಅರ್ಹತೆ ಪಡೆದುಕೊಂಡಿದೆ. 2011 ರ ಬಳಿಕ ಅರ್ಹತೆ ಪಡೆದಿರುವುದು ಇದೇ ಮೊದಲು.

ಬಾಸ್ ಡೆ ಲೀಡ್ ಬ್ಯಾಟಿಂಗ್ ವೈಖರಿ –ಟ್ವಿಟರ್ ಚಿತ್ರ

ಸಂಕ್ಷಿಪ್ತ ಸ್ಕೋರ್: ಸ್ಕಾಟ್ಲೆಂಡ್ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 277 (ಕ್ರಿಸ್ಟೋಫರ್ ಮೆಕ್‌ಬ್ರೈಡ್ 32, ಬ್ರೆಂಡನ್ ಮೆಕ್‌ಮುಲನ್ 106, ರಿಚೀ ಬೆರಿಂಗ್ಟನ್ 64, ಥಾಮಸ್ ಮೆಕಿಂಟೋಶ್ ಔಟಾಗದೆ 38, ಬಾಸ್ ಡೆ ಲೀಡ್ 52ಕ್ಕೆ 5, ರ್‍ಯಾನ್ ಕ್ಲೇನ್ 59ಕ್ಕೆ 2)ನೆದರ್ಲೆಂಡ್ಸ್: 42.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 278 (ವಿಕ್ರಮ್‌ಜೀತ್ ಸಿಂಗ್ 40, ಬಾಸ್ ಡೆ ಲೀಡ್ 123, ಸ್ಕಾಟ್ ಎಡ್ವರ್ಡ್ಸ್ 25, ಸಾಕಿಬ್ ಜುಲ್ಫಿಕರ್ ಔಟಾಗದೆ 33, ಮೈಕಲ್ ಲೀಸ್ಕ್ 42ಕ್ಕೆ 2) ಫಲಿತಾಂಶ: ನೆದರ್ಲೆಂಡ್ಸ್‌ಗೆ 4 ವಿಕೆಟ್ ಗೆಲುವು

ಆ್ಯಷಸ್ ಟೆಸ್ಟ್: ಮಿಚೆಲ್ ಶತಕ, ವುಡ್‌ಗೆ ಐದು ವಿಕೆಟ್

ಮಾರ್ಕ್–ಮಾರ್ಷ್ ಜಿದ್ದಾಜಿದ್ದಿ

ಲೀಡ್ಸ್ (ಎಎಫ್‌ಪಿ): ಆಸ್ಟ್ರೇಲಿಯಾದ ಬ್ಯಾಟರ್ ಮಿಚೆಲ್ ಮಾರ್ಷ್ ಮತ್ತು ಇಂಗ್ಲೆಂಡ್ ವೇಗಿ ಮಾರ್ಕ್ ವುಡ್ ಅವರ ಜಿದ್ದಾಜಿದ್ದಿಗೆ ಆ್ಯಷಸ್ ಸರಣಿಯ ಮೂರನೇ ಟೆಸ್ಟ್ ಪಂದ್ಯದ ಮೊದಲ ದಿನ ಮೀಸಲಾಯಿತು.

ಹೆಡಿಂಗ್ಲೆಯಲ್ಲಿ ಗುರುವಾರ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಅದಕ್ಕೆ ತಕ್ಕಂತೆ ದಾಳಿಯನ್ನೂ ಸಂಘಟಿಸಿತು. ಇದರಿಂದಾಗಿ ಆಸ್ಟ್ರೇಲಿಯಾ ತಂಡವು 60.4 ಓವರ್‌ಗಳಲ್ಲಿ 263 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಇಂಗ್ಲೆಂಡ್ ಆರಂಭಿಕ ಆಘಾತ ಅನುಭವಿಸಿದ್ದು, ದಿನದಾಟದ ಅಂತ್ಯಕ್ಕೆ 19 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 68 ರನ್ ಗಳಿಸಿದೆ.

ಇದಕ್ಕೂ ಮುನ್ನ ಮಾರ್ಕ್ ವುಡ್ (34ಕ್ಕೆ5), ಸ್ಟುವರ್ಟ್ ಬ್ರಾಡ್ (58ಕ್ಕೆ2) ಹಾಗೂ ಕ್ರಿಸ್ ವೋಕ್ಸ್ (73ಕ್ಕೆ3) ಅವರ ದಾಳಿಗೆ ಆಸ್ಟ್ರೇಲಿಯಾದ ಅಗ್ರಕ್ರಮಾಂಕದ ಬ್ಯಾಟರ್‌ಗಳು ವಿಫಲರಾದರು. ಇದರಿಂದಾಗಿ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕವಿತ್ತು. ಈ ಹಂತದಲ್ಲಿ ಆರನೇ ಕ್ರಮಾಂಕದ ಬ್ಯಾಟರ್ ಮಿಚೆಲ್ ಮಾರ್ಷ್ (118; 118ಎ, 4X17, 6X4) ತಂಡದ ಗೌರವ ಉಳಿಸಿದರು. 28ನೇ ಓವರ್‌ನಲ್ಲಿ ಕ್ರಿಸ್ ವೋಕ್ಸ್ ಬೌಲಿಂಗ್‌ನಲ್ಲಿ ಮೊದಲ ಸ್ಲಿಪ್‌ನಲ್ಲಿದ್ದ ಜೋ ರೂಟ್ ಕೈಬಿಟ್ಟ ಕ್ಯಾಚ್‌ನಿಂದಾಗಿ ಸಿಕ್ಕ ಅವಕಾಶವನ್ನು ಮಾರ್ಷ್ ಸಮರ್ಥವಾಗಿ ಬಳಸಿಕೊಂಡರು.



ಇಂಗ್ಲೆಂಡ್ ತಂಡದ ವೇಗಿ ಮಾರ್ಕ್ ವುಡ್ ಸಂಭ್ರಮ –ಎಎಫ್‌ಪಿ ಚಿತ್ರ

85 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿದ್ದ ಆಸ್ಟ್ರೇಲಿಯಾ ತಂಡಕ್ಕೆ ಮಾರ್ಷ್ ಮರುಜೀವ ತುಂಬಿದರು. ಅವರು ಮತ್ತು ಟ್ರಾವಿಸ್ ಹೆಡ್ (39; 74ಎ) ಸೇರಿ ಐದನೇ ವಿಕೆಟ್ ಜೊತೆಯಾಟದಲ್ಲಿ 155 ರನ್ ಸೇರಿಸಿದರು. ಮಾರ್ಷ್ ಟೆಸ್ಟ್ ಕ್ರಿಕೆಟ್‌ನಲ್ಲಿ ನಾಲ್ಕನೇ ಶತಕ ಪೂರೈಸಿದರು.

ಆದರೆ, ಕ್ರಿಸ್ ವೋಕ್ಸ್ ಹಾಕಿದ 53ನೇ ಓವರ್‌ನಲ್ಲಿ ಮಿಚೆಲ್ ಮಾರ್ಷ್ ಕೊಟ್ಟ ಕ್ಯಾಚ್ ಪಡೆದ ಜಾಕ್ ಕ್ರಾಲಿ ಸಂಭ್ರಮಿಸಿದರು. ವೋಕ್ಸ್ ಇನ್ನೊಂದು ಓವರ್‌ನಲ್ಲಿ ಟ್ರಾವಿಸ್ ವಿಕೆಟ್ ಕೂಡ ಕಬಳಿಸಿದರು. ನಂತರ ಬಂದ ಬ್ಯಾಟರ್‌ಗಳು ಹೆಚ್ಚು ಹೊತ್ತು ನಿಲ್ಲಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 60.4 ಓವರ್‌ಗಳಲ್ಲಿ 263 (ಮಾರ್ನಸ್ ಲಾಬುಷೇನ್ 21, ಸ್ಟೀವ್ ಸ್ಮಿತ್ 22, ಟ್ರಾವಿಸ್ ಹೆಡ್ 39, ಮಿಚೆಲ್ ಮಾರ್ಷ್ 118, ಸ್ಟುವರ್ಟ್ ಬ್ರಾಡ್ 58ಕ್ಕೆ2, ಮಾರ್ಕ್ ವುಡ್ 34ಕ್ಕೆ5, ಕ್ರಿಸ್ ವೋಕ್ಸ್ 73ಕ್ಕೆ3) ಇಂಗ್ಲೆಂಡ್ 19 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 68 (ಜಾಕ್ ಕ್ರಾಲಿ 33, ಜೋ ರೂಟ್ ಬ್ಯಾಟಿಂಗ್ 19, ಪ್ಯಾಟ್ ಕಮಿನ್ಸ್ 28ಕ್ಕೆ 2)

14ಕ್ಕೆ ಚಂದ್ರನೂರಿಗೆ ಮೂರನೇ ಯಾತ್ರೆ

ಒಂದನೇ ಪುಟದಿಂದ

ಅಲ್ಲಿನ ಶಿಲಾತಳದ ಮೇಲಿನ ಘನ ಪದಾರ್ಥ, ಮೇಲ್ಮೈನ ಹೆಪ್ಪುಗಟ್ಟುವ ಪರಿಸರ ಹಾಗೂ ಧಾತು ರೂಪದ ಸಂಯೋಜನೆ ಇತ್ಯಾದಿ ಅಧ್ಯಯನಕ್ಕೆ ಇಸ್ರೊ ಉದ್ದೇಶಿಸಿದೆ.

ಚಂದ್ರಯಾನ–3 ಯೋಜನೆಯು ಲ್ಯಾಂಡರ್ ಮತ್ತು ರೋವರ್ ಹೊಂದಿದ್ದು, ಎಲ್‌ವಿಎಂ–3 ಉಡ್ಡಯನ ವಾಹಕದ (ನ್ಯೂ ಹೆವಿಲಿಫ್ಟ್ ಲಾಂಚ್ ವಹಿಕಲ್) ಮೂಲಕ ಉಡ್ಡಯನಗೊಳಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಮಾರ್ಚ್‌ನಲ್ಲಿಯೇ ಈ ಉಡ್ಡಯನವಾಹಕದಅಗತ್ಯಪರೀಕ್ಷೆಗಳು ಯಶಸ್ವಿಯಾಗಿ ಮುಗಿದಿವೆ. ಚಂದ್ರನ 100 ಕಿಲೋಮೀಟರ್ ಕಕ್ಷೆವರೆಗೆ ಲ್ಯಾಂಡರ್ ಮತ್ತು ರೋವರ್ ಅನ್ನು ಈ ಉಡ್ಡಯನ ವಾಹಕ (ಪ್ರೊಪಲ್ಷನ್ ಮಾಡ್ಯುಲ್) ಒಯ್ಯುಲಿದೆ ಎಂದರು.

ಲ್ಯಾಂಡರ್ ಚಂದಿರನ ಮೇಲ್ಮೈನಲ್ಲಿ ಸುರಕ್ಷಿತವಾಗಿ ಇಳಿದ ಮೇಲೆ ಚಂದ್ರನ ಮೇಲ್ಮೈಯನ್ನು ಅನ್ವೇಷಿಸಲು ರೋವರ್ ಅನ್ನು ಹೊರಬಿಡುತ್ತದೆ. ಚಂದ್ರನ ಮೇಲ್ಮೈನ ತಾಪಮಾನ ಅಧ್ಯಯನ ಮಾಡುವ ಸಾಧನಗಳನ್ನೂ ಲ್ಯಾಂಡರ್‌ನಲ್ಲಿ ಅಳವಡಿಸಲಾಗಿದ್ದು, ಆ ಸಾಧನಗಳು ಕಳುಹಿಸಿಕೊಡುವ ಮಾಹಿತಿಗಳು ಇಸ್ರೋ ವಿಜ್ಞಾನಿಗಳ ಅಧ್ಯಯನಕ್ಕೆ ನೆರವಿಗೆ ಬರಲಿವೆ. ಜೊತೆಗೆ, ಚಂದ್ರನ ಒಂದೇ ದಿಕ್ಕಿನಲ್ಲಿ ಸಾಗುವ ತೀಕ್ಷ್ಣ ಬೆಳಕಿನ ದೂರದ ಅಧ್ಯಯನ ನಡೆಸುವ ಸಾಧನವನ್ನೂ ಲ್ಯಾಂಡರ್ ಹೊಂದಿದೆ. ಇದನ್ನು ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಾದ 'ನಾಸಾ' ಅಭಿವೃದ್ಧಿಪಡಿಸಿದೆ.

ಆ. 23 ಅಥವಾ 24ಕ್ಕೆ ಇಳಿಸಲು ಚಿಂತನೆ: ಚಂದ್ರಯಾನ 2ರ ಲ್ಯಾಂಡರ್ ಸುರಕ್ಷಿತವಾಗಿ ಇಳಿಯುವಲ್ಲಿ ವಿಫಲವಾಗಿತ್ತು. ಈ ಅನುಭವದಿಂದ ಪಾಠ ಕಲಿತಿರುವ ಇಸ್ರೊ ವಿಜ್ಞಾನಿಗಳು ಈ ಬಾರಿ ಚಂದ್ರಯಾನ– 3 ಯೋಜನೆಯನ್ನು ಯಶಸ್ವಿಗೊಳಿಸುವ ಹುಮ್ಮಸ್ಸಿನಲ್ಲಿದ್ದಾರೆ. ಆ ಮೂಲಕ ಚಂದಿರನ ಅನ್ವೇಷಣೆಯೆಡೆಗಿನ ಹೊಸ ಬದ್ಧತೆ ಮತ್ತು ಹೊಸ ವೈಜ್ಞಾನಿಕ ಆವಿಷ್ಕಾರಗಳತ್ತ ಬೆಳಕು ಚೆಲ್ಲುವುದು ಇಸ್ರೋದ ಧ್ಯೇಯವಾಗಿದೆ.

'ಆಗಸ್ಟ್ 23 ಅಥವಾ 24ರಂದು ಚಂದ್ರನ ಮೇಲ್ಮೈನಲ್ಲಿ ಲ್ಯಾಂಡರ್ ಅನ್ನು ಸುರಕ್ಷಿತವಾಗಿ ಇಳಿಸಲಾಗುವುದು. ಚಂದ್ರನಲ್ಲಿನ ಒಂದು ದಿನವು ಭೂಮಿ ಮೇಲಿನ 14 ದಿನಗಳಿಗೆ ಸರಿಸಮನಾಗಿದೆ. ಈ ಅವಧಿಯಲ್ಲಿಯೇ ಲ್ಯಾಂಡರ್ ಇಳಿಸಲಾಗುವುದು' ಎಂದು ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದ್ದಾರೆ.

'ಚಂದ್ರನ ಅಂಗಳದಲ್ಲಿ ಸೂರ್ಯೋದಯವಾಗುವ ಅವಧಿ ನಿರ್ಧರಿಸಿ ಲ್ಯಾಂಡರ್ ಅನ್ನು ಸುಗಮವಾಗಿ (ಸಾಫ್ಟ್ ಲ್ಯಾಂಡಿಂಗ್) ಇಳಿಸಲು ನಿರ್ಧರಿಸಲಾಗಿದೆ. ಈ ಪ್ರಕ್ರಿಯೆ ನಡೆಯುವಾಗ ಅಲ್ಲಿ ನೇಸರನ ಬೆಳಕು ಇರಲೇ ಬೇಕು. ಚಂದಿರನಲ್ಲಿ ಸೂರ್ಯನ ಬೆಳಕು ಮೂಡಲು 14ರಿಂದ 15 ದಿನಗಳು ಬೇಕು. ಹಾಗಾಗಿ, ಮುಂದಿನ ಎರಡು ವಾರಗಳ ಕಾಲ ಅಲ್ಲಿ ಬೆಳಕಿನ ಪ್ರತಿಫಲನ ಇರುವುದಿಲ್ಲ' ಎಂದು ವಿವರಿಸಿದ್ದಾರೆ.

'ಭಾರತದ ಹೈಕಮಿಷನ್ ಮೇಲಿನ ದಾಳಿ ಸಹಿಸಲ್ಲ'

ಲಂಡನ್ (ಪಿಟಿಐ): 'ಲಂಡನ್‌ನಲ್ಲಿನ ಭಾರತದ ಹೈಕಮಿಷನ್ ಮೇಲೆ ಮಾಡಲಾಗುವ ಯಾವುದೇ ನೇರ ದಾಳಿಯನ್ನು ಸಹಿಸಲಾಗುವುದಿಲ್ಲ' ಎಂದು ಬ್ರಿಟನ್ ಸರ್ಕಾರ ಗುರುವಾರ ಹೇಳಿದೆ. ಭಾರತವನ್ನು ಗುರಿಯಾಗಿಸಿಕೊಂಡು ಖಾಲಿಸ್ತಾನಿ ಉಗ್ರರು ಸಾಮಾಜಿಕ ಜಾಲತಾಣಗಳಲ್ಲಿ ದಾಳಿ ನಡೆಸುತ್ತಿರುವ ನಡುವೆಯೇ ಬ್ರಿಟನ್ ಈ ಹೇಳಿಕೆ ನೀಡಿದೆ.

'ಭಾರತದ ರಾಯಭಾರ ಕಚೇರಿ ಸಿಬ್ಬಂದಿಯ ಸುರಕ್ಷತೆಯು ನಮ್ಮ ಆದ್ಯತೆ ಎಂದು ಬ್ರಿಟನ್‌ನಲ್ಲಿನ ಭಾರತದ ರಾಯಭಾರಿ ವಿಕ್ರಮ್ ದೊರೆಸ್ವಾಮಿ ಮತ್ತು ಭಾರತ ಸರ್ಕಾರಕ್ಕೆ ಸ್ಪಷ್ಟಪಡಿಸಿದ್ದೇವೆ' ಎಂದು ಅಲ್ಲಿಯ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ಜೇಮ್ಸ್ ಕ್ಲೆವರ್ಲಿ ಟ್ವೀಟ್ ಮಾಡಿದ್ದಾರೆ.

ಅಮೆರಿಕ, ಆಸ್ಟ್ರೇಲಿಯ, ಕೆನಡಾ ದೇಶಗಳಲ್ಲಿನ ಭಾರತೀಯ ರಾಯಭಾರ ಕಚೇರಿಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವುದಾಗಿ ಖಾಲಿಸ್ತಾನಿ ಬೆಂಬಲಿಗರು ಈಚೆಗೆ ಹೇಳಿಕೆ ನೀಡಿದ್ದರು. ಜೊತೆಗೆ, ವಿಕ್ರಮ್ ದೊರೆಸ್ವಾಮಿ ಹಾಗೂ ಬರ್ಮಿಂಗ್‌ಹ್ಯಾಮ್‌ನಲ್ಲಿನ ಭಾರತದ ಕಾನ್ಸುಲ್ ಜನರಲ್ ಡಾ. ಶಶಾಂಕ್ ವಿಕ್ರಮ್ ಅವರ ಚಿತ್ರಗಳನ್ನು ಟ್ವೀಟ್ ಮಾಡಿದ್ದರು.

ಇಲ್ಲಿಯ ಭಾರತೀಯ ರಾಯಭಾರ ಕಚೇರಿಯನ್ನು ಗುರಿಯಾಗಿಸಿಕೊಂಡು ಮಾರ್ಚ್‌ನಲ್ಲಿ ದಾಳಿ ಮಾಡಿದ್ದ ಖಾಲಿಸ್ತಾನಿ ಬೆಂಬಲಿಗರು ಕಚೇರಿ ಎದುರಿನ ಭಾರತದ ಧ್ವಜವನ್ನು ಹರಿದಿದ್ದರು.

ವಿಷಾನಿಲ ಸೋರಿಕೆ 17 ಮಂದಿ ಸಾವು

ಜೊಹಾನಸ್‌ಬರ್ಗ್(ಎಪಿ): ವಿಷಕಾರಿ ನೈಟ್ರೇಟ್ ಅನಿಲ ಸೋರಿಕೆಯಿಂದ ಒಂದು ವರ್ಷದ ಮಗು ಸೇರಿದಂತೆ 17 ಜನರು ಮೃತಪಟ್ಟಿದ್ದು, ಹತ್ತು ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೋಕ್ಸ್‌ಬರ್ಗ್ ನಗರದ ಬಳಿಯ ಗಣಿಯಲ್ಲಿ ಅಕ್ರಮವಾಗಿ ಚಿನ್ನ ಹೊರತೆಗೆಯುವ ವೇಳೆ ಈ ಘಟನೆ ನಡೆದಿದೆ.

ಗೌಟೆಂಗ್ ಪ್ರಾಂತ್ಯದ ಪ್ರಧಾನ ಮಂತ್ರಿ ಪನ್ಯಾಜಾ ಲೆಸುಫಿ ಮಾತನಾಡಿ, 'ಈ ಘಟನೆ ನೋವು ಉಂಟು ಮಾಡಿದೆ. ಈ ಪ್ರದೇಶದಲ್ಲಿ ಮುಚ್ಚಿದ ಗಣಿಯಲ್ಲಿ ಅಕ್ರಮವಾಗಿ ಕೆಲಸ ಮಾಡುತ್ತಿದ್ದವರು ಮೃತಪಟ್ಟಿದ್ದಾರೆ ' ಎಂದರು.

ಧೂಳು ಮತ್ತು ಕಲ್ಲುಗಳಿಂದ ಚಿನ್ನವನ್ನು ಪ್ರತ್ಯೇಕಿಸಲು ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದವರು ಈ ಅನಿಲವನ್ನು ಬಳಸುತ್ತಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ. ಗಾಯಾಳುಗಳು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಆರೋಗ್ಯ ಸಚಿವರು ತಿಳಿಸಿದ್ದಾರೆ.

ಕಂದಕಕ್ಕೆ ಬಸ್ ಉರುಳಿ 27 ಸಾವು

ಮೆಕ್ಸಿಕೊ ಸಿಟಿ (ಎಪಿ): ಚಾಲಕನ ನಿಯಂತ್ರಣ ತಪ್ಪಿದ ಬಸ್ 75 ಅಡಿ ಆಳದ ಕಂದಕಕ್ಕೆ ಉರುಳಿ 27 ಪ್ರಯಾಣಿಕರು ಮೃತಪಟ್ಟಿರುವ ಘಟನೆ ದಕ್ಷಿಣ ಮೆಕ್ಸಿಕೊದಲ್ಲಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯ ಮಿಶ್ಟ್ರೆಕಾ ಪ್ರದೇಶದಲ್ಲಿ ಈ ದುರಂತ ಸಂಭವಿಸಿದೆ. ಈ ಬಸ್ ಮೆಕ್ಸಿಕೊ ಸಿಟಿಯಿಂದ ಮಿಶ್ಟ್ರೆಕಾ ಪ್ರದೇಶದ ಹಳ್ಳಿಗಳಿಗೆ ಪ್ರಯಾಣಿಕರನ್ನು ಕರೆದೊಯ್ಯುತ್ತಿತ್ತು.

'ಅಪಘಾತದಲ್ಲಿ ಒಂದೂವರೆ ವರ್ಷದ ಮಗು ಸೇರಿದಂತೆ 27 ಮಂದಿ ಮೃತಪಟ್ಟಿದ್ದು, 20 ಮಂದಿ ಗಾಯಗೊಂಡಿದ್ದಾರೆ. ಕೆಲವರ ಸ್ಥಿತಿ ಗಂಭೀರವಾಗಿದೆ. 'ಚಾಲಕ ಆಯಾಸವಾದ್ದರಿಂದ ಅಪಘಾತ ನಡೆದಿದೆ ಎಂದು ಮೇಲ್ನೋಟಕ್ಕೆ ತಿಳಿದು ಬಂದಿದೆ' ಎಂದು ಆಂತರಿಕ ಕಾರ್ಯದರ್ಶಿ ಜೀಸಸ್‌ನ ರೊಮೆರೊ ತಿಳಿಸಿದ್ದಾರೆ.

ಪ್ರಚಂಡ ರಾಜೀನಾಮೆಗೆ ಆಗ್ರಹ

ಕಠ್ಮಂಡು (ಪಿಟಿಐ): 'ನೇಪಾಳದಲ್ಲಿ ನೆಲೆಸಿರುವ ಭಾರತ ಮೂಲದ ಉದ್ಯಮಿ ಸರ್ದಾರ್ ಪ್ರೀತಮ್ ಸಿಂಗ್ ಅವರು ನನ್ನನ್ನು ಪ್ರಧಾನಿಯನ್ನಾಗಿ ಮಾಡಲು ಪ್ರಯತ್ನಗಳನ್ನು ಮಾಡಿದ್ದರು' ಎಂದು ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಾಲ್ ಪ್ರಚಂಡ ಅವರು ಈಚೆಗೆ ನೀಡಿದ್ದ ಹೇಳಿಕೆಗೆ ಭಾರಿ ವಿರೋಧ ವ್ಯಕ್ತವಾಗಿದ್ದು, ವಿಪಕ್ಷಗಳು ಪ್ರಚಂಡ ಅವರ ರಾಜೀನಾಮೆಗೆ ಆಗ್ರಹಿಸಿವೆ.

ಸೋಮವಾರ ಆಯೋಜಿಸಿದ್ದ ಉದ್ಯಮಿ ಪ್ರೀತಮ್ ಸಿಂಗ್ ಅವರ ಕುರಿತ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪ್ರಚಂಡ ಈ ಹೇಳಿಕೆ ನೀಡಿದ್ದರು. 'ನನ್ನನ್ನು ಪ್ರಧಾನಿಯಾಗಿಸುವ ನಿಟ್ಟಿನಲ್ಲಿ ಪ್ರೀತಮ್ ಅವರು ಅನೇಕ ಬಾರಿ ದೆಹಲಿಗೆ ತೆರಳಿ ಮಾತುಕತೆ ನಡೆಸಿದ್ದರು' ಎಂದು ಹೇಳಿದ್ದರು. ಪ್ರಚಂಡ ಅವರ ಹೇಳಿಕೆಯು ದೇಶದ ಸ್ವಾತಂತ್ರ್ಯ, ಘನತೆ, ಸಂವಿಧಾನ ಮತ್ತು ಸಂಸತ್ತಿಗೆ ಅಪಮಾನ ಮಾಡಿದಂತಿದೆ. ದೆಹಲಿಯಿಂದ ನೇಮಕವಾಗಿರುವ ಪ್ರಧಾನಿಯು ಈ ದೇಶಕ್ಕೆ ಅಗತ್ಯವಿಲ್ಲ ಎಂದು ತಿಳಿಸಿವೆ.